ಕರ್ನಾಟಕ ಸರ್ಕಾರ

# ಸಮಾಜ ವಿಜ್ಞಾನ

(ಪರಿಷ್ಕೃತ ಪಠ್ಯಪುಸ್ತಕ)

## ಭಾಗ–1

9

## ಒಂಬತ್ತನೆಯ ತರಗತಿ

©KTBS Not to be republished

ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
100 ಅಡಿ ವರ್ತುಲ ರಸ್ತೆ, ಬನಶಂಕರಿ 3ನೇ ಹಂತ,
ಬೆಂಗಳೂರು – 85

# ಮುನ್ನುಡಿ

2005ನೇ ರಾಷ್ಟ್ರೀಯ ಪಠ್ಯಕ್ರಮದ ಆಧಾರದ ಮೇಲೆ ರಚಿತವಾದ ಕರ್ನಾಟಕ ರಾಜ್ಯ ಪಠ್ಯವಸ್ತುವಿನ ಆಧಾರದ ಮೇಲೆ ಕರ್ನಾಟಕ ಪಠ್ಯಪುಸ್ತಕ ಸಂಘವು 2010 ನೇ ಸಾಲಿನಿಂದ ಒಂದನೇ ತರಗತಿಯಿಂದ ಹತ್ತನೇ ತರಗತಿವರೆಗಿನ ಪಠ್ಯಪುಸ್ತಕಗಳ ರಚನಾ ಕಾರ್ಯದಲ್ಲಿ ತೊಡಗಿದೆ. ಒಟ್ಟು 12 ಭಾಷೆಗಳಲ್ಲಿ ಭಾಷಾ ಪಠ್ಯಪುಸ್ತಕಗಳನ್ನು ಹಾಗೂ ಕೋರ್ ವಿಷಯಗಳನ್ನು 7 ಮಾಧ್ಯಮಗಳಲ್ಲಿ ರಚನೆ ಮಾಡಲಾಗುತ್ತಿದೆ. 1 ರಿಂದ 4 ನೇ ತರಗತಿಯವರೆಗೆ ಪರಿಸರ ವಿಜ್ಞಾನ, ಗಣಿತ ಮತ್ತು 5 ರಿಂದ 10 ನೇ ತರಗತಿಯವರೆಗೆ ಕೋರ್ ವಿಷಯಗಳಾದ ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನಗಳಿರುತ್ತವೆ.

**2005ರ ರಾಷ್ಟ್ರೀಯ ಪಠ್ಯಕ್ರಮವು ಈ ಕೆಳಗಿನ ವೈಶಿಷ್ಟ್ಯಗಳನ್ನು ಹೊಂದಿದೆ.**

- ಕಲಿಕೆಯನ್ನು ಜೀವನದ ಅವಶ್ಯಕತೆಗಳೊಂದಿಗೆ ಜೋಡಿಸುವುದು
- ಕಂಠಪಾಠ ವಿಧಾನದಿಂದ ಕಲಿಕೆಯನ್ನು ಮುಕ್ತಗೊಳಿಸುವುದು
- ಪಠ್ಯಪುಸ್ತಕಗಳ ಹೊರತಾಗಿ ಪಠ್ಯಕ್ರಮವನ್ನು ಶ್ರೀಮಂತಗೊಳಿಸುವುದು
- ಜ್ಞಾನದ ಅಭಿವೃದ್ಧಿಗೆ ಕಲಿಕಾ ಅನುಭವಗಳನ್ನು ಬಳಸುವುದು
- ಭಾರತದ ಪ್ರಜಾಸತ್ತಾತ್ಮಕ ನೀತಿಯನ್ವಯ ಮಕ್ಕಳ ಅವಶ್ಯಕತೆಗಳಿಗೆ ತಕ್ಕಂತೆ ಸ್ಪಂದಿಸುವುದು
- ಶಿಕ್ಷಣವನ್ನು ಇಂದಿನ ಹಾಗೂ ಭವಿಷ್ಯದ ಜೀವನಾವಶ್ಯಕತೆಗಳಿಗೆ ಹೊಂದುವಂತೆ ಮಾಡುವುದು
- ವಿಷಯಗಳ ಮೇರೆಗಳನ್ನು ಮೀರಿ ಅವುಗಳಿಗೆ ಸಮಗ್ರದೃಷ್ಟಿಯ ಬೋಧನೆಯನ್ನು ಅಳವಡಿಸುವುದು
- ಶಾಲೆಯ ಹೊರಗಿನ ಬದುಕಿಗೆ ಜ್ಞಾನ ಸಂಯೋಜನೆ
- ಮಕ್ಕಳಿಂದಲೇ ಜ್ಞಾನವನ್ನು ಅಭಿವೃದ್ಧಿ ಪಡಿಸುವುದು.

ನೂತನ ಪಠ್ಯಪುಸ್ತಕಗಳಲ್ಲಿ ನೂತನ ವಿಧಾನಗಳಾದ ಅಂತರ್ಗತ ವಿಧಾನ (Integrated Approach), ರಚನಾತ್ಮಕ ವಿಧಾನ (Constructive Approach) ಹಾಗೂ ಸುರುಳಿಯಾಕಾರದ ವಿಧಾನ (Spiral Approach) ಗಳನ್ನು ಅಳವಡಿಸಲಾಗಿದೆ.

ಪಠ್ಯಪುಸ್ತಕಗಳ ವಿಷಯ ಹಾಗೂ ಅಭ್ಯಾಸಗಳು ವಿದ್ಯಾರ್ಥಿಗಳನ್ನು ಯೋಚನೆ ಮಾಡುವಂತೆ ಮಾಡಿ, ಚಟುವಟಿಕೆಗಳ ಮೂಲಕ ಜ್ಞಾನ ಹಾಗೂ ಸಾಮರ್ಥ್ಯಗಳನ್ನು ಪಡೆಯುವಂತೆ ಮಾಡುವ ಪ್ರಯತ್ನ ಮಾಡಲಾಗಿದೆ. ಪಠ್ಯವಸ್ತುಗಳೊಂದಿಗೆ ಅತ್ಯಂತ ಅವಶ್ಯಕ ಜೀವನ ಮೌಲ್ಯಗಳನ್ನು ಅಂತರ್ಗತವಾಗಿ ಬಳಸಲಾಗಿದೆ. ಈ ನೂತನ ಪಠ್ಯಪುಸ್ತಕಗಳು ಪರೀಕ್ಷಾ ದೃಷ್ಟಿಯಿಂದ ರಚಿತವಾಗಿಲ್ಲ. ಬದಲಾಗಿ ಅವುಗಳು ವಿದ್ಯಾರ್ಥಿಗಳ ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿವೆ. ತನ್ಮೂಲಕ ಅವರನ್ನು ಸ್ವತಂತ್ರ ಭಾರತದ ಸ್ವಸ್ಥಸಮಾಜದ ಉತ್ತಮ ಪ್ರಜೆಗಳನ್ನಾಗಿ ಮಾಡುವ ಪ್ರಯತ್ನ ನಡೆದಿದೆ.

5ನೇ ತರಗತಿಯ ಸಮಾಜ ವಿಜ್ಞಾನ ಪಠ್ಯಪುಸ್ತಕದಲ್ಲಿ ಒಂದು ಹೊಸತನವನ್ನು ತರಲಾಗಿದೆ. ಕರ್ನಾಟಕದ ನಾಲ್ಕು ವಿಭಾಗಗಳಿಗೆ ಬೇರೆ ಬೇರೆ ಪುಸ್ತಕಗಳನ್ನು ತಯಾರಿಸಲಾಗಿದೆ. ಅವುಗಳಲ್ಲಿನ ಮೊದಲ ಅಧ್ಯಾಯ ಆಯಾ ವಿಭಾಗದ ಇತಿಹಾಸ, ಭೌಗೋಳಿಕ ಲಕ್ಷಣಗಳು, ಜನಜೀವನ, ಸಂಸ್ಕೃತಿ, ಸಂಪ್ರದಾಯಗಳು ಹಾಗೂ ಆ ವಿಭಾಗದ ಜನಜೀವನವನ್ನು ಶ್ರೀಮಂತಗೊಳಿಸಿದ ವಿವಿಧ ಕ್ಷೇತ್ರಗಳಲ್ಲಿನ ಹಿರಿಯನಾಯಕರ ವಿಚಾರ ಮಾಹಿತಿ ಇತ್ಯಾದಿಗಳನ್ನು ಕೊಡಲಾಗಿದೆ. ಎನ್‌ಸಿಎಫ್ 2005 ರ ಮಾರ್ಗಸೂಚಿಯಂತೆ ಇತಿಹಾಸ, ಭೂಗೋಳ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ ಹಾಗೂ ವಾಣಿಜ್ಯಶಾಸ್ತ್ರಗಳ ಅಂಶಗಳನ್ನು 8 ರಿಂದ 10ನೇ ತರಗತಿಯಲ್ಲಿ ಸೇರಿಸಲಾಗಿದೆ. ಅನೇಕ ಅವಶ್ಯಕ ವಿಚಾರಗಳನ್ನು ಆವರಣಗಳಲ್ಲಿ ಕೊಡಲಾಗಿದೆ. ಮಕ್ಕಳು ಸ್ವಂತವಾಗಿ ಕಲಿಯುವುದಕ್ಕೆ ಅವಕಾಶ ಮಾಡಿಕೊಡುವ ನಿಟ್ಟಿನಲ್ಲಿ ಅನೇಕ ಪ್ರಾಜೆಕ್ಟ್‌ಗಳನ್ನು ಸೂಚಿಸಲಾಗಿದೆ. ಆದರೆ, ಕಂಠಪಾಠ ಮಾಡುವ ಅಂಶಗಳಾದ ಇಸವಿಗಳು, ಅನಾವಶ್ಯಕ ವಿಷಯಗಳನ್ನು ಕಡಿಮೆ ಮಾಡುವುದರ ಮೂಲಕ ಕಲಿಕಾ ಹೊರೆಯನ್ನು ಕಡಿಮೆ ಮಾಡಲಾಗಿದೆ.

ಕರ್ನಾಟಕ ಪಠ್ಯಪುಸ್ತಕ ಸಂಘವು ಈ ಪುಸ್ತಕದ ತಯಾರಿಯಲ್ಲಿ ಸಹಕರಿಸಿದ ಸಮಿತಿಯ ಅಧ್ಯಕ್ಷರಿಗೆ, ಸದಸ್ಯರಿಗೆ, ಕಲಾಕಾರರಿಗೆ, ಪರಿಶೀಲಕರಿಗೆ, ಸಂಯೋಜಕ ಅಧಿಕಾರಿಗಳಿಗೆ, ಶಿಕ್ಷಣ ಮಹಾವಿದ್ಯಾಲಯಗಳ ಸಿಬ್ಬಂದಿವರ್ಗದವರಿಗೆ, ಜಿಲ್ಲಾ ತರಬೇತಿ ಸಂಸ್ಥೆಗಳು, ರಾಜ್ಯ ಮಟ್ಟದ ಪಠ್ಯಪುಸ್ತಕ ಸಂಪಾದಕ ಮಂಡಳಿಯ ಸದಸ್ಯರಿಗೆ ಮತ್ತು ಪುಸ್ತಕವನ್ನು ಸುಂದರವಾಗಿ ಮುದ್ರಿಸಿದ ಮುದ್ರಕರಿಗೆ ತನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

**ಪ್ರೊ. ಜಿ. ಎಸ್. ಮುಡಂಬಡಿತ್ತಾಯ**
ಮುಖ್ಯ ಸಂಯೋಜಕರು
ಪಠ್ಯಪುಸ್ತಕ ಪರಿಷ್ಕರಣೆ ಹಾಗೂ ಪಠ್ಯಪುಸ್ತಕ ರಚನೆ
ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು

**ನಾಗೇಂದ್ರ ಕುಮಾರ್**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ
ಬೆಂಗಳೂರು

©KTBS Not to be republished

## ಅಧ್ಯಕ್ಷರ ನುಡಿ

ಪಠ್ಯಕ್ರಮ ಬದಲಾಗಬೇಕು ಎಂಬ ಮಾತು ಸಾರ್ವಜನಿಕರಿಂದ ಮೊದಲಿನಿಂದಲೂ ಕೇಳಿ ಬರುತ್ತಿತ್ತು. ಇದಕ್ಕೆ ಓಗೊಟ್ಟು ಪರಿಷ್ಕರಣೆಗೆ ಕರ್ನಾಟಕ ಸರಕಾರ ಮುಂದಾಗಿದೆ. ಇದರ ಪರಿಣಾಮವಾಗಿ ಒಂಬತ್ತನೆಯ ತರಗತಿಯ ವಿದ್ಯಾರ್ಥಿಗಳಿಗಾಗಿ ರಚಿಸಿರುವ ಪ್ರಸ್ತುತ ಈ ಪಠ್ಯಪುಸ್ತಕವು ಬದಲಾಗುತ್ತಿರುವ ವರ್ತಮಾನ ಸಮಾಜದ ಸನ್ನಿವೇಶಗಳಿಗೆ, ವಿದ್ಯಾರ್ಥಿಯು ತನ್ನನ್ನು ತೊಡಗಿಸಿಕೊಳ್ಳಲು ಅನುಕೂಲವಾಗುವಂತೆ ರಚಿಸಲಾಗಿದೆ. ಮೊದಲಬಾರಿಗೆ ಇತಿಹಾಸ, ರಾಜ್ಯಶಾಸ್ತ್ರ, ಭೂಗೋಳಶಾಸ್ತ್ರ ಮತ್ತು ಅರ್ಥಶಾಸ್ತ್ರಗಳೊಂದಿಗೆ ವ್ಯವಹಾರ ಅಧ್ಯಯನ ಮತ್ತು ಸಮಾಜಶಾಸ್ತ್ರ ಅಧ್ಯಯನಗಳನ್ನು ಹೊಸದಾಗಿ ಸೇರ್ಪಡೆಗೊಳಿಸಿದೆ.

ಗ್ರಾಮ ಮತ್ತು ನಗರ ಪ್ರದೇಶಗಳನ್ನು ಗಮನದಲ್ಲಿಟ್ಟುಕೊಂಡು ಅವರ ಸೃಜನಶೀಲತೆಗೆ ನಿಲುಕುವ ಹಾಗೆ ಈ ಪಠ್ಯಪುಸ್ತಕವನ್ನು ಸರಳವಾಗಿ ಓದಿಕೊಂಡು ಹೋಗುವಂತೆ ರಚಿಸಲಾಗಿದೆ. ಈ ಪಠ್ಯಪುಸ್ತಕದಲ್ಲಿ ಮಕ್ಕಳನ್ನು ಹೆಚ್ಚು ಹೆಚ್ಚು ಕ್ರಿಯಾಶೀಲವಾಗಿಸುವ ಚಟುವಟಿಕೆಗಳನ್ನು ಹಾಗೂ ಯೋಜನಾಕಾರ್ಯಗಳಿಗೆ ಅವಕಾಶ ಕಲ್ಪಿಸಲಾಗಿದೆ. ಇಂದಿನ ಸ್ಪರ್ಧಾತ್ಮಕ ಹಾಗೂ ಮಾಹಿತಿ ಯುಗಕ್ಕೆ ಅನುಕೂಲವಾಗುವಂತೆ ಹೆಚ್ಚಿನ ವಿಷಯಗಳನ್ನು ನೀಡಲಾಗಿದೆ. ಕ್ಲಿಷ್ಟವಾದ ಪದಗಳನ್ನು ತೆಗೆದು ಸರಳ ಶಬ್ದಗಳ ಜೋಡಣೆ, ಕಠಿಣ ಪದಗಳಿಗೆ ಅರ್ಥ, ವಿಷಯಕ್ಕನುಗುಣವಾಗಿ ಮಾತ್ರ ಇಸವಿಗಳನ್ನು ನೀಡಿದ್ದು, ಈ ಎಲ್ಲ ಉತ್ತಮ ಅಂಶಗಳನ್ನು ಅಳವಡಿಸಿಕೊಳ್ಳಲಾಗಿದೆ. ಹೀಗಿದ್ದು ನಾವು ಎಲ್ಲ ದೃಷ್ಟಿಯಿಂದ ಯಶಸ್ವಿಯಾಗಿದ್ದೇವೆಯೇ ? ಹಾಗೇನಿಲ್ಲ. 2005ನೇ ರಾಷ್ಟ್ರೀಯ ಪಠ್ಯಕ್ರಮದ ಆಧಾರದ ನೀತಿಯ ಚೌಕಟ್ಟಿನಲ್ಲಿಯೇ ಈ ಪಠ್ಯಪುಸ್ತಕ ರಚನೆಗೊಂಡಿದೆ.

ಈ ಪಠ್ಯವನ್ನು ಸದಸ್ಯರು ಯಶಸ್ವಿಯಾಗಿ ಪೂರೈಸಲು ನೆರವಾದವರು ಪಠ್ಯಪುಸ್ತಕ ರಚನಾಸಮಿತಿ ಸಂದರ್ಭಾನುಸಾರ ಸಲಹೆ ಸೂಚನೆಗಳನ್ನು ನೀಡಿದ ಪರಿಶೀಲನ ಸಮಿತಿ, ಸಂಪಾದಕ ಮಂಡಳಿ, ಅನುವಾದಕರು ಹಾಗೂ ಮುಖ್ಯ ಸಲಹೆಗಾರರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಪಠ್ಯಪುಸ್ತಕ ಯೋಜನೆಯನ್ನು ಸಮರ್ಥವಾಗಿ ಹೊರತರಲು ನಿರಂತರವಾಗಿ ಶ್ರಮಿಸಿರುವ ಈ ಯೋಜನೆಯ ಮುಖ್ಯ ಸಂಯೋಜಕರಾದ ಪ್ರೊ.ಜಿ.ಎಸ್. ಮುಡಂಬಡಿತ್ತಾಯರವರಿಗೆ ಹಾಗೂ ಎಲ್ಲಾ ರೀತಿಯ ಸಹಕಾರ ನೀಡಿದ ಪಠ್ಯಪುಸ್ತಕ ಸಂಘದ ಅಧಿಕಾರಿಗಳಿಗೆ, ಪ್ರೋತ್ಸಾಹ ನೀಡಿದ ತುಮಕೂರು ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳು ಮತ್ತು ಕುಲಸಚಿವರಿಗೆ ನಮ್ಮ ಕೃತಜ್ಞತೆಗಳು.

**ಡಾ. ಎಂ. ಕೊಟ್ರೇಶ್**

**ಎ.ಎಸ್. ದೀಕ್ಷಿತ್**

ಅಧ್ಯಕ್ಷರು, ಪಠ್ಯಪುಸ್ತಕ ರಚನಾ ಸಮಿತಿ.

© KTBS Not to be republished

# ರಚನಾ ಸಮಿತಿ

**ಅಧ್ಯಕ್ಷರು**

**ಡಾ. ಎಂ. ಕೊಟ್ರೇಶ್,** ಸಹಪ್ರಾಧ್ಯಾಪಕರು, ಇತಿಹಾಸ ಮತ್ತು ಪುರಾತತ್ವ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು–572103.

**ಶ್ರೀ ಎ.ಎಸ್. ದೀಕ್ಷಿತ್,** ನಿವೃತ್ತ ಪ್ರಾಂಶುಪಾಲರು, ವಾಣಿ ವಿದ್ಯಾಸಂಸ್ಥೆ, ಬಸವೇಶ್ವರನಗರ, ಬೆಂಗಳೂರು–79

**ಸದಸ್ಯರು :**

**ಡಾ. ಬಸವರಾಜ ಎನ್ ಅಕ್ಕಿ,** ಸಹಪ್ರಾಧ್ಯಾಪಕರು, ಸರ್ಕಾರಿ ಪ್ರಥಮದರ್ಜೆ ಕಾಲೇಜು, ಆಳ್ನಾವರ, ಧಾರವಾಡ ತಾ||

**ಶ್ರೀ ಎನ್. ಸತ್ಯಪ್ರಕಾಶ,** ಮುಖ್ಯಶಿಕ್ಷಕರು, ವಿದ್ಯಾವರ್ಧಕ ಸಂಘ ಪ್ರೌಢಶಾಲೆ, ರಾಜಾಜಿನಗರ ಒಂದನೇ ಬ್ಲಾಕ್, ಬೆಂಗಳೂರು – 10.

**ಶ್ರೀ ಟಿ. ನಿಂಗಯ್ಯ,** ಸಹಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗುಬ್ಬಿ, ತುಮಕೂರು ಜಿಲ್ಲೆ.

**ಶ್ರೀ ಬಿ.ಕೆ. ವಾಸುಕಿ,** ಸಹಶಿಕ್ಷಕರು, ವಿವೇಕಾನಂದ ಗಿರಿಜನ ಸನಿವಾಸ ಪ್ರೌಢಶಾಲೆ, ಬಿಳಿಗಿರಿರಂಗನಬೆಟ್ಟ, ಚಾಮರಾಜನಗರ ಜಿಲ್ಲೆ.

**ಶ್ರೀ ಬಿ. ಹನುಮಂತರಾವ್,** ಉಪನ್ಯಾಸಕರು, ಸರ್ಕಾರಿ ಪದವಿಪೂರ್ವ ಕಾಲೇಜು, ಚಿಕ್ಕಬಳ್ಳಾಪುರ.

**ಶ್ರೀ ಕುಮಾರಸ್ವಾಮಿ,** ಪ್ರಾಂಶುಪಾಲರು, ವಿದ್ಯಾವಾಹಿನಿ ಪದವಿಪೂರ್ವ ಕಾಲೇಜು, ತುಮಕೂರು.

**ಶ್ರೀ ಎಸ್.ಹೆಚ್. ಕುರಕುಂದಿ,** ಚಿತ್ರಕಲಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಮಾಸಣಗಿ, ಬ್ಯಾಡಗಿ ತಾ||, ಹಾವೇರಿ ಜಿಲ್ಲೆ.

**ಪರಿಶೀಲಕರು**

**ಡಾ. ರಾಜಾರಾಂ ಹೆಗಡೆ,** ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ, ಶಿವಮೊಗ್ಗ.

**ಪ್ರೊ. ಟಿ.ಡಿ. ದೇವೇಗೌಡ,** ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಡೀನ್ (ಅಧ್ಯಯನ ಕೇಂದ್ರಗಳು), ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು.

**ಡಾ. ಶೌಕತ್ ಅಝೀಮ್,** ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ.

**ಪ್ರೊ. ಪಿ. ಮಲ್ಲಪ್ಪ,** ನಿವೃತ್ತ ಪ್ರಾಧ್ಯಾಪಕರು, ಭೂಗೋಳಶಾಸ್ತ್ರ ವಿಭಾಗ, ಜೆ.ಎಸ್.ಎಸ್. ಮಹಾವಿದ್ಯಾಲಯ, ಮೈಸೂರು.

**ಡಾ. ಎಸ್.ಆರ್. ಕೇಶವ,** ಅಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

**ಡಾ. ಕೆ.ಆರ್. ಶ್ರೀಲಕ್ಷ್ಮಿ,** ಸಹಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ವಿಭಾಗ, ಸರ್ಕಾರಿ ಪ್ರಥಮದರ್ಜೆ ಕಾಲೇಜು, ಜಯನಗರ, 6ನೇ ಬ್ಲಾಕ್, ಯಡಿಯೂರು, ಬೆಂಗಳೂರು.

**ಸಂಪಾದಕ ಮಂಡಳಿ**

**ಡಾ. ಎಂ.ವಿ. ಶ್ರೀನಿವಾಸ್,** ನಿವೃತ್ತ ಪ್ರಾಧ್ಯಾಪಕರು ಇತಿಹಾಸ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

**ಡಾ. ಆರ್.ಎಲ್.ಎಂ. ಪಾಟೀಲ್,** ನಿವೃತ್ತ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

**ಡಾ. ಈಶ್ವರಪ್ಪ,** ಪ್ರಾಧ್ಯಾಪಕರು, ಭೂಗೋಳಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

**ಅನುವಾದಕರು**

**ಶ್ರೀಮತಿ ಎಲ್.ಬಿ. ಜಾದವ್,** ಸಹ ಶಿಕ್ಷಕರು, ಮರಾಠಾ ಮಂಡಳ ಸಂಯುಕ್ತ ಪದವಿ ಪೂರ್ವ ಕಾಲೇಜು, ಬೆಳಗಾವಿ.

**ಶ್ರೀಮತಿ ಎಂ.ಸಿ. ಮಾಲಗಾವೆ,** ಸಹ ಶಿಕ್ಷಕರು, ಜನತಾ ಸಂಯುಕ್ತ ಪದವಿ ಪೂರ್ವ ಕಾಲೇಜು, ಸಾಂಬ್ರ, ಬೆಳಗಾವಿ ತಾ.

**ಶ್ರೀ ಎಸ್.ಆರ್. ದಾನಿ,** ಸಹ ಶಿಕ್ಷಕರು, ಶ್ರೀಹರಿ ವಿದ್ಯಾಲಯ, ಉಗಾರ್, ಅಥಣಿ ತಾಲ್ಲೂಕ್, ಬೆಳಗಾವಿ ಜಿಲ್ಲೆ.

**ಶ್ರೀಮತಿ ದೀಪ್ತಿ ಭೊಸಲೆ,** ಸಹ ಶಿಕ್ಷಕರು, ಶ್ರೀಹರಿ ವಿದ್ಯಾಲಯ, ಉಗಾರ್, ಅಥಣಿ ತಾಲ್ಲೂಕ್, ಬೆಳಗಾವಿ ಜಿಲ್ಲೆ.

**ಮುಖ್ಯ ಸಂಯೋಜಕರು**

**ಪ್ರೊ. ಜಿ. ಎಸ್. ಮುಡಂಬಡಿತ್ತಾಯ,** ಪಠ್ಯಕ್ರಮ ಪರಿಷ್ಕರಣೆ ಮತ್ತು ಪಠ್ಯಪುಸ್ತಕ ರಚನೆ, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

**ಮುಖ್ಯಸಲಹೆಗಾರರು**

**ಶ್ರೀ ನಾಗೇಂದ್ರಕುಮಾರ್,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

**ಶ್ರೀಮತಿ ನಾಗಮಣಿ ಸಿ.,** ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

**ಕಾರ್ಯಕ್ರಮ ಸಂಯೋಜಕರು :**

**ಶ್ರೀ ಎ.ಟಿ. ರಂಗದಾಸಪ್ಪ,** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

©KTBS Not to be republished

# ಪರಿಷ್ಕರಣೆ ಕುರಿತು

ಒಂದರಿಂದ ಹತ್ತನೇ ತರಗತಿಯ ಪಠ್ಯಪುಸ್ತಕಗಳ ಬಗ್ಗೆ ಪ್ರಕಟಗೊಂಡ ಸಾರ್ವಜನಿಕ ಅಭಿಪ್ರಾಯಗಳನ್ನು ಗಮನಿಸಿ ಮಾನ್ಯ ಮುಖ್ಯಮಂತ್ರಿಯವರೂ ಅರ್ಥಸಚಿವರೂ ಆಗಿರುವ ಶ್ರೀ ಸಿದ್ದರಾಮಯ್ಯನವರು ತಮ್ಮ 2014–15 ರ ಬಜೆಟ್‌ನಲ್ಲಿ ತಜ್ಞರ ಸಮಿತಿಯನ್ನು ರಚಿಸುವ ಘೋಷಣೆ ಮಾಡಿದರು. ತಜ್ಞರು ಅನುಸರಿಸಬೇಕಾದ ಮೂಲ ಆಶಯವನ್ನು ಹೀಗೆ ಹೇಳಿದರು: "ಪಠ್ಯಪುಸ್ತಕಗಳನ್ನು ಸಾಮಾಜಿಕ ಸಾಮರಸ್ಯ, ನೈತಿಕಮೌಲ್ಯಗಳು, ವ್ಯಕ್ತಿತ್ವವಿಕಸನ, ವೈಜ್ಞಾನಿಕ ಮತ್ತು ವೈಚಾರಿಕ ಮನೋಭಾವ, ಜಾತ್ಯತೀತತೆ ಮತ್ತು ರಾಷ್ಟ್ರೀಯ ಬದ್ಧತೆಗಳಿಗೆ ಅನುವಾಗುವಂತೆ ತಜ್ಞರ ಸಮಿತಿಯನ್ನು ಪುನರ್ ರಚಿಸಲಾಗುವುದು" – ಇದು ಬಜೆಟ್ ಭಾಷಣದಲ್ಲಿ ಸಾದರಪಡಿಸಿದ ಆಶಯ.

ಆನಂತರ ಶಿಕ್ಷಣ ಇಲಾಖೆಯು ಒಂದರಿಂದ ಹತ್ತನೇ ತರಗತಿಯವರೆಗಿನ ಪಠ್ಯಪುಸ್ತಕಗಳ ಪರಿಷ್ಕರಣೆಗಾಗಿ 27 ಸಮಿತಿಗಳನ್ನು ರಚಿಸಿ ದಿನಾಂಕ: 24.11.2014 ರಂದು ಆದೇಶ ಹೊರಡಿಸಿತು. ಈ ಸಮಿತಿಗಳು ವಿಷಯವಾರು ಮತ್ತು ತರಗತಿವಾರು ಮಾನದಂಡಕ್ಕನುಗುಣವಾಗಿ ರಚಿತವಾದವು. ವಿವಿಧ ಪಠ್ಯವಿಷಯಗಳಿಗೆ ಸಂಬಂಧಿಸಿದ ತಜ್ಞರು, ಅಧ್ಯಾಪಕರು ಈ ಸಮಿತಿಗಳಲ್ಲಿದ್ದಾರೆ. ಈಗಾಗಲೇ ಲಿಖಿತವಾಗಿ ಬಂದಿರುವ ಅನೇಕ ಆಕ್ಷೇಪಗಳು ಮತ್ತು ವಿಶ್ಲೇಷಣೆಗಳನ್ನು ಪರಿಶೀಲಿಸಿ, ತಪ್ಪು ಒಪ್ಪುಗಳ ಬಗ್ಗೆ ನಿರ್ಣಯಿಸಿ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ ಹೊಣೆಹೊತ್ತ ಈ ಸಮಿತಿಗಳಿಗೆ 'ಅಗತ್ಯವಿದ್ದಲ್ಲಿ ಪಠ್ಯವಸ್ತುವನ್ನು ಪರಿಷ್ಕರಿಸಿ ನಂತರ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ' ಸ್ವಾತಂತ್ರ್ಯವನ್ನು 24.11.2014ರ ಆದೇಶದಲ್ಲೇ ನೀಡಲಾಗಿತ್ತು. ಆನಂತರ 19.09.2015 ರಂದು ಹೊಸ ಆದೇಶ ಹೊರಡಿಸಿ 'ಅಗತ್ಯವಿದ್ದಲ್ಲಿ ಪುನರ್ ರಚಿಸುವ' ಸ್ವಾತಂತ್ರ್ಯವನ್ನು ನೀಡಲಾಯಿತು. ಹೀಗೆ ಸಮಗ್ರ ಪರಿಷ್ಕರಣೆಗೊಂಡ ಪಠ್ಯಪುಸ್ತಕಗಳನ್ನು 2016–17 ರ ಬದಲು 2017–18ನೇ ಶೈಕ್ಷಣಿಕ ವರ್ಷದಲ್ಲಿ ಜಾರಿಗೊಳಿಸಲಾಗುವುದೆಂದು ಇದೇ ಆದೇಶದಲ್ಲಿ ತಿಳಿಸಲಾಯಿತು.

ಅನೇಕ ವ್ಯಕ್ತಿಗಳೂ ಸಂಘಟನೆಗಳೂ ಸ್ವಯಂಪ್ರೇರಿತರಾಗಿ ಪಠ್ಯಪುಸ್ತಕಗಳ ಮಾಹಿತಿದೋಷ, ಆಶಯದೋಷಗಳನ್ನು ಪಟ್ಟಿಮಾಡಿ ಶಿಕ್ಷಣ ಸಚಿವರಿಗೆ, ಪಠ್ಯಪುಸ್ತಕ ಸಂಘಕ್ಕೆ ಕಳುಹಿಸಿದ್ದರು. ಅವುಗಳ ಪರಿಶೀಲನೆ ಮಾಡಿದ್ದಲ್ಲದೆ, ಸಮಿತಿಗಳಾಚೆಗೆ ಅನೇಕ ಸಂವಾದಗಳನ್ನು ಏರ್ಪಡಿಸಿ ವಿಚಾರ ವಿನಿಮಯ ಮಾಡಿಕೊಂಡಿದ್ದೇವೆ. ಪ್ರಾಥಮಿಕ ಮತ್ತು ಪ್ರೌಢಶಾಲಾ ಅಧ್ಯಾಪಕರ ಸಂಘಗಳ ಜೊತೆ ಚರ್ಚಿಸಿದ್ದಲ್ಲದೆ ಪ್ರಶ್ನಾವಳಿ ಸಿದ್ಧಪಡಿಸಿ ಅಧ್ಯಾಪಕರಿಗೆ ಕಳಿಸಿ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ. ಅಧ್ಯಾಪಕರು, ವಿಷಯ ಪರಿವೀಕ್ಷಕರು ಮತ್ತು ಡಯಟ್ ಪ್ರಾಂಶುಪಾಲರ ಪ್ರತ್ಯೇಕ ಸಭೆಗಳನ್ನು ನಡೆಸಿ ವಿಶ್ಲೇಷಣಾತ್ಮಕ ಅಭಿಮತಗಳನ್ನು ಪಡೆಯಲಾಗಿದೆ. ವಿಜ್ಞಾನ, ಸಮಾಜವಿಜ್ಞಾನ, ಗಣಿತ, ಭಾಷೆ ಸಾಹಿತ್ಯಗಳಿಗೆ ಸಂಬಂಧಿಸಿದ ತಜ್ಞರಿಗೆ ಮೊದಲೇ ಪಠ್ಯಪುಸ್ತಕಗಳನ್ನು ಕಳುಹಿಸಿ ಆನಂತರ ಸಭೆ ನಡೆಸಿ ಚರ್ಚಿಸಲಾಗಿದೆ. ಮಹಿಳಾ ಸಂಘಟನೆ ಹಾಗೂ ವಿಜ್ಞಾನ ಸಂಬಂಧಿ ಸಂಸ್ಥೆಗಳನ್ನು ಆಹ್ವಾನಿಸಿ ಚಿಂತನೆ ನಡೆಸಲಾಗಿದೆ. ಹೀಗೆ ಎಲ್ಲಾ ಮೂಲಗಳಿಂದ ಪಡೆದ ಅರಿವಿನ ಆಧಾರದ ಮೇಲೆ ಪಠ್ಯಪುಸ್ತಕಗಳನ್ನು ಅಗತ್ಯವಿದ್ದಕಡೆ ಪರಿಷ್ಕರಿಸಲಾಗಿದೆ.

ಬಹುಮುಖ್ಯವಾದ ಇನ್ನೊಂದು ಸಂಗತಿಯನ್ನು ಇಲ್ಲಿ ಹೇಳಬೇಕು. ಕೇಂದ್ರೀಯ ಶಾಲಾ (NCERT) ಪಠ್ಯಪುಸ್ತಕಗಳ ಜೊತೆ ರಾಜ್ಯದ ಪಠ್ಯಪುಸ್ತಕಗಳನ್ನು ತೌಲನಿಕವಾಗಿ ಅಧ್ಯಯನ ಮಾಡಿ ಸಲಹೆಗಳನ್ನು ನೀಡಲು ವಿಜ್ಞಾನ, ಗಣಿತ ಮತ್ತು ಸಮಾಜ ವಿಜ್ಞಾನಕ್ಕೆ ಸಂಬಂಧಿಸಿದಂತೆ ತಜ್ಞರ ಮೂರು ಸಮಿತಿಗಳನ್ನು ರಚಿಸಲಾಯಿತು. ಈ ಸಮಿತಿಗಳು ನೀಡಿದ ತೌಲನಿಕ ವಿಶ್ಲೇಷಣೆ ಮತ್ತು ಸಲಹೆಗಳನ್ನು ಆಧರಿಸಿ ರಾಜ್ಯ ಪಠ್ಯಪುಸ್ತಕಗಳ ಗುಣಮಟ್ಟವನ್ನು ಹೆಚ್ಚಿಸಲಾಗಿದೆ. ಕೇಂದ್ರೀಯ ಶಾಲಾ ಪಠ್ಯಪುಸ್ತಕಗಳಿಗಿಂತ ನಮ್ಮ ರಾಜ್ಯದ ಪಠ್ಯಪುಸ್ತಕಗಳ ಗುಣಮಟ್ಟ ಕಡಿಮೆಯಾಗದಂತೆ ಕಾಯ್ದುಕೊಳ್ಳಲಾಗಿದೆ. ಜೊತೆಗೆ ಆಂಧ್ರ, ತಮಿಳುನಾಡು, ಮಹಾರಾಷ್ಟ್ರಗಳ ಪಠ್ಯಪುಸ್ತಕಗಳ ಜೊತೆ ನಮ್ಮ ಪಠ್ಯಪುಸ್ತಕಗಳನ್ನು ಪರಿಶೀಲಿಸಲಾಗಿದೆ.

© KTBS Not to be republished

ಇನ್ನೊಂದು ಸ್ಪಷ್ಟನೆಯನ್ನು ನೀಡಲು ಬಯಸುತ್ತೇನೆ. ನಮ್ಮ ಸಮಿತಿಗಳು ಮಾಡಿರುವುದು ಪರಿಷ್ಕರಣೆಯೇ ಹೊರತು ಪಠ್ಯಪುಸ್ತಕಗಳ ಸಮಗ್ರ ರಚನೆಯಲ್ಲ. ಆದ್ದರಿಂದ ಈಗಾಗಲೇ ರಚಿತವಾಗಿರುವ ಪಠ್ಯಪುಸ್ತಕಗಳ ಸ್ವರೂಪಕ್ಕೆ ಎಲ್ಲಿಯೂ ಧಕ್ಕೆಯುಂಟುಮಾಡಿಲ್ಲ. ಲಿಂಗತ್ವ ಸಮಾನತೆ, ಪ್ರಾದೇಶಿಕ ಪ್ರಾತಿನಿಧ್ಯ, ರಾಷ್ಟ್ರೀಯ ಸಮಗ್ರತೆ, ಸಮಾನತೆ, ಸಾಮಾಜಿಕ ಸಾಮರಸ್ಯಗಳ ಹಿನ್ನೆಲೆಯಲ್ಲಿ ಕೆಲವು ಪರಿಷ್ಕರಣೆಗಳು ನಡೆದಿವೆ. ಹೀಗೆ ಪರಿಷ್ಕರಿಸುವಾಗ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಮತ್ತು ರಾಜ್ಯ ಪಠ್ಯಕ್ರಮ ಚೌಕಟ್ಟುಗಳನ್ನು ಮೀರಿಲ್ಲವೆಂದು ತಿಳಿಸಬಯಸುತ್ತೇನೆ: ಜೊತೆಗೆ ನಮ್ಮ ಸಂವಿಧಾನದ ಆಶಯಗಳನ್ನು ಅನುಸರಿಸಲಾಗಿದೆ. ಸಮಿತಿಗಳು ಮಾಡಿದ ಪರಿಷ್ಕರಣೆಯನ್ನು ಮತ್ತೊಮ್ಮೆ ಪರಿಶೀಲಿಸಲು ವಿಷಯವಾರು ಉನ್ನತ ಪರಿಶೀಲನ ಸಮಿತಿಗಳನ್ನು ರಚಿಸಿ ಅಭಿಪ್ರಾಯಪಡೆದು ಅಳವಡಿಸಲಾಗಿದೆ.

ಹೀಗೆ ಕ್ರಮಬದ್ಧವಾಗಿ ನಡೆದ ಕೆಲಸಕ್ಕೆ ತಮ್ಮನ್ನು ತಾವು ಸಂಪೂರ್ಣ ತೊಡಗಿಸಿಕೊಂಡ 27 ಸಮಿತಿಗಳ ಅಧ್ಯಕ್ಷರು ಮತ್ತು ಸದಸ್ಯರನ್ನು ಹಾಗೂ ಉನ್ನತ ಪರಿಶೀಲನಾ ಸಮಿತಿಯ ಸಮಸ್ತರನ್ನು ಮತ್ತು ಪರಿಷ್ಕೃತ ಪಾಠಗಳ ರಚನೆ ಮಾಡಿದ ತಜ್ಞರನ್ನು ಕೃತಜ್ಞತೆಯಿಂದ ನೆನೆಯುತ್ತೇವೆ. ಅಂತೆಯೇ ಸಮಿತಿಗಳ ಕೆಲಸ ಸುಗಮವಾಗಿ ನಡೆಯುವಂತೆ ವ್ಯವಸ್ಥೆಮಾಡಲು ಕಾರ್ಯಕ್ರಮ ಅಧಿಕಾರಿಗಳಾಗಿ ನಿಷ್ಠೆಯಿಂದ ದುಡಿದ ಪಠ್ಯಪುಸ್ತಕ ಸಂಘದ ಎಲ್ಲಾ ಅಧಿಕಾರಿಗಳನ್ನೂ ನೆನೆಯುತ್ತೇವೆ. ಸಹಕರಿಸಿದ ಸಿಬ್ಬಂದಿಗೂ ನಮ್ಮ ವಂದನೆಗಳು. ಅಭಿಪ್ರಾಯ ನೀಡಿ ಸಹಕರಿಸಿದ ಸರ್ವ ಸಂಘಟನೆಗಳು ಮತ್ತು ತಜ್ಞರಿಗೆ ಧನ್ಯವಾದಗಳು.


**ನರಸಿಂಹಯ್ಯ**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ)
ಬೆಂಗಳೂರು–85

**ಪ್ರೊ. ಬರಗೂರು ರಾಮಚಂದ್ರಪ್ಪ**
ಸರ್ವಾಧ್ಯಕ್ಷರು
ಪಠ್ಯಪುಸ್ತಕ ಪರಿಷ್ಕರಣ ಸಮಿತಿ
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ)
ಬೆಂಗಳೂರು–85


©KTBS Not to be republished

# ಪಠ್ಯಪುಸ್ತಕಗಳ ಪರಿಷ್ಕರಣ ಸಮಿತಿ

**ಸರ್ವಾಧ್ಯಕ್ಷರು**

**ಪ್ರೊ. ಬರಗೂರು ರಾಮಚಂದ್ರಪ್ಪ,** ಅಧ್ಯಕ್ಷರು, ರಾಜ್ಯ ಪಠ್ಯಪುಸ್ತಕ ಪರಿಷ್ಕರಣ ಸಮಿತಿ, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

**ಅಧ್ಯಕ್ಷರು**

**ಡಾ. ಅಶ್ವತ್ಥ ನಾರಾಯಣ,** ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ ಮೈಸೂರು.

**ಸದಸ್ಯರು**

**ಡಾ. ಅಶ್ವತ್ಥ ನಾರಾಯಣ,** ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

**ಡಾ. ಜೆ. ಸೋಮಶೇಖರ್,** ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾನಿಲಯ, ಬಳ್ಳಾರಿ.

**ಡಾ. ಎಚ್.ಡಿ. ಪ್ರಶಾಂತ್,** ಪ್ರಾಧ್ಯಾಪಕರು, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

**ಪ್ರೊ. ಎಸ್.ಟಿ. ಬಾಗಲಕೋಟಿ,** ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

**ಪ್ರೊ. ಪಿ ಮಲ್ಲಪ್ಪ,** ನಿವೃತ್ತ ಪ್ರಾಧ್ಯಾಪಕರು, ಭೂಗೋಳಶಾಸ್ತ್ರ ವಿಭಾಗ, ಜೆ.ಎಸ್.ಎಸ್. ಮಹಾವಿದ್ಯಾಲಯ, ಮೈಸೂರು.

**ಡಾ. ಬಿ. ಶೇಖರ್,** ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

**ಶ್ರೀ. ಎ.ಎಸ್. ದೀಕ್ಷಿತ್,** ನಿವೃತ್ತ ಪ್ರಾಂಶುಪಾಲರು, ವಾಣಿ ವಿದ್ಯಾಸಂಸ್ಥೆ, ಬಸವೇಶ್ವರನಗರ, ಬೆಂಗಳೂರು.

**ಶ್ರೀ. ಈರಣ್ಣ. ಎಂ. ಅಂಬಿ,** ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ತಡಕೋಡು, ಧಾರವಾಡ ತಾ. ಮತ್ತು ಜಿಲ್ಲೆ.

**ಶ್ರೀ. ಡಿ.ಎನ್. ವೆಂಕಟೇಶ್,** ಚಿತ್ರಕಲಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಉರಮಾರಕಸಲಗೆರೆ, ಮಂಡ್ಯ ತಾ. ಮತ್ತು ಜಿಲ್ಲೆ.

**ಉನ್ನತ ಪರಿಶೀಲನಾ ಸಮಿತಿ**

**ಶ್ರೀ. ಅಶೋಕ ಶೆಟ್ಟರ್,** ಸಹ ಪ್ರಾಧ್ಯಾಪಕರು, ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

**ಡಾ. ಎಂ.ಎಸ್. ತಳವಾರ್,** ನಿವೃತ್ತ ಪ್ರಾಧ್ಯಾಪಕರು, ಶಿಕ್ಷಣ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

**ಡಾ. ದಶರಥ್ ನಾಯಕ್,** ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಗುಲ್ಬರ್ಗಾ ವಿಶ್ವವಿದ್ಯಾನಿಲಯ, ಕಲಬುರಗಿ.

**ಡಾ. ಹಸೀನ್ ತಾಜ್,** ಪ್ರಾಧ್ಯಾಪಕರು, ಶಿಕ್ಷಣ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

**ಅನುವಾದಕರು**

**ಪ್ರೊ. ಎಸ್.ಟಿ. ಬಾಗಲಕೋಟಿ,** ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

**ಶ್ರೀ. ಎ.ಎಸ್. ದೀಕ್ಷಿತ್,** ನಿವೃತ್ತ ಪ್ರಾಂಶುಪಾಲರು, ವಾಣಿ ವಿದ್ಯಾಸಂಸ್ಥೆ, ಬಸವೇಶ್ವರನಗರ, ಬೆಂಗಳೂರು.

**ಪ್ರೊ. ಪಿ ಮಲ್ಲಪ್ಪ,** ನಿವೃತ್ತ ಪ್ರಾಧ್ಯಾಪಕರು, ಭೂಗೋಳಶಾಸ್ತ್ರ ವಿಭಾಗ, ಜೆ.ಎಸ್.ಎಸ್. ಮಹಾವಿದ್ಯಾಲಯ, ಮೈಸೂರು.

**ಸಲಹೆಗಾರರು**

**ಶ್ರೀ. ನರಸಿಂಹಯ್ಯ,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

**ಶ್ರೀಮತಿ. ನಾಗಮಣಿ ಸಿ.,** ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

**ಕಾರ್ಯಕ್ರಮ ಸಂಯೋಜಕರು**

**ಶ್ರೀ. ಸಿದ್ದಯ್ಯ ಟಿ.ಜಿ,** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

© KTBS Not to be republished

# ಪರಿವಿಡಿ


| ಕ್ರಮ ಸಂಖ್ಯೆ | ಶೀರ್ಷಿಕೆ | ಪುಟ ಸಂಖ್ಯೆ |
|---|---|---|
| | **ಇತಿಹಾಸ** | |
| 1. | ಕ್ರೈಸ್ತ ಧರ್ಮ ಮತ್ತು ಇಸ್ಲಾಂ ಧರ್ಮಗಳು | 1 |
| 2. | ಮಧ್ಯಕಾಲೀನ ಭಾರತ ಮತ್ತು ರಾಜಕೀಯ ಸಂಕ್ರಮಣ | 8 |
| 3. | ಮತ ಪ್ರವರ್ತಕರು ಮತ್ತು ಸಮಾಜ ಸುಧಾರಕರು | 21 |
| 4. | ವಿಜಯನಗರ ಮತ್ತು ಬಹಮನಿ ರಾಜ್ಯ | 27 |
| | **ರಾಜ್ಯಶಾಸ್ತ್ರ** | |
| 1. | ನಮ್ಮ ಸಂವಿಧಾನ | 44 |
| 2. | ಕೇಂದ್ರ ಸರ್ಕಾರ | 55 |
| 3. | ರಾಜ್ಯ ಸರ್ಕಾರ | 66 |
| | **ಸಮಾಜಶಾಸ್ತ್ರ** | |
| 1. | ಕುಟುಂಬ | 73 |
| 2. | ಸಾಮಾಜೀಕರಣ | 79 |
| | **ಭೂಗೋಳ ವಿಜ್ಞಾನ** | |
| 1. | ನಮ್ಮ ರಾಜ್ಯ – ಕರ್ನಾಟಕ | 84 |
| 2. | ಪ್ರಾಕೃತಿಕ ವಿಭಾಗಗಳು | 88 |
| 3. | ಕರ್ನಾಟಕದ ವಾಯುಗುಣ, ಮಣ್ಣುಗಳು, ಸ್ವಾಭಾವಿಕ ಸಸ್ಯವರ್ಗ ಹಾಗೂ ಪ್ರಾಣಿ ಸಂಪತ್ತು | 93 |
| 4. | ಕರ್ನಾಟಕದ ಜಲಸಂಪನ್ಮೂಲಗಳು | 101 |
| 5. | ಕರ್ನಾಟಕದ ಭೂ ಸಂಪತ್ತು | 106 |
| | **ಅರ್ಥಶಾಸ್ತ್ರ** | |
| 1. | ನೈಸರ್ಗಿಕ ಸಂಪನ್ಮೂಲಗಳು | 115 |
| 2. | ಭಾರತದ ಮಾನವ ಸಂಪನ್ಮೂಲಗಳು | 124 |
| | **ವ್ಯವಹಾರ ಅಧ್ಯಯನ** | |
| 1. | ವ್ಯವಹಾರ ನಿರ್ವಹಣೆ | 132 |


©KTBS Not to be republished

# ಇತಿಹಾಸ

## ಅಧ್ಯಾಯ-1

# ಕ್ರೈಸ್ತ ಧರ್ಮ ಮತ್ತು ಇಸ್ಲಾಂ ಧರ್ಮಗಳು

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- *ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳ ಆರಂಭ.*
- *ಏಸು ಕ್ರಿಸ್ತರ ಮತ್ತು ಮಹಮ್ಮದ್ ಪೈಗಂಬರರ ಜೀವನ ಮತ್ತು ಬೋಧನೆಗಳು.*
- *ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳ ಪ್ರಚಾರ ಮತ್ತು ಕೊಡುಗೆಗಳು.*
- *ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳ ಪಂಗಡಗಳು.*

ಪ್ರಪಂಚದ ಚರಿತ್ರೆಯಲ್ಲಿ ಪುರಾತನ ಕಾಲದಿಂದ ಹಲವಾರು ಧರ್ಮಗಳ ಹುಟ್ಟು ಹಾಗು ಬೆಳವಣಿಗೆಗಳನ್ನು ಕಾಣುತ್ತೇವೆ. ಅವುಗಳಲ್ಲಿ ಹಿಂದೂ, ಜೈನ, ಬೌದ್ಧ ಮತ್ತು ಜೊರಾಸ್ಟ್ರಿಯನ್ ಧರ್ಮಗಳು ಸಾ.ಶ.ಪೂ. ಶತಮಾನಗಳಲ್ಲಿ ಸ್ಥಾಪನೆಯಾಗಿ ಪ್ರಪಂಚದ ವಿವಿಧ ದೇಶಗಳಲ್ಲಿ ಪ್ರಸಾರವಾದವು. ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳು ಸಾ.ಶ. ಒಂದನೆಯ ಶತಮಾನದ ನಂತರ ಸ್ಥಾಪನೆಯಾದರೂ ಇಂದು ವಿಶ್ವದ ಪ್ರಮುಖ ಧರ್ಮಗಳಾಗಿವೆ. ಈ ಧರ್ಮಗಳನ್ನು ಸೆಮಿಟಿಕ್ (ಮಧ್ಯ ಏಷ್ಯಾದ ಜನಾಂಗವನ್ನು ಸೆಮಿಟಿಕ್ ಜನಾಂಗವೆಂದು ಪರಿಗಣಿಸಲಾಗಿದೆ.) ಧರ್ಮಗಳೆಂದು ಪರಿಗಣಿಸಲಾಗಿದೆ. ಇವೆರಡು ಧರ್ಮಗಳು ಮಧ್ಯ ಏಷ್ಯಾದಲ್ಲಿ ಜನ್ಮತಾಳಿ ನಂತರ ಪ್ರಪಂಚದ ಬೇರೆ ಬೇರೆ ರಾಷ್ಟ್ರಗಳಲ್ಲಿ ಪ್ರಚಾರವಾದವು .

## ಕ್ರೈಸ್ತ ಧರ್ಮ

ಕ್ರೈಸ್ತ ಧರ್ಮವು ಸಾ.ಶ. 1ನೆಯ ಶತಮಾನದ ಆರಂಭದಲ್ಲಿ ರೋಮನ್ ಸಾಮ್ರಾಜ್ಯದ ಆಡಳಿತಕ್ಕೆ ಒಳಗಾಗಿದ್ದ ಪ್ಯಾಲಸ್ಟೈನ್ ಪ್ರಾಂತ್ಯದ ನಜರತ್‌ನಲ್ಲಿ ಸ್ಥಾಪನೆಯಾಯಿತು. ಇದರ ಸ್ಥಾಪಕರು ಜೀಸಸ್ ಕ್ರಿಸ್ತರು. ಕ್ರೈಸ್ತ ಧರ್ಮ ಸ್ಥಾಪನೆಗೆ ಮುಂಚೆ ಪ್ಯಾಲಸ್ಟೈನ್ ಪ್ರಾಂತ್ಯದಲ್ಲಿ ನೆಲೆಸಿದ್ದ ಯಹೂದಿಗಳು ಸಾಕಷ್ಟು ಮೂಢನಂಬಿಕೆಗಳಿಗೆ ಮತ್ತು ರೋಮನ್ ಸಾಮ್ರಾಜ್ಯದ ದುರಾಡಳಿತಕ್ಕೆ ಒಳಗಾಗಿ ಅನೇಕ ಕಷ್ಟಗಳಿಗೆ ಗುರಿಯಾಗಿದ್ದರು. ಅಂತಹ ಸಂದರ್ಭದಲ್ಲಿ ಜೀಸಸ್‌ರ ಜನನವಾಗಿ ನಂತರ ಧರ್ಮಸ್ಥಾಪನೆಯಾಯಿತು.


ಏಸು ಕ್ರಿಸ್ತ

### ಏಸುಕ್ರಿಸ್ತರ ಜೀವನ ಮತ್ತು ಬೋಧನೆಗಳು

ಏಸುಕ್ರಿಸ್ತರ ಬಾಲ್ಯದ ಬಗ್ಗೆ ಹೆಚ್ಚಿನ ಸಂಗತಿಗಳು ಲಭ್ಯವಾಗಿಲ್ಲ. ದೊರಕಿರುವ ಆಧಾರದ ಮೇಲೆ ಜೀಸಸ್‌ರು ಸಾ.ಶ. 1ನೆಯ ಶತಮಾನದಲ್ಲಿ ಜೆರೂಸಲಂ ಬಳಿಯ ಬೆತ್ಲಹ್ಯಾಂ ಎಂಬ ಹಳ್ಳಿಯಲ್ಲಿ ಒಂದು ಬಡಕುಟುಂಬವೊಂದರಲ್ಲಿ ಮೇರಿ ಮತ್ತು ಜೋಸೆಫ್‌ರ ಮಗನಾಗಿ ಜನಿಸಿದರು. ಅವರಿಗೆ ಬಾಲ್ಯದಲ್ಲಿ ವ್ಯವಸ್ಥಿತವಾದ ವಿದ್ಯಾಭ್ಯಾಸ ಸಿಗಲಿಲ್ಲ. ಆದರೂ ತನ್ನ ಅಸಾಧಾರಣ ಗ್ರಹಣಶಕ್ತಿ ಮತ್ತು ಬುದ್ಧಿವಂತಿಕೆಯಿಂದ

©KTBS Not to be republished

ಅಪಾರವಾದ ಧಾರ್ಮಿಕ ಜ್ಞಾನವನ್ನು ಹೊಂದಿ ಯಹೂದಿಗಳ ಧರ್ಮಗ್ರಂಥಗಳನ್ನು, ತತ್ವಗಳನ್ನು ಸರಳವಾಗಿ ವಿವರಿಸಿ ಅಚ್ಚರಿಗೊಳಿಸಿದರು.

ಜೀಸಸ್‌ರು ತನ್ನ 30ನೆಯ ವಯಸ್ಸಿನಲ್ಲಿ ಜಾನ್ ಬ್ಯಾಪ್ಟಿಸ್ಟ್ ಎಂಬುವವರ ಪ್ರಭಾವಕ್ಕೆ ಒಳಗಾಗಿ ಅವರಿಂದ ದೀಕ್ಷಾ ಸ್ನಾನ ಪಡೆದರು. ದೀಕ್ಷೆಯನ್ನು ನೀಡಿದ ಜಾನ್ ಜೀಸಸರನ್ನು ಮಸೀಹ ಅಥವಾ ಮಹಾರಕ್ಷಕನೆಂದು ಕರೆದರು. ದೀಕ್ಷೆಯ ಸ್ವೀಕಾರದ ನಂತರ ಕಷ್ಟದಲ್ಲಿದ್ದ ಜನರಿಗೆ ದಿವ್ಯ ಜ್ಞಾನವನ್ನು ಬೋಧಿಸಿ ಅವರಿಗೆ ಮಾನಸಿಕ ನೆಮ್ಮದಿಯನ್ನು ತಂದುಕೊಡುತ್ತಿದ್ದರು. ದಿನೇ ದಿನೇ ಜೀಸಸ್‌ರ ಸೇವಾ ಮನೋಭಾವನೆಗಳು ಮತ್ತು ಅನುಕಂಪಗಳು ಎಲ್ಲಾ ವರ್ಗಗಳನ್ನು ಆಕರ್ಷಿಸಿ ಜನಪ್ರಿಯವಾದವು. ಕ್ರಮೇಣ ಅವರು ಜನರ ದೃಷ್ಟಿಯಲ್ಲಿ ರಕ್ಷಕನಾಗಿ ದೈವತ್ವ ಸ್ಥಾನ ಹೊಂದಲಾರಂಭಿಸಿದರು. ಇದನ್ನು ಯಹೂದಿಯರಲ್ಲಿದ್ದ ಸಂಪ್ರದಾಯ ವರ್ಗ ವಿರೋಧಿಸಿತು. ಇವರು ಜೀಸಸ್‌ರ ಬಗ್ಗೆ ರೋಮನ್ ಸಾಮ್ರಾಜ್ಯದ ರಾಜ್ಯಪಾಲನಾದ ಪಾಂಟಿಯಸ್‌ಪಿಲಾತನಿಗೆ ದೂರನ್ನು ನೀಡಿ ರಾಜದ್ರೋಹದ ಆರೋಪ ಮಾಡಿದರು. ವಿಚಾರಣೆಯ ನಂತರ ಜೀಸಸ್‌ರನ್ನು ಗೋಲ್ಗೋಥ ಎಂಬ ಬೆಟ್ಟದಲ್ಲಿ ಒಂದು ಶುಕ್ರವಾರದ ದಿನ ಶಿಲುಬೆಗೆ ಏರಿಸಿದರು. ಈ ದಿನವನ್ನು ಕ್ರೈಸ್ತ ಸಮುದಾಯದವರು ಗುಡ್ ಫ್ರೈಡೇ ಎಂದು ಆಚರಿಸುತ್ತಾರೆ.

**ಬೋಧನೆಗಳು:** ಏಸುಕ್ರಿಸ್ತರು ತನ್ನ 30ನೆಯ ವಯಸ್ಸಿನಿಂದ 33ನೆಯ ವಯಸ್ಸಿನವರೆಗೆ ಪ್ಯಾಲಸ್ಟೈನ್ ಪ್ರಾಂತ್ಯದ ಹಲವಾರು ಭಾಗಗಳಲ್ಲಿ ಸಂಚರಿಸಿ ದೈವತ್ವದ ಬಗೆಗೆ ಸರಳ ಬೋಧನೆಗಳನ್ನು ಮಾಡಿದರು. ಈ ಬೋಧನೆಗಳನ್ನು ಮಾಡುವ ಮೂಲಕ ಮಾನವ ಸಮಾಜಕ್ಕೆ ಶಾಂತಿ, ಕರುಣೆಯ ಭದ್ರ ಬುನಾದಿಯೊಂದನ್ನು ನೀಡಿದರು .ಇವರ ಬೋಧನೆಗಳು ಹೀಗಿವೆ,

1) ದೇವರು ಒಬ್ಬನೇ, ದಯಾಮಯನಾದ ದೇವರು ಸರ್ವ ಜೀವರಾಶಿಗಳ ತಂದೆ.
2) ಪ್ರತಿಯೊಬ್ಬರಲ್ಲಿ ಸಹೋದರತ್ವ ಭಾವನೆಯಿರಬೇಕು.
3) ನಾವು ಕಷ್ಟದಲ್ಲಿರುವವರನ್ನು ಪ್ರೀತಿಸಿದರೆ ದೇವರನ್ನು ಪ್ರೀತಿಸಿದಂತೆ .
4) ಪರರಿಂದ ಯಾವುದನ್ನು ಬಯಸದೇ ನಾವು ಅವರ ಸೇವೆಯನ್ನು ಮಾಡಬೇಕು.
5) ಮಾನವನ ಸೇವೆಯು ದೇವರ ಸೇವೆಗೆ ಸಮಾನವಾದುದು.
6) ಮಾನವನು ತನ್ನ ತಪ್ಪಿಗೆ ಪಶ್ಚಾತ್ತಾಪ ಪಟ್ಟರೆ, ಅದಕ್ಕೆ ದೇವರಿಂದ ಕ್ಷಮಾಪಣೆ ಇದೆ.
7) ನಿನ್ನ ಶತ್ರುವನ್ನು ನೀನು ಪ್ರೀತಿಸು; ನಿನಗೆ ಕೆಟ್ಟದ್ದನ್ನು ಬಯಸುವವರಿಗೆ ನೀನು ಒಳ್ಳೆಯದನ್ನು ಬಯಸು.

**ಕ್ರೈಸ್ತ ಧರ್ಮದ ಪ್ರಸಾರ:** ಜೀಸಸ್‌ರು ಬದುಕಿದ್ದಾಗ ತನ್ನ ತತ್ವಗಳನ್ನು ಪ್ರಪಂಚದ ಎಲ್ಲಾ ಭಾಗಗಳಿಗೂ ತಲುಪಿಸಿ, ಆ ಮೂಲಕ ಕಷ್ಟದಲ್ಲಿರುವವರನ್ನು ರಕ್ಷಿಸಬೇಕೆಂಬ ಜವಾಬ್ದಾರಿಯನ್ನು ಮತ್ತು ದೀಕ್ಷೆಯನ್ನು ತನ್ನ 12 ಜನ ಶಿಷ್ಯರಿಗೆ ವಹಿಸಿದರು. ಅವರನ್ನು ಅಪೋಸಲ್ಸ್ ಎಂದು ಕರೆಯಲಾಗಿದೆ. ಇವರಲ್ಲಿ ಸಂತ ಪೀಟರನು ಅತೀ ಪ್ರಮುಖನಾಗಿದ್ದು ರೋಮಿಗೆ ತೆರಳಿ ಚರ್ಚ್ ಸ್ಥಾಪಿಸಿ ಪ್ರಪಂಚದಾದ್ಯಂತ ಧರ್ಮ ಪ್ರಚಾರಕರನ್ನು ಕಳುಹಿಸಿ ಕ್ರೈಸ್ತ ಧರ್ಮದ ಸುವಾರ್ತೆಗಳ ಪ್ರಚಾರ ಆರಂಭಿಸಿದನು. ಈ ಚರ್ಚ್ ಇಂದು ಇಡೀ ಪ್ರಪಂಚದ ಕ್ಯಾಥೋಲಿಕ್ ಸಮುದಾಯದವರ ಪ್ರಮುಖ ಕೇಂದ್ರವಾಗಿದೆ.

ಪ್ರಾರಂಭದಲ್ಲಿ ರೋಮನ್ ಚಕ್ರವರ್ತಿಗಳು ಕ್ರೈಸ್ತ ಧರ್ಮದ ಪ್ರಚಾರಕ್ಕೆ ಅಡ್ಡಿಪಡಿಸಲಿಲ್ಲ. ಇದರಿಂದ ರೋಮನ್ ಸಾಮ್ರಾಜ್ಯದಾದ್ಯಂತ ತ್ವರಿತವಾಗಿ ಧರ್ಮ ಹರಡಿತು. ಆದರೆ 1ನೆಯ ಶತಮಾನದ ನಂತರ ಕ್ರಮೇಣ ರೋಮನ್ ಚಕ್ರವರ್ತಿಗಳು ಪ್ರಚಾರಕರಿಗೆ ಹಿಂಸೆ ನೀಡಲಾರಂಭಿಸಿ ಧರ್ಮಪ್ರಚಾರಕ್ಕೆ ಅಡ್ಡಿಪಡಿಸಿದರು. ಇದನ್ನು ಲೆಕ್ಕಿಸದೆ ಪ್ರಚಾರಕರು ತಮ್ಮ ಕಾರ್ಯವೈಖರಿಯನ್ನು ಮುಂದುವರೆಸಿದರು. ನಂತರ 4ನೆಯ ಶತಮಾನದಲ್ಲಿ

©KTBS Not to be republished

ಅಧಿಕಾರಕ್ಕೆ ಬಂದ ಕಾನ್‌ಸ್ಟೆಂಟೈನ್ ಸಾ.ಶ. 313ರಲ್ಲಿ ಕ್ರೈಸ್ತ ಧರ್ಮವನ್ನು ರಾಜ್ಯಧರ್ಮವಾಗಿ ಸ್ವೀಕರಿಸಿದನು. ಅಂದಿನಿಂದ ಈ ಧರ್ಮ ರಾಜ್ಯಾಧಿಕಾರದ ಬೆಂಬಲವನ್ನು ಪಡೆದು ರೋಮ್, ಗ್ರೀಕ್, ಮ್ಯಾಸಿಡೋನಿಯ, ಏಷ್ಯಾಮೈನರ್‌ಗಳಲ್ಲಿ ಹರಡಲಾರಂಭಿಸಿತು. ರೋಮನ್ ಚರ್ಚ್ ಹಾಗೂ ಮತಪ್ರಚಾರಕರು ನಡೆಸಿದ ಮತಾಂತರದಿಂದ ಹೆಚ್ಚಿನ ಪ್ರಚಾರ ಪಡೆಯಿತು. ಕ್ರೈಸ್ತ ಧರ್ಮದ ಪವಿತ್ರ ಗ್ರಂಥ 'ಬೈಬಲ್' ಆಗಿದೆ.

## ಕ್ರೈಸ್ತ ಧರ್ಮದ ಕೊಡುಗೆಗಳು

1) ಕ್ರೈಸ್ತ ಧರ್ಮ ಪ್ರಪಂಚಕ್ಕೆ ಶಾಂತಿ ಮತ್ತು ಸಹೋದರತ್ವ ತತ್ವಗಳನ್ನು ನೀಡಿದೆ.
2) ಚರ್ಚ್‌ಗಳು ಹಾಗು ಕೆಲವು ಧರ್ಮಪ್ರಚಾರಕರು ಶಿಕ್ಷಣ ಕೇಂದ್ರಗಳನ್ನು ಸ್ಥಾಪಿಸಿ ಶಿಕ್ಷಣದ ಬೆಳವಣಿಗೆಗೆ ಕಾರಣರಾದರು.
3) ಕ್ರೈಸ್ತ ಧರ್ಮವು ಕಟ್ಟಡಗಳ ನಿರ್ಮಾಣ ವಿನ್ಯಾಸಕ್ಕೆ ಗೋಥಿಕ್ ಶೈಲಿಯನ್ನು ಪರಿಚಯಿಸಿದೆ.
4) ಕ್ರೈಸ್ತ ಧರ್ಮಪ್ರಚಾರಕರು ವೈದ್ಯಕೀಯ ಸೇವೆಗಳನ್ನು ಪ್ರಪಂಚದಾದ್ಯಂತ ವಿಸ್ತರಿಸಿದರು.
5) ಸ್ತ್ರೀಯರು ಮತ್ತು ದುರ್ಬಲ ಸಮುದಾಯಗಳಿಗೆ ಶಿಕ್ಷಣವನ್ನು ನೀಡಿದ್ದರಿಂದ ಗುಣಾತ್ಮಕ ಸಾಮಾಜಿಕ ಬದಲಾವಣೆಗಳು ಆದವು. ಇದನ್ನೇ ಸಬಲೀಕರಣ ಎಂದು ಕರೆಯಲಾಗಿದೆ.

**ಕ್ರೈಸ್ತ ಧರ್ಮದ ಪಂಗಡಗಳು:** 16ನೆಯ ಶತಮಾನದವರೆಗೂ ರೋಮನ್ ಕ್ಯಾಥೋಲಿಕರ ಹಿಡಿತದಲ್ಲಿದ್ದ ಕ್ರೈಸ್ತ ಧರ್ಮ ಹೊಸ ಕವಲುಗಳಿಗೆ ಕಾರಣವಾಯಿತು. ಕ್ರಮೇಣ ಜನಸಾಮಾನ್ಯರಿಂದ ಮತ್ತು ಕ್ರೈಸ್ತ ಬೋಧನೆಗಳಿಂದ ದೂರ ಸರಿಯಿತು. ಚರ್ಚಗಳಲ್ಲಿ ಪುರೋಹಿತರು ಮತ್ತು ಭೂಮಾಲೀಕರು ಮೆರೆಯಲಾರಂಭಿಸಿದರು. ಧರ್ಮ ಜನರ ವಿರೋಧಕ್ಕೆ ಗುರಿಯಾಯಿತು. ಈ ಹಿನ್ನೆಲೆಯಲ್ಲಿ ಮಾರ್ಟಿನ್‌ಲೂಥರ್ ನೇತೃತ್ವದಲ್ಲಿ ಜರ್ಮನಿಯಲ್ಲಿ ಸುಧಾರಣಾ ಚಳುವಳಿ ಪ್ರಾರಂಭವಾಯಿತು. ಪ್ರಾಟಸ್ಟಂಟ್ ಎನ್ನುವ ಹೊಸ ಪಂಗಡವು ಸೃಷ್ಟಿಯಾಯಿತು. ಇದರಿಂದ ಕ್ರೈಸ್ತ ಧರ್ಮವು ಎರಡು ಪಂಗಡಗಳಾಯಿತು. ಅವುಗಳೆಂದರೆ;

1) ಕ್ಯಾಥೋಲಿಕರು 2) ಪ್ರೊಟೆಸ್ಟಂಟರು

ಭೌಗೋಳಿಕ ಅನ್ವೇಷಣೆಗಳು ಮತ್ತು ಆ ಮೂಲಕ ಐರೋಪ್ಯ ಸಾಮ್ರಾಜ್ಯಶಾಹಿ ಶಕ್ತಿ ರಾಷ್ಟ್ರಗಳು ವಿವಿಧ ಭೂ ಖಂಡಗಳಲ್ಲಿ ತಮ್ಮ ನೆಲೆಗಳನ್ನು ಸ್ಥಾಪಿಸಿಕೊಂಡರು. ಇವರು ಕ್ರಮೇಣ ರಾಜಕೀಯ ಶಕ್ತಿಯಾಗಿ ಬೆಳೆದರು. ತಮ್ಮ ತಮ್ಮ ಅಧಿಕಾರದ ಮುಂದುವರಿಕೆಗಾಗಿ ಕ್ರೈಸ್ತ ಧರ್ಮದ ಪ್ರಚಾರವನ್ನು ಬೆಂಬಲಿಸಿದರು. ಈ ಬೆಳವಣಿಗೆಗಳು ಭಾರತವೂ ಸೇರಿದಂತೆ ಅನೇಕ ರಾಷ್ಟ್ರಗಳಲ್ಲಿ ಕ್ರೈಸ್ತ ಧರ್ಮವು ಮತ್ತಷ್ಟು ತೀವ್ರವಾಗಿ ಮತ್ತು ಸಂಘಟಿತವಾಗಿ ಬೆಳೆಯಲು ಕಾರಣವಾದವು.

**ನಿಮಗಿದು ತಿಳಿದಿರಲಿ :**

*ಕ್ರೈಸ್ತರ ಪವಿತ್ರ ಗ್ರಂಥ ಬೈಬಲ್. ಇದರಲ್ಲಿ ಎರಡು ಭಾಗಗಳಿವೆ 1) ಓಲ್ಡ್ ಟೆಸ್ಟ್‌ಮೆಂಟ್ (ಹಳೆಯ ಒಡಂಬಡಿಕೆ) 2) ನ್ಯೂ ಟೆಸ್ಟ್‌ಮೆಂಟ್ (ಹೊಸ ಒಡಂಬಡಿಕೆ) ಇದು ಮೊದಲು ಹೀಬ್ರೂ ಭಾಷೆಯಲ್ಲಿ ರಚನೆಯಾಗಿದ್ದು, ಇಂಗ್ಲೆಂಡಿನ 1ನೆಯ ಜೇಮ್ಸ್‌ನ ಅವಧಿಯಲ್ಲಿ ಇಂಗ್ಲಿಷ್ ಭಾಷೆಗೆ ಅನುವಾದಗೊಂಡಿತು. 1ನೆಯ ಭಾಗದಲ್ಲಿ ಯಹೂದಿಗಳ ಧಾರ್ಮಿಕ ನಂಬಿಕೆಗಳ ಬಗ್ಗೆ ಮಾಹಿತಿಯಿದ್ದರೆ, 2ನೆಯ ಭಾಗದಲ್ಲಿ ಜೀಸಸ್‌ರ ಜೀವನ ಹಾಗೂ ಬೋಧನೆಗಳಿವೆ. ಇದು ಪ್ರಪಂಚದಲ್ಲಿ ಅತೀ ಹೆಚ್ಚು ಭಾಷೆಗಳಿಗೆ ಅನುವಾದಿಸಲಾದ ಗ್ರಂಥಗಳಲ್ಲಿ ಒಂದಾಗಿದೆ.*

©KTBS Not to be republished

# ಇಸ್ಲಾಂ ಧರ್ಮ

ಇಸ್ಲಾಂ ಧರ್ಮ ಪ್ರಾರಂಭವಾದುದು ಅರೇಬಿಯಾ ದೇಶದಲ್ಲಿ. ಇದು ಪಶ್ಚಿಮ ಏಷ್ಯಾದ ಒಂದು ಪರ್ಯಾಯ ದ್ವೀಪ. ಈ ಪ್ರದೇಶ ಮರುಭೂಮಿಯಾಗಿದ್ದು, ವ್ಯವಸಾಯಕ್ಕೆ ಯೋಗ್ಯವಾಗಿರಲಿಲ್ಲ, ಇದರಿಂದಾಗಿ ಅರಬ್ಬರು ವಲಸೆಗಾರರಾಗಿ ಎಲ್ಲಿ ಫಲವತ್ತಾದ ಭೂಮಿ ಮತ್ತು ನೀರು ದೊರಕುತ್ತಿತ್ತೋ ಅಲ್ಲಿ ನೆಲೆಸುತ್ತಿದ್ದರು. ಈ ರೀತಿ ನೆಲೆಸಿದ ಪ್ರದೇಶಗಳೇ ಮೆಕ್ಕಾ ಮತ್ತು ಮದೀನಾಗಳು.

ಆರಂಭದಲ್ಲಿ ಅರಬ್ಬರು ಬಹುದೇವತಾ ಆರಾಧಕರಾಗಿದ್ದರು. ಕಲ್ಲು,ಮರ, ಚಿಲುಮೆಗಳನ್ನು ದೇವರೆಂದು ಪೂಜಿಸುತ್ತಿದ್ದರು. ಇವುಗಳಲ್ಲಿ ಮೆಕ್ಕಾ ನಗರದ ಕಾಬ ಶಿಲೆ ಹಾಗು ಅದರ ಬಳಿ 360 ವಿಗ್ರಹಗಳನ್ನು ಸ್ಥಾಪಿಸಿ ಪೂಜಿಸುತ್ತಿದ್ದರು. ಇದು ಅವರ ಅತೀ ಪ್ರಮುಖವಾದ ಧಾರ್ಮಿಕ ಕೇಂದ್ರವಾಗಿತ್ತು.

**ನಿಮಗಿದು ತಿಳಿದಿರಲಿ:**

ಕಾಬ–ಇದು ಮೆಕ್ಕಾದಲ್ಲಿರುವ ಮುಸ್ಲಿಮರ ಪವಿತ್ರ ಸ್ಥಳ, ಮುಸ್ಲಿಮರು ಪ್ರತೀ ದಿನ ಕಾಬದ ಕಡೆ ಮುಖ ಮಾಡಿ ಪ್ರಾರ್ಥನೆ ಸಲ್ಲಿಸುತ್ತಾರೆ. ಹಾಗೂ ಈ ಪ್ರದೇಶಕ್ಕೆ ಕೈಗೊಳ್ಳುವ ಪ್ರಯಾಣವನ್ನು 'ಹಜ್' ಯಾತ್ರೆ ಎನ್ನುತ್ತಾರೆ.

## ಮಹಮ್ಮದ್ ಪೈಗಂಬರ್‌ರ ಜೀವನ

ಇಸ್ಲಾಂ ಧರ್ಮದ ಸ್ಥಾಪಕರಾದ ಮಹಮ್ಮದ್ ಪೈಗಂಬರ್‌ರವರು ಸಾ.ಶ. 570ರಲ್ಲಿ ಮೆಕ್ಕಾದಲ್ಲಿ ಜನಿಸಿದರು. ಇವರ ತಂದೆ ಅಬ್ದುಲ್ಲಾ ಹಾಗೂ ತಾಯಿ ಅಮೀನಾ. ಬಾಲ್ಯದಲ್ಲಿ ತನ್ನ ತಂದೆತಾಯಿಯನ್ನು ಕಳೆದುಕೊಂಡು ಚಿಕ್ಕಪ್ಪನ ಆಶ್ರಯದಲ್ಲಿ ಬೆಳೆದರು. ಆರಂಭದಲ್ಲಿ ಕುರಿ ಕಾಯುತ್ತಿದ್ದು ನಂತರ ಚಿಕ್ಕಪ್ಪನ ಜೊತೆಯಲ್ಲಿ ವ್ಯಾಪಾರಕ್ಕೆ ಮೆಕ್ಕಾ ಹಾಗೂ ಸಿರಿಯಾ ಪ್ರದೇಶಗಳಿಗೆ ಭೇಟಿ ನೀಡುತ್ತಿದ್ದರು. ಆಗ ಮೆಕ್ಕಾದ ಶ್ರೀಮಂತ ವಿಧವೆ ಖಧೀಜರ ಪರಿಚಯವಾಗಿ ಅವರ ಬಳಿ ಸೇವಾ ನೌಕರಿಗೆ ಸೇರಿದರು.



ಮೆಕ್ಕಾ

ಮುಂದೆ ಆಕೆಯೊಂದಿಗೆ ವಿವಾಹವಾಯಿತು. ಅವರಿಗೆ ಇಬ್ಬರು ಪುತ್ರರು ಹಾಗೂ ನಾಲ್ವರು ಪುತ್ರಿಯರು ಇದ್ದರು. ಜವಳಿ ವ್ಯಾಪಾರಕ್ಕೆಂದು ಮಹಮ್ಮದರು ಬೇರೆ ಬೇರೆ ಪ್ರದೇಶಗಳಿಗೆ ಭೇಟಿ ನೀಡುತ್ತಿದ್ದಾಗ ಅವರಿಗೆ ಅಲ್ಲಿನ ಕ್ರೈಸ್ತ ಮತ್ತು ಯಹೂದಿಗಳ ಧರ್ಮಗಳ ಸರಳತೆ ಹಾಗು ಏಕದೇವತಾರಾಧನೆಯ ಪರಿಚಯವಾಯಿತು. ಇದು ಅರಬ್ಬರ ಬಹುದೇವತಾರಾಧನೆಗಿಂತ ಉತ್ತಮವೆನಿಸಿತು. ಅರಬ್ಬರ ಸಾಮಾಜಿಕ ಹಾಗೂ ಧಾರ್ಮಿಕ ನ್ಯೂನ್ಯತೆಗಳನ್ನು ಸರಿಪಡಿಸಲು ಆಲೋಚಿಸಲಾರಂಭಿಸಿ, ಮೆಕ್ಕಾದ ಬಳಿಯ ಹೀರಾ ಎನ್ನುವ ಬೆಟ್ಟದ ತಪ್ಪಲಿಗೆ ಹೋಗಿ ಧ್ಯಾನಾಸಕ್ತರಾಗುತ್ತಿದ್ದರು. ಜ್ಞಾನೋದಯವನ್ನು ಪಡೆದ ಪೈಂಗಂಬರರನ್ನು ಜನರು ದೇವದೂತನೆಂದು ಕರೆದರು. ಇವರ ತತ್ವಗಳು ಬಹುಬೇಗ ಜನರ ಆಕರ್ಷಣೆ ಪಡೆದು ಬಹಳಷ್ಟು ಜನರು ಇವರ ಅನುಯಾಯಿಗಳಾದರು. ಕೆಲವೊಮ್ಮೆ ಧ್ಯಾನಾಸಕ್ತರಾಗಿದ್ದಾಗ ಕೆಲವು ಸಂದೇಶಗಳನ್ನು ತನ್ನ ಅನುಯಾಯಿಗಳಿಗೆ ತಿಳಿಸುತ್ತಿದ್ದರು. ಅವುಗಳನ್ನು ದೇವರ ಸಂದೇಶಗಳೆಂದು ಪರಿಗಣಿಸಿ, ಅವರ ಶಿಷ್ಯರು ಸಂಗ್ರಹಿಸಿದರು. ಆ ದಿವ್ಯ ಸಂದೇಶಗಳ ಸಂಗ್ರಹ, ಇಸ್ಲಾಂಧರ್ಮದ ಪವಿತ್ರ ಗ್ರಂಥ 'ಕುರಾನ್' ಆಗಿದೆ.

©KTBS Not to be republished

ಪೈಗಂಬರರು ತಮ್ಮ ತತ್ವಗಳನ್ನು ಮೆಕ್ಕಾದಲ್ಲಿ ಪ್ರಚಾರ ಮಾಡಲಾರಂಭಿಸಿದರು. ಬಹುದೇವತಾರಾಧನೆಯನ್ನು ವಿರೋಧಿಸಿದ ಪೈಗಂಬರ್‌ರನ್ನು ಮೆಕ್ಕಾದ ಜನರು ವಿರೋಧಿಸಿ ಅವರ ಕೊಲೆಗೆ ಸಂಚು ಹೂಡಿದರು. ಇದನ್ನು ತಿಳಿದ ಪೈಗಂಬರರು ಸಾ.ಶ. 622ರಲ್ಲಿ ಮೆಕ್ಕಾದಿಂದ ಮದೀನಾಗೆ ಪ್ರಯಾಣ ಬೆಳೆಸಿದರು. ಈ ಘಟನೆಯನ್ನು ಹಿಜಿರಾ (ಪಲಾಯನ) ಎಂದು ಕರೆದು ಇದನ್ನು ಮುಸ್ಲಿಮರು 'ಹಿಜಿರಾಶಕ' ಎಂದು ಪರಿಗಣಿಸಿದ್ದಾರೆ. (ಮುಸ್ಲಿಮರ ಲೂನಾರ್ ಕ್ಯಾಲೆಂಡರ್ ಇದರ ಆಧಾರದ ಮೇಲೆ ರಚನೆಯಾಗಿದೆ)

ಮದೀನಾದ ಜನ ಪೈಗಂಬರರನ್ನು ಸ್ವಾಗತಿಸಿ ಅವರ ಬೋಧನೆಗಳನ್ನು ಅನುಸರಿಸಿದರು. ಎಂಟು ವರ್ಷಗಳ ತರುವಾಯ ಮೆಕ್ಕಾ ಮತ್ತು ಮದೀನದ ಮಧ್ಯೆ ಯುದ್ಧವಾಗಿ, ಮದೀನದ ಜನರು ಮೆಕ್ಕಾದವರನ್ನು ಸೋಲಿಸಿದರು. ಆಗ ಪೈಗಂಬರ್‌ರವರು ಮೆಕ್ಕಾಗೆ ಪ್ರವೇಶಿಸಿದರು. ತದನಂತರ ಮೆಕ್ಕಾದ ಜನ ಪೈಗಂಬರ್‌ರವರ ತತ್ವಗಳನ್ನು ಒಪ್ಪಿ ಪೈಗಂಬರರು ಬೋಧಿಸಿದ ಧರ್ಮವನ್ನು ಒಪ್ಪಿಕೊಂಡರು. ಕ್ರಮೇಣ ಪೈಗಂಬರರ ತತ್ವಗಳು ಅರಬ್ ಪ್ರದೇಶದಾದ್ಯಂತ ಹರಡಿದವು. ಪೈಗಂಬರರು ಸಾ.ಶ. 632ರಲ್ಲಿ ಮರಣ ಹೊಂದಿದರು.

### ಇಸ್ಲಾಂ ಧರ್ಮದ ಬೋಧನೆಗಳು

ಇಸ್ಲಾಂ ಎಂದರೆ ಒಂದು ದೇವರಿಗೆ ಶರಣಾಗು, ಮುಸ್ಲಿಂ ಎಂದರೆ ದೇವರ ಅನುಯಾಯಿ ಎಂಬುದಾಗಿದೆ. ಈ ಧರ್ಮದ ಬೋಧನೆಗಳು ಹೀಗಿವೆ :

1) ದೇವರು ಒಬ್ಬನೇ. ಆತನೇ ಅಲ್ಲಾ. ಅಲ್ಲಾನನ್ನು ಒಲಿಸಿಕೊಳ್ಳಲು ಸರಳ ಪ್ರಾರ್ಥನೆಯೊಂದು ಸಾಕು.
2) ಪ್ರಾಮಾಣಿಕತೆ ಮತ್ತು ನೀತಿಯುತ ಜೀವನ ನಡೆಸಬೇಕು, ದುಶ್ಚಟಗಳಿಂದ ದೂರವಿರಬೇಕು.
3) ದೀನ ದುರ್ಬಲರ ಬಗ್ಗೆ ಕರುಣೆ ಹಾಗು ಸ್ತ್ರೀಯರ ಬಗ್ಗೆ ಗೌರವವಿರಬೇಕು.

### ಇಸ್ಲಾಂ ಧರ್ಮದ ಆಚರಣೆಗಳು

ಇಸ್ಲಾಂ ಧರ್ಮದಲ್ಲಿ ಐದು ಪ್ರಮುಖ ಆಚರಣೆಗಳಿವೆ.

1) ಕಲೀಮಾ – ಅಲ್ಲಾನಲ್ಲಿ ಮಾತ್ರ ನಂಬಿಕೆ. ಮಹಮ್ಮದರು ಅವರ ಪ್ರವಾದಿಗಳು.
2) ನಮಾಜ್ – ಪ್ರತೀ ದಿನ ಐದು ಬಾರಿ ಅಲ್ಲಾನಿಗೆ ಪ್ರಾರ್ಥನೆ ಸಲ್ಲಿಸಬೇಕು.
3) ರೋಜ – ರಂಜಾನ್ ತಿಂಗಳಲ್ಲಿ ಉಪವಾಸ.
4) ಜಕಾತ್ – ಆದಾಯದಲ್ಲಿ ನಿಗದಿಪಡಿಸಿದ ಭಾಗವನ್ನು ಬಡವರಿಗೆ ದಾನ ನೀಡಬೇಕು.
5) ಹಜ್ – ಜೀವನದಲ್ಲಿ ಒಂದು ಬಾರಿ ಮೆಕ್ಕಾ ಯಾತ್ರೆ ಕೈಗೊಳ್ಳಬೇಕು.

### ಇಸ್ಲಾಂ ಧರ್ಮದ ಪ್ರಚಾರ

ಮಹಮ್ಮದ್ ಪೈಗಂಬರರ ಮರಣದ ತರುವಾಯ ಧರ್ಮ ಪ್ರಚಾರದ ಜವಾಬ್ದಾರಿಯನ್ನು ಖಲೀಫರು ತೆಗೆದುಕೊಂಡರು. ಇವರನ್ನು ಪೈಗಂಬರರ ಉತ್ತರಾಧಿಕಾರಿಗಳು ಎಂದೇ ಕರೆಯುತ್ತಾರೆ. ಇವರ ಪ್ರಾಮಾಣಿಕ ಪ್ರಯತ್ನದಿಂದ ಕೇವಲ ಒಂದೇ ಶತಮಾನದಲ್ಲಿ ಇಸ್ಲಾಂ ಧರ್ಮ ಪಶ್ಚಿಮದ ಸ್ಪೇನಿನಿಂದ ಪೂರ್ವದ ಭಾರತದವರೆಗೂ ಪ್ರಚಾರವಾಯಿತು. ಇದಕ್ಕೆ ಕಾರಣವಾದ ಅಂಶಗಳೆಂದರೆ :

1) ಇಸ್ಲಾಂ ಧರ್ಮದ ಸರಳತೆ.
2) ಖಲೀಫರ ಧರ್ಮಪ್ರಚಾರದ ಕಾರ್ಯಚಟುವಟಿಕೆಗಳು.
3) ಇಸ್ಲಾಂ ಧರ್ಮೀಯರ ಶ್ರದ್ಧೆ.

©KTBS Not to be republished

4) ಸುಲ್ತಾನರುಗಳ ಧಾರ್ಮಿಕ ಆಸಕ್ತಿ.

5) ಪೂರಕವಾಗಿ ಸೃಷ್ಟಿಯಾದ ರಾಜಕೀಯ ಸನ್ನಿವೇಶಗಳು.

**ಇಸ್ಲಾಂ ಧರ್ಮದ ಕೊಡುಗೆಗಳು**

1) ವೈದ್ಯಕೀಯವಾಗಿ ದಡಾರ ಮತ್ತು ಇತರ ರೋಗಗಳಿಗೆ ಔಷಧಿ ಹಾಗೂ ವೈದ್ಯಕೀಯ ಗ್ರಂಥಗಳ ರಚನೆ.

2) ವಿಜ್ಞಾನ ಮತ್ತು ಗಣಿತದಲ್ಲಿ ಹೊಸ ಸಂಶೋಧನೆಗಳು.

3) ಮಧ್ಯಯುಗದಲ್ಲಿ ಅರಬೀಯಾ ಮತ್ತು ಪರ್ಶಿಯಾ ಸಾಮ್ರಾಜ್ಯಗಳಲ್ಲಿ ಬೆಳೆದಿದ್ದ ಭೂಗೋಳ ಮತ್ತು ಖಗೋಳಶಾಸ್ತ್ರಗಳಲ್ಲಿನ ಜ್ಞಾನವನ್ನು, ಪ್ರಪಂಚದಾದ್ಯಂತ ಪ್ರಸರಣಗೊಳಿಸಿತು.

4) ಕಲೆ ಮತ್ತು ವಾಸ್ತು ಶಿಲ್ಪಗಳನ್ನು ಇಸ್ಲಾಂಧರ್ಮ ಪ್ರಭಾವಿತಗೊಳಿಸಿತು. ಇಸ್ಲಾಂ ವಾಸ್ತುಶಿಲ್ಪ ಶೈಲಿಯ ಗುಣಲಕ್ಷಣಗಳನ್ನು ರೋಮನ್, ಬೈಜಾಟಿಯನ್ ಮತ್ತು ಪರ್ಶಿಯನ್ ಸಾಮ್ರಾಜ್ಯಗಳಲ್ಲಿ ನಿರ್ಮಾಣವಾದ ವಾಸ್ತುಶಿಲ್ಪಗಳನ್ನು ಕಾಣಬಹುದು.

**ಇಸ್ಲಾಂ ಧರ್ಮದ ಪಂಗಡಗಳು**

ಇತರ ಧರ್ಮಗಳಲ್ಲಿರುವಂತೆ ಇಸ್ಲಾಂ ಧರ್ಮದಲ್ಲಿಯೂ ಅನೇಕ ಪಂಗಡಗಳಿವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ – ಶಿಯಾ ಮತ್ತು ಸುನ್ನಿ ಪಂಗಡಗಳು. ಮಹಮ್ಮದ್ ಪೈಗಂಬರರ ಉತ್ತರಾಧಿಕಾರಿಗಳನ್ನು 'ಖಲೀಫರು' ಎನ್ನುವರು. ಮಹಮದ್ ಪೈಗಂಬರ್‌ರ ನಂತರ ಖಲೀಫರು ಇಸ್ಲಾಂ ಧರ್ಮದ ಧಾರ್ಮಿಕ ಮತ್ತು ರಾಜಕೀಯ ಮುಖಂಡರಾದರು. ಅಬೂಬಕರ್ ಮೊದಲನೆಯ ಖಲೀಫನಾಗಿದ್ದನು.

©KTBS Not to be republished

## ಅಭ್ಯಾಸಗಳು

**I. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿರಿ.**

1. ಏಸುಕ್ರಿಸ್ತರು ಹುಟ್ಟಿದ ಸ್ಥಳ ______________ .
2. ಏಸುಕ್ರಿಸ್ತರನ್ನು ಶಿಲುಬೆಗೇರಿಸಿದ ಬೆಟ್ಟ ______________ .
3. ಮೊಹಮ್ಮದ್ ಪೈಗಂಬರರು ಹುಟ್ಟಿದ ಸ್ಥಳ ______________ .
4. ಇಸ್ಲಾಂ ಧರ್ಮದ ಗ್ರಂಥ ______________ .
6. ಮೊಹಮ್ಮದ್ ಪೈಗಂಬರರ ಉತ್ತರಾಧಿಕಾರಿಗಳನ್ನು ______________ ಎನ್ನುವರು.

**II. ಈ ಕೆಳಗಿನ ಪ್ರಶ್ನೆಗಳಿಗೆ ಗುಂಪಿನಲ್ಲಿ ಮಿತ್ರರೊಂದಿಗೆ ಚರ್ಚಿಸಿ ಉತ್ತರ ಬರೆಯಿರಿ.**

1. ಏಸುಕ್ರಿಸ್ತರ ಜೀವನವನ್ನು ಕುರಿತು ಬರೆಯಿರಿ.
2. ಜೀಸಸ್‌ಕ್ರಿಸ್ತರ ಬೋಧನೆಗಳನ್ನು ಪಟ್ಟಿ ಮಾಡಿ.
3. ಕ್ರೈಸ್ತ ಧರ್ಮವು ಹೇಗೆ ಪ್ರಸಾರವಾಯಿತು?
4. ಮೊಹಮ್ಮದ್ ಪೈಗಂಬರರ ಜೀವನವನ್ನು ತಿಳಿಸಿರಿ.

5. ‘ಹಿಜಿರಾ’ ಎಂದರೇನು?

6. ಇಸ್ಲಾಂ ಧರ್ಮದ ಬೋಧನೆಗಳಾವುವು ?

**III. ಚಟುವಟಿಕೆ.**

1. ನಿಮ್ಮ ಊರಿನಲ್ಲಿರುವ ಚರ್ಚ್ ಹಾಗೂ ಮಸೀದಿಗಳಿಗೆ ಭೇಟಿ ನೀಡಿ. ಅಲ್ಲಿನ ಧಾರ್ಮಿಕ ಆಚರಣೆಗಳ ಬಗ್ಗೆ ಮಾಹಿತಿ ಸಂಗ್ರಹಿಸಿ.
2. ಕ್ರೈಸ್ತ ಸಮುದಾಯದವರು ‘ಕ್ರಿಸ್‌ಮಸ್’ನ್ನು ಆಚರಿಸುವ ಕ್ರಮವನ್ನು ತಿಳಿಯಿರಿ.
3. ಇಸ್ಲಾಂ ಮತದವರು ರಂಜಾನ್ ಆಚರಿಸುವ ಕ್ರಮವನ್ನು ತಿಳಿಯಿರಿ.

**IV. ಯೋಜಿತ ಕಾರ್ಯ**

1. ಕ್ರೈಸ್ತ ಮತ್ತು ಇಸ್ಲಾಂ ಮತಗಳು ಪ್ರಸಾರವಾದ ಬಗ್ಗೆ ಶಿಕ್ಷಕರ ನೆರವಿನಿಂದ ಪ್ರಬಂಧ ಬರೆಯಿರಿ.

©KTBS Not to be republished

## ಅಧ್ಯಾಯ–2

# ಮಧ್ಯಕಾಲೀನ ಭಾರತ ಮತ್ತು ರಾಜಕೀಯ ಸಂಕ್ರಮಣ

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- *ಉತ್ತರ ಭಾರತದಲ್ಲಿ ಆಳ್ವಿಕೆ ಮಾಡಿದ ರಜಪೂತ ಮನೆತನಗಳು.*
- *ರಜಪೂತ ಅರಸರು ಸಾಹಿತ್ಯ, ಕಲೆ ಮತ್ತು ವಾಸ್ತುಶಿಲ್ಪ ಕ್ಷೇತ್ರಗಳಿಗೆ ನೀಡಿದ ಕೊಡುಗೆಗಳು.*
- *ಟರ್ಕರ ಆಗಮನ, ಮಹಮ್ಮದ್ ಘಜ್ನಿ ಮತ್ತು ಮಹಮ್ಮದ್ ಘೋರಿಯ ದಾಳಿಗಳು–ಪರಿಣಾಮಗಳು.*
- *ದೆಹಲಿ ಸುಲ್ತಾನರ ರಾಜ್ಯ ಸ್ಥಾಪನೆ, ಆಡಳಿತ ಹಾಗೂ ಅವರ ಕೊಡುಗೆಗಳು.*

ಹನ್ನೆರಡನೆಯ ಶತಮಾನದ ಉತ್ತರಾರ್ಧ ಭಾಗದಿಂದ ಹದಿಮೂರನೇ ಶತಮಾನದ ಮೊದಲ ಭಾಗವನ್ನು ಭಾರತದ ಇತಿಹಾಸದಲ್ಲಿ ಸಂಕ್ರಮಣ ಕಾಲವೆಂದು ಗುರುತಿಸಲಾಗಿದೆ. ಸಂಕ್ರಮಣವೆಂದರೆ ಯಾವುದೇ ಸಮಾಜ ಒಂದು ಕಾಲಘಟ್ಟದಿಂದ ಇನ್ನೊಂದು ಕಾಲಘಟಕ್ಕೆ ಪ್ರವೇಶಿಸಲು ಸಿದ್ಧವಾಗುತ್ತಿರುವುದನ್ನು ಸೂಚಿಸುತ್ತದೆ. ಈ ಕಾಲದಲ್ಲಿ ಭಾರತದ ಸಮಾಜ ಪ್ರಾಚೀನ ವ್ಯವಸ್ಥೆಯಿಂದ ಮಧ್ಯಕಾಲೀನ ವ್ಯವಸ್ಥೆಗೆ ಪ್ರವೇಶಿಸಿತು. ಸಣ್ಣ ಸಣ್ಣ ರಾಜ್ಯಗಳ ವ್ಯವಸ್ಥೆಯನ್ನು ಟರ್ಕರು ಮುರಿದರು. ಹಾಗೆಯೇ ಉತ್ತರ ಭಾರತದಲ್ಲಿ ಬಲವಾದ ಕೇಂದ್ರಾಡಳಿತ ವ್ಯವಸ್ಥೆಯ ಸಾಮ್ರಾಜ್ಯವನ್ನು ಸ್ಥಾಪಿಸಿದರು. ಮುಂದುವರೆದು ಇಸ್ಲಾಂ ಧರ್ಮದ ಪ್ರಭಾವ ಮತ್ತು ಪರಿಣಾಮಗಳಿಂದ ಧಾರ್ಮಿಕ ಕ್ಷೇತ್ರದಲ್ಲಿ ಏಕದೇವೋಪಾಸನೆಗಳು ಪ್ರತಿಪಾದನೆಗಳಾದವು. ಈ ಎಲ್ಲಾ ಬೆಳವಣಿಗೆಗಳು ಭಾರತದಲ್ಲಿ ಮಧ್ಯಯುಗ ಆರಂಭವಾದುದ್ದರ ಮುಖ್ಯ ಗುರುತುಗಳಾಗಿವೆ. ಟರ್ಕರಿಂದ ಭಾರತದಲ್ಲಿ ಸ್ಥಾಪಿಸಲ್ಪಟ್ಟ ಸಾಮ್ರಾಜ್ಯದ ಸ್ಥಾಪನೆಯನ್ನು ಅಧ್ಯಯನ ಮಾಡುವ ಮೊದಲು ಟರ್ಕರ ಆಗಮನ ಪೂರ್ವದ ಬಹುರಾಜ್ಯಗಳಲ್ಲಿದ್ದ ರಾಜಕೀಯ ಪದ್ಧತಿಯನ್ನು ಪರಿಶೀಲಿಸುವುದು ಅಗತ್ಯವಾಗಿದೆ.

ಸಣ್ಣ ಸಣ್ಣ ರಾಜ್ಯಗಳ ರಾಜರುಗಳ ಆಳ್ವಿಕೆಯೆಂದರೆ ಬಹುರಾಜ್ಯಗಳ ರಾಜಕೀಯ ವ್ಯವಸ್ಥೆ ಎಂದೇ ಅರ್ಥ. ಈ ರಾಜಕೀಯ ವ್ಯವಸ್ಥೆಯ ಅಧ್ಯಯನವನ್ನು 9ನೆಯ ಶತಮಾನದಿಂದ 13ನೆಯ ಶತಮಾನದ ಮಧ್ಯಭಾಗದವರೆಗೂ ಪಶ್ಚಿಮ ಮತ್ತು ಉತ್ತರ ಭಾರತದ ಬಹುಭಾಗಗಳಲ್ಲಿ ಆಳಿದ ರಜಪೂತ ಮನೆತನಗಳ ಆಳ್ವಿಕೆಯಿಂದ ಆರಂಭಿಸಬಹುದು.

## ರಜಪೂತ ಮನೆತನಗಳು

ಸ್ಥಾಣವೀಶ್ವರ (ಸ್ಥಾಣೇಶ್ವರ)ದ ವರ್ಧನರ ಮನೆತನದ ಆಳ್ವಿಕೆಯ ನಂತರ ಪಶ್ಚಿಮ ಮತ್ತು ಉತ್ತರ ಭಾರತದ ಬಹುಭಾಗಗಳನ್ನು ಮಧ್ಯಕಾಲದ ಆರಂಭದವರೆಗೆ ಗುರ್ಜರ ಪ್ರತಿಹಾರರು, ಬಂದೇಲ್‌ಖಂಡದ ಚಂದೇಲರು, ಗಹಡ್ವಾಲರು, ಸೋಳಂಕಿಯರು, ಪಾರಮಾರರು ಮತ್ತು ಚೌಹ್ವಾಣರು ರಜಪೂತ ಕುಲಗಳಿಗೆ ಸೇರಿದ ವಿವಿಧ ಮನೆತನಗಳು ಆಳ್ವಿಕೆ ಮಾಡಿದವು. 12ನೆಯ ಶತಮಾನದ ಕೊನೆಯ ವೇಳೆಗೆ ಉತ್ತರ ಭಾರತದಲ್ಲಿ ರಜಪೂತ ಮೂಲದ ಪೃಥ್ವಿರಾಜ ಚೌವ್ಹಾಣ, ಜಯಚಂದ್ರ ಗಹಡ್ವಾಲ, ಪರಮರ್ದಿದೇವ ಚಾಂದೇಲ ಪ್ರಬಲ ರಾಜರಾಗಿದ್ದರು.

**ಗುರ್ಜರ ಪ್ರತಿಹಾರರು:** ಪ್ರತಿಹಾರರು ಅವರ ಕೆಲವು ಶಾಸನಗಳಲ್ಲಿ ಅವರು ರಾಮಾಯಣ ಕಾಲದ ಸೂರ್ಯವಂಶಕ್ಕೆ ಸೇರಿದ ಕ್ಷತ್ರಿಯ ಲಕ್ಷ್ಮಣ ತಮ್ಮ ವಂಶದ ಮೂಲ ಸ್ಥಾಪಕನೆಂದು ಹೇಳಿಕೊಂಡಿದ್ದಾರೆ.

©KTBS Not to be republished

ಆದರೆ ದೊರೆತಿರುವ ಆಧಾರಗಳು ನಾಗಭಟ್ಟನು ಈ ವಂಶದ ಸಂಸ್ಥಾಪಕನೆಂದು ಸೂಚಿಸುತ್ತವೆ. ಕನೂಜ್‌ನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದ ಪ್ರತಿಹಾರರು ಸಿಂಧ್ ಪ್ರಾಂತ್ಯದ ಮೇಲೆ ಅಧಿಪತ್ಯ ಸ್ಥಾಪಿಸಿ ಆಗಾಗ ದಾಳಿ ಮಾಡುತ್ತಿದ್ದ ಅರಬ್ಬರನ್ನು ಎದುರಿಸಿ ಹಿಮ್ಮೆಟಿಸಿದರು. ಈ ವಂಶದಲ್ಲಿ ಬಲಶಾಲಿ ದೊರೆಗಳಾದ ಮಿಹರ ಭೋಜ ಮತ್ತು ಮಹೇಂದ್ರಪಾಲರು ಬಂಗಾಳದ ಪಾಲರನ್ನು ಸೋಲಿಸಿ ಬಂಗಾಳದವರೆಗೂ ಪ್ರತಿಹಾರರ ಸಾಮ್ರಾಜ್ಯವನ್ನು ವಿಸ್ತರಿಸಿದರು. ಅರಬ್ ಪ್ರವಾಸಿಗನಾದ ಸುಲೈಮಾನ್ ಮಿಹರ್‌ಭೋಜನ ಆಸ್ಥಾನಕ್ಕೆ ಭೇಟಿ ನೀಡಿ ಆ ಸಾಮ್ರಾಜ್ಯದಲ್ಲಿ ಸುಖ ಶಾಂತಿಗಳು ನೆಲಸಿದ್ದವೆಂದು ಪ್ರಶಂಸಿದ್ದಾನೆ. ಮಹೇಂದ್ರಪಾಲನ ನಂತರ ಅವನ ಮಗ ಮಹಿಪಾಲನ ಆಳ್ವಿಕೆಯ ಕಾಲದಿಂದ ಪ್ರತಿಹಾರರ ಅಧಿಪತ್ಯ ಅವನತಿ ಹೊಂದಿತು.

**ಗಹಡ್ವಾಲರು:** ಈ ಮನೆತನದ ಸ್ಥಾಪಕ ಚಂದ್ರದೇವ. ಈತನು ವಾರಣಾಸಿಯನ್ನು ಮುಖ್ಯ ಕೇಂದ್ರವಾಗಿರಿಸಿ ಕೊಂಡು ಉತ್ತರ ಭಾರತದ ಬಹುಭಾಗದ ಮೇಲೆ ರಾಜ್ಯಭಾರ ಮಾಡಿದನು. ಈ ಮನೆತನದ ಮತ್ತೊಬ್ಬ ದೊರೆ ಗೋವಿಂದ ಚಂದ್ರ. ಇವನು ಪಾಲರನ್ನು ಸೋಲಿಸಿ ಮಾಳ್ವ ಮತ್ತು ಮಗಧದವರೆಗೆ ಗಹಡ್ವಾಲರ ಅಧಿಪತ್ಯವನ್ನು ವಿಸ್ತರಿಸಿದ್ದನು. ಕಳಿಂಗ ಮತ್ತು ಒರಿಸ್ಸಾ ರಾಜರನ್ನು ಪರಾಭವಗೊಳಿಸಿದನು. ಕಾಶ್ಮೀರ, ಗುಜರಾತ್ ಮತ್ತು ಚೋಳ ರಾಜರು ಗೋವಿಂದ ಚಂದ್ರನೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದರು.

**ಪರಮಾರರು :** ಪ್ರತಿಹಾರರರ ಅವನತಿಯ ನಂತರ ಮಾಳ್ವ ಪ್ರಾಂತ್ಯದಲ್ಲಿ ರಾಜಕೀಯವಾಗಿ ಪ್ರವರ್ಧಮಾನಕ್ಕೆ ಬಂದರು. ರಾಷ್ಟ್ರಕೂಟರ ಸಾಮಂತನಾಗಿದ್ದ ಉಪೇಂದ್ರ ಕೃಷ್ಣರಾಜ ಈ ಮನೆತನವನ್ನು ಸ್ಥಾಪಿಸಿದವನು. ಧಾರಾನಗರ ಇವರ ರಾಜಧಾನಿ. ಪರಮಾರ ವಂಶದ ಪ್ರಖ್ಯಾತ ದೊರೆ ಭೋಜ, ಕಲ್ಯಾಣಿ ಚಾಲುಕ್ಯರನ್ನು, ಕಳಿಂಗದ ಗಂಗರನ್ನು ಮತ್ತು ಉತ್ತರದ ಕೊಂಕಣರನ್ನು ಸೋಲಿಸಿ ಪರಮಾರರ ರಾಜ್ಯವನ್ನು ವಿಶಾಲವಾಗಿ ವಿಸ್ತರಿಸಿದನು. ಮುಂದೆ ಚಾಲುಕ್ಯರ ವಿರುದ್ಧ ಸೋಲನ್ನು ಅನುಭವಿಸಿದನು. ರಾಜಕೀಯವಾಗಿ ಸೋಲು ಗೆಲುವುಗಳೆರಡನ್ನು ನೋಡಿದ ಭೋಜ ಸಾಂಸ್ಕೃತಿಕ ಲೋಕದಲ್ಲಿ ನಿಜವಾಗಿ ಸೋಲಿಲ್ಲದ ಸಾಮ್ರಾಟನೇ ಆಗಿದ್ದನು. ಸ್ವತಃ ಕವಿಯಾಗಿದ್ದನು. ಇವನ ನಂತರದ ಅರಸರು ದುರ್ಬಲರಾಗಿದ್ದುದ್ದರಿಂದ ಪರಮಾರವಂಶ ಅವನತಿ ಹೊಂದಿತು.

**ಸೋಳಂಕಿಯರು:** ಮೊದಲನೆ ಮೂಲರಾಜ ಈ ಮನೆತನದ ಸ್ಥಾಪಕ. ಈ ಮನೆತನದಲ್ಲಿ ಮೊದಲನೆ ಭೀಮ ಹೆಸರುವಾಸಿಯಾಗಿದ್ದರೂ, ಘಜ್ನಿಯಿಂದ ಸೋಮನಾಥ ದೇವಾಲಯವನ್ನು ರಕ್ಷಿಸಲಾಗಲಿಲ್ಲ. ಇವನ ನಂತರದ ಎರಡನೇ ಮೂಲರಾಜ ಮತ್ತು ವೀರಧವಳ ವಾಘೆಲರು ಸಮರ್ಥ ಅರಸರಾಗಿದ್ದರು. ಎರಡನೇ ಮೂಲರಾಜ ಮಹಮ್ಮದ್ ಘಜ್ನಿಯನ್ನು ಮೌಂಟ್‌ಅಬುವಿನ ಬಳಿ ಸೋಲಿಸಿದ. ಈ ಮನೆತನದ ಆಳ್ವಿಕೆಯಲ್ಲಿ ಖ್ಯಾತ ಜೈನ ಪಂಡಿತ ಹೇಮಚಂದ್ರ 'ದೇಶಿಮಾಲಾ' ಎಂಬ ನಿಘಂಟನ್ನು ಪ್ರಾಕೃತ ಭಾಷೆಯಲ್ಲಿ ರಚಿಸಿದನು. ಅಲ್ಲಾವುದ್ದೀನ್ ಖಿಲ್ಜಿಯ ಕಾಲದಲ್ಲಿ ಅವನ ದಂಡನಾಯಕರಾದ ಉಲುಘ್‌ಖಾನ್ ಮತ್ತು ನುಸ್ರತ್‌ಖಾನ್‌ರು, ಕರ್ಣದೇವನನ್ನು ಸೋಲಿಸಿ ಸೋಳಂಕಿಯರ ರಾಜ್ಯವನ್ನು ದೆಹಲಿ ಸುಲ್ತಾನರ ಸಾಮ್ರಾಜ್ಯದೊಳಕ್ಕೆ ಸೇರಿಸಿದರು.

**ಚಂದೇಲರು:** ಬುಂದೇಲ್ ಖಂಡದಲ್ಲಿ ಪ್ರವರ್ಧಮಾನಕ್ಕೆ ಬಂದ ಚಂದೇಲರ ಮನೆತನದ ಪ್ರಸಿದ್ಧ ಅರಸನೆಂದರೆ ಢಂಗ. ಆರಂಭದಲ್ಲಿ ಚಂದೇಲರು ಪ್ರತಿಹಾರರ ಮಾಂಡಲಿಕರಾಗಿದ್ದರು. ಪರಮಾರರ ಪತನದ ನಂತರ ಢಂಗ ಸ್ವತಂತ್ರನೆಂದು ಘೋಷಿಸಿಕೊಂಡನು. ಪರಮಾರರ ಸಾಮ್ರಾಜ್ಯದ ಪೂರ್ವ ಭಾಗವನ್ನು ವಶಪಡಿಸಿಕೊಂಡು ಪಾಲ ಮತ್ತು ಅದ್ರರನ್ನು ಸೋಲಿಸಿ ತನ್ನ ರಾಜ್ಯವನ್ನು ವಿಸ್ತರಿಸಿಕೊಂಡನು. ಮಹಾ ರಾಜಾಧಿರಾಜ ಎಂಬ ಬಿರುದನ್ನು ಹೊಂದಿದ ಢಂಗ ಟರ್ಕರ ವಿರುದ್ಧ ಹೋರಾಡುತ್ತಿದ್ದ ಹಿಂದೂಷಾಯಿರಾಜ ಜಯಚಂದ್ರನಿಗೆ ಸೈನಿಕ ನೆರವನ್ನು ನೀಡಿದನು. ಆದರೆ ರಜಪೂತ ಅರಸರಲ್ಲಿನ ಪರಸ್ಪರ ದ್ವೇಷ ಐಕ್ಯತೆಯ ಕೊರತೆಯಿಂದಾಗಿ ಈ ರಾಜ್ಯವನ್ನು ಖಿಲ್ಜಿ ಸುಲ್ತಾನರು ಗೆದ್ದುಕೊಂಡರು.

©KTBS Not to be republished

**ಚೌಹ್ವಾಣರು :** ಈ ಮನೆತನವೂ ರಜಪೂತ ಮನೆತನಗಳಲ್ಲಿ ಪ್ರಮುಖವಾದುದು. ಈ ಮನೆತನದ ಮೂಲ ಸಾ.ಶ.7ನೆಯ ಶತಮಾನದಲ್ಲಿಯೇ ಕಾಣಿಸಿಕೊಳ್ಳುತ್ತದೆ. ರಾಜಸ್ತಾನದ ಅಜ್ಮೀರ ಪ್ರದೇಶದಲ್ಲಿ ಈ ಮನೆತನ ತನ್ನ ಆಳ್ವಿಕೆಯನ್ನು ಆರಂಭಿಸಿತು. ಆದರೂ ಚೌಹ್ವಾಣರನ್ನು 12ನೆಯ ಶತಮಾನದ ವೇಳೆಗೆ ಪಶ್ಚಿಮ ಭಾರತದಲ್ಲಿ ಪ್ರಬಲವಾದ ರಾಜರನ್ನಾಗಿ ಪರಿಗಣಿಸುವಂತೆ ಮಾಡಿದವರು, ಅಜಯರಾಜ ನಾಲ್ಕನೇ ವಿಗ್ರಹರಾಜ ಮತ್ತು ಮೂರನೇ ಪೃಥ್ವಿರಾಜ. ಪರಾಕ್ರಮಿಯಾಗಿದ್ದ ಪೃಥ್ವಿರಾಜನು ಬಂದೇಲ ಖಂಡದ ಚಂದೇಲರನ್ನು ಸೋಲಿಸಿ ಮಹೇಬ ಮತ್ತು ಕಾಲಿಂಜರ್‌ಗಳನ್ನು ವಶಪಡಿಸಿಕೊಂಡನು. ಘೋರ್ ಸಾಮ್ರಾಜ್ಯವನ್ನು ಸಿಂಧ್‌ಪ್ರಾಂತ್ಯದ ಕಡೆಗೆ ವಿಸ್ತರಿಸಬೇಕೆಂದಿದ್ದ ಘೋರಿಮಹಮ್ಮದ್‌ನನ್ನು ಎದುರಿಸಿದ ಪೃಥ್ವಿರಾಜ ತರೈನ್ ಎಂಬ ಸ್ಥಳದಲ್ಲಿ ನಡೆದ ಯುದ್ಧದಲ್ಲಿ ಮಹಮ್ಮದ್‌ನನ್ನು ಸೋಲಿಸಿ ಓಡಿಸಿದನು. ಈ ಯುದ್ಧದಲ್ಲಿ ಗಾಯಗೊಂಡ ಮಹಮ್ಮದ್ ಘೋರ್‌ಗೆ ಮರಳಿದ ನಂತರ ಮರುವರ್ಷ ಮತ್ತೆ ದೆಹಲಿಯ ಕಡೆಗೆ ದಂಡೆತ್ತಿ ಬಂದು ಹಿಂದೆ ಯುದ್ಧ ನಡೆದಿದ್ದ ತರೈನ್‌ನಲ್ಲಿಯೇ ಪೃಥ್ವಿರಾಜನನ್ನು ಸೋಲಿಸಿದನು. ಅದರೂ ಪೃಥ್ವಿರಾಜ ರಜಪೂತರ ಶೌರ್ಯ ಪರಾಕ್ರಮಗಳ ಪ್ರತೀಕವಾಗಿದ್ದಾನೆ.



**ಪೃಥ್ವಿರಾಜ ಚೌಹ್ವಾಣ**

### ರಜಪೂತರ ಕೊಡುಗೆಗಳು

ಪ್ರಾಚೀನ ಕಾಲದ ಕೊನೆಯ ಘಟ್ಟ ಮತ್ತು ಆರಂಭಿಕ ಮಧ್ಯಕಾಲದವರೆಗೂ ಇದ್ದ ರಜಪೂತ ಮನೆತನಗಳ ಅರಸರು ತಮ್ಮ ಆಳ್ವಿಕೆಯಲ್ಲಿ ಧರ್ಮ ಕಲೆ ಸಂಸ್ಕೃತಿಗಳಿಗೆ ಉದಾರವಾಗಿ ಪ್ರೋತ್ಸಾಹ ನೀಡಿದ್ದಾರೆ. ರಜಪೂತ ಅರಸರು ಸ್ವತಃ ವಿದ್ವಾಂಸರು ಆಗಿದ್ದಾರೆ. ಭೋಜ, ಮುಂಜ, ಮೊದಲಾದ ಅರಸರೇ ಅನೇಕ ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ. ಮುಂಜ ರಾಜನು ಪದ್ಮಗುಪ್ತ, ಹಲಾಯುಧ ಎಂಬ ಕವಿಗಳಿಗೆ ಆಶ್ರಯ ನೀಡಿದ್ದನು. ಭೋಜ ರಾಜನ ಕಾಲದಲ್ಲಿ ಶಾಂತಿಸೇನ, ಪ್ರಭಾಚಂದ್ರ ಸೂರಿ, ಧನಪಾಲ ಎಂಬ ಜೈನ ಪಂಡಿತರು ಆಶ್ರಯ ಪಡೆದಿದ್ದರು. ಜಯದೇವನ 'ಗೀತಗೋವಿಂದ', ಭಾರವಿಯ 'ಕಿರಾತಾರ್ಜುನೀಯ', ಭರ್ತೃಹರಿಯ 'ರಾವಣ ವಧಾ', ಮಹೇಂದ್ರಪಾಲನ 'ಕಾವ್ಯ ಮೀಮಾಂಸೆ' ಕಾವ್ಯಗಳು ಇವರ ಕಾಲದಲ್ಲಿ ರಚನೆಯಾದವು. ನಾಟಕಗಳಾದ ರಾಜಶೇಖರ ರಚಿಸಿದ 'ಬಾಲ ರಾಮಾಯಣ' ಮತ್ತು 'ಕರ್ಪೂರ ಮಂಜರಿ', ಭವಭೂತಿ ರಚಿಸಿದ 'ಮಹಾವೀರಚರಿತ', ಹಾಗೂ 'ಉತ್ತರರಾಮಚರಿತ', ಐತಿಹಾಸಿಕ ಕೃತಿಗಳಾದ ಕಲ್ಹಣನ 'ರಾಜ ತರಂಗಿಣಿ', ಜಯನಿಕನ 'ಪೃಥ್ವಿರಾಜ ವಿಜಯ' ಮತ್ತು ಹೇಮಚಂದ್ರನ 'ಕುಮಾರಪಾಲಚರಿತ' ಮಹತ್ವದ್ದಾಗಿವೆ. ರಜಪೂತ ಅರಸರ ಜೀವನ ಕೃತಿಗಳಾದ 'ಪೃಥ್ವಿರಾಜ ರಾಸೋ'ವನ್ನು ಚಂದ್ ಬರದಾಯಿ ಮತ್ತು 'ಭೋಜ ಪ್ರಬಂಧ'ವನ್ನು ಬಲ್ಲಾಳ ಎಂಬುವರು ರಚಿಸಿದರು. ಈ ಕಾಲದಲ್ಲಿ ಗುಜರಾತಿ, ರಾಜಸ್ತಾನಿ, ಹಿಂದಿ ಭಾಷೆಗಳು ಅಭಿವೃದ್ಧಿಯಾದವು. ರಜಪೂತರು ವಿದ್ಯಾಕೇಂದ್ರಗಳಾದ ನಳಂದಾ, ಕಾಶಿ, ವಿಕ್ರಮಶಿಲ, ಉಜ್ಜಯಿನಿಗಳಿಗೆ ಪ್ರೋತ್ಸಾಹ ನೀಡಿದರು.

ರಜಪೂತ ಅರಸರು ಉತ್ತರ ಭಾರತದ ಚಿತ್ತೋಡ್, ಮಾಂಡು, ರಣತಂಬೂರ್, ಜೋಧ್‌ಪುರ ಹಾಗೂ ಗ್ವಾಲಿಯರ್‌ಗಳಲ್ಲಿ ವಿಶಾಲವಾದ ಕೋಟೆಗಳನ್ನು ನಿರ್ಮಿಸಿದರು. ಜೈಪುರ, ಗ್ವಾಲಿಯರ್, ಉದಯಪುರಗಳ ಅರಮನೆಗಳು, ಮೌಂಟ್ ಅಬುದಲ್ಲಿರುವ ದಿಲಾವರ್ ದೇವಾಲಯ, ವಿಮಲಾ ವಸಾಯಿ, ಲುನಾ ವಸಾಯಿ ದೇವಾಲಯಗಳು ಸುಂದರ ಕಲಾತ್ಮಕತೆಯಿಂದ ಕೂಡಿವೆ. ಚಂದೇಲರು ಮಧ್ಯಪ್ರದೇಶದ ಖಜುರಾಹೋದ

©KTBS Not to be republished

ಖಂಡರಾಯ ಮಹಾದೇವಾಲಯವನ್ನು ಕಟ್ಟಿಸಿದರು. ಇವರ ಕಾಲದಲ್ಲಿ ನಿರ್ಮಿತವಾದ ದೇವಾಲಯಗಳಲ್ಲಿ ಶಿವ ಮತ್ತು ವಿಷ್ಣುವಿನ ಮಂದಿರಗಳು ಹೆಚ್ಚಾಗಿವೆ.

ರಜಪೂತ ಅರಸರು ಚಿತ್ರಕಲೆಗೂ ಪ್ರೋತ್ಸಾಹ ನೀಡಿದರು. ಚಿತ್ರಕಲಾ ಶೈಲಿಯನ್ನು ರಾಜಸ್ತಾನಿ ಕಲಾಶೈಲಿ ಮತ್ತು ಪಹಾರಿ ಕಲಾಶೈಲಿಯೆಂದು ವರ್ಗೀಕರಿಸಲಾಗಿದೆ. ಮೇವಾರ್, ಬಿಕಾನೇರ್, ಜೋಧ್‌ಪುರ, ಜೈಸಲ್ಮೇರ್ ಮತ್ತು ಬುನಿಗಳಲ್ಲಿ ರಾಜಾಸ್ತಾನಿ ಶೈಲಿಯ ಚಿತ್ರಕಲೆಗಳನ್ನು ಕಾಣಬಹುದಾಗಿದೆ. ಖಸೋಲಿ, ಜಮ್ಮು, ಗರ್ವಾಲ್‌ಗಳಲ್ಲಿ ಪಹಾರಿ ಕಲಾಶೈಲಿಯ ಚಿತ್ರಕಲೆಗಳನ್ನು ಕಾಣಬಹುದಾಗಿದೆ. ಹೀಗೆ ಭಾರತದ ಕಲೆ ಮತ್ತು ವಾಸ್ತುಶಿಲ್ಪಗಳ ಚರಿತ್ರೆಯಲ್ಲೂ ರಜಪೂತರಿಗೆ ವಿಶೇಷ ಸ್ಥಾನವಿದೆ.



ಮೌಂಟ್ ಅಬು ಬಸದಿ

©KTBS Not to be republished

## ಟರ್ಕರ ಆಗಮನ

ರಜಪೂತ ರಾಜರುಗಳು ಕಟ್ಟಿಕೊಂಡಿದ್ದ ಸಣ್ಣ ಸಣ್ಣ ರಾಜ್ಯಗಳ ಪತನದ ಮುಂದುವರಿದ ಅವಧಿಯಲ್ಲಿ ಉತ್ತರ ಭಾರತದಲ್ಲಿ ಟರ್ಕರು ತಮ್ಮ ಸಾಮ್ರಾಜ್ಯವನ್ನು ಕಟ್ಟಿದರು. ಇಸ್ಲಾಂ ಧರ್ಮಿಯರದ್ದಾಗಿದ್ದ ಟರ್ಕರ ಅಧಿಪತ್ಯದ ಸ್ಥಾಪನೆ ಅನೀರಿಕ್ಷಿತವಾಗಿರಲಿಲ್ಲ. ಅರಬರು ಸಾ.ಶ.8ನೆಯ ಶತಮಾನದ ಪ್ರಾರಂಭದಿಂದಲೇ ಸಿಂಧ್ ಪ್ರಾಂತ್ಯವನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸಿದ್ದರೂ ಸಫಲವಾಗಿರಲಿಲ್ಲ. ಆದರೂ ಅಲ್ಲಿಂದ ಮುಂದಕ್ಕೆ ಸಿಂಧ್ ಪ್ರಾಂತ್ಯ ಟರ್ಕರ ನಿರಂತರ ದಾಳಿಗಳ ಒತ್ತಡದಲ್ಲಿತ್ತು. ಟರ್ಕರು ಮಧ್ಯ ಏಷ್ಯಾ ಭೂಭಾಗದಲ್ಲಿರುವ ಮಂಗೋಲಿಯಾದಲ್ಲಿ ಇಸ್ಲಾಂ ಧರ್ಮವನ್ನು ಸ್ವೀಕರಿಸಿದ ಅಲೆಮಾರಿ ಬುಡಕಟ್ಟುಗಳಿಗೆ ಸೇರಿದವರು. ಈ ಮೂಲಕ್ಕೆ ಸೇರಿದ ಅಲಪ್ತ್‌ಗೀನ್ ಎಂಬುವವನು ಅಫ್ಘಾನಿಸ್ತಾನದ 'ಘಜನಿ' ಪ್ರದೇಶದಲ್ಲಿ ಸಾ.ಶ. 963ರಲ್ಲಿ ಸ್ವತಂತ್ರ ರಾಜ್ಯವನ್ನು ಕಟ್ಟಿದನು. ಇವನ ಕಾಲದಿಂದಲೇ ಘಜ್ನಿಯ ಟರ್ಕರಿಗೂ ಮತ್ತು ರಜಪೂತ ರಾಜರ ನಡುವೆ ಯುದ್ಧಗಳು ಆರಂಭವಾದವು.

### ಮಹಮ್ಮದ್ ಘಜ್ನಿ

ಅಲಪ್ತ್‌ಗೀನ್‌ನ ನಂತರ ಸಾ.ಶ.999ರಲ್ಲಿ ಘಜ್ನಿಯ ಸಿಂಹಾಸನವೇರಿದ ಮಹಮ್ಮದ್, ಟರ್ಕರ ಆಕ್ರಮಣವನ್ನು ಮುಂದುವರಿಸಿ ಭಾರತದ ಮೇಲೆ ಹದಿನೇಳು ಬಾರಿ ದಾಳಿಗಳನ್ನು ಮಾಡಿದನು. ಇವನ ದಾಳಿಗೆ ಪ್ರಖ್ಯಾತವಾದ ಗುಜರಾತಿನ ಸೋಮನಾಥ, ಸೌರಾಷ್ಟ್ರದ ದೇವಾಲಯಗಳು ನಾಶವಾದವು. ಇಡೀ ಪಶ್ಚಿಮ ಭಾರತದಲ್ಲಿದ್ದ ರಜಪೂತ ರಾಜ್ಯಗಳು ಜರ್ಝರಿತವಾದವು. ರಜಪೂತ ರಾಜರು ಒಟ್ಟಾಗಿ ನಿಂತು ಟರ್ಕರನ್ನು ಎದುರಿಸಲಿಲ್ಲ. ರಜಪೂತರ ರಾಜಕೀಯ ಮತ್ತು ಸೈನಿಕ ದೌರ್ಬಲ್ಯಗಳಿಂದ ಮಹಮ್ಮದ್ ಪ್ರತಿಬಾರಿಯ ದಾಳಿಯಲ್ಲಿ ಯಶಸ್ವಿಯಾಗುತ್ತಿದ್ದ. ಮಹಮ್ಮದ್ ಸುಮಾರು ಹದಿನೇಳು ಬಾರಿ ದಾಳಿ ಮಾಡಿ ಅಪಾರವಾದ ಚಿನ್ನಾಭರಣಗಳ ಸಂಪತ್ತನ್ನು ಘಜ್ನಿಗೆ ಸಾಗಿಸಿದ. ಅವನು ಭಾರತದಲ್ಲಿ ಸಾಮ್ರಾಜ್ಯವನ್ನು ಕಟ್ಟದಿದ್ದರೂ, ಅವನ ದಾಳಿಗಳು ಟರ್ಕರು ಭಾರತದೊಳಕ್ಕೆ ಪ್ರವೇಶಿಸಲು ದಾರಿಯನ್ನು ತೋರಿಸಿದವು. ಹಾಗೆಯೇ ಪರಸ್ಪರ ದ್ವೇಷ, ಹಗೆತನಗಳಿಂದ ದುರ್ಬಲರಾಗಿದ್ದ ರಜಪೂತರ ಶಕ್ತಿಯು ಸಹ ಪ್ರದರ್ಶಿತವಾಯಿತು.

## ಮಹಮ್ಮದ್ ಘೋರಿ

ಅಫ್ಘಾನಿಸ್ತಾನದ ಘೋರ್ ಪ್ರಾಂತ್ಯದಲ್ಲಿ ಶಾನ್ಸ್‌ಬಾನಿ ಮನೆತನಕ್ಕೆ ಸೇರಿದ ಟರ್ಕರ ಸಂತತಿಯೊಂದು ಪ್ರಾಬಲ್ಯಕ್ಕೆ ಬಂದು ಘಜ್ನಿ ಮನೆತನವನ್ನು ಕೊನೆಗಾಣಿಸಿತು. ಈ ಮನೆತನಕ್ಕೆ ಸೇರಿದ ಘಿಯಾಸುದ್ದೀನ್ ಮಹಮ್ಮದ್, ಘೋರ್ ರಾಜ್ಯದ ಸಿಂಹಾಸನವೇರಿದ. ಇವನು ತನ್ನ ತಮ್ಮನಾದ ಮುಜಾಹಿದ್ದೀನ್ ಮಹಮ್ಮದ್‌ನನ್ನು ಭಾರತದಲ್ಲಿ ಟರ್ಕರ ಅಧಿಪತ್ಯವನ್ನು ಸ್ಥಾಪಿಸಲು ಕಳುಹಿಸಿದನು. ಇವನನ್ನು ಇತಿಹಾಸಕಾರರು ಮಹಮ್ಮದ್ ಘೋರಿ ಎಂದು ಕರೆದಿದ್ದಾರೆ. ಮಹಮ್ಮದ್‌ನು ಹಿಂದೆ ಘಜ್ನಿ ಮಹಮ್ಮದ್‌ನ ಕಾಲದಿಂದ ಟರ್ಕರ ಅಧೀನದಲ್ಲಿದ್ದ ಸಿಂಧ್ ಪ್ರಾಂತ್ಯದ ಪ್ರದೇಶಗಳನ್ನು ವಶಪಡಿಸಿಕೊಳ್ಳಲು ಮುಲ್ತಾನಿಗೆ ಮುತ್ತಿಗೆ ಹಾಕುವ ಮೂಲಕ ಮೊದಲ ದಂಡಯಾತ್ರೆಯನ್ನು ಆರಂಬಿಸಿದನು. ಗುಜರಾತ್‌ನ ಅನಿಲವಾಡದ ಮೇಲೆ ಆಕ್ರಮಣ ಮಾಡಿದನು. ಇಲ್ಲಿ ಆಗ ಅವನಿಗೆ ಸೋಲುಂಟಾಯಿತು.ಈ ಸೋಲಿನ ನಂತರ ಮಹಮ್ಮದ್ ತನ್ನ ಯೋಜನೆಯನ್ನು ಬದಲಿಸಿ ಪೇಶಾವರದ ಕಡೆಗೆ ನುಗ್ಗಿ ಅದನ್ನು ಗೆದ್ದುಕೊಂಡನು. ನಂತರ ಲಾಹೋರ್‌ನಲ್ಲಿದ್ದ ಖುಸ್ರಾವ್ ಮಲ್ಲಿಕನು ಮಹಮ್ಮದ್‌ನಿಗೆ ಶರಣಾದನು. ಲಾಹೋರನ್ನು ಕೇಂದ್ರವಾಗಿರಿಸಿಕೊಂಡು ಮಹಮ್ಮದ್ ಉತ್ತರ ಭಾರತದ ಬಯಲಿನ ಕಡೆಗೆ ನುಗ್ಗಿದನು. ಸಹಜವಾಗಿಯೇ ಆಗ ದೆಹಲಿಯಲ್ಲಿ ಆಳುತ್ತಿದ್ದ ಚೌವ್ಹಾಣ ದೊರೆ ಮೂರನೇ ಪೃಥ್ವಿರಾಜ ಟರ್ಕರನ್ನು ಎದುರಿಸಿದನು. ಸಾ.ಶ. 1191ರಲ್ಲಿ ತರೈನ್ ಎಂಬ ಸ್ಥಳದಲ್ಲಿ ನಡೆದ ಯುದ್ಧದಲ್ಲಿ ಪೃಥ್ವಿರಾಜನ ನಾಯಕತ್ವದಲ್ಲಿ ಒಗ್ಗೂಡಿದ ರಜಪೂತ ರಾಜರು ಮಹಮ್ಮದನನ್ನು ಸೋಲಿಸಿ ಓಡಿಸಿದರು

ಘೋರ್‌ಗೆ ಮರಳಿದ ಮಹಮ್ಮದ್ ಮತ್ತೆ ಅಪಾರ ಯುದ್ಧ ಸಿದ್ದತೆಯೊಂದಿಗೆ ಬಂದು ತರೈನ್‌ನಲ್ಲಿಯೇ ಎರಡನೇ ಬಾರಿಗೆ ಸಾ.ಶ.1192ರಲ್ಲಿ ರಜಪೂತರೊಂದಿಗೆ ಯುದ್ಧಕ್ಕೆ ನಿಂತನು. ಈ ಬಾರಿಯ ಯುದ್ಧದಲ್ಲಿ ಟರ್ಕರ ಬಿಲ್ಲುಗಾರರು ಯಶಸ್ಸು ಕಂಡರು. ಶೀಘ್ರ ಚಲನೆಯ ಟರ್ಕರ ಅಶ್ವದಳ, ನಿಧಾನ ನಡಿಗೆಯ ಆನೆಗಳನ್ನು ಹೊಂದಿದ್ದ ರಜಪೂತ ಸೈನ್ಯವನ್ನು ಚದುರಿಸಿತು. ಮೊದಲನೆ ತರೈನ್ ಯುದ್ಧದಲ್ಲಿ ರಜಪೂತರಿಗೆ ಜಯವನ್ನು ತಂದುಕೊಟ್ಟಿದ್ದ ಗೋವಿಂದರಾಯಿ ಮತ್ತು ಭೋಲಾ ಇಬ್ಬರೂ ಕೊಲ್ಲಲ್ಪಟ್ಟರು. ಪೃಥ್ವಿರಾಜ ಚೌವ್ಹಾಣನನ್ನು ಸೆರೆಹಿಡಿಯಲಾಯಿತು. ಸೆರೆಸಿಕ್ಕ ಪೃಥ್ವಿರಾಜನು ಶರಣಾಗತನಾಗಿ ಕೆಲವು ಕಾಲ ತನ್ನ ಆಳ್ವಿಕೆಯನ್ನು ಮುಂದುವರಿಸಿದನು. ಭಾರತದಲ್ಲಿ ತಾನು ಗೆದ್ದುಕೊಂಡ ಪ್ರದೇಶಗಳನ್ನು ಆಳಲು ತನ್ನ ಗುಲಾಮರನ್ನು ನೇಮಿಸಿ ಮಹಮ್ಮದ್, ಘೋರಿಗೆ ಹಿಂತಿರುಗುವಾಗ ದಾರಿಯಲ್ಲಿ ಹತ್ಯೆಗೀಡಾದನು.

## ರಾಜಕೀಯ ಪರಿಣಾಮಗಳು

ಘೋರಿಯನ್ನರ ವಿಜಯ ರಾಜಕೀಯವಾಗಿ ಹಲವು ಮಹತ್ವದ ಪರಿಣಾಮಗಳನ್ನು ಉಂಟುಮಾಡಿತು. ಹನ್ನೆರಡನೇ ಶತಮಾನದವರೆಗೆ ಇದ್ದ ಸಣ್ಣ ಸಣ್ಣ ರಾಜ್ಯಗಳಲ್ಲಿ ಹಂಚಿ ಹೋಗಿದ್ದ ರಾಜಕೀಯ ವ್ಯವಸ್ಥೆಯು ಮರೆಯಾಯಿತು. ಅಪರಿಮಿತವಾದ ಅಧಿಕಾರ ಹೊಂದಿದ್ದ ಸುಲ್ತಾನರ ಹತೋಟಿಯಲ್ಲಿರುವ ಕೇಂದ್ರ ಸರ್ಕಾರ ದೆಹಲಿಯಲ್ಲಿ ಅಸ್ತಿತ್ವಕ್ಕೆ ಬಂತು. ಇದರ ಪರಿಣಾಮ ಹರ್ಷನ ನಂತರ ಇಡೀ ಉತ್ತರ ಭಾರತದಲ್ಲಿ ಏಕ ಆಡಳಿತ ಪದ್ಧತಿ ಜಾರಿಯಾಯಿತು.

ಆಡಳಿತ ಪದ್ಧತಿ ಹಿಂದೆ ಇದ್ದ ರಜಪೂತ ರಾಜ್ಯ ವ್ಯವಸ್ಥೆಗಿಂತ ಭಿನ್ನವಾಗಿತ್ತು. ಎಲ್ಲಾ ಅಧಿಕಾರಿಗಳನ್ನು ನೇಮಿಸುವ ಮತ್ತು ವಜಾ ಮಾಡುವ ಅಧಿಕಾರ ಸುಲ್ತಾನರಿಗಿತ್ತು. ಸೈನ್ಯಾಡಳಿತ ನಿಚ್ಚಳವಾಗಿ ಹಿಂದಿನ ವ್ಯವಸ್ಥೆಯಂತಿರಲಿಲ್ಲ. ಸೈನಿಕರನ್ನು ನೇರವಾಗಿ ಸುಲ್ತಾನರೇ ನೇಮಕಮಾಡಿಕೊಳ್ಳುತ್ತಿದ್ದು, ಸೈನಿಕರು ನೇರವಾಗಿ ಸುಲ್ತಾನರಿಗೆ ನಿಷ್ಠರಾಗಿರುತ್ತಿದ್ದರು. ಸುಲ್ತಾನರು ನೆಲೆಯೂರಿದ ನಂತರ ಭಾರತವು ಎಂಟನೇ ಶತಮಾನದಿಂದೀಚೆಗೆ ಕಡಿದುಕೊಂಡಿದ್ದ ಹೊರ ಜಗತ್ತಿನೊಂದಿಗಿನ ಸಂಬಂಧ ಮತ್ತೆ ಮುಂದುವರೆಯಿತು.

©KTBS Not to be republished

# ದೆಹಲಿ ಸುಲ್ತಾನರು

ಮಹಮ್ಮದನ ನಿರ್ಗಮನ ನಂತರ ಅವನ ಗುಲಾಮರು, ಟರ್ಕರು ವಶಪಡಿಸಿಕೊಂಡಿದ್ದ ಭೂ ಭಾಗಗಳಲ್ಲಿ ತಮ್ಮ ಅಧಿಕಾರವನ್ನು ಬಲಪಡಿಸಿಕೊಳ್ಳಲು ಪ್ರಾರಂಭಿಸಿದರು. ಈ ಗುಲಾಮರಲ್ಲಿ ಮಹಮ್ಮದ್‌ನ ವಿಶ್ವಾಸಕ್ಕೆ ಪಾತ್ರನಾಗಿ, ಅವನಿಗೆ ತೀರ ಹತ್ತಿರದಲ್ಲಿದ್ದ ಕುತ್ಬುದ್ದೀನ್ ಐಬಕ್ ಚೌಹ್ವಾಣರ ರಾಜಧಾನಿಯಾದ ದೆಹಲಿಯನ್ನು ಹಿಡಿದು ಅದನ್ನು ಕೇಂದ್ರ ಸ್ಥಾನವನ್ನಾಗಿ ಮಾಡಿಕೊಂಡನು. ಭಾರತದಲ್ಲಿದ್ದ ಇನ್ನಿತರ ಟರ್ಕ್ ಸೇನಾಧಿಪತಿಗಳು ಕುತ್ಬುದೀನ್ ಐಬಕ್‌ನನ್ನು ಸುಲ್ತಾನನೆಂದು ಒಪ್ಪಿಕೊಂಡರು, ಕುತ್ಬುದ್ದೀನ್ ಐಬಕ್ ಗುಲಾಮಿ ಸಂತತಿಯ ಸ್ಥಾಪಕನಾದನು. ಐಬಕ್‌ನಿಂದ ದೆಹಲಿಯಲ್ಲಿ ಆರಂಭವಾದ ಟರ್ಕರ ಆಳ್ವಿಕೆಯನ್ನು ಖಿಲ್ಜಿ, ತುಘಲಕ್, ಸೈಯದ್ ಮತ್ತು ಲೂಧಿ ಮನೆತನಗಳು ಮೊಘಲರ ಆಗಮನದವರೆಗೂ ಮುಂದುವರೆಸಿದವು.

## ಗುಲಾಮಿ ಸಂತತಿ

ಮಹಮ್ಮದ್ ಘೋರಿ ಗೆದ್ದಿದ್ದ ಭಾರತದ ಭೂ ಭಾಗಗಳಲ್ಲಿದ್ದ ಅವನ ಉತ್ತರಾಧಿಕಾರಿಗಳೆಲ್ಲರೂ ಗುಲಾಮರೇ ಆಗಿದ್ದರು. ದೆಹಲಿಯಲ್ಲಿ ಟರ್ಕರ ಅಧಿಪತ್ಯ ಸ್ಥಾಪಿಸಿದ ಕುತ್ಬುದ್ದೀನ್ ಐಬಕ್‌ಸಹ ಗುಲಾಮನೇ ಆಗಿದ್ದನು. ಇವನ ಉತ್ತರಾಧಿಕಾರಿಗಳೂ ಗುಲಾಮರಾಗಿದ್ದರು. ಆದುದರಿಂದ ಇವರ ಆಡಳಿತ ಕಾಲವನ್ನು ಗುಲಾಮಿ ಸಂತತಿಯ ಆಳ್ವಿಕೆ ಎನ್ನುವ ಹೆಸರಿನಿಂದ ಕರೆಯಲಾಗಿದೆ. ಈ ಗುಲಾಮಿ ಮನೆತನದ ಸುಲ್ತಾನರಲ್ಲಿ ಐಬಕ್‌ನಲ್ಲದೆ, ಇಲ್ತಮಶ್, ರಜಿಯಾ ಸುಲ್ತಾನ್ ಮತ್ತು ಬಲ್ಬನ್ ಮುಖ್ಯವಾಗಿದ್ದಾರೆ.

### ಕುತ್ಬುದ್ದೀನ್ ಐಬಕ್

ಈತನು ಭಾರತದಲ್ಲಿ ದೆಹಲಿ ಸುಲ್ತಾನರ ಆಳ್ವಿಕೆಗೆ ಭದ್ರ ಬುನಾದಿ ಹಾಕಿದನು. ಅಫ್ಘಾನಿಸ್ತಾನದ ತುರ್ಕಿ ಜನಾಂಗಕ್ಕೆ ಸೇರಿದ ಕುತ್ಬುದ್ದೀನ್‌ನನ್ನು ಬಾಲ್ಯದಲ್ಲಿ ಈತನ ಪಾಲಕರು ನಿಶಾಪುರದ ಖಾಜಿಗೆ ಗುಲಾಮನನ್ನಾಗಿ ಮಾರಿದರು. ಐಬಕನು ಪರ್ಷಿಯನ್, ಅರೇಬಿಕ್ ಭಾಷೆಗಳ ಶಿಕ್ಷಣದ ಜೊತೆಗೆ ಬಿಲ್ಲುಗಾರಿಕೆ, ಕುದುರೆ ಸವಾರಿ ಮತ್ತು ಸೈನಿಕ ತರಬೇತಿಯನ್ನು ಪಡೆದಿದ್ದನು. ಘಜ್ನಿಯ ರಾಜ್ಯಪಾಲನಾಗಿದ್ದ ಮಹಮ್ಮದ್ ಘೋರಿ ಇವನನ್ನು ಗುಲಾಮನನ್ನಾಗಿ ಖರೀದಿಸಿದ್ದನು. ಐಬಕ್‌ನು ಘಜ್ನಿಯಲ್ಲಿದ್ದಾಗ ತನ್ನ ಶೌರ್ಯದಿಂದ ಮಹಮ್ಮದ್ ಘೋರಿಯ ಗಮನವನ್ನು ಸೆಳೆದನು ಎರಡನೆಯ ತರೈನ್ ಕಾಳಗದ ನಂತರ ಭಾರತದ ಮೇಲಿನ ಆಕ್ರಮಣಗಳ ಉಸ್ತುವಾರಿಯನ್ನು ಪಡೆದನು. ಐಬಕ್‌ನು ಮಹಮ್ಮದ್ ಘೋರಿಯ ಕಾಲದಲ್ಲಿ ಉತ್ತರ ಭಾರತದ ಉತ್ತರಾಧಿಕಾರಿಯಾದನು. ಘೋರಿಯ ಮರಣಾನಂತರ ಸ್ವತಂತ್ರನಾಗಿ ಆಳಿದನು.



ಕುತಬ್ ಮಿನಾರ್

**ನಿಮಗಿದು ತಿಳಿದಿರಲಿ :**

*ಕುತುಬ್ ಮಿನಾರ್ ದೆಹಲಿಯಲ್ಲಿರುವ ಭಾರತದ ಅತ್ಯಂತ ಎತ್ತರದ ಗೋಪುರ. ಇದನ್ನು ಕುತುಬುದ್ದೀನ್ ಐಬಕ್ ನಿರ್ಮಿಸಲು ಪ್ರಾರಂಭಿಸಿ ಇಲ್ತಮಶ್ ಪೂರ್ಣಗೊಳಿಸಿದನು. ಇದು 225 ಅಡಿ ಎತ್ತರವಾಗಿದ್ದು ಅದರ ಮೇಲೆ ಸೂಕ್ಷ್ಮ ಕೆತ್ತನೆಗಳಿವೆ. ಐದು ಅಂತಸ್ತಿನ ಕಟ್ಟಡದಲ್ಲಿ ಮೆಟ್ಟಿಲುಗಳಿವೆ.*

ಐಬಕನು ದೆಹಲಿಯ ಕುವ್ವಾತ್–ಉಲ್–ಇಸ್ಲಾಂ ಮಸೀದಿಯನ್ನು ಕಟ್ಟಿಸಿದನು. ಇವನು ಅಲ್ಲಿಯೇ ಕುತುಬ್

©KTBS Not to be republished

ಮಿನಾರ್ ನಿರ್ಮಿಸಲು ಪ್ರಾರಂಭಿಸಿದನು. ಇವನ ಆಸ್ಥಾನದಲ್ಲಿ ನಿಜಾಮಿ ಮತ್ತು ಫಖ್-ಇ-ಮುದಬ್ಬೀರಯೆಂಬ ವಿದ್ವಾಂಸರಿದ್ದರು. 'ತಾಜುಲ್ ಮಾಸಿರ್' ಐಬಕ್‌ನ ಬಗ್ಗೆ ಮಾಹಿತಿ ನೀಡುವ ಕೃತಿಯಾಗಿದೆ.

**ಇಲ್ತಮಶ್**

ಇಲ್ಬರಿ ಕುಟುಂಬಕ್ಕೆ ಸೇರಿದ ಈತನು ಕುತ್ಬುದ್ದೀನ್‌ನ ಗುಲಾಮನಾಗಿದ್ದನು. ಗ್ವಾಲಿಯರ್‌ನಲ್ಲಿ ಆಡಳಿತಗಾರನಾಗಿದ್ದ ಇವನು ಐಬಕ್‌ನ ಉತ್ತರಾಧಿಕಾರಿಯಾದನು.

ಇಲ್ತಮಶ್ ಸುಲ್ತಾನನಾದುದನ್ನು ಸಹಿಸದ ಘಜ್ನಿಯ ದೊರೆ ತಾಜುದ್ದೀನ ಯಿಲ್ಡೀಜ್ ಮತ್ತು ಸಿಂಧ್‌ನ ನಾಸೀರುದ್ದೀನ್ ಕಬಾಚ ಆತನ ವಿರುದ್ಧ ಬಂಡೆದ್ದರು. ಇಲ್ತಮಶ್ ಅವರನ್ನು ಸೋಲಿಸಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡ ನಂತರ ರಣಥಂಭೋರ, ಮಾಂಡೋರ, ಗ್ವಾಲಿಯರ್, ಭಿಲಾ, ಅಜ್ಮೀರ್, ಬನಾರಸ್, ಕನೋಜ್‌ಗಳನ್ನು ವಶಪಡಿಸಿಕೊಂಡನು. ಭಾರತದ ಮೇಲೆ ಪ್ರಪ್ರಥಮ ಬಾರಿಗೆ ಮಂಗೋಲರು ಚೆಂಗೀಸ್ ಖಾನನ ನೇತೃತ್ವದಲ್ಲಿ ದಾಳಿ ಮಾಡಿದರು. ಇಲ್ತಮಶ್ ಅವರನ್ನು ಯಶಸ್ವಿಯಾಗಿ ಹಿಮ್ಮೆಟ್ಟಿಸಿದನು. ಈ ಸಾಧನೆಗಳಿಂದಾಗಿ ಬಾಗ್ದಾದಿನ ಖಲೀಫನು ಇಲ್ತಮಶ್‌ನಿಗೆ ಅಧಿಕೃತ ಅಧಿಕಾರ ಸಮ್ಮತಿ ಪತ್ರ ನೀಡಿದನು.

ಇಲ್ತಮಶ್ ರಾಜ್ಯವನ್ನು ಅನೇಕ ಇಕ್ತಾಗಳನ್ನಾಗಿ ವಿಂಗಡಿಸಿ. ಆಡಳಿತ ನಿರ್ವಹಣೆಗಾಗಿ ಇಕ್ತಾದಾರರನ್ನು ನೇಮಿಸಿದನು. ಆಡಳಿತದಲ್ಲಿ ಸಲಹೆ ಸೂಚನೆ ನೀಡಲು 'ನಲವತ್ತು ಸರದಾರರ ಕೂಟ' ನೇಮಕ ಮಾಡಿದನು. ಪ್ರಧಾನ ಮಂತ್ರಿ, ನ್ಯಾಯಾಧೀಶರು ಸುಲ್ತಾನನಿಗೆ ಸಲಹೆ ನೀಡುತ್ತಿದ್ದರು. ಇಲ್ತಮಶ್‌ನು ಬಂಗಾರ ಮತ್ತು ಬೆಳ್ಳಿಯ ನಾಣ್ಯಗಳನ್ನು ಚಲಾವಣೆಗೆ ತಂದನು. ಇವನು ಕುತ್ಬುದ್ದೀನನ ಕಾಲದಲ್ಲಿ ನಿರ್ಮಿಸಿಲು ಪ್ರಾರಂಭವಾಗಿದ್ದ ದೆಹಲಿಯ ಕುತುಬ್‌ಮಿನಾರನ್ನು ಪೂರ್ಣಗೊಳಿಸಿದನು.

**ರಜಿಯಾ ಸುಲ್ತಾನಾ**

ಇಲ್ತಮಶ್‌ನ ಪುತ್ರ ರುಕ್ಬುದ್ದೀನ್ ಫಿರೋಜ್ ಅಸಮರ್ಥನಾದ್ದರಿಂದ ಅವನ ಪುತ್ರಿ ರಜಿಯಾ ಬೇಗಂ ಆತನ ಉತ್ತರಾಧಿಕಾರಿಯಾದಳು. ದೆಹಲಿ ಸಿಂಹಾಸನವನ್ನೇರಿದ ಪ್ರಥಮ ಮಹಿಳೆ, ಸುಲ್ತಾನಾ ಎಂಬ ಬಿರುದು ಪಡೆದು ಪುರುಷನಂತೆ ವೇಷ ಧರಿಸಿ, ಯುದ್ಧದಲ್ಲಿ ಭಾಗವಹಿಸುತ್ತಿದ್ದಳು. ಸಿಂಧ್‌ನಿಂದ ಬಂಗಾಳದ ವಿಶಾಲ ಪ್ರದೇಶದವರೆಗೂ ತನ್ನ ಅಧಿಕಾರವನ್ನು ಸ್ಥಾಪಿಸಿದಳು. ಇವಳ ಆಡಳಿತವನ್ನು ಸಹಿಸದ ಪ್ರಾಂತ್ಯಾಧಿಕಾರಿಗಳು ದಂಗೆಯೆದ್ದು ಅವಳನ್ನು ಹತ್ಯೆಗೈದರು.

**ಘಿಯಾಸ್-ಉದ್-ದೀನ್ ಬಲ್ಬನ್**

ದೆಹಲಿಯ ಇಲ್ತಮಶ್‌ನಿಗೆ ಗುಲಾಮನಾಗಿದ್ದ ಬಲ್ಬನ್ ತನ್ನ ಸ್ವಾಮಿನಿಷ್ಠೆ, ಬುದ್ಧಿಮತ್ತೆ, ಸದ್ಗುಣಗಳಿಂದ ಟರ್ಕಿ ಗುಲಾಮರ ಕೂಟದ ಸದಸ್ಯನಾದನು. ರಜಿಯಾ ಸುಲ್ತಾನಳ ಆಸ್ಥಾನದಲ್ಲಿ ಅಮೀರ್-ಇ-ಶಿಕಾರ್ ಎಂಬ ಹುದ್ದೆಗೆ ನೇಮಿಸಲ್ಪಟ್ಟನು. ರಜಿಯಾ ಸುಲ್ತಾನಳ ಹತ್ಯೆಯ ನಂತರ ಸಂಭವಿಸಿದ್ದ ರಾಜಕೀಯ ಪ್ರಕ್ಷುಬ್ಧ ಸನ್ನಿವೇಶದಲ್ಲಿ ಟರ್ಕರ ಸರದಾರರು ಬಲ್ಬನ್‌ನನ್ನು ಬೆಂಬಲಿಸಿದರು. ಬಲ್ಬನ್‌ನು ದೆಹಲಿ ಸಿಂಹಾಸನವೇರಿ ಸುಲ್ತಾನನಾದನು.

ಸುಲ್ತಾನನಾದ ನಂತರ ಅವಿಧೇಯ ಟರ್ಕಿ ಸರದಾರರ ದುರಾಡಳಿತವನ್ನು ನಿಯಂತ್ರಿಸಿದನು. ಟರ್ಕಿ ಸರದಾರರ ಕೂಟವನ್ನು ಧ್ವಂಸ ಮಾಡಿದನು. ಮಂಗೋಲರ ದಾಳಿಯನ್ನು ತಡೆಗಟ್ಟಿ ರಾಜ್ಯದಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡಿದನು. ಆಸ್ಥಾನದ ದರ್ಬಾರಿನಲ್ಲಿ ಸಂಪ್ರದಾಯ ಮತ್ತು ಶಿಷ್ಟಾಚಾರಗಳನ್ನು ತಂದನು. ಪರ್ಶಿಯನ್ ಶೈಲಿಯ ಆಡಂಬರದ ವೇಷಭೂಷಣ ಧರಿಸುತ್ತಿದ್ದನು. ತನ್ನನ್ನು ದೇವರ ಪ್ರತಿನಿಧಿಯೆಂದು ಸಾರಿ ನಿರಂಕುಶ ರಾಜಪ್ರಭುತ್ವ ಜಾರಿಗೆ ತಂದನು. ಅನುಭವಿ ಹಾಗೂ ವಿಶ್ವಾಸಾರ್ಹ ಸೇನಾಪತಿಗಳ ನೇತೃತ್ವದಲ್ಲಿ ಸೈನ್ಯವನ್ನು ಪುನರ್ ಸಂಘಟಿಸಿದನು. ಮಂಗೋಲರ ದಾಳಿ ತಡೆಗಟ್ಟಲು ವಾಯುವ್ಯ ಗಡಿ ಭಾಗದಲ್ಲಿ ಕೋಟೆಗಳನ್ನು ಕಟ್ಟಿಸಿದನು. ದಕ್ಷ ಆಡಳಿತಗಾರನಾಗಿದ್ದ ಬಲ್ಬನ್ನನ ನಂತರ ಕೈಕುಬಾದನು ಸುಲ್ತಾನನಾದನು. ಆದರೆ ತನ್ನ ವಜೀರನಿಂದ ಕೊಲೆಯಾದನು. ಅಲ್ಲಿಗೆ ಗುಲಾಮ ಸಂತತಿಯ ಆಡಳಿತ ಅಂತ್ಯಗೊಂಡಿತು.

©KTBS Not to be republished

## ಖಿಲ್ಜಿ ಸಂತತಿ (ಸಾ.ಶ. 1290–1320)

ಖಿಲ್ಜಿ ಸಂತತಿಯನ್ನು ಜಲಾಲುದ್ದೀನನು ಸ್ಥಾಪಿಸಿದನು. ಇವನು ಮೃದುಸ್ವಭಾವ, ಕ್ಷಮಾಶೀಲತೆ ಗುಣಗಳನ್ನು ಹೊಂದಿದ್ದನು. ಇದರಿಂದ ಸರದಾರರು ಪ್ರಬಲರಾಗಿ ಒಳಸಂಚು ನಡೆಸಿದರು. ಮುಂದೆ ಈತನನ್ನು ಅಲ್ಲಾವುದೀನನು ಕೊಲೆ ಮಾಡಿ ದೆಹಲಿ ಸುಲ್ತಾನನಾದನು.

### ಅಲ್ಲಾವುದ್ದೀನ್ ಖಿಲ್ಜಿ

ಈತನು ಬಾಲ್ಯದಲ್ಲಿ ಜಲಾಲುದ್ದೀನ್‌ನ ಆಶ್ರಯದಲ್ಲಿ ಬೆಳೆದನು. ಶೂರ ಯೋಧನಾದ ಇವನು ರಾಜ್ಯಪಾಲನಾಗಿ ಹಾಗೂ ದಂಡನಾಯಕನಾಗಿ ಸೇವೆ ಸಲ್ಲಿಸಿದನು. ದಂಡನಾಯಕನಾಗಿ ಮಾಳ್ವ, ಭಿಲ್ಸಾ ಮತ್ತು ದೇವಗಿರಿ ಮೇಲಿನ ದಾಳಿಗಳಲ್ಲಿ ಅಪಾರ ಸಂಪತ್ತು ಲೂಟಿ ಮಾಡಿದನು. ತನ್ನ ಮಾರ್ಗದರ್ಶಕ, ಪೋಷಕ ಜಲಾಲುದ್ದೀನ್‌ನನ್ನು ಕೊಲೆ ಮಾಡಿದನು. ಹೀಗೆ ಕೊಲೆ ಮತ್ತು ಲೂಟಿ ಮಾರ್ಗವನ್ನು ಅನುಸರಿಸಿ ಅಲ್ಲಾವುದ್ದೀನ್ ದೆಹಲಿಯ ಸುಲ್ತಾನನಾದನು.

ಅಲ್ಲಾವುದ್ದೀನನು ಮಂಗೋಲರ ದಾಳಿಯನ್ನು ಹಿಮ್ಮೆಟ್ಟಿಸಿದನು. ಗುಜರಾತಿನ ವಾಘೇಲಾ ವಂಶದ ರಜಪೂತ ದೊರೆ ಇಮ್ಮಡಿ ಕರ್ಣದೇವ, ರಣಥಂಭೋರದ ಹಮೀರದೇವ, ಚಿತ್ತೋರದ ರಾಜ ಭೀಮಸಿಂಗನನ್ನು ಸೋಲಿಸಿನು. ಅಲ್ಲದೆ ಮಾಳ್ವ, ಜಾಲೋರ್, ಬುಂದಿ, ಮಾಂಡೋರ್ ಮತ್ತು ಟೋಂಕ್‌ಗಳನ್ನು ಗೆದ್ದುಕೊಂಡನು.

ಇವನ ಕಾಲದಲ್ಲಿ ದಕ್ಷಿಣ ಭಾರತದ ದಂಡೆಯಾತ್ರೆ ಯಶಸ್ವಿಗೊಳಿಸಿದ ಕೀರ್ತಿ ಈತನ ದಂಡನಾಯಕ ಮಲಿಕ್‌ಕಾಫರ್‌ನಿಗೆ ಸಲ್ಲುತ್ತದೆ. ದೇವಗಿರಿ, ವಾರಂಗಲ್, ದ್ವಾರಸಮುದ್ರ ಮತ್ತು ಮಧುರೈಗಳ ಮೇಲೆ ದಾಳಿ ನಡೆಸಿ ಅವುಗಳ ಅವನತಿಗೆ ಕಾರಣನಾದನು. ಆದರೆ ಗೆದ್ದ ರಾಜ್ಯಗಳನ್ನು ತನ್ನ ರಾಜ್ಯದಲ್ಲಿ ವಿಲೀನಗೊಳಿಸಿಕೊಳ್ಳದೆ ಕೇವಲ ಸಂಪತ್ತನ್ನು ಮಾತ್ರ ಲೂಟಿ ಮಾಡಿದನು. ಆತನ ಮೂರನೆಯ ಮಗ ಕುತುಬುದ್ದೀನ್ ಮುಬಾರಕ್ ನಾಲ್ಕು ವರ್ಷ ಅಧಿಕಾರ ನಡೆಸಿ ಖುಸ್ರು ಎಂಬ ಸೈನಿಕನಿಂದ ಕೊಲ್ಲಲ್ಪಟ್ಟನು. ಮುಂದೆ ಘಾಜಿ ಮಲಿಕ್ (ಘಿಯಾಸುದ್ದೀನ್ ತುಘಲಕ್) ಖುಸ್ರುವನ್ನು ಕೊಂದು ತುಘಲಕ್ ಸಂತತಿ ಸ್ಥಾಪಿಸಿದನು.

### ಆಡಳಿತಾತ್ಮಕ ಸುಧಾರಣೆಗಳು

ಅಲ್ಲಾವುದ್ದೀನ್ ಖಿಲ್ಜಿಯು ಆಡಳಿತದಲ್ಲಿ ಹಲವು ಸುಧಾರಣೆಗಳನ್ನು ಕೈಗೊಂಡನು. ಧಾರ್ಮಿಕ ದತ್ತಿ, ಇನಾಮ್ ಭೂಮಿ ಮತ್ತು ಸಹಾಯಧನಗಳನ್ನು ರದ್ದುಗೊಳಿಸಿದನು. ದಕ್ಷ ಗೂಢಚಾರ ವ್ಯವಸ್ಥೆ ರಚಿಸಿದನು. ಮದ್ಯಪಾನ, ಮಾದಕ ವಸ್ತುಗಳ ಮಾರಾಟ, ಪಗಡೆಯಾಟಗಳನ್ನು ನಿಷೇಧಿಸಿದನು. ಸರದಾರರ ಕೂಟ, ಸಾರ್ವಜನಿಕರೊಂದಿಗಿನ ಸ್ನೇಹ ಸಮಾರಂಭ ಹಾಗೂ ಗಣ್ಯವರ್ಗಗಳ ನಡುವೆ ವೈವಾಹಿಕ ಸಂಬಂಧಗಳನ್ನು ನಿರ್ಬಂಧಿಸಿದನು. ಇವನ ಕಾಲದಲ್ಲಿ ಸಣ್ಣ ಸಣ್ಣ ಹಿಡುವಳಿಯ ಭೂಮಿಗಳಲ್ಲಿ ವ್ಯವಸಾಯ ಮಾಡುತ್ತಿದ್ದ ಕೆಳವರ್ಗದ ರೈತರಿಂದ ಹಿಡಿದು ದೊಡ್ಡ ದೊಡ್ಡ ಭೂ ಮಾಲೀಕರೂ ಸಹ ತೆರಿಗೆ ಪಾವತಿಸಲೇಬೇಕಾಗಿತ್ತು. ರೈತರಿಂದ ನಿಗದಿತ ಪ್ರಮಾಣದ ತೆರಿಗೆಯನ್ನು ಸಂಗ್ರಹಿಸಲು ಕಂದಾಯ ಅಧಿಕಾರಿಗಳನ್ನು ನೇಮಕ ಮಾಡಿದನು.

**ಸೈನಿಕ ಸುಧಾರಣೆ :** ಸೈನಿಕರ ಭರ್ತಿ, ತರಬೇತಿ, ಶಸ್ತ್ರಾಸ್ತ್ರ ಮತ್ತು ಕುದುರೆಗಳನ್ನು ಒದಗಿಸುವ ಜವಾಬ್ದಾರಿಯನ್ನು ಸೈನಿಕ ಮಂತ್ರಿಗೆ ನೀಡಲಾಯಿತು. ಸೈನಿಕರಿಗೆ ನಿಗದಿಯಾಗಿದ್ದ ಅವರ ಸಂಬಳ ಪ್ರತಿ ತಿಂಗಳ ಕೊನೆಯ ಹೊತ್ತಿಗೆ ನಗದು ರೂಪದಲ್ಲಿ ಸಂದಾಯವಾಗುತ್ತಿತ್ತು. ಸೈನಿಕರ ಚಹರೆಗಳನ್ನು ಗುರ್ತಿಸಿ ದಾಖಲು ಮಾಡಿಕೊಳ್ಳುವ ಪದ್ಧತಿ ಆರಂಭವಾಯಿತು. ಈ ಕಾರ್ಯಕ್ಕಾಗಿ ಹುಲಿಯ ಎನ್ನುವ ಹೆಸರಿನ ದಸ್ತಾವೇಜುಗಳನ್ನು ಚಾಲ್ತಿಗೆ ತರಲಾಯಿತು. ಕುದುರೆಗಳಿಗೆ 'ದಾಗ್'

> **ನಿಮಗಿದು ತಿಳಿದಿರಲಿ**
>
> **ದೋ–ಅಬ್**
>
> ಎರಡು ನದಿಗಳ ನಡುವಣ ಪ್ರದೇಶವನ್ನು ದೋ–ಅಬ್ ಎನ್ನುತ್ತಾರೆ. *ಉದಾ: ಗಂಗಾ–ಯಮುನ ದೋ–ಅಬ್.*

©KTBS Not to be republished

ಅಂದರೆ ಮುದ್ರೆಹಾಕುವುದು ಜಾರಿಗೆ ಬಂದಿತು. ಸೈನಿಕ ತನ್ನ ಸಂಬಳ ಸವಲತ್ತುಗಳ ವಿಷಯದಲ್ಲಿ ಯಾವುದೇ ತಕರಾರಿದ್ದರೆ ಅವನು ನೇರವಾಗಿ ಸುಲ್ತಾನನಲ್ಲಿಯೇ ದೂರು ಕೊಡಬಹುದಾಗಿತ್ತು.

**ಮಾರುಕಟ್ಟೆ ಸುಧಾರಣೆಗಳು :** ಅಲ್ಲಾವುದೀನನು ಜಾರಿಗೆ ತಂದ ಮಾರುಕಟ್ಟೆ ಸುಧಾರಣೆಗಳು ಅವನಿಗೆ ಚರಿತ್ರೆಯಲ್ಲಿ ಅನನ್ಯ ಸ್ಥಾನವನ್ನು ತಂದುಕೊಟ್ಟಿವೆ. ಸಾಮಾನ್ಯ ಜನತೆಗೂ ಸಹ ಜೀವನಾವಶ್ಯಕ ವಸ್ತುಗಳಾದ ಧಾನ್ಯ, ಖಾದ್ಯ ತೈಲ, ಸಕ್ಕರೆ, ಉಪ್ಪು ಮತ್ತು ತೈಲಗಳನ್ನು ನ್ಯಾಯವಾದ ಬೆಲೆಗೆ ದೊರಕಿಸುವ ವ್ಯವಸ್ಥೆ ಮಾಡಿದನು. ಹಾಗೆಯೇ ಕುದುರೆ ಹಾಗೂ ಗುಲಾಮರ ಮಾರಾಟಕ್ಕೂ ಸಹ ಮಾರುಕಟ್ಟೆಗಳನ್ನು ವ್ಯವಸ್ಥೆ ಮಾಡಿಸಿದನು. ಈ ಮಾರುಕಟ್ಟೆಗಳನ್ನು ನಿಯಂತ್ರಿಸಲು 'ಸಹನಾ–ಇ–ಮಂಡಿ'ಯೆಂಬ ಉನ್ನತಾಧಿಕಾರಿಯನ್ನು ನೇಮಕ ಮಾಡಿದನು. ಮೋಸ ಮಾಡಿದವರಿಗೆ ಕಠಿಣವಾದ ಶಿಕ್ಷೆಯನ್ನು ವಿಧಿಸುತ್ತಿದ್ದನು.

## ತುಘಲಕ್ ಸಂತತಿ (ಸಾ.ಶ. 1320–1399)

ತುಘಲಕ್ ಸಂತತಿಯನ್ನು ಘಿಯಾಸುದ್ದೀನ್ ಸ್ಥಾಪಿಸಿದನು. ಘಿಯಾಸುದ್ದೀನನು ಕೆಲವು ಉದಾರ ಆಡಳಿತಾತ್ಮಕ ನೀತಿಯ ಮೂಲಕ ದೆಹಲಿಯಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಸ್ಥಾಪಿಸಿದನು. ಮಂಗೋಲರ ದಾಳಿ ತಡೆಗಟ್ಟಲು ಗಡಿ ಭದ್ರಪಡಿಸಿದನು. ರೈತರಿಗೆ ನೀರಾವರಿ ಕಾಲುವೆಗಳನ್ನು ನಿರ್ಮಿಸಿ, ಭೂಕಂದಾಯ ಕಡಿಮೆ ಮಾಡಿದನು. ಕುದುರೆ ಮತ್ತು ಕಾಲಾಳುಗಳ ಮೂಲಕ ಅಂಚೆ ಪದ್ಧತಿಯನ್ನು ಸಂಘಟಿಸಿದನು. ದೆಹಲಿ ಬಳಿ ತುಘಲಕಾಬಾದ್ ಕೋಟೆ ಕಟ್ಟಿಸಿದನು. ವಾರಂಗಲ್, ಮಧುರೈ ವಶಪಡಿಸಿಕೊಂಡು ಗುಜರಾತ್ ಮತ್ತು ಬಂಗಾಳಗಳಲ್ಲಿ ಸುವ್ಯವಸ್ಥೆ ಕಾಪಾಡಿದನು. ಈ ಸಂತತಿಯ ಇನ್ನುಳಿದ ಪ್ರಮುಖ ಸುಲ್ತಾನರೆಂದರೆ ಮಹಮ್ಮದ್ ಬಿನ್ ತುಘಲಕ್ ಮತ್ತು ಫಿರೋಜ್ ತುಘಲಕ್‌ರು.

### ಮಹಮ್ಮದ್ ಬಿನ್ ತುಘಲಕ್

ಈತನು ಪರ್ಶಿಯನ್ ಮತ್ತು ಅರೇಬಿಕ್ ಭಾಷೆಗಳಲ್ಲಿ ಪಾಂಡಿತ್ಯ ಪಡೆದಿದ್ದನು. ಗಣಿತ, ಭೌತವಿಜ್ಞಾನ, ವೈದ್ಯಶಾಸ್ತ್ರ, ಪರ್ಶಿಯನ್ ಕಾವ್ಯ, ಖಗೋಳಶಾಸ್ತ್ರ ಮುಂತಾದ ವಿಷಯಗಳಲ್ಲಿ ಪರಿಣಿತಿ ಪಡೆದಿದ್ದನು. ಅಪಾರ ಜ್ಞಾನ ಹೊಂದಿದ್ದರೂ, ಆತನ ವ್ಯಕ್ತಿತ್ವದಲ್ಲಿ ಕೆಲವು ಅಸಹಜತೆಗಳಿದ್ದವು. ಮಹಮ್ಮದ್ ಬಿನ್ ತುಘಲಕ್‌ನು ತನ್ನ ಕಾಲಕ್ಕಿಂತ ಹಲವು ಶತಮಾನಗಳಷ್ಟು ಮುಂದೆ ನಿಂತು ಯೋಚಿಸುತ್ತಿದ್ದನು. ಆದರೆ ಅವನ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಪಕ್ವತೆಯಾಗಲಿ, ಪ್ರಾಮಾಣಿಕತೆಯಾಗಲಿ ಅಧಿಕಾರಿಗಳಿಗೆ ಇರಲಿಲ್ಲ.

### ಆಡಳಿತಾತ್ಮಕ ಸುಧಾರಣೆಗಳು

**ಕಂದಾಯ ಸುಧಾರಣೆ:** ಸಾಮ್ರಾಜ್ಯದ ಭೂಕಂದಾಯಕ್ಕೆ ಸಂಬಂಧಿಸಿದಂತೆ ಭೂಮಿಯ ಎಲ್ಲ ವಿವರಗಳನ್ನು ಒಳಗೊಂಡ ಅಧಿಕೃತ ದಾಖಲೆಗಳಿರುವ ಪುಸ್ತಕವನ್ನು ಜಾರಿಗೊಳಿಸಿದನು. ಕೃಷಿ ಇಲಾಖೆಯನ್ನು ಸ್ಥಾಪಿಸಿದನು. ಕೃಷಿಗೆ ಒಳಪಡದ ಭೂಮಿಗಳಲ್ಲಿ ಕೃಷಿ ಚಟುವಟಿಕೆಗಳನ್ನು ಅರಂಭಿಸಲು ರೈತರಿಗೆ ಪ್ರೋತ್ಸಾಹಿಸಿ ಹಲವು ತೆರಿಗೆ ವಿನಾಯಿತಿಯನ್ನು ನೀಡಿದನು. ರೈತರಿಗೆ ಆರ್ಥಿಕ ನೆರವು ನೀಡಲು ತಕಾವಿ ಸಾಲ ಸೇರಿದಂತೆ ಅನೇಕ ಯೋಜನೆಗಳನ್ನು ಜಾರಿಗೆ ತಂದನು. ಆದರೂ ದೋ–ಅಬ್ ಪ್ರದೇಶದ ರೈತರು ಇವನ ಕಾಲದಲ್ಲಿ ಹೆಚ್ಚು ಭೂ ಕಂದಾಯವನ್ನು ಕಟ್ಟಬೇಕಾಯಿತು.

**ನಿಮಗಿದು ತಿಳಿದಿರಲಿ: ತೆರಿಗೆಗಳು**

1. ಖರಜ್ – ಮುಸ್ಲಿಮೇತರ ಮೇಲಿನ ಭೂ ತೆರಿಗೆ
2. ಉಶ್ರ್ – ಮುಸ್ಲಿಮರ ಮೇಲಿನ ಕೃಷಿ ತೆರಿಗೆ
3. ಜಕಾತ್ – ಮುಸ್ಲಿಂ ಪ್ರಜೆಗಳ ಮೇಲಿನ ಆಸ್ತಿ ತೆರಿಗೆ
4. ಜೆಸಿಯಾ – ಹಿಂದೂಗಳ ಮೇಲಿನ ಧಾರ್ಮಿಕ ತೆರಿಗೆ

© KTBS Not to be republished

**ರಾಜಧಾನಿಯ ವರ್ಗಾವಣೆ :** ಮಹಮ್ಮದ್ ಬಿನ್ ತುಘಲಕ್ ತನ್ನ ರಾಜಧಾನಿಯನ್ನು ದೆಹಲಿಯಿಂದ ಮಧ್ಯ ಭಾರತದಲ್ಲಿದ್ದ ದೇವಗಿರಿಗೆ ವರ್ಗಾಯಿಸಿದನು. ಇದರ ಮುಖ್ಯ ಉದ್ದೇಶ ವಿಶಾಲವಾದ ಸಾಮ್ರಾಜ್ಯಕ್ಕೆ ರಾಜಧಾನಿ ಕೇಂದ್ರಭಾಗದಲ್ಲಿರಬೇಕು ಹಾಗೂ ಪರಕೀಯ ದಾಳಿಗಳಿಂದ ರಕ್ಷಿಸಲು ಅನುಕೂಲವಾಗಿರಬೇಕೆಂಬುದಾಗಿತ್ತು. ಯೋಜನೆ ಉತ್ತಮವಾಗಿದ್ದರೂ ಸ್ಥಳಾಂತರಕ್ಕೆ ಸೂಕ್ತ ಏರ್ಪಾಡುಗಳನ್ನು ಕೈಗೊಂಡಿರಲಿಲ್ಲ. ಅಸಂಖ್ಯಾತ ಜನರು ಸಂಕಷ್ಟಕ್ಕೀಡಾದರು.

**ಸಾಂಕೇತಿಕ ನಾಣ್ಯ ಪ್ರಯೋಗ:** ನಾಣ್ಯಗಳ ಮೌಲ್ಯಗಳನ್ನು ತನ್ನ ಕಾಲದ ಬಂಗಾರ ಮತ್ತು ಬೆಳ್ಳಿಯ ಮೌಲ್ಯಕ್ಕೆ ಸರಿಹೊಂದುವಂತೆ ಮಾಡಿದನು. 'ದಿನಾರ' ಎಂಬ ಬಂಗಾರದ ಹಾಗೂ 'ಅದಲಿ' ಎಂಬ ಬೆಳ್ಳಿ ನಾಣ್ಯಗಳನ್ನು ಚಲಾವಣೆಗೆ ತಂದನು. ಅವುಗಳನ್ನು ಕಲಾತ್ಮಕವಾಗಿ ವಿನ್ಯಾಸಗೊಳಿಸಿದ್ದನು. ಕೆಲವು ವರ್ಷಗಳ ನಂತರ ತಾಮ್ರ ಮತ್ತು ಹಿತ್ತಾಳೆಯ ಸಾಂಕೇತಿಕ ನಾಣ್ಯಗಳ ಚಲಾವಣೆಗೆ ತಂದನು.

ನಾಣ್ಯಗಳನ್ನು ಟಂಕಿಸುವುದು ಸರ್ಕಾರದ ಏಕಸ್ವಾಮ್ಯವಾಗಿರಲಿಲ್ಲ. ಪರಂಪರಾನುಗತವಾಗಿ ನಾಣ್ಯಗಳನ್ನು ಟಂಕಿಸುವ ಹಕ್ಕನ್ನು ಹೊಂದಿದ್ದ ಮನೆತನಗಳಿದ್ದವು. ಸುಲ್ತಾನನ ಅನುಮತಿ ಪಡೆಯದೆ ಅಗತ್ಯಕ್ಕಿಂತ ಹೆಚ್ಚು ನಾಣ್ಯಗಳನ್ನು ಟಂಕಿಸಿದ್ದರಿಂದ ಅವ್ಯವಸ್ಥೆ ಉಂಟಾಯಿತು. ಅಧಿಕ ವೆಚ್ಚದಾಯಕ ಆಡಳಿತಾತ್ಮಕ ಪ್ರಯೋಗಗಳು, ಭೀಕರ ಬರಗಾಲ, ರಾಜಧಾನಿಯ ಸ್ಥಳಾಂತರ ಮತ್ತು ಪುನರ್ ಸ್ಥಳಾಂತರ, ಮುಂತಾದವುಗಳಿಂದ ರಾಜ್ಯದ ಖಜಾನೆ ಬರಿದಾಯಿತು.

**ದಖನ್ ನೀತಿ :** ದಖ್ಖನ್ ನೀತಿಯಲ್ಲಿ ಖಿಲ್ಜಿಯನ್ನರಿಗಿಂತ ಭಿನ್ನವಾಗಿದ್ದ ಮಹಮ್ಮದ್ ಬಿನ್ ತುಘಲಕ್ ದಖನ್‌ನಲ್ಲಿ ಗೆದ್ದ ಪ್ರದೇಶಗಳಲ್ಲಿ ನೇರವಾಗಿ ತನ್ನ ಆಡಳಿತವನ್ನು ಜಾರಿಗೊಳಿಸಿದನು. ಕಾಕತೀಯರ ರಾಜಧಾನಿ ವಾರಂಗಲ್ ವಶಪಡಿಸಿಕೊಂಡನು. ಹಾಗೆಯೇ ಹೊಯ್ಸಳರ ರಾಜಧಾನಿ ದ್ವಾರಸಮುದ್ರವನ್ನು ಧ್ವಂಸಗೊಳಿಸಿದನು. ದಕ್ಷಿಣ ಭಾರತದಲ್ಲಿರುವ ಮಧುರೈಯನ್ನು ಗೆದ್ದು ಅದರ ಆಡಳಿತ ನಿರ್ವಹಣೆಗೆ ಜಲಾಲುದ್ದೀನ್ ಹಸನ್‌ಷಾನನ್ನು ರಾಜ್ಯಪಾಲನನ್ನಾಗಿ ನೇಮಿಸಿದನು. ಹೀಗೆ ಭಾರತದಲ್ಲಿ ವಿಶಾಲ ಸಾಮ್ರಾಜ್ಯ ಸ್ಥಾಪಿಸಿದ ದೆಹಲಿ ಸುಲ್ತಾನರಲ್ಲಿ ಮಹಮ್ಮದ್ ಬಿನ್ ತುಘಲಕ್ ಮೊದಲಿಗನು. ಮಹಮ್ಮದ್ ಬಿನ್ ತುಘಲಕ್ ದೊಡ್ಡ ಸೈನ್ಯವನ್ನು ಸಂಘಟಿಸಿದನು. ಈತನ ಕೊನೆಯ ಹನ್ನೊಂದು ವರ್ಷಗಳ ಆಡಳಿತಾವಧಿಯಲ್ಲಿ ದಕ್ಷಿಣ ಭಾರತದಲ್ಲಿ ಇಪ್ಪತ್ತೇಳು ದಂಗೆಗಳು ನಡೆದು ವಿಜಯನಗರ ಮತ್ತು ಬಹಮನಿ ರಾಜ್ಯಗಳ ಉದಯಕ್ಕೆ ಕಾರಣವಾಯಿತು.

**ನಂತರದ ತುಘಲಕರು :** ಮಹಮ್ಮದ್ ಬಿನ್ ತುಘಲಕ್ ನಂತರ ಬಂದ ಫಿರೋಜ್ ಷಾ ತುಘಲಕ್ ಕಾಲದಲ್ಲಿ ಅನೇಕ ಪ್ರಜಾಹಿತ ಕಾರ್ಯಗಳು ಜಾರಿಗೆ ಬಂದವು. ಪ್ರಜೆಗಳಿಗೆ ನೆರವು ನೀಡುವ ಉದ್ದೇಶದಿಂದ ತಕಾವಿ ಸಾಲ ಮನ್ನಾ ಮಾಡಿದನು. ಮಹಮ್ಮದ್ ಬಿನ್ ತುಘಲಕ್‌ನ ಆಳ್ವಿಕೆಯಲ್ಲಿ ತೊಂದರೆಗಳಿಗೀಡಾಗಿದ್ದ ಪ್ರಜೆಗಳಿಗೆ ಪರಿಹಾರ ಧನ ನೀಡಿದನು. ಖಾಸಗಿ ಗಣಿಗಳ ಮೇಲೆ ಮತ್ತು ನೀರಾವರಿ ಸೌಲಭ್ಯ ನೀಡಿದ್ದಕ್ಕಾಗಿ ತೆರಿಗೆಗಳನ್ನು ಸಂಗ್ರಹಿಸಲಾಗುತ್ತಿತ್ತು, ಈ ತೆರಿಗೆಗಳನ್ನು ಸೇರಿಸಿ ಸುಮಾರು ಇಪ್ಪತ್ತು ತೆರಿಗೆಗಳನ್ನು ರದ್ದುಪಡಿಸಿದನು.

ಅನೇಕ ನಗರಗಳನ್ನು, ಮಸೀದಿಗಳನ್ನು, ಮದರಸಾಗಳನ್ನು, ಅಣೆಕಟ್ಟುಗಳನ್ನು ಮತ್ತು ಕಾಲುವೆಗಳನ್ನು ನಿರ್ಮಿಸಿದನು. ಈತನು ಕಟ್ಟಿಸಿದ ಪ್ರಮುಖ ನಗರಗಳೆಂದರೆ ಜಾನಪುರ, ಫತೇಬಾದ್, ಹಿಸ್ಸಾರ, ಫಿರೋಜಪುರ, ಫಿರೋಜಾಬಾದ್. ಜಾನಪುರ ಅಂದಿನ ಪ್ರಸಿದ್ಧ ವಿದ್ಯಾಕೇಂದ್ರವಾಗಿತ್ತು. ಪ್ರವಾಸಿಗರ ಅನುಕೂಲಕ್ಕಾಗಿ ಧರ್ಮಶಾಲೆಗಳನ್ನು ಸ್ಥಾಪಿಸಿದನು.

©KTBS Not to be republished

## ಸಯ್ಯದ್ ಸಂತತಿ ( ಸಾ.ಶ. 1414–1451)

ತುಘಲಕರ ನಂತರ ಸಯ್ಯದ್ ಸಂತತಿ ಪ್ರವರ್ದಮಾನಕ್ಕೆ ಬಂದಿತು. ಮುಲ್ತಾನದ ರಾಜ್ಯಪಾಲನಾಗಿದ್ದ ಖಿಜರ್‌ಖಾನ್‌ಸಯ್ಯದ್ ದೆಹಲಿಯನ್ನು ವಶಪಡಿಸಿಕೊಂಡು ಈ ಸಂತತಿಯ ಆಡಳಿತಕ್ಕೆ ಬುನಾದಿ ಹಾಕಿದನು. ದೋಅಬ್, ಬಿಯಾನ್ ಮತ್ತು ಗ್ವಾಲಿಯರ್‌ಗಳಲ್ಲಿ ಅಧಿಕಾರ ಸ್ಥಾಪಿಸಿದನು ಹಾಗೂ ಅನೇಕ ದಂಗೆಗಳನ್ನು ಅಡಗಿಸಿ ಶಾಂತಿ, ಸುವ್ಯವಸ್ಥೆ ಮತ್ತು ಭದ್ರತೆಯನ್ನು ನೆಲೆಗೊಳಿಸಿದನು. ಮಹಮ್ಮದ್ ಷಾ, ಅಲ್ಲಾ–ಉದ್–ದೀನ್ ಹಾಗೂ ಅಲಂಷಾ ಈ ಸಂತತಿಯ ಇತರೆ ಪ್ರಮುಖ ಸುಲ್ತಾನರು. ಅಲಂ ಷಾನನ್ನು ಬಹಲೋಲ್ ಲೋಧಿ ಸೋಲಿಸಿ ಸಯ್ಯದ್ ಸಂತತಿಯ ಆಡಳಿತವನ್ನು ಅಂತ್ಯಗೊಳಿಸಿದನು.

## ಲೋದಿ ಸಂತತಿ (ಸಾ.ಶ. 1451–1526)

ಇದು ದೆಹಲಿಯನ್ನಾಳಿದ ಕೊನೆಯ ಸುಲ್ತಾನ ಸಂತತಿ. ಬಹುಲೋಲ್ ಲೋದಿ, ಸಿಕಂದರ್ ಲೋದಿ ಮತ್ತು ಇಬ್ರಾಹಿಂ ಲೋದಿ ಈ ಸಂತತಿಯ ಸುಲ್ತಾನರು. ಸಿಕಂದರ್ ಲೋದಿಯು ಬಿಹಾರ, ಬಂಗಾಳ, ಧೋಲಪುರ್ ಮತ್ತು ಚಂದೇರಿಗಳನ್ನು ವಶಪಡಿಸಿಕೊಂಡನು. ದೆಹಲಿಯಲ್ಲಿ ಶಾಂತಿ ನೆಲೆಸುವಂತೆ ಕ್ರಮ ತೆಗೆದುಕೊಂಡನು.

ಈತನ ಉತ್ತರಾಧಿಕಾರಿಯಾದ ಇಬ್ರಾಹಿಂ ಲೋದಿಯು ಅದಕ್ಷನಾಗಿದ್ದನು. ಭಾರತದ ಮೇಲೆ ದಾಳಿ ಮಾಡುವಂತೆ ರಾಜ್ಯಪಾಲರಾದ ಆಲಂಖಾನ್ ಮತ್ತು ದೌಲತ್‌ಖಾನ್ ಮೊಘಲರಿಗೆ ಆಮಂತ್ರಣ ನೀಡಿದರು. ಅದರಂತೆ ಬಾಬರ್ ಭಾರತದ ಮೇಲೆ ದಾಳಿ ಮಾಡಿ ಸಾ.ಶ. 1526ರಲ್ಲಿ ನಡೆದ ಪಾಣಿಪತ್ ಯುದ್ಧದಲ್ಲಿ ಇಬ್ರಾಹಿಂ ಲೋದಿಯನ್ನು ಸೋಲಿಸಿ ಮೊಘಲರ ಆಳ್ವಿಕೆ ಪ್ರಾರಂಭಿಸಿದನು.

### ದೆಹಲಿ ಸುಲ್ತಾನರ ಕೊಡುಗೆಗಳು

**ಆಡಳಿತ ಪದ್ಧತಿ :** ಬಹುತೇಕ ದೆಹಲಿ ಸುಲ್ತಾನರು ನಿರಂಕುಶ ಪ್ರಭುಗಳಾಗಿದ್ದು, ಸೈನ್ಯದ ಮುಖ್ಯಸ್ಥ ಹಾಗೂ ಮುಖ್ಯ ನ್ಯಾಯಾಧೀಶರಾಗಿದ್ದರು. ಸುಲ್ತಾನನ ಆಡಳಿತವು ಕುರಾನಿನನ್ವಯ ನಡೆಯುತ್ತಿತ್ತು. ಸರದಾರರು, ಅಮೀರರು ಮತ್ತು ಉಲೇಮರು ಆಡಳಿತದಲ್ಲಿ ತಮ್ಮ ಪ್ರಭಾವ ಹೊಂದಿದ್ದರು. ಕೇಂದ್ರ ಸರ್ಕಾರದಲ್ಲಿ ಆಡಳಿತದ ನಿರ್ವಹಣೆಗೆ ಸೈನ್ಯ ಇಲಾಖೆ, ವಿದೇಶಾಂಗ ಇಲಾಖೆ, ಪತ್ರ ವ್ಯವಹಾರ ಇಲಾಖೆ, ದಾನ, ಧರ್ಮ ಮತ್ತು ದತ್ತಿ ಇಲಾಖೆಗಳಿದ್ದು ಅವುಗಳ ಮೇಲ್ವಿಚಾರಣೆಗೆ ಮಂತ್ರಿಗಳು ಮತ್ತು ಅಧಿಕಾರಿಗಳಿದ್ದರು. ರಾಜ್ಯವನ್ನು ಅನೇಕ ಪ್ರಾಂತ್ಯಗಳನ್ನಾಗಿ ವಿಂಗಡಿಸಲಾಗಿತ್ತು. ಕೆಳ ಹಂತದ ಆಡಳಿತ ಘಟಕಗಳಿಗೆ ಶಿಕ್‌ದಾರ್, ಅಮೀನ್, ಮತ್ತು ಚೌಕಿದಾರ ಮುಖ್ಯಸ್ಥರಾಗಿದ್ದರು. ಕಂದಾಯ ಸಂಗ್ರಹಣೆ, ಶಾಂತಿ ಕಾಪಾಡುವುದು, ಶಿಕ್ಷಣ ನೀಡುವುದು, ನೈರ್ಮಲ್ಯ ಕಾಪಾಡುವುದು ಇವರ ಪ್ರಮುಖ ಕರ್ತವ್ಯಗಳಾಗಿದ್ದವು.

ಸುಲ್ತಾನರ ಕಾಲದಲ್ಲಿ ಖರಾಜ್ (ಭೂತೆರಿಗೆ), ಜಕಾತ್, ಉಶ್ರು, ಖಮ್ಸ್ (ಯುದ್ಧದಲ್ಲಿ ಲೂಟಿ ಮಾಡಿದ ಸಂಪತ್ತಿನ ತೆರಿಗೆ) ಜೆಸಿಯ, ವಾರಸುದಾರಿಲ್ಲದ ಆಸ್ತಿ ಮೇಲೆ ತೆರಿಗೆ, ಆಮದು ಸುಂಕ, ಮನೆ ತೆರಿಗೆ ಮುಂತಾದವುಗಳು ವರಮಾನದ ಪ್ರಮುಖ ಮೂಲಗಳಾಗಿದ್ದವು. ಕಂದಾಯ ಸಂಗ್ರಹಣೆಗೆ ಅಧಿಕಾರಿಗಳಿದ್ದರು. ಖಾಜಿಗಳು ಪ್ರಾಂತ್ಯಗಳಲ್ಲಿ ಮತ್ತು ಪಟ್ಟಣಗಳಲ್ಲಿ ನ್ಯಾಯದಾನ ವಿಷಯದಲ್ಲಿ ಸುಲ್ತಾನನಿಗೆ ನೆರವಾಗುತ್ತಿದ್ದರು.

**ಸಾಮಾಜಿಕ ವ್ಯವಸ್ಥೆ :** ಸುಲ್ತಾನರ ಆಡಳಿತದಲ್ಲಿ ಮುಸ್ಲಿಂ ಮತ್ತು ಹಿಂದೂ ಸಮುದಾಯಗಳು ರೂಢಿಗತ ನಂಬಿಕೆ ಮತ್ತು ಆಚರಣೆಗಳನ್ನು ಹೊಂದಿದ್ದವು. ಹಳೆಯ ಸಾಮಾಜಿಕ ವ್ಯವಸ್ಥೆಗೆ ಹಲವಾರು ಸುಧಾರಣೆಗಳನ್ನು ಹಿಂದೂ ಭಕ್ತಿ ಸಂತರು ಮತ್ತು ಮುಸ್ಲಿಂ ಸಮಾಜದಲ್ಲಿ ಸೂಫಿ ಪಂಥದ ಸಂತರು ತಂದರು. ಸುಲ್ತಾನರ ಆಡಳಿತದ ಆರಂಭ ಕಾಲದಲ್ಲಿ ಟರ್ಕ್ ಮೂಲದ ಸರದಾರರನ್ನೇ ಆಡಳಿತದ ಉನ್ನತ ಹುದ್ದೆಗಳಿಗೆ ನೇಮಕ ಮಾಡುತ್ತಿದ್ದರು. ಟರ್ಕರ ಪ್ರಾಬಲ್ಯ ಮಸುಕಾದ ನಂತರ ಖಿಲ್ಜಿ ಮತ್ತು ತುಘಲಕ್ ಸಂತತಿಯವರ ಆಳ್ವಿಕೆಯಲ್ಲಿ

Not to be republished ©KTBS

ಇಸ್ಲಾಂಗೆ ಮತಾಂತರಗೊಂಡ ಅದರಲ್ಲೂ ಸೇವೆ ಮಾಡುತ್ತಿದ್ದ ಸಮುದಾಯಗಳಿಗೆ ಸೇರಿದ ವಿದ್ಯಾವಂತರಿಗೆ ಮತ್ತು ಹಿಂದೂಗಳಿಗೆ ಅತ್ಯುನ್ನತ ಹುದ್ದೆಗಳೇ ದೊರೆತವು. ಇದರಿಂದ ಈ ಕಾಲದ ಗಣ್ಯವರ್ಗಕ್ಕೆ ಭಾರತೀಯ ವೇಷಭೂಷಣ, ಆಹಾರ, ಪಾನೀಯಗಳು, ಸಂಗೀತ ಇತ್ಯಾದಿ ಸಾಂಸ್ಕೃತಿಕ ಅಂಶಗಳು ಪರಿಚಯವಾದವು. ಕಂದಾಯ ಇಲಾಖೆಯಲ್ಲಿ ಹಿಂದೂಗಳೂ ಸಹ ಅಧಿಕಾರಿಗಳು ಮತ್ತು ಕಾರಕೂನರುಗಳಾಗಿ ನೇಮಕಗೊಳ್ಳುತ್ತಿದ್ದರು.

ಗುಲಾಮಗಿರಿ ಪದ್ಧತಿಯಿತ್ತು. ಯುದ್ಧ ಕೈದಿಗಳನ್ನು ಗುಲಾಮರನ್ನಾಗಿ ನೇಮಿಸುತ್ತಿದ್ದರು. ಅರಮನೆಯಲ್ಲಿ ಅನೇಕ ಮಹಿಳಾ ಗುಲಾಮರಿದ್ದರು. ಸ್ತ್ರೀಯರ ಸ್ಥಾನಮಾನ ಉತ್ತಮವಾಗಿರಲಿಲ್ಲ. ಪರದಾ ಮತ್ತು ಬಾಲ್ಯವಿವಾಹ ಪದ್ಧತಿಗಳು ರೂಢಿಯಲ್ಲಿದ್ದವು. ಮೇಲ್ವರ್ಗದ ಮಹಿಳೆಯರು ಲಲಿತಕಲೆಗಳಲ್ಲಿ ಭಾಗವಹಿಸುತ್ತಿದ್ದರು. ಗ್ರಾಮೀಣ ಮಹಿಳೆಯರು ಕೃಷಿ, ಮನೆಗೆಲಸಗಳಲ್ಲಿ ನಿರತರಾಗುತ್ತಿದ್ದರು.

**ಆರ್ಥಿಕ ಪರಿಸ್ಥಿತಿ :** ಕೃಷಿಗೆ ಸಂಬಂಧಿಸಿದಂತೆ ಅಪಾರವಾದ ಬದಲಾವಣೆಗಳನ್ನು ಸುಲ್ತಾನರು ತಂದರು. ಕಂದಾಯ ದರದ ನಿಗದಿ ಮತ್ತು ಸಂಗ್ರಹದಲ್ಲಿ ಹಿಂದಿನ ಕಾಲದಲ್ಲಿದ್ದಂತಹ ಪದ್ಧತಿಗಳು ಬದಲಾದವು. ಬಡರೈತನಿಂದ ಹಿಡಿದು ಶ್ರೀಮಂತ ರೈತನೂ ಸಹ ಕಂದಾಯ ಕಟ್ಟಲೇಬೇಕೆನ್ನುವುದು ಸುಲ್ತಾನರ ಕಾಲದ ಕಂದಾಯ ನೀತಿಯಲ್ಲಿನ ಮುಖ್ಯ ಲಕ್ಷಣವಾಗಿತ್ತು.

ಸಾರಿಗೆ ಸಂಪರ್ಕಗಳು ಸುಧಾರಿಸಲ್ಪಟ್ಟವು. ಗುಜರಾತಿನಿಂದ ಹಿಡಿದು ಬಂಗಾಳದವರೆಗೂ ರಸ್ತೆ ಮಾರ್ಗಗಳು ನಿರ್ಮಾಣವಾದವು. ವಿದೇಶಿ ವರ್ತಕರು ಮಧ್ಯಕಾಲದ ಎಲ್ಲಾ ಸಣ್ಣ ದೊಡ್ಡ ಪಟ್ಟಣಗಳ ಮಾರುಕಟ್ಟೆಗಳಿಗೂ ಬರುತ್ತಿದ್ದರು ಮತ್ತು ಇಲ್ಲಿಯೇ ನೆಲೆಯೂರಿದರು. ಇದರಿಂದ ಕುಶಲಕರ್ಮಿಗಳಿಗೆ ಉತ್ತೇಜನ ದೊರೆಯಿತು. ಭಾರತದ ಕರಕುಶಲ ವಸ್ತುಗಳು ಯೂರೋಪಿನ ಮಾರುಕಟ್ಟೆಗಳಿಗೆ ಪ್ರವೇಶಿಸಿದವು. ದೆಹಲಿ ಮತ್ತಿತರ ಮುಖ್ಯ ನಗರಗಳಲ್ಲಿ ಸುಲ್ತಾನರು ಮತ್ತು ಗಣ್ಯ ವರ್ತಕರು ಚಿನ್ನ, ಬೆಳ್ಳಿ, ಆಭರಣಗಳು ಮತ್ತು ರೇಷ್ಮೆ ಬಟ್ಟೆ ತಯಾರಿಕೆಯ ಕಾರ್ಖಾನೆಗಳನ್ನು ನಡೆಸುತ್ತಿದ್ದರು.

**ಸಾಹಿತ್ಯ :** ವಿದೇಶಿ ಬರಹಗಾರರು ಮತ್ತು ಇತಿಹಾಸ ತಜ್ಞರು ಸುಲ್ತಾನರುಗಳ ಆಸ್ಥಾನದಲ್ಲಿ ಆಶ್ರಯ ಪಡೆದಿದ್ದರು. ಅವರ ಕೃತಿಗಳು ಅರೇಬಿಕ್, ಪರ್ಷಿಯನ್ ಭಾಷೆಗಳಲ್ಲಿವೆ. ಮಹಮ್ಮದ್ ಘಜ್ನಿಯ ಆಸ್ಥಾನದಲ್ಲಿ ಆಲ್‌ಬೆರೂನಿ ಎಂಬ ಪ್ರಸಿದ್ಧ ವಿದ್ವಾಂಸನಿದ್ದನು. ಈತನು ತತ್ವಜ್ಞಾನಿ, ಗಣಿತಶಾಸ್ತ್ರ ಮತ್ತು ಸಾಹಿತಿಯಾಗಿದ್ದನು. ಭಾರತದ ಸಾಮಾಜಿಕ, ಆರ್ಥಿಕ, ಧಾರ್ಮಿಕ, ವಿಷಯಗಳನ್ನೊಳಗೊಂಡ 'ಕಿತಾಬುಲ್ ಹಿಂದ್' ಕೃತಿಯನ್ನು ರಚಿಸಿದನು. ಹಸನ್ ನಿಜಾಮಿಯು 'ತಾಜುಲ್ ಮಾಸಿಖ್' ಎಂಬ ಗ್ರಂಥಗಳನ್ನು ರಚಿಸಿದರು. ಮಿನ್ಹಾಜಸ್ ಸಿರಾಜ್ ಜುರ್ಬನಿ 'ತಬಖತ್– ಈ–ನಾಸಿರಿ' ಕೃತಿಯನ್ನು ರಚಿಸಿದನು, ಅಮೀರ್ ಖುಸ್ರು ಆರು ಪ್ರಮುಖ ಗ್ರಂಥಗಳನ್ನು ರಚಿಸಿ ಹಿಂದೂ–ಮುಸ್ಲಿಂ ಸಂಸ್ಕೃತಿಯ ಬಗ್ಗೆ ಮಾಹಿತಿಯನ್ನು ನೀಡಿದ್ದಾನೆ. ಈತನನ್ನು 'ಭಾರತದ ಗಿಳಿ' ಎಂದು ಕರೆಯಲಾಗಿತ್ತು. ಜಿಯಾಯುದ್ದೀನ್ ಬರನಿಯು 'ತಾರಿಖ್–ಇ–ಫಿರೋಜ್‌ಷಾಹಿ' ಹಾಗೂ ಫಿರೋಜ ತುಘಲಕ್‌ನು 'ಫುತುಹತ್–ಇ– ಫಿರೋಜ್‌ಷಾಹಿ' ಎಂಬ ಕೃತಿಗಳನ್ನು ರಚಿಸಿದ್ದಾರೆ.

**ಕಲೆ ಮತ್ತು ವಾಸ್ತುಶಿಲ್ಪ:** ದೆಹಲಿ ಸುಲ್ತಾನರು ಭಾರತದಲ್ಲಿ 'ಇಂಡೋ–ಇಸ್ಲಾಮಿಕ್' ಎಂಬ ಹೊಸ ಶೈಲಿಯ ವಾಸ್ತುಶಿಲ್ಪವನ್ನು ಪರಿಚಯಿಸಿದರು. ಕಮಾನುಗಳು, ಗುಮ್ಮಟಗಳು ಹಾಗೂ ಮಿನಾರ್‌ಗಳು ಈ ಶೈಲಿಯ ಮುಖ್ಯ ಲಕ್ಷಣಗಳು. ದೆಹಲಿ ಸುಲ್ತಾನರು ಕೋಟೆ, ಮಸೀದಿ, ಅರಮನೆ, ಸಾರ್ವಜನಿಕ ಕಟ್ಟಡ ಮದರಸಾ, ಧರ್ಮ ಶಾಲೆಗಳನ್ನು ನಿರ್ಮಿಸಿದರು. ಇಂಡೋ–ಇಸ್ಲಾಮಿಕ್ ಶೈಲಿಗೆ ಉದಾಹರಣೆ : ದೆಹಲಿಯ ಕುವತ್–ಉಲ್–ಇಸ್ಲಾಂ ಮಸೀದಿ, ಕುತುಬ್ ಮಿನಾರ್, ಅಲೈ ದರವಾಜಾ, ಜಮೈತ್ ಖಾನಾ ಮಸೀದಿಗಳು.

© KTBS Not to be republished



ಅಲೈ ದರವಾಜಾ



ಕುವತ್–ಉಲ್–ಇಸ್ಲಾಂ ಮಸೀದಿ

## ಅಭ್ಯಾಸಗಳು.

**I. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

1. ಗುರ್ಜರ–ಪ್ರತಿಹಾರ ರಜಪೂತ ಮನೆತನ ಸ್ಥಾಪಕ ___________ .
2. ಪೃಥ್ವಿರಾಜ ಚೌವ್ಹಾಣನು ಮೊದಲನೆಯ ತರೈನ್ ಕಾಳಗದಲ್ಲಿ _________ ನನ್ನು ಸೋಲಿಸಿದನು.
3. ಮೊಹಮ್ಮದ್ ಘೋರಿಯ ಪ್ರಮುಖ ದಂಡನಾಯಕ___________ .
4. ದೆಹಲಿ ಸುಲ್ತಾನರಲ್ಲಿ ಆಳ್ವಿಕೆ ಮಾಡಿದ ಪ್ರಥಮ ಮಹಿಳೆ_____________ .
5. ಖಿಲ್ಜಿ ವಂಶದ ಪ್ರಸಿದ್ಧ ಸುಲ್ತಾನ_____________ .
6. ತುಘಲಕ್ ಕಾಲದಲ್ಲಿ ರಾಜಧಾನಿಯನ್ನು ದೆಹಲಿಯಿಂದ ___________ ಗೆ ವರ್ಗಾಯಿಸಲಾಯಿತು.

**II. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1. ರಜಪೂತ ಅರಸರು ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಕೊಡುಗೆ ವಿವರಿಸಿ.
2. ಇಲ್ತಮಶ್‌ನ ಆಡಳಿತ ಪದ್ಧತಿಯನ್ನು ಸ್ಥೂಲವಾಗಿ ವಿವರಿಸಿ.?
3. ಅಲ್ಲಾವುದ್ದೀನ್ ಖಿಲ್ಜಿಯ ಆಡಳಿತಾತ್ಮಕ ಸುಧಾರಣೆಗಳಾವುವು?
4. ಮೊಹಮ್ಮದ್–ಬಿನ್ ತುಘಲಕ್‌ನು ಜಾರಿಗೊಳಿಸಿದ ಆಡಳಿತ ಸುಧಾರಣೆಗಳಾವುವು?
5. ದೆಹಲಿ ಸುಲ್ತಾನರು ಕಲೆ ಮತ್ತು ವಾಸ್ತುಶಿಲ್ಪ ಕ್ಷೇತ್ರಕ್ಕೆ ನೀಡಿದ ಕೊಡುಗೆಗಳಾವುವು? ಉದಾಹರಿಸಿ.

**III. ಚಟುವಟಿಕೆಗಳು**

1. ಭಾರತದ ನಕ್ಷೆಯಲ್ಲಿ ರಜಪೂತ ರಾಜ್ಯವನ್ನು ಗುರುತಿಸಿ.
2. ಭಾರತದ ನಕ್ಷೆಯಲ್ಲಿ ದೆಹಲಿ ಸುಲ್ತಾನರು ಗೆದ್ದ ಸ್ಥಳಗಳನ್ನು ಗುರುತಿಸಿ.

**IV. ನಿಯೋಜಿತ ಕಾರ್ಯ**

1. ಶಿಕ್ಷಕರ ಮಾರ್ಗದರ್ಶನದಲ್ಲಿ ದೆಹಲಿ ಸುಲ್ತಾನರ ಸ್ಮಾರಕಗಳ ಬಗ್ಗೆ ಚಿತ್ರಗಳು ಮತ್ತು ಮಾಹಿತಿ ಸಂಗ್ರಹಿಸಿ ಆಲ್ಬಂ ತಯಾರಿಸಿ.

© KTBS Not to be republished

## ಅಧ್ಯಾಯ–3

# ಮತ ಪ್ರವರ್ತಕರು ಮತ್ತು ಸಮಾಜ ಸುಧಾರಕರು

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- *ಭಾರತದ ಮತ ಪ್ರವರ್ತಕರುಗಳ ಪರಿಚಯ ಮತ್ತು ಪ್ರತಿಪಾದಿಸಿದ ತತ್ವ, ಬೋಧನೆಗಳು.*
- *ಶಂಕರಚಾರ್ಯ, ಮಧ್ವಾಚಾರ್ಯ, ರಾಮಾನುಜಾಚಾರ್ಯ, ಬಸವಣ್ಣನವರ ಜೀವನ ಮತ್ತು ಬೋಧನೆಗಳು.*
- *ದ್ವೈತ, ಅದ್ವೈತ ಮತ್ತು ವಿಶಿಷ್ಟಾದ್ವೈತ ಸಿದ್ಧಾಂತಗಳು.*

ಭಾರತದ ಸಾಮಾಜಿಕ, ಧಾರ್ಮಿಕ ಇತಿಹಾಸದಲ್ಲಿ ಸಾ.ಶ. 8ನೆಯ ಶತಮಾನದಿಂದ 13ನೆಯ ಶತಮಾನದ ಮೊದಲಾರ್ಧದವರೆಗಿನ ಅವಧಿ ಅತ್ಯಂತ ಪ್ರಮುಖವಾದುದು. ಈ ಅವಧಿಯಲ್ಲಿಯೇ ಮೂರು ವೈದಿಕ ಮತಗಳನ್ನು ಬೆಳೆಸಿ, ಪೋಷಿಸಿ ಪ್ರವರ್ತಕರಾದ ಆಚಾರ್ಯತ್ರಯರಾದ ಶಂಕರರು, ಮಧ್ವರು ಮತ್ತು ರಾಮಾನುಜರು ಕನ್ನಡನಾಡಿನಲ್ಲಿ ಜೀವಿಸಿದ್ದರು. ಮೂರು ಮುಖ್ಯ ವೇದಾಂತ ಶಾಖೆಗಳಾದ ಅದ್ವೈತ, ದ್ವೈತ ಮತ್ತು ವಿಶಿಷ್ಟಾದ್ವೈತ ಸಿದ್ಧಾಂತಗಳು ಸಹ ಪ್ರಚುರತೆಗೆ ಬಂದವು. ಅಲ್ಲದೆ ಜಾತಿ ಮತ್ತು ಲಿಂಗಾಧಾರಿತ ಅಸಮಾನತೆಯನ್ನು ವಿರೋಧಿಸಿ ಬಸವೇಶ್ವರರು ಕಲ್ಯಾಣದಲ್ಲಿ ಸಾಮಾಜಿಕ ಕ್ರಾಂತಿಗೆ ನಾಂದಿಯಾಡಿದ್ದರು. ಇವರು ಭೋದಿಸಿದ ತತ್ವಗಳು ಕೇವಲ ಆಧ್ಯಾತ್ಮಿಕ ಸಿದ್ಧಾಂತಗಳಾಗದೆ ಸಮಾಜ ಮತ್ತು ಧರ್ಮವನ್ನು ವೈಚಾರಿಕವಾಗಿ ಸುಧಾರಣೆಗೊಳಿಸಿದವು. ಈ ಗುರಿ ಸಾಧನೆಗಾಗಿ ಆಚಾರ್ಯತ್ರಯರು ಮತ್ತು ಬಸವೇಶ್ವರರು ಕುಲ, ಮತ ಮತ್ತು ಲಿಂಗಭೇದಗಳಿಲ್ಲದೆ ಎಲ್ಲ ವರ್ಗದ ಜನರನ್ನು ಭಗವಂತನಲ್ಲಿ ಶರಣಾಗುವಂತೆ ಬೋಧಿಸಿ ಭಕ್ತಿ ಮಾರ್ಗದ ಮೂಲಕ ಸಮಾಜ ಮತ್ತು ಧರ್ಮವನ್ನು ಪುನಃಶ್ಚೇತನಗೊಳಿಸಿದರು.

**ಶಂಕರಾಚಾರ್ಯರು – ಅದ್ವೈತ**

ಶಂಕರರು ಕೇರಳದ ಕಾಲಡಿ ಗ್ರಾಮದ ನಂಬೂದರಿ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು. ತಂದೆ ಶಿವಗುರು, ತಾಯಿ ಆರ್ಯಾಂಬ. ಅಪ್ರತಿಮ ಬುದ್ಧಿಮತ್ತೆ ಹೊಂದಿದ್ದ, ಶಂಕರರು ತಮ್ಮ ಏಳನೇ ವಯಸ್ಸಿನಲ್ಲಿಯೇ ಎಲ್ಲಾ ಸೂತ್ರಗಳಲ್ಲಿಯೂ ಪಾಂಡಿತ್ಯ ಪಡೆದಿದ್ದರು. ಗೋವಿಂದ ಭಗವಾತ್ಪದರೆಂಬ ಗುರುಗಳಲ್ಲಿ ಇವರು ವೇದ–ಶಾಸ್ತ್ರಗಳ ಅಧ್ಯಯನವನ್ನು ನಡೆಸಿದರು.



ಶಂಕರಾಚಾರ್ಯರು

ಶಂಕರರು ಉಪನಿಷತ್ತು ಮತ್ತು ಬ್ರಹ್ಮಸೂತ್ರಗಳ ಆಳವಾದ ಅಧ್ಯಯನ ಮಾಡಿ ಅದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿದರು. 'ಅದ್ವೈತ' ಎಂದರೆ ಏಕ ಅಥವಾ ಒಂದೇ ಎಂದರ್ಥ. ಇದರ ಪ್ರಕಾರ ಜೀವಾತ್ಮ ಮತ್ತು ಪರಮಾತ್ಮ ಬೇರೆಬೇರೆಯಲ್ಲ. ಎರಡೂ ಒಂದೇ. ಬ್ರಹ್ಮನೊಬ್ಬನೆ ಸತ್ಯ, ಉಳಿದ ಜಗತ್ತು ಮಿಥ್ಯ.

ಜಗತ್ತು ಒಂದು ಮಾಯೆ. ಬ್ರಹ್ಮ ಮಾತ್ರ ಸತ್ಯ. ಜ್ಞಾನಮಾರ್ಗದಿಂದ ನಾವು ಪ್ರಪಂಚದ ಮಾಯೆಯನ್ನು ತಿಳಿದು

©KTBS Not to be republished

ಪರಮ ಸತ್ಯವಾದ ಬ್ರಹ್ಮನೊಡನೆ ನಮ್ಮ ಜೀವಾತ್ಮವನ್ನು ವಿಲೀನಗೊಳಿಸಬೇಕು. ಆಗ ಮಾತ್ರ ಎಲ್ಲರಿಗೂ ಮೋಕ್ಷ ಪ್ರಾಪ್ತಿ ಸಾಧ್ಯ. ಹೀಗೆ ಶಂಕರರು ಜ್ಞಾನಮಾರ್ಗದ ಪ್ರವರ್ತಕರಾಗಿದ್ದಾರೆ.

ಜೀವಾತ್ಮನಿಗೆ ಪ್ರತ್ಯೇಕ ಅಸ್ತಿತ್ವವಿಲ್ಲವೆಂದು ಪ್ರತಿಪಾದಿಸಿದ ಶಂಕರರು ಇದನ್ನೇ "ನಾನೇ ಬ್ರಹ್ಮನು" ಅಥವಾ "ಅಹಂಬ್ರಹ್ಮಾಸ್ಮಿ" ಎಂಬುದಾಗಿ ಪ್ರತಿಪಾದಿಸಿ ಸಕಲ ಜೀವರಾಶಿಗಳಲ್ಲಿರುವ ಚೇತನ ಶ್ರೇಷ್ಠವಾದದು ಎಂದು ಪ್ರತಿಪಾದಿಸುವ ಮೂಲಕ ಅಸ್ತಿತ್ವದ ನೆಲೆಯಲ್ಲಿ ಸಮಾನತೆಯನ್ನು ಬೋಧಿಸಿದರು. ಬ್ರಹ್ಮವು ಸತ್ಯ, ಅದು ನಿರ್ಗುಣ, ಅದಕ್ಕೆ ಲಕ್ಷಣಗಳಿಲ್ಲ ಮತ್ತು ಅವಕಾಶವಿಲ್ಲವೆಂದು ಪ್ರತಿಪಾದಿಸಿದರು.

**ಶಂಕರರು ರಚಿಸಿದ ಗ್ರಂಥಗಳು :** ಶಂಕರಭಾಷ್ಯ, ಆನಂದಲಹರಿ, ಸೌಂದರ್ಯ ಲಹರಿ, ಶಿವಾನಂದ ಲಹರಿ, ವಿವೇಕ ಚೂಡಾಮಣಿ, ಪ್ರಬುದ್ಧ ಸುಧಾಕರ ಹಾಗೂ ದಕ್ಷಿಣಾಮೂರ್ತಿ ಸ್ತೋತ್ರ ಮುಖ್ಯವಾದ ಗ್ರಂಥಗಳು. ಶಂಕರರ "ಭಜಗೋವಿಂದಂ" ಸ್ತೋತ್ರವು ಅತ್ಯಂತ ಜನಪ್ರಿಯವಾಗಿದೆ.


ಶಂಕರರು ಕಾಲ್ನಡಿಗೆಯಲ್ಲೇ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಇಡೀ ಭಾರತವನ್ನು ಸಂಚರಿಸಿ ತಮ್ಮ ಅದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿದರು. ತಮ್ಮ ಅದ್ವೈತ ಸಿದ್ಧಾಂತದ ಪ್ರಚಾರಕ್ಕಾಗಿ ಭಾರತದ ವಿವಿಧೆಡೆಗಳಲ್ಲಿ 5 ಪೀಠಗಳನ್ನು ಸ್ಥಾಪಿಸಿದರು. ಶಂಕರರು ಭಾರತೀಯ ದಾರ್ಶನಿಕ ಚಿಂತನೆಗೆ ಹೊಸ ರೂಪ ಮತ್ತು ಚೈತನ್ಯ ನೀಡಿದರು.

**ಶಂಕರಾಚಾರ್ಯರು ಸ್ಥಾಪಿಸಿದ ಪೀಠಗಳು**

*1. ಬದರಿ–ಜ್ಯೋತಿರ್‌ಪೀಠ* *2. ದ್ವಾರಕಾ – ಕಾಳಿಕಾ ಪೀಠ* *3. ಪುರಿ–ಗೋವರ್ಧನ ಪೀಠ*
*4. ಶೃಂಗೇರಿ– ಶಾರದಾಪೀಠ* *5. ಕಂಚಿ–ಕಾಮಕೋಟಿ ಪೀಠ.*

## ರಾಮಾನುಜಾಚಾರ್ಯರು – ವಿಶಿಷ್ಟಾದ್ವೈತ

ರಾಮಾನುಜಾಚಾರ್ಯರು ತಮಿಳುನಾಡಿನ ಚೆನ್ನೈನ ಸಮೀಪ ಶ್ರೀ ಪೆರಂಬದೂರ್ ಎಂಬ ಹಳ್ಳಿಯಲ್ಲಿ ಜನಿಸಿದರು. ತಂದೆ ಕೇಶವ ಸೋಮಯಾಜಿ ತಾಯಿ ಕಾಂತೀಮತಿ. ದಕ್ಷಿಣ ಭಾರತದ ಪ್ರಸಿದ್ಧ ವಿದ್ಯಾ ಕೇಂದ್ರವಾಗಿದ್ದ ಕಂಚಿಯಲ್ಲಿ ಯಾದವ ಪ್ರಕಾಶರ ಬಳಿ ವೇದ ಉಪನಿಷತ್ತುಗಳ ಅಧ್ಯಯನ ಮಾಡಿದರು. ನಂತರ ಶ್ರೀರಂಗಕ್ಕೆ ತೆರಳಿ ಅಲ್ಲಿಯ ಮಠದ ಪೀಠಾಧೀಶರಾದರು. ಶೈವ ಧರ್ಮಾವಲಂಬಿಯಾದ ಚೋಳ ದೊರೆಯು ರಾಮಾನುಜಾಚಾರ್ಯರಿಗೆ ಕಿರುಕುಳ ನೀಡುತ್ತಿದ್ದ. ಆಗ ಕರ್ನಾಟಕ ಭಾಗದ ಹೊಯ್ಸಳ ದೊರೆ ಬಿಟ್ಟಿದೇವನು ಇವರನ್ನು ಸ್ವಾಗತಿಸಿದನು. ನಂತರ ದೊರೆ ಬಿಟ್ಟಿದೇವನು ವೈಷ್ಣವ ಸಂಪ್ರದಾಯಕ್ಕೆ ಮತಾಂತರಗೊಂಡು ವಿಷ್ಣುವರ್ಧನ ಎಂಬ ಹೆಸರು ಪಡೆದನೆಂದು ಹೇಳಲಾಗುತ್ತದೆ. ರಾಮಾನುಜರು ಮೇಲುಕೋಟೆಗೆ ತೆರಳಿ ಚೆಲುವನಾರಾಯಣನ ದೇವಾಲಯವನ್ನು ನಿರ್ಮಿಸಿದರು.


ರಾಮಾನುಜಾಚಾರ್ಯರು

ರಾಮಾನುಜಾಚಾರ್ಯರು ಜನಸಾಮಾನ್ಯರಿಗೆ ಮುಕ್ತಿಮಾರ್ಗವನ್ನು ತೋರಿಸಲು ಅತೀವ ಆಸಕ್ತಿವಹಿಸಿದರು. ಅವರು ಪ್ರತಿಪಾದಿಸಿದ ಸಿದ್ಧಾಂತವನ್ನು "ವಿಶಿಷ್ಟಾದ್ವೈತ" ಎಂದು ಕರೆಯಲಾಗುವುದು. ಇದರ ಪ್ರಕಾರ ಜೀವ ಮತ್ತು ಪ್ರಕೃತಿ ಬ್ರಹ್ಮನ ಅಧೀನ. ಆತ್ಮ ಮತ್ತ ಪರಮಾತ್ಮ ಏಕಕಾಲದಲ್ಲಿ ಒಂದಾಗಲು ಸಾಧ್ಯವಿಲ್ಲವೆಂದು ತಿಳಿಸಿದರು. ಜಗತ್ತು ಬ್ರಹ್ಮನ ವ್ಯಕ್ತಗೊಂಡ ರೂಪವೆಂದು ಮತ್ತು ಜಗತ್ತು ಇಹಸತ್ಯವೆಂದು ಪ್ರತಿಪಾದಿಸಿದರು.

©KTBS Not to be republished

ಮುಕ್ತಿ ಸಾಧನೆಗೆ ಭಕ್ತಿ ಮತ್ತು ಪ್ರಪತ್ತಿ (ಅತೀವ ಶರಣಾಗತ ಭಕ್ತಿ) ಬಹಳ ಮುಖ್ಯವೆಂದು ತಿಳಿಸಿದರು. ಜಾತಿವಾದವನ್ನು ಖಂಡಿಸಿದ ರಾಮಾನುಜರು ಭಕ್ತಿ ತತ್ವವನ್ನು ಎಲ್ಲಾ ಜಾತಿಯ ಜನರಿಗೂ ಉಪದೇಶಿಸಿದರು. ಆಸೆಗಳಿಂದ ದೂರಾಗಿ ಆತ್ಮ ಪರಿಶುದ್ಧತೆಯಿಂದ ಭಗವಂತನಿಗೆ ಶರಣಾಗಬೇಕೆಂದು ತಿಳಿಸಿದರು. ಹೀಗೆ ಮೋಕ್ಷ ಸಾಧನೆಗಾಗಿ ಭಕ್ತಿಮಾರ್ಗವನ್ನು ಪ್ರತಿಪಾದಿಸಿದರು.

ರಾಮಾನುಜರು ಶಾಸ್ತ್ರಗಳ ಅಧ್ಯಯನ ಮಾಡಿ, ಅನೇಕ ಕೃತಿಗಳನ್ನು ರಚಿಸಿದರು. ವೇದಾಂತ ಸಂಗ್ರಹ, ವೇದಾಂತಸಾರ, ವೇದಾಂತ ದೀಪಿಕ, ಶ್ರೀಭಾಷ್ಯ ಹಾಗೂ ತಮ್ಮ ಮಹತ್ವಪೂರ್ಣ ಗ್ರಂಥವಾದ "ಗೀತಾಭಾಷ್ಯ"ದಲ್ಲಿ ಭಕ್ತಿ ತತ್ವಕ್ಕೆ ಅನನ್ಯತೆಯನ್ನು ಮತ್ತು ಪ್ರಾಧಾನ್ಯತೆಯನ್ನು ತಂದುಕೊಟ್ಟಿದ್ದಾರೆ.

ಉತ್ತರದ ಸಂತ ರಮಾನಂದ, ರಾಯಿದಾಸರು ರಾಮಾನುಜರ ಸಿದ್ಧಾಂತದಿಂದ ಪ್ರಭಾವಿತರಾದರು. ಇವರಿಂದ ಉತ್ತರ ಭಾರತದಲ್ಲಿ ಭಕ್ತಿಪಂಥ ಬೆಳೆಯಲು ದಾರಿಯಾಯಿತು. ಹಾಗೆಯೇ ವಿಜಯನಗರದ ತುಳುವ ಮತ್ತು ಅರವೀಡು ವಂಶದ ದೊರೆಗಳು ಈ ತತ್ವದ ಅನುಯಾಯಿಗಳಾದರು.

**ನಿಮಗಿದು ತಿಳಿದಿರಲಿ:**

*ದಕ್ಷಿಣ ಭಾರತದಲ್ಲಿನ ಕೆಲವು ಪ್ರಮುಖ ಶ್ರೀ ವೈಷ್ಣವ ಮಠಗಳು.*

| | | | |
|---|---|---|---|
| 1) | ಯತಿರಾಜ ಮಠ | – | ಮೇಲುಕೋಟೆ ಮತ್ತು ಶ್ರೀಪೆರಂಬದೂರು |
| 2) | ಪರಕಾಲ (ಬ್ರಹ್ಮತಂತ್ರ) ಮಠ | – | ಮೈಸೂರು |
| 3) | ಅಹೋಬಲ ಮಠ | – | ಅಹೋಬಲ, (ಗುಂಟೂರು, ಆಂಧ್ರ ಪ್ರದೇಶ) |
| 4) | ಆಂಡವನ್ ಮಠ | – | ಶ್ರೀರಂಗಂ |
| 5) | ವಾಮೈಮಲೈ ಮಠ | – | ಸುಚೀಂದ್ರಂ |

## ಮಧ್ವಾಚಾರ್ಯರು – ದ್ವೈತ


ಮಧ್ವಾಚಾರ್ಯರು

ಮಧ್ವಾಚಾರ್ಯರು ಕರ್ನಾಟಕದ ಉಡುಪಿ ಬಳಿ ಪಾಜಕದಲ್ಲಿ ಜನಿಸಿದರು. ಮಧ್ವಗೇಹಭಟ್ಟ ಮತ್ತು ವೇದಾವತಿ ಇವರ ತಂದೆ–ತಾಯಿಗಳು. ವಿಷ್ಣು ಇವರ ಆರಾಧ್ಯ ದೈವ. ಮಧ್ವಾಚಾರ್ಯರು ಬಾಲಕರಾಗಿದ್ದಾಗ ಅಪ್ರತಿಮ ಪಾಂಡಿತ್ಯವನ್ನು ತೋರಿದ್ದರೆಂದು ಹೇಳಲಾಗಿದೆ. ಗುರುಗಳಾದ ಅಚ್ಯುತಪ್ರೇಕ್ಷಕರಲ್ಲಿ ದೀಕ್ಷೆ ಪಡೆದುಕೊಂಡರು. ಗುರುಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವಾಗಲೇ, ಮಧ್ವಾಚಾರ್ಯರು ಸ್ವತಂತ್ರವಾಗಿ ತಮ್ಮ ಜ್ಞಾನಶಕ್ತಿಯನ್ನು ಬೆಳೆಸಿಕೊಂಡರು ಹಾಗೂ ಧರ್ಮಶಾಸ್ತ್ರಗಳ ವಾದದಲ್ಲಿ ತಮ್ಮ ಗುರುಗಳನ್ನೇ ಸೋಲಿಸಿದರು. ಇವರು 'ದ್ವೈತ' ಸಿದ್ಧಾಂತವನ್ನು ಪ್ರತಿಪಾದಿಸಿದರು. ದ್ವೈತ ಎಂದರೆ ಎರಡು ಎಂದರ್ಥ. ಜೀವಾತ್ಮ ಮತ್ತು ಪರಮಾತ್ಮ ಬೇರೆ ಬೇರೆ ಎಂಬುದೇ ದ್ವೈತದ ಅರ್ಥ.

ಮಧ್ವಾಚಾರ್ಯರು ತಮ್ಮ ಸಿದ್ಧಾಂತದ ಪ್ರಚಾರಕ್ಕಾಗಿ ತೀರ್ಥಯಾತ್ರೆ ಕೈಗೊಂಡು ಹಲವಾರು ಚರ್ಚೆಗಳಲ್ಲಿ ಭಾಗವಹಿಸಿದರು. ಹಡಗಿನ ಗೋಪಿಚಂದನವೆಂಬ ಮಣ್ಣಿನ ಗುಡ್ಡೆಯಲ್ಲಿದ್ದ ಶ್ರೀಕೃಷ್ಣನ ವಿಗ್ರಹವನ್ನು ಉಡುಪಿಯಲ್ಲಿ ಪ್ರತಿಷ್ಠಾಪಿಸಿದರು. ಶ್ರೀಕೃಷ್ಣನ ಪೂಜೆಗಾಗಿ ಅಷ್ಟಮಠಗಳನ್ನು ಸ್ಥಾಪಿಸಿದರು.

**ಮಧ್ವರು ಸ್ಥಾಪಿಸಿದ ಅಷ್ಟಮಠಗಳು:** ಪಲಿಮಾರು, ಅದಮಾರು, ಕೃಷ್ಣಾಪುರ, ಪುತ್ತಿಗೆ, ಶಿರೂರು, ಸೋದೆ, ಕಾಣೆಯೂರ ಮತ್ತು ಪೇಜಾವರ ಮಠಗಳು.

©KTBS Not to be republished

ಮಧ್ವಾಚಾರ್ಯರ ಪ್ರಕಾರ ಜಗತ್ತು ಮಾಯೆಯಲ್ಲ. ಅದು ಪರಮಾತ್ಮನಷ್ಟೇ, ಸತ್ಯವಾಗಿದೆ. ಇವುಗಳಲ್ಲಿ ಈಶ್ವರ ಮಾತ್ರ ಸ್ವತಂತ್ರ. ಉಳಿದ ಜಗತ್ತು ಮಿಥ್ಯೆ (ಭ್ರಮೆ) ರೂಪವಾದದ್ದು. ಪರಮಾತ್ಮನಿಗೂ,ಜೀವಿಗಳಿಗೂ ಸ್ವಾಮಿ–ಸೇವಕ ಸಂಬಂಧವಿದೆ. ವಿಷ್ಣು ಅಥವಾ ನಾರಾಯಣ ಒಬ್ಬನೇ ಸರ್ವೋತ್ತಮ. ವಿಷ್ಣುವನ್ನು ಭಕ್ತಿಯಿಂದು ಪೂಜಿಸುವುದರಿಂದ ಆತ್ಮೋದ್ಧಾರ ಅಥವಾ ಮುಕ್ತಿ ಸಾಧ್ಯವೆಂದು ತಿಳಿಸಿದರು.

**ಮಧ್ವಚಾರ್ಯರ ಕೃತಿಗಳು :** ಗೀತಾಭಾಷ್ಯ, ಗೀತಾ ತಾತ್ಪರ್ಯ ನಿರ್ಣಯ, ಮಹಾಭಾರತ ತಾತ್ಪರ್ಯ ನಿರ್ಣಯ, ಭಾಗವತ ತಾತ್ಪರ್ಯ ವಿಷ್ಣು ತಾತ್ಪರ್ಯ ನಿರ್ಣಯ, ಮಾಯಾವಾದ ಖಂಡನೆ ಮುಂತಾದವು.

ಮಧ್ವಾಚಾರ್ಯರು ಸಿದ್ಧಾಂತವು ಮುಂದೆ ಪದ್ಮನಾಭ ತೀರ್ಥರು, ನರಹರಿ ತೀರ್ಥರು, ವಿಜಯೇಂದ್ರ ತೀರ್ಥರು ಹಾಗೂ ವಾದಿರಾಜ ತೀರ್ಥರಿಂದ ಪ್ರಚಾರಗೊಂಡಿತು.

## ಬಸವೇಶ್ವರರು


ಬಸವೇಶ್ವರರು

ಮಧ್ಯಕಾಲದ ಕರ್ನಾಟಕದ ಸಮಾಜವನ್ನು ಸುಧಾರಿಸಲು ಹೋರಾಡಿದ ಆದ್ಯ ಪ್ರವರ್ತಕರಲ್ಲಿ ಬಸವೇಶ್ವರರು ಒಬ್ಬರಾಗಿದ್ದಾರೆ. ವೈದಿಕ ಮೂಲ ಧರ್ಮದಲ್ಲಿ ಬೇರೂರಿದ್ದ ಅಸಂಖ್ಯ ಧಾರ್ಮಿಕ ಆಚರಣಾ ವಿಧಿವಿಧಾನಗಳನ್ನು ಬದಿಗೊತ್ತಿ ಮಾನವೀಯ ಮೌಲ್ಯ ಆಧಾರಿತ ಸರಳ ವೀರಶೈವ ಸಿದ್ಧಾಂತವನ್ನು ಬಸವೇಶ್ವರರು ಹಾಗೂ ಅವರ ಅನುಯಾಯಿಗಳಾದ ಶರಣರು ಪ್ರಚಾರಪಡಿಸಿದರು. ಬಸವೇಶ್ವರರು ಈಗಿನ ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿಯ ಮಾದರಸ ಮತ್ತು ಮಾದಲಾಂಬಿಕೆಯ ಪುತ್ರರು. ಜಾತಿ ವ್ಯವಸ್ಥೆಯ ಕಡು ವಿರೋಧಿಯಾಗಿದ್ದ ಬಸವೇಶ್ವರರು ತಮ್ಮ ಉಪನಯನದ ನಂತರ ಯಜ್ಞೋಪವೀತವನ್ನು ಕಿತ್ತೆಸೆದು ಕೂಡಲಸಂಗಮಕ್ಕೆ ನಡೆದರು. ಅಲ್ಲಿ ಶೈವಗುರುಗಳ ಸಾನಿಧ್ಯದಲ್ಲಿ ಲಿಂಗದೀಕ್ಷೆಯನ್ನು ಪಡೆದು ಧ್ಯಾನಸಾಧನೆ ಮಾಡಿದರು.

ತಮ್ಮ ಕಾರ್ಯದಕ್ಷತೆಯಿಂದ ಬಸವೇಶ್ವರರು ಕಲಚೂರಿ ಅರಸ ಬಿಜ್ಜಳನ ಭಂಡಾರದ ಅಧಿಕಾರಿಯಾಗಿದ್ದರು. ಉನ್ನತಾಧಿಕಾರದಲ್ಲಿದ್ದರೂ ಹಣ, ಅಧಿಕಾರ, ಅಧಿಪತ್ಯ ಇವ್ಯಾವುದರಿಂದಲೂ ಇವರು ವಿಚಲಿತರಾಗಲಿಲ್ಲ. ತಮ್ಮ ಇಡೀ ಜೀವಮಾನವನ್ನು ಸಮಾಜ ಮತ್ತು ಧರ್ಮದಲ್ಲಿನ ಅನಿಷ್ಟ ಪದ್ಧತಿಗಳನ್ನು ತೊಡೆದುಹಾಕಲು ಮೀಸಲಿರಿಸಿದರು. ಸಮಾಜ ಧರ್ಮದ ಪುನಶ್ಚೇತನಕ್ಕೆ ಟೊಂಕಕಟ್ಟಿದರು. ಈ ಸಾಮಾಜಿಕ, ಧಾರ್ಮಿಕ ಚಳವಳಿಯನ್ನು ಬಸವಣ್ಣನವರು ಮಂಗಳವೇಡಿಯಲ್ಲಿ ಆರಂಭಿಸಿದರು. ಶಿವಶರಣರಾದವರು ಜಾತಿಬೇಧವನ್ನು ಮಾಡಬಾರದು. ಆತ್ಮ ಪರಿಶುದ್ಧತೆಯ ಭಕ್ತಿಯೇ ಶಿವನನ್ನು ಸೇರುವ ನಿಜವಾದ ಮಾರ್ಗವೆಂದು ಪ್ರತಿಪಾದಿಸಿದರು. ಪ್ರತಿಯೊಬ್ಬರೂ ದುಡಿದು ತಿನ್ನಬೇಕು ಎನ್ನುವ ಸ್ವಾವಲಂಬನೆ ತತ್ವವನ್ನು ಪ್ರತಿಪಾದಿಸಿದ ಬಸವೇಶ್ವರರು ವೃತ್ತಿಯಲ್ಲಿ ಹಿರಿದು ಕಿರಿದು ಎಂಬುದಿಲ್ಲ ಎಂದು ಸಾರಿದರು. ತಮ್ಮ ಕಾಯಕ ತತ್ವದ ಮುಖಾಂತರ ಜನರಲ್ಲಿ ದುಡಿಮೆ ಸಂಸ್ಕೃತಿಯನ್ನು ಬೆಳೆಸಿದರು. 'ದೇಹವೇ ದೇಗುಲ' ಎಂದು ಸಾರಿದ ಬಸವಣ್ಣನವರು ಈ ತತ್ವವನ್ನು ಅನುಷ್ಠಾನಕ್ಕೆ ತರಲು ಪ್ರಯತ್ನಿಸಿದರು. ಈ ಬಗೆಯ ಸಂವೇದನೆಗಳು ಇಂದಿಗೂ ನಮ್ಮ ಸಮಾಜಕ್ಕೆ ದಾರಿದೀಪಗಳಾಗಿವೆ.

ಬಸವೇಶ್ವರರು ಬೀದರ್ ಜಿಲ್ಲೆ ಬಸವಕಲ್ಯಾಣದಲ್ಲಿ 'ಅನುಭವ ಮಂಟಪ' ಎಂಬ ಹೆಸರಿನ ಒಂದು ಶರಣರ ಆಧ್ಯಾತ್ಮ ಕೇಂದ್ರವನ್ನು ಆರಂಭಿಸಿದರು. ಇಲ್ಲಿ ಬಸವಾದಿಯಾಗಿ ಎಲ್ಲ ಶಿವಶರಣರು ಸಾಮಾಜಿಕ ಸಮಸ್ಯೆಗಳಾದ ಜಾತಿ ಮತ್ತು ಲಿಂಗ ತಾರತಮ್ಯ ಸಮಸ್ಯೆಗಳನ್ನು ಚರ್ಚಿಸುತ್ತಿದ್ದರು. ಹಾಗೆಯೆ ಧಾರ್ಮಿಕ

©KTBS Not to be republished

ಅಂಕುಡೊಂಕುಗಳನ್ನು ಚರ್ಚಿಸುತ್ತಿದ್ದರು ಹಾಗೂ ಅವುಗಳಿಗೆ ಚಿಕಿತ್ಸಕ ಸಂದೇಶಗಳ ಮೂಲಕ ಪರಿಹಾರವನ್ನು ಸೂಚಿಸುತ್ತಿದ್ದರು. ಇಷ್ಟೇ ಅಲ್ಲದೆ ಆಧ್ಯಾತ್ಮಿಕ ವಿಚಾರಗಳನ್ನು ಇಲ್ಲಿ ಚರ್ಚಿಸುತ್ತಿದ್ದರು. ಅಂತರಂಗ ಬಹಿರಂಗಗಳೆರಡೂ ಶುದ್ಧವಾಗಿರಬೇಕು. ಅದೇ ಸತ್ಯವೆಂದು ಸಾರುತ್ತಿದ್ದ ಶರಣರ ಆಧ್ಯಾತ್ಮಿಕ ಚಿಂತನೆಗಳು ಅವರ ನಡೆ ಮತ್ತು ನುಡಿಯ ಮೂಲಕ ಬಂದ ಅಂಶಗಳಾಗಿ ವಚನಗಳ ರೂಪಗಳಾಗಿ ಹೊರಹೊಮ್ಮಿದವು. ಸಾಮಾನ್ಯ ಜನರಿಗೂ ಅರ್ಥವಾಗುವಂತಿರುವ ವಚನಗಳಲ್ಲಿ ಶರಣರ ಜೀವನದ ಸಂದೇಶಗಳು ಒಂದು ಆಂದೋಲನವನ್ನು ಕಟ್ಟಿದವು. ಅವರು ಸರಳ ಕನ್ನಡವನ್ನು ಬಳಸುವ ಮೂಲಕ ತಮ್ಮ ಚಳವಳಿಯನ್ನು ಜನಮುಖಿಯಾಗಿಸಿದರು.

ಮಾನವರೆಲ್ಲ ಸಮಾನರು. ಹುಟ್ಟಿನಿಂದ ಯಾರೂ ಅಸ್ಪೃಶ್ಯರಲ್ಲ. ಆದರೆ ಆಚಾರ ವಿಚಾರಗಳಿಂದ ನಡೆ-ನುಡಿಗಳಿಂದ ಮಾತ್ರ ಅಸ್ಪೃಶ್ಯರಾಗುತ್ತಾರೆಂದು ವಚನಗಳ ಮೂಲಕ ಪ್ರಚುರಪಡಿಸಿದರು. ಅಂದಿನ ಸಮಾಜದಲ್ಲಿ ಬೇರೂರಿದ್ದ ಅನೇಕ ಸಮಾಜದ ಅಂಕುಡೊಂಕುಗಳನ್ನು, ಲೋಪದೋಷಗಳನ್ನು ಎತ್ತಿತೋರಿಸಿ ಅರಿವು ಮೂಡಿಸಲು ಪ್ರಯತ್ನಿಸಿದರು. ಈ ವಚನ ಚಳವಳಿಯಲ್ಲಿ ಜಾತಿ ಭೇದವಿಲ್ಲದೆ ಅವರ ಅನುಯಾಯಿಗಳು ಒಗ್ಗೂಡಿದರು. ಇವರಲ್ಲಿ ಪ್ರಮುಖರಾದವರು ಅಲ್ಲಮಪ್ರಭು, ಅಕ್ಕಮಹಾದೇವಿ, ಸಿದ್ಧರಾಮ, ಮೋಳಿಗೆ ಮಾರಯ್ಯ, ಅಂಬಿಗರ ಚೌಡಯ್ಯ, ಮಡಿವಾಳ ಮಾಚಯ್ಯ, ಮಾದಾರ ಚೆನ್ನಯ್ಯ, ಹರಳಯ್ಯ, ಕಿನ್ನರಿ ಬೊಮ್ಮಯ್ಯ ಮತ್ತು ಇನ್ನೂ ಅಸಂಖ್ಯರು. ಒಟ್ಟಾರೆ ಸಮಾನತೆಯ ಆಶಯವನ್ನು ಸಿದ್ಧಾಂತವಾಗಿಸಿಕೊಂಡಿದ್ದ ಬಸವೇಶ್ವರರು ಮತ್ತು ವಚನಕಾರರು ಸಮಾಜ, ಸಂಸ್ಕೃತಿ ಮತ್ತು ಸಾಹಿತ್ಯಕ್ಕೆ ಅಪಾರ ಕೊಡುಗೆಯನ್ನು ನೀಡಿದ್ದಾರೆ.

**ನಿಮಗಿದು ಗೊತ್ತೇ ?**

ಬಸವಣ್ಣನವರು ಒಂದು ವಚನದಲ್ಲಿ ಈ ರೀತಿ ತಿಳಿಸಿದ್ದಾರೆ. ಪ್ರತಿಯೊಬ್ಬ ವ್ಯಕ್ತಿಗೂ ಅವನ ಸ್ಥಾನ-ಮಾನ, ಬಡತನ-ಸಿರಿತನ, ಜಾತಿ-ಲಿಂಗ ಏನೇ ಇದ್ದರೂ ಶಿವನ ಕೃಪೆಗೆ ಮತ್ತು ಮೋಕ್ಷಕ್ಕೆ ಅರ್ಹನು. ಅದು ಯಾರಿಗೂ ಅಸಾಧ್ಯವಾದುದಲ್ಲ, ಏಕೆಂದರೆ ಶಿವನು ನಮ್ಮೊಳಗೆ ನೆಲೆಸಿದ್ದಾನೆ.

© KTBS Not to be republished

## ಅಭ್ಯಾಸಗಳು

**I. ಕೆಳಗೆ ಕೊಟ್ಟಿರುವ ವಾಕ್ಯಗಳನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿ.**

1. ಶಂಕರಾಚಾರ್ಯರು ಕೇರಳದ ______________ಲ್ಲಿ ಜನಿಸಿದರು.
2. ಜಗತ್ತು ಮಾಯೆ, ಬ್ರಹ್ಮ ಮಾತ್ರ ಸತ್ಯ ಎಂದು ಪ್ರತಿಪಾದಿಸಿದವರು ______________ .
3. ದ್ವೈತ ಸಿದ್ಧಾಂತದ ಪ್ರತಿಪಾದಕರು ______________ .

**II. ಕೆಳಕಂಡ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿರಿ.**

1. ಅದ್ವೈತ ಸಿದ್ಧಾಂತವನ್ನು ಕುರಿತು ವಿವರಿಸಿ.
2. ರಾಮಾನುಜಾಚಾರ್ಯರು ಪ್ರತಿಪಾದಿಸಿದ ಸಿದ್ಧಾಂತ ಯಾವುದು? ಅವರ ಮತವನ್ನು ಏನೆಂದು ಕರೆಯಲಾಗಿದೆ ?
3. ರಾಮಾನುಜಾಚಾರ್ಯರ ಸಿದ್ಧಾಂತದ ಸಾರವನ್ನು ವಿವರಿಸಿ.
4. ಮಧ್ವಾಚಾರ್ಯರು ಪ್ರತಿಪಾದಿಸಿದ ತತ್ವಗಳಾವುವು ?
5. ಬಸವೇಶ್ವರರ ಕಾಯಕ ತತ್ವದ ಬಗ್ಗೆ ಬರೆಯಿರಿ.

6. ಅನುಭವ ಮಂಟಪವನ್ನು ಯಾರು ಪ್ರಾರಂಭಿಸಿದರು ? ಅದರ ಉದ್ದೇಶಗಳಾವುವು ?

7. ಶಂಕರಾಚಾರ್ಯರು ರಚಿಸಿದ ಗ್ರಂಥಗಳನ್ನು ಹೆಸರಿಸಿ.

**III. ಚಟುವಟಿಕೆಗಳು :**

1. ವಚನಗಳನ್ನು ಸಂಗ್ರಹಿಸಿ ಒಂದು ಗುಂಪಿನಲ್ಲಿ ವಾಚಿಸಿ ವ್ಯಾಖ್ಯಾನಿಸಿ.
2. ಬಸವಣ್ಣನವರ ರೀತಿಯಲ್ಲಿನ ಇತರ ವಚನಕಾರರ ಚಿತ್ರ ಸಂಗ್ರಹಿಸಿ.
3. ವಚನಗಳ ಗಾಯನ ಸ್ಪರ್ಧೆಯನ್ನು ಏರ್ಪಡಿಸಿ.

**IV. ಯೋಜನೆಗಳು :**

1. ಶಿಕ್ಷಕರ ನೆರವಿನಿಂದ, ದ್ವೈತ ಮತ್ತು ಅದ್ವೈತ ಸಿದ್ಧಾಂತಗಳ ತತ್ವಗಳ ಬಗ್ಗೆ ಪ್ರಬಂಧ ಬರೆಯಿರಿ.
2. ಸ್ಥಳೀಯವಾಗಿ ಇರುವ ವಚನಗಾಯಕರನ್ನು ಶಾಲೆಗೆ ಆಹ್ವಾನಿಸಿ ವಿವಿಧ ವಚನಗಳನ್ನು ವಾಚನ ಮಾಡಿಸಿ.

©KTBS Not to be republished

## ಅಧ್ಯಾಯ–4


# ವಿಜಯನಗರ ಮತ್ತು ಬಹಮನಿ ರಾಜ್ಯ

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- *ವಿಜಯನಗರ ಹಾಗೂ ಬಹಮನಿ ರಾಜ್ಯಗಳ ಸ್ಥಾಪನೆ.*
- *ವಿಜಯನಗರ ಹಾಗೂ ಬಹಮನಿ ರಾಜ್ಯಗಳನ್ನು ಆಳಿದ ರಾಜವಂಶಗಳು.*
- *ಶ್ರೀಕೃಷ್ಣದೇವರಾಯನ ಸಾಧನೆ ಮತ್ತು ಕೊಡುಗೆಗಳು.*
- *ವಿಜಯನಗರ ಸಾಮ್ರಾಜ್ಯದ ಸಾಂಸ್ಕೃತಿಕ ಕೊಡುಗೆಗಳು.*
- *ಬಹಮನಿ ಸಾಮ್ರಾಜ್ಯದ ಸಾಂಸ್ಕೃತಿಕ ಸಾಧನೆಗಳು.*

ಭಾರತದ ಇತಿಹಾಸದಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆ ಒಂದು ಮಹತ್ವದ ಘಟನೆ. ದಕ್ಷಿಣ ಭಾರತದ ರಾಜಮನೆತನಗಳಾಗಿದ್ದ ದೇವಗಿರಿಯ ಯಾದವರು, ವಾರಂಗಲ್ಲಿನ ಕಾಕತೀಯರು, ಮಧುರೆಯ ಪಾಂಡ್ಯರು, ದ್ವಾರಸಮುದ್ರದ (ಹಳೇಬೀಡು) ಹೊಯ್ಸಳರು ಮತ್ತು ತಂಜಾವೂರಿನ ಚೋಳರು ಅಲ್ಲಾವುದ್ದೀನ್ ಖಿಲ್ಜಿಯ ಭೀಕರ ದಾಳಿಗೆ ತುತ್ತಾದರು. ಇದರ ಪರಿಣಾಮವಾಗಿ ರಾಜಕೀಯ ಅಭದ್ರತೆ, ಅಸ್ಥಿರತೆ, ಕ್ಷೋಭೆ, ಭಯ ಮತ್ತು ಧಾರ್ಮಿಕ ವಿಪ್ಲವ ಕಾಣಿಸಿಕೊಂಡವು. ಈ ಸನ್ನಿವೇಶದಲ್ಲಿ ವಿಜಯನಗರ ಸಾಮ್ರಾಜ್ಯ ಉದಯವಾಯಿತು. ಮೂರು ಶತಮಾನಗಳ ಕಾಲ ಆಳ್ವಿಕೆ ನಡೆಸಿತು. ಈ ಸಾಮ್ರಾಜ್ಯ 15ನೆಯ ಶತಮಾನದ ವೇಳೆಗೆ ದಕ್ಷಿಣದಲ್ಲಿ ಹಿಂದೂ ಮಹಾಸಾಗರ, ಪೂರ್ವದಲ್ಲಿ ಬಂಗಾಳ ಕೊಲ್ಲಿ ಮತ್ತು ಪಶ್ಚಿಮದಲ್ಲಿ ಅರೇಬಿಯನ್ ಸಮುದ್ರದವರೆಗೆ ಭೂ ಭಾಗಗಳಿಲ್ಲಿದ್ದ ರಾಜ್ಯಗಳ ಮೇಲೆ ತನ್ನ ಅಧಿಪತ್ಯವನ್ನು ಸ್ಥಾಪಿಸಿತ್ತು.

ಹಕ್ಕ–ಬುಕ್ಕರು ಸಾ.ಶ. 1336ರಲ್ಲಿ ತುಂಗಭದ್ರಾ ನದಿಯ ದಕ್ಷಿಣ ದಡದ ಮೇಲೆ ಈ ರಾಜ್ಯವನ್ನು ಸ್ಥಾಪಿಸಿದರು. ಮುಂದೆ ಹಂಪೆ ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಯಿತು. ಈ ಸಂದರ್ಭದಲ್ಲಿದ್ದ ಪ್ರಮುಖ ರಾಜಮನೆತನಗಳೆಂದರೆ ಉತ್ತರ ಭಾರತದಲ್ಲಿ ದೆಹಲಿ ಸುಲ್ತಾನರು, ಕೃಷ್ಣ ಗೋದಾವರಿ ಮುಖಜ ಭೂಮಿಯಲ್ಲಿ ಒರಿಸ್ಸಾದ ಗಜಪತಿಗಳು ಮತ್ತು ಉತ್ತರ ದಖ್ಖನ್ನಿನಲ್ಲಿ ಬಹುಮನಿಗಳು. ಇವರೆಲ್ಲರನ್ನು ಎದುರಿಸಿಕೊಂಡೇ ವಿಜಯನಗರ ಸಾಮ್ರಾಜ್ಯ ಉಳಿದು ಬೆಳೆಯಬೇಕಾಗಿತ್ತು.




ಸಂಗಮ ವಂಶದ (ಸಾ.ಶ.1336–1486) ಪ್ರಸಿದ್ಧ ದೊರೆಗಳೆಂದರೆ ಒಂದನೆಯ ಹರಿಹರ, ಬುಕ್ಕರಾಯ, ಎರಡನೆಯ ಹರಿಹರ ಮತ್ತು ಪ್ರೌಢದೇವರಾಯ. ಒಂದನೇ ಹರಿಹರ ವಿಜಯನಗರ ರಾಜ್ಯಕ್ಕೆ ಅಸ್ತಿಭಾರ ಹಾಕಿ ಕಡಿದಾದ ಬೆಟ್ಟಗಳ ನಡುವಣ ಪ್ರದೇಶದಲ್ಲಿ ಹೊಸ ರಾಜಧಾನಿಯನ್ನು ಅಭಿವೃದ್ಧಿಪಡಿಸಿದನು.

Not to be republished ©KTBS

## ಬುಕ್ಕರಾಯ

ಮಧುರೈಯ ಸುಲ್ತಾನನನ್ನು ಪದಚ್ಯುತಗೊಳಿಸಿ ಬುಕ್ಕನ ಪುತ್ರ ಕಂಪಣನು ಸಾಮ್ರಾಜ್ಯವನ್ನು ವಿಸ್ತರಿಸಿದನು. ಈ ದಿಗ್ವಿಜಯದ ಬಗ್ಗೆ ಗಂಗಾದೇವಿ ಬರೆದ 'ಮಧುರಾವಿಜಯಂ' ಸಂಸ್ಕೃತ ಕೃತಿಯು ಹೆಚ್ಚಿನ ವಿವರಣೆ ನೀಡುತ್ತದೆ. ಕೊಂಡವೀಡಿನ ರೆಡ್ಡಿಗಳನ್ನು ಸೋಲಿಸಿ ಪೆನುಗೊಂಡೆ ಪ್ರದೇಶವನ್ನು ಬುಕ್ಕನು ವಿಜಯನಗರಕ್ಕೆ ಸೇರಿಸಿದನು. ಬುಕ್ಕನು ಜೈನರ ಮತ್ತು ಶ್ರೀವೈಷ್ಣವರ ನಡುವಿನ ಧಾರ್ಮಿಕ ಕಲಹವನ್ನು ಬಗೆಹರಿಸಿ ಸರ್ವಮತ ಸಮನ್ವಯತೆಯ ನೀತಿಯನ್ನು ಎತ್ತಿ ಹಿಡಿದನೆಂದು ಶ್ರವಣಬೆಳಗೊಳದ ಶಾಸನ ತಿಳಿಸುತ್ತದೆ. ರಾಜಧಾನಿಯಲ್ಲಿ ಕೋಟೆಯನ್ನು ಕಟ್ಟಿಸಿ, ದೇವಾಲಯಗಳನ್ನು ನಿರ್ಮಿಸಿ, ಕೃಷಿ ಚಟುವಟಿಕೆಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಿದನು. ಚೀನಾ ದೇಶದ ಮಿಂಗ್ ವಂಶದ ಸಾಮ್ರಾಟನ ಆಸ್ಥಾನಕ್ಕೆ ಬುಕ್ಕರಾಯ ರಾಯಭಾರಿಯನ್ನು ಕಳುಹಿಸಿದ್ದನು.

## ಎರಡನೆಯ ಹರಿಹರ

ಬುಕ್ಕರಾಯನ ಮಗನಾದ ಎರಡನೆಯ ಹರಿಹರನ 27 ವರ್ಷಗಳ ಆಡಳಿತದ ಅವಧಿಯಲ್ಲಿ ವಿಜಯನಗರವು ವಿಶಾಲ ಪ್ರದೇಶಗಳನ್ನು ಒಳಗೊಂಡಿತ್ತು. ಈತನು ಕೊಂಡವೀಡು, ಕರ್ನೂಲ್, ನೆಲ್ಲೂರು ಮತ್ತು ಕೋಟೆಗಳನ್ನು ಗೆದ್ದುಕೊಂಡನು. ಬಹಮನಿಯ ಸುಲ್ತಾನ ಮುಜಾಹಿದ್ ತೀರಿಕೊಂಡ ಕಾಲದಲ್ಲಿ ಈತನು ರಾಜ್ಯವನ್ನು ಗೋವೆಯಿಂದ ಕೊಂಕಣ ಕರಾವಳಿಯ ಉತ್ತರಕ್ಕೆ ವಿಸ್ತರಿಸಿದ. ಕೃಷ್ಣೆಯ ಉತ್ತರದ ಪಾಂಗಳ ಕೋಟೆಯನ್ನು 1398 ರಲ್ಲಿ ವಶಪಡಿಸಿಕೊಂಡನು.

> **ನಿಮಗಿದು ತಿಳಿದಿರಲಿ:**
>
> *ವೇದಗಳ ಭಾಷ್ಯಲೇಖನ ಹರಿಹರನ ಕಾಲದಲ್ಲಿ ಪೂರ್ಣವಾಯಿತು. ಹಾಗಾಗಿ "ವೈದಿಕ ಮಾರ್ಗಸ್ಥಾಪನಾಚಾರ್ಯ" ಎಂಬುದು ಹರಿಹರನ ಬಿರುದು. ತನ್ನ ಸಾಮ್ರಾಜ್ಯದ 26 ಪ್ರಮುಖ ನಗರಗಳಲ್ಲಿ ಸಂತೆಗಳನ್ನು ವ್ಯವಸ್ಥೆಗೊಳಿಸಿದನು.*

## ಎರಡನೆಯ ದೇವರಾಯ (ಪ್ರೌಢದೇವರಾಯ) (1424–1446)

ಇವನಿಗೆ ಪ್ರತಾಪರುದ್ರ ಎನ್ನುವ ಮತ್ತೊಂದು ಹೆಸರೂ ಇತ್ತು. ಸಂಗಮ ವಂಶದಲ್ಲಿಯೇ ಶ್ರೇಷ್ಠ ದೊರೆ ಎರಡನೆಯ ದೇವರಾಯ (ಪ್ರೌಢದೇವರಾಯ). ಈತ 'ಗಜ ಬೇಂಟೆಕಾರ' ಎಂಬ ಬಿರುದು ಸಹ ಧರಿಸಿದ್ದ. ಎರಡನೆಯ ದೇವರಾಯನು ಒರಿಸ್ಸಾದ ಗಜಪತಿ ಕಪಿಲೇಂದ್ರನನ್ನು ಸೋಲಿಸಿ ಕೊಂಡವೀಡನ್ನು ಗೆದ್ದುಕೊಂಡನು. ಗಡಿ ಪ್ರದೇಶದ ನಾಯಕರುಗಳನ್ನು ಅಡಗಿಸಿ ಈಶಾನ್ಯ ಗಡಿಯನ್ನು ಕೃಷ್ಣಾನದಿಯವರೆಗೂ ವಿಸ್ತರಿಸಿದ. ನಂತರ ಕೇರಳವನ್ನು ಗೆದ್ದು, ಕೇರಳ, ಶ್ರೀಲಂಕಾದಿಂದ ಕಪ್ಪ ಕಾಣಿಕೆಗಳನ್ನು ಸ್ವೀಕರಿಸಿದನು. ಇದರಿಂದ "ದಕ್ಷಿಣಾಪಥದ ಚಕ್ರವರ್ತಿ" ಎನಿಸಿದ. ಈ ವಿಜಯಗಳಿಂದ ವಿಜಯನಗರ ಸಾಮ್ರಾಜ್ಯ ಸಿಂಹಳದ ಗಡಿಗಳಿಂದ ಗುಲ್ಬರ್ಗದವರೆಗೆ ಮತ್ತು ತೆಲಂಗಾಣ, ಮಲಬಾರ್‌ಗಳಿಗೆ ವಿಸ್ತರಿಸಿಕೊಂಡಿತು.


> **ನಿಮಗಿದು ತಿಳಿದಿರಲಿ:**
>
> *ನಿಕೋಲೊ ಕೊಂತಿ ಎಂಬ ಇಟಲಿಯ ಪ್ರವಾಸಿ ವಿಜಯನಗರಕ್ಕೆ ಬಂದಿದ್ದು, ಆತ ವಿಜಯನಗರದ ಬಗ್ಗೆ ಸ್ವಾರಸ್ಯಕರ ವರ್ಣನೆ ನೀಡಿದ್ದಾನೆ. ರಾಜಧಾನಿಯು 60 ಮೈಲಿ ಸುತ್ತಳತೆಯುಳ್ಳದ್ದಾಗಿದೆಯೆಂದು ಆತನು ತಿಳಿಸಿದ್ದಾನೆ.*

ನ್ಯೂನಿಜ್‌ನ ಪ್ರಕಾರ ಪ್ರೌಢದೇವರಾಯನಿಗೆ ಸಿಲೋನ್, ಪುಲಿಕಾಟ್, ಪೆಗು, ತೆನಾಸ್ಸೆರಿಂ (ಬರ್ಮಾ ಭಾಗ) ಮತ್ತು ಮಲಯದ ರಾಜರು ಕಪ್ಪಕಾಣಿಕೆಗಳನ್ನು ನೀಡುತ್ತಿದ್ದರು. ಸಾಂಪ್ರದಾಯಿಕ ಶತ್ರುಗಳಾದ ಬಹಮನಿ ಅಹಮದ್ ಷಾನನ್ನು

> **ನಿಮಗಿದು ತಿಳಿದಿರಲಿ:**
>
> *ಪರ್ಷಿಯಾ ದೇಶದ ರಾಯಭಾರಿ ಅಬ್ದುಲ್ ರಝಾಕ್ ಸಾ.ಶ. 1443 ಏಪ್ರಿಲ್ ಕೊನೆಯಲ್ಲಿ ವಿಜಯನಗರ ರಾಜಧಾನಿಯಲ್ಲಿದ್ದು, ಇದರ ವೈಭವದಿಂದ ಪ್ರಭಾವಿತನಾಗಿ ಹೇಳಿದ ಮಾತುಗಳು ಈ ಕೆಳಗಿವೆ. "ವಿಜಯನಗರದಂತಹ ನಗರವನ್ನು ಕಣ್ಣು ಕಂಡಿಲ್ಲ ಮತ್ತು ಕಿವಿ ಕೇಳಿಲ್ಲ. ಏಕೆಂದರೆ ಇದಕ್ಕೆ ಸರಿದೂಗುವ ಪಟ್ಟಣವೇ ಪ್ರಪಂಚದಲ್ಲಿ ಕಾಣಲಾಗದು".*

©KTBS
Not to be republished


ಬಿಜಾಪುರದವರೆಗೆ ಹಿಮ್ಮೆಟ್ಟಿಸಿ ಮುದಗಲ್ ಮತ್ತು ಬಂಕಾಪುರಗಳನ್ನು ತನ್ನ ಸ್ವಾಧೀನ ಮಾಡಿಕೊಂಡನು. ಎರಡನೇ ದೇವರಾಯನ ದಳಪತಿಯಾದ ಲಕ್ಕಣ್ಣದಂಡೇಶನು ಒಂದು ನೌಕಾ ವಿಜಯಯಾತ್ರೆಯನ್ನು ಕೈಗೊಂಡು ಯಶಸ್ವಿಯಾದನು.


ರಾಜ ಲಾಂಛನ

ಈತನು ಪರಮತ ಸಹಿಷ್ಣುವಾಗಿದ್ದನು. ರಾಜಧಾನಿಯಲ್ಲಿ ಮಸೀದಿಯನ್ನು ನಿರ್ಮಿಸಿದನು. ಜೈನ ಮತ್ತು ವೈಷ್ಣವ ದೇವಾಲಯಗಳು ನಿರ್ಮಾಣಗೊಂಡವು. ಸ್ವತಃ ಕವಿಯಾಗಿದ್ದ, ಈತನ ಆಸ್ಥಾನದಲ್ಲಿ ಸಂಸ್ಕೃತ ಕವಿ ಡಿಂಡಿಮ ಮತ್ತು ಕನ್ನಡ ಕವಿ ಲಕ್ಕಣದಂಡೇಶರು ಇದ್ದರು. ದೇವರಾಯನ ಕಾಲದಲ್ಲಿ ವೀರಶೈವ ಸಂಪ್ರದಾಯ ಹಾಗೂ ಸಾಹಿತ್ಯ ಪುನರುಜ್ಜೀವನ ಪಡೆದವು. ಸಾ.ಶ. 1446ರಲ್ಲಿ ಎರಡನೆಯ ದೇವರಾಯನ ಮರಣದ ನಂತರ ಬಂದ ದುರ್ಬಲ ಅರಸರೊಂದಿಗೆ ಸಂಗಮ ವಂಶದ ಆಳ್ವಿಕೆ ಮುಕ್ತಾಯವಾಯಿತು.

## ಕೃಷ್ಣದೇವರಾಯ (ಸಾ.ಶ. 1509–1529)

ತುಳುವ ಸಂತತಿಯ ನರಸನಾಯಕನ ಹಾಗೂ ಎರಡನೆಯ ಸತಿ ನಾಗಲಾಂಬಿಕೆಯ ಪುತ್ರನಾದ ಕೃಷ್ಣದೇವರಾಯನು ವಿಜಯನಗರ ಸಾಮ್ರಾಜ್ಯದ ಅರಸರಲ್ಲಿಯೇ ಅತ್ಯಂತ ಶ್ರೇಷ್ಠ ದೊರೆ. ಇವನ ಆಳ್ವಿಕೆಯ ಅವಧಿಯಲ್ಲಿ ವಿಜಯನಗರವು ತನ್ನ ಸಾಧನೆಗಳ ಪರಾಕಾಷ್ಠತೆಯನ್ನು ತಲುಪಿತು. ಜಗದ್ವಿಖ್ಯಾತರಾದ ಅಶೋಕ, ಸಮುದ್ರಗುಪ್ತ, ಹರ್ಷವರ್ಧನರ ಸಾಲಿನಲ್ಲಿ ನಿಲ್ಲುವ ಇವನು 20 ವರ್ಷಗಳ ಕಾಲ ಆಳ್ವಿಕೆ ಮಾಡಿದ. ಕೃಷ್ಣದೇವರಾಯ ಪಟ್ಟಕ್ಕೆ ಬಂದಾಗ ರಾಜ್ಯದ ಒಳ ಹಾಗೂ ಹೊರಗೆ ಜಟಿಲವಾದ ಸಮಸ್ಯೆಗಳಿದ್ದವು. ಹೊಸ ಜಲಮಾರ್ಗಗಳ ಮೂಲಕ ಆಗಮಿಸಿದ ಐರೋಪ್ಯರು ಇಲ್ಲಿ ನೆಲೆಗಳನ್ನು ಸ್ಥಾಪಿಸಲು ಆರಂಭಿಸಿದರು. ಬಹಮನಿ ರಾಜ್ಯದ ಐದು ಷಾಹಿ ರಾಜ್ಯಗಳು ಸುಲ್ತಾನರಾಗಿ ಹೊಸ ರೂಪ ಪಡೆದುಕೊಂಡು ಕೃಷ್ಣದೇವರಾಯನ ವಿರುದ್ಧ ಕದನಕ್ಕಿಳಿದರು. ಜೊತೆಗೆ ಉಮ್ಮತ್ತೂರು ಹಾಗೂ ಒರಿಸ್ಸಾದ ಅರಸರು ವಿಜಯನಗರದ ಮೇಲೆ ಹಗೆತನವನ್ನು ಸಾಧಿಸುತ್ತಲೇ ಇದ್ದರು.


ಕೃಷ್ಣದೇವರಾಯ


## ಕೃಷ್ಣದೇವರಾಯನ ಸೈನಿಕ ಸಾಧನೆಗಳು

ರಾಬರ್ಟ್ ಸ್ಯುಯೆಲ್ ಹೇಳುವಂತೆ ಕೃಷ್ಣದೇವರಾಯನು ಅಸಾಮಾನ್ಯ ಪರಾಕ್ರಮಿ, ಚತುರ ಸೇನಾನಿ ಮತ್ತು ರಾಜತಂತ್ರ ನಿಪುಣ. ಇವನು ಎಲ್ಲಾ ಯುದ್ಧಗಳನ್ನು ಜಯಿಸಿ ದಕ್ಷಿಣದಲ್ಲಿ ವಿಜಯನಗರ ಸಾಮ್ರಾಜ್ಯವನ್ನು ವಿಸ್ತರಿಸಿದನು. ಕೃಷ್ಣದೇವರಾಯ ಪಟ್ಟಾಭಿಷಿಕ್ತನಾಗುವ ಹೊತ್ತಿಗೆ ಆಂತರಿಕ ಕಲಹಗಳಿಂದಾಗಿ ವಿಜಯನಗರದ ಕಾನೂನು–ಸುವ್ಯವಸ್ಥೆ ಹದಗೆಟ್ಟಿತ್ತು. ಸಾ.ಶ.1510 ರಿಂದ 1521ರವರೆಗಿನ ಆಳ್ವಿಕೆಯು ಧೀರ್ಘಕಾಲದ ಮುತ್ತಿಗೆ, ಯುದ್ಧ ಮತ್ತು ವಿಜಯಗಳಿಂದ ತುಂಬಿದೆ. ಸುಮಾರು 14 ಪ್ರಮುಖ ಯುದ್ಧಗಳನ್ನು ಕೈಗೊಂಡನು. ಅವುಗಳು ಬಹಮನಿ, ಬಿಜಾಪುರದ ಆದಿಲ್‌ಶಾಹಿ, ಅಹಮದ್ ನಗರದ ನಿಜಾಂಶಾಹಿ, ಗೋಲ್ಕೊಂಡದ ಕುತುಬ್‌ಶಾಹಿ, ಒರಿಸ್ಸಾದ ಗಜಪತಿ ಹಾಗೂ ಪಾಳೇಗಾರರೊಂದಿಗೆ ನಡೆದವು. 1509ರಲ್ಲಿ ಯೂಸುಫ್ ಆದಿಲ್‌ಶಾಹನು ಇತರ ಶಾಹಿ ಮನೆತನಗಳೊಂದಿಗೆ ಒಟ್ಟಾಗಿ ವಿಜಯನಗರದ ಮೇಲೆ ಯುದ್ಧ ಘೋಷಿಸಿದನು. ಯುದ್ಧದಲ್ಲಿ ಬಿಜಾಪುರದ ಆದಿಲ್‌ಶಾಹಿ ಮರಣ ಹೊಂದಿದನು. ಈ ಸಮಯದಲ್ಲಿ ಕೃಷ್ಣದೇವರಾಯನು ರಾಯಚೂರು

© KTBS Not to be republished

ದೋ ಆಬ್‌ನ್ನು ವಶಪಡಿಸಿಕೊಂಡನು. ಜೊತೆಗೆ ಕೃಷ್ಣದೇವರಾಯನು ಬಂಧನದಲ್ಲಿದ್ದ ಮಹಮದ್ ಶಾಹನನ್ನು ಬಿಡುಗಡೆಗೊಳಿಸಿ ಬಹಮನಿಯ ರಾಜನನ್ನಾಗಿಸಿದನು. ಹಾಗಾಗಿ 'ಯವನರಾಜ್ಯ ಪ್ರತಿಷ್ಠಾಪನಾಚಾರ್ಯ' ಎಂಬ ಬಿರುದು ಧರಿಸಿದನು. ಈ ಯುದ್ಧಗಳು ಈಗಾಗಲೇ ಅವನತಿಯ ಹಾದಿಯಲ್ಲಿದ್ದ ಬಹಮನಿಯರ ಶಕ್ತಿಯನ್ನು ಪೂರ್ಣವಾಗಿ ನಾಶಮಾಡಿತು. ನಂತರ ಉಮತ್ತೂರಿನ ಪಾಳೇಯಗಾರ ಗಂಗಾರಾಯನ ವಿರುದ್ಧ ಆಕ್ರಮಣ ಕೈಗೊಂಡನು. ಈ ಭಾಗವನ್ನು ಶ್ರೀರಂಗಪಟ್ಟಣ ಪ್ರಾಂತ್ಯಕ್ಕೆ ಸೇರಿಸಲಾಯಿತು.

ಕೃಷ್ಣದೇವರಾಯ ಕೈಗೊಂಡ ದಂಡಯಾತ್ರೆಗಳಲ್ಲಿ ಒರಿಸ್ಸಾದ ಗಜಪತಿಯೊಂದಿಗಿನ ಯುದ್ಧ ಮುಖ್ಯವಾಗಿದೆ. ಈ ಯುದ್ಧವು 1512 ರಿಂದ 1518ರವರೆಗೆ ಧೀರ್ಘಕಾಲ ನಡೆಯಿತು. ಕೊಂಡವೀಡು, ವಿಜಯವಾಡ ಮತ್ತು ಕೊಂಡಪಳ್ಳಿಗಳನ್ನು ವಶಪಡಿಸಿಕೊಂಡನು. ಇವು ಒರಿಸ್ಸಾದ ಗಜಪತಿ ಪ್ರತಾಪರುದ್ರದೇವನ ದಕ್ಷಿಣ ಭಾಗಗಳು. ಒಡಿಸ್ಸಾದ ಗಜಪತಿ ಶರಣಾಗಿ ತನ್ನ ಮಗಳನ್ನು ಕೃಷ್ಣದೇವರಾಯನಿಗೆ ವಿವಾಹ ಮಾಡಿಕೊಟ್ಟನು. ಬಿಜಾಪುರದ ಇಸ್ಮಾಯಿಲ್ ಆದಿಲ್‌ಶಾ ರಾಯಚೂರನ್ನು 1520ರಲ್ಲಿ ವಶಪಡಿಸಿಕೊಂಡನು. ರಾಯಚೂರಿಗಾಗಿ ವಿಜಯನಗರ ಬಿಜಾಪುರ ಸುಲ್ತಾನರ ನಡುವೆ ಘೋರವಾದ ಯುದ್ಧ ನಡೆಯಿತು. ಪೋರ್ಚುಗೀಸರು ವಿಜಯನಗರಕ್ಕೆ ಸಹಾಯ ಮಾಡಿದರು. ಹಿಂದೆ ಪೋರ್ಚುಗೀಸರು ಗೋವಾ ವಶಪಡಿಸಿಕೊಳ್ಳಲು ಕೃಷ್ಣದೇವರಾಯ ಸಹಕಾರ ನೀಡಿದ್ದನು. ಯುದ್ಧದಲ್ಲಿ ರಾಯಚೂರು ಕೃಷ್ಣದೇವರಾಯನ ವಶವಾಯಿತು. ಈತನ ಆಳ್ವಿಕೆಯಲ್ಲಿ ವಿಜಯನಗರವು ಉತ್ತರದಲ್ಲಿ ಗೋದಾವರಿ ಮತ್ತು ಕೃಷ್ಣ ನದಿಗಳು, ಪೂರ್ವದಲ್ಲಿ ಬಂಗಾಳ ಕೊಲ್ಲಿ, ಪಶ್ಚಿಮದಲ್ಲಿ ಅರಬ್ಬಿ ಸಮುದ್ರ ಮತ್ತು ದಕ್ಷಿಣದಲ್ಲಿ ಹಿಂದೂ ಮಹಾಸಾಗರದವರೆಗೂ ವಿಸ್ತರಿಸಿತು.




©KTBS Not to be republished

ಕೃಷ್ಣದೇವರಾಯ ಯುದ್ಧ ನೈಪುಣ್ಯತೆಯ ಜೊತೆಗೆ ಸಮರ್ಥ ಆಡಳಿತಗಾರನಾಗಿದ್ದನು. ರಾಜ್ಯಾಡಳಿತ ವಿಚಾರದಲ್ಲಿ ಈತನಿಗೆ ಇದ್ದ ವ್ಯಾವಹಾರಿಕ ಜ್ಞಾನವನ್ನು ಇವನು ಬರೆದ 'ಆಮುಕ್ತ ಮಾಲ್ಯದ' ತೆಲುಗು ಕೃತಿಯು ತಿಳಿಸುತ್ತದೆ. ಕೃಷಿ ವಿಸ್ತರಣೆಗೆ ನೀರಾವರಿ ಅನುಕೂಲತೆಗಳನ್ನು ಒದಗಿಸಿದನು. ಪೋರ್ಚುಗೀಸರ ಸ್ನೇಹದಿಂದ ವಿದೇಶೀ ವ್ಯಾಪಾರ ಹೆಚ್ಚಿಸಿಕೊಂಡನು. ಮದುವೆಯ ಮೇಲಿನ ತೆರಿಗೆಯನ್ನು ರದ್ದುಗೊಳಿಸಿದನು. ಕಲೆ, ಸಾಹಿತ್ಯ ಮತ್ತು ಧರ್ಮಗಳ ಶ್ರೇಷ್ಠ ಪೋಷಕನಾಗಿದ್ದನು. ಈತನ ಆಸ್ಥಾನದಲ್ಲಿ ಅಷ್ಟ ದಿಗ್ಗಜರೆಂಬ ತೆಲುಗು ಭಾಷೆಯ ಕವಿಗಳಿದ್ದರು. ಸ್ವತ: ಕವಿಯಾಗಿದ್ದ ಕೃಷ್ಣದೇವರಾಯ 'ಜಾಂಬವತಿ ಕಲ್ಯಾಣ' ಎಂಬ ನಾಟಕವನ್ನು ಸಂಸ್ಕೃತ ಭಾಷೆಯಲ್ಲಿ ರಚಿಸಿದನು. ಅಲ್ಲಸಾನಿ ಪೆದ್ದಣ್ಣ, ನಂದಿ ತಿಮ್ಮಣ್ಣ, ದೂರ್ಜಟಿ, ತೆನಾಲಿರಾಮಕೃಷ್ಣ ಮುಂತಾದವರು ಆಸ್ಥಾನದ ತೆಲುಗು ಕವಿಗಳಾಗಿದ್ದರು.

**ಚಟುವಟಿಕೆ :**

*ತೆನಾಲಿ ರಾಮಕೃಷ್ಣನ ಬುದ್ಧಿವಂತಿಕೆಗೆ ಸಂಬಂಧಿಸಿದ ಕಥೆಗಳನ್ನು ಓದಿರಿ.*

ಕೃಷ್ಣದೇವರಾಯನು ಹಂಪೆಯಲ್ಲಿ ಕೃಷ್ಣ ದೇವಾಲಯವನ್ನು ಕಟ್ಟಿಸಿದನು. ಈತನು ತನ್ನ ಕಾಲದಲ್ಲಿ ಇನ್ನೂ ಕೆಲವು ದೇವಾಲಯಗಳ ಜೊತೆಗೆ ಹಂಪೆಯ ವಿರೂಪಾಕ್ಷ ದೇವಾಲಯದ ಮಹಾ ರಂಗಮಂಟಪವನ್ನು ನಿರ್ಮಿಸಿದನು. ಎಲ್ಲ ಮತೀಯರು ಈತನ ಕಾಲದಲ್ಲಿ ಧಾರ್ಮಿಕ ಸ್ವಾತಂತ್ರ್ಯ ಹೊಂದಿದ್ದರೆಂದು ಪೋರ್ಚುಗೀಸ್ ಪ್ರವಾಸಿಗಳಾದ ಪಾಯೆಸ್ ಮತ್ತು ಬರ್ಬೋಸ ಹೇಳುತ್ತಾ, ಇವನ ಘನತೆ ಮತ್ತು ಸಾಮರ್ಥ್ಯವನ್ನು ಕೊಂಡಾಡಿದ್ದಾರೆ.

### ವಿಜಯನಗರ ಸಾಮ್ರಾಜ್ಯದ ಪತನ

ಕೃಷ್ಣದೇವರಾಯನ ನಂತರ ಅಚ್ಯುತರಾಯ ಮತ್ತು ಸದಾಶಿವರಾಯ ಆಳಿದರು. ಕೃಷ್ಣದೇವರಾಯನ ಅಳಿಯ ಅರವೀಡು ವಂಶದ ರಾಮರಾಯನು ಆಡಳಿತವನ್ನು ನಿಯಂತ್ರಿಸಿದನು. ರಾಮರಾಯನು ತನ್ನ 23 ವರ್ಷಗಳ ಆಳ್ವಿಕೆಯಲ್ಲಿ ಕೈಗೊಂಡ ಯುದ್ಧಗಳು ಸಾಮ್ರಾಜ್ಯದ ಗೌರವವನ್ನು ಹೆಚ್ಚಿಸಿದ್ದರೂ, ಇದು ವಿಜಯನಗರಕ್ಕೆ ಅನೇಕ ಶತ್ರುಗಳನ್ನು ಸೃಷ್ಟಿಸಲು ಕಾರಣವಾಯಿತು.

***ನಿಮಗಿದು ತಿಳಿದಿರಲಿ:***

*ವಿಜಯನಗರ ಸಾಮ್ರಾಜ್ಯದಲ್ಲಿ ಪೆನುಗೊಂಡ, ಚಂದ್ರಗಿರಿ, ಪೆಡ್ಡೆಬೀಡು, ತಿರುವಾಡಿ (ತಿರುವಾಂಕೂರು), ಮುಳುವಾಯಿ (ಮುಳುಬಾಗಿಲು), ಸಾಂತಳಿಗೆ (ಶಿವಮೊಗ್ಗ ಪ್ರದೇಶ) ಮತ್ತು ಮಂಗಳೂರು ಪ್ರಮುಖ ಪ್ರಾಂತಗಳಾಗಿದ್ದವು.*

ದಖ್ಖನಿನ ಸುಲ್ತಾನರ ರಾಜ್ಯಗಳು ಆಗಾಗ ನಡೆಸುತ್ತಿದ್ದ ದಾಳಿಗೆ, ಪ್ರತೀಕಾರವಾಗಿ ರಾಮರಾಯನು ವಿಜಯಪುರ ಹಾಗೂ ಗೋಲ್ಕೊಂಡ ರಾಜ್ಯಗಳ ಪ್ರದೇಶಗಳನ್ನು ವಶಪಡಿಸಿಕೊಂಡಿದ್ದು ಕದನಕ್ಕೆ ಪ್ರಚೋದನೆ ನೀಡಿದವು. ವಿಜಯನಗರ ಸಾಮ್ರಾಜ್ಯದ ಏಳಿಗೆ ಮತ್ತು ಸಮೃದ್ಧಿಯ ಬಗ್ಗೆ ಮತ್ಸರ ಮತ್ತು ದ್ವೇಷಗಳನ್ನು ಹೊಂದಿದ್ದ ದಖ್ಖನಿನ ಸುಲ್ತಾನರು ಮತದ ಹೆಸರಿನಲ್ಲಿ ತಮ್ಮ ರಾಜಕೀಯ ಭಿನ್ನಾಭಿಪ್ರಾಯಗಳನ್ನು ಮರೆತು ಒಂದಾದರು.

ಸಾ.ಶ. 1565 ರಲ್ಲಿ ನಾಲ್ಕು ರಾಜ್ಯಗಳ ಒಕ್ಕೂಟ ಸೈನ್ಯ ವಿಜಯನಗರದ ಮೇಲೆ ದಾಳಿ ಮಾಡಿತು. ಇದರಲ್ಲಿ ರಾಮರಾಯನ ಸೈನ್ಯ ಸೋತಿತು ಮತ್ತು ಅವನು ಹತನಾದನು. ವಿಜಯ ಸಾಧಿಸಿದ ದಖ್ಖನಿನ ಸುಲ್ತಾನರ ಸೈನ್ಯವು ಭವ್ಯವಾಗಿದ್ದ ವಿಜಯನಗರವನ್ನು ಕೊಳ್ಳೆ ಹೊಡೆಯಿತು. ಇದರ ಫಲವಾಗಿ ಸಾಮ್ರಾಜ್ಯದ ರಾಜಧಾನಿ ಹಂಪೆಯು ಹಾಳು ಹಂಪೆಯಾಯಿತು. ಮುಂದೆ ಪೆನುಕೊಂಡ, ಚಂದ್ರಗಿರಿ, ಕೊನೆಗೆ ವೆಲ್ಲೂರುಗಳಿಂದ ಅರವೀಡು ವಂಶದ ಆಡಳಿತ ಸಾ.ಶ. 1646ರವರೆಗೆ ಮುಂದುವರೆಯಿತು. ಕರ್ನಾಟಕದಲ್ಲಿ ಮೈಸೂರು, ಕೆಳದಿ, ಚಿತ್ರದುರ್ಗ ಮುಂತಾದ ವಿಜಯನಗರದ ಸಾಮಂತರು ಸ್ವತಂತ್ರರಾದರು.

©KTBS Not to be republished

## ವಿಜಯನಗರದ ಸಾಂಸ್ಕೃತಿಕ ಕೊಡುಗೆಗಳು

**ಆಡಳಿತ:** ವಿಜಯನಗರ ಸಾಮ್ರಾಜ್ಯದ ಆಡಳಿತವು ಪಾರಂಪರಿಕವಾಗಿ ಮುಂದುವರೆಯಿತು. ರಾಜರೇ ಅಧಿಕಾರದ ಕೇಂದ್ರವಾಗಿದ್ದರು. ರಾಜರು ತಮ್ಮ ಜೇಷ್ಠ ಪುತ್ರನನ್ನೇ ಉತ್ತರಾಧಿಕಾರಿಯನ್ನಾಗಿ ಆಯ್ಕೆ ಮಾಡುತ್ತಿದ್ದರು. ವಿಕೇಂದ್ರಿಕೃತ ವ್ಯವಸ್ಥೆಯಿದ್ದರೂ ವಿಜಯನಗರವು ಪ್ರಬಲ ಕೇಂದ್ರಾಡಳಿತವನ್ನು ಹೊಂದಿತ್ತು. ಆಡಳಿತ ವ್ಯವಸ್ಥೆಯನ್ನು ಮಂತ್ರಿಮಂಡಲ ಸೇನಾಡಳಿತ ಮತ್ತು ಪ್ರಾಂತೀಯ ಮಾಂಡಲಿಕತ್ವವೆಂದು ವಿಂಗಡಿಸಲಾಗಿತ್ತು. ಒಬ್ಬ ನಾಯಕನಿಗೆ ಅಥವಾ ಪಾಳೆಯಗಾರನಿಗೆ ಸೈನಿಕ ಸೇವೆಯ ಷರತ್ತಿನ ಮೇಲೆ ರಾಜನು ಭೂಮಿಯನ್ನು ಕೊಡುತ್ತಿದ್ದ. ಪ್ರಾಂತೀಯ ಹಂತದಲ್ಲಿ ನಾಯಂಕರ ಅಥವಾ ಅಮರ ನಾಯಕರು (ನಾಯಕರು), ರಾಜ್ಯಮಂಡಲ, ಗ್ರಾಮಾಡಳಿತ ಹೀಗೆ ವಿವಿಧ ಬಗೆಗಳಿದ್ದವು. ತಿಮ್ಮರಸ ಮಹಾ ಪ್ರಧಾನ ಮಂತ್ರಿಯಾಗಿದ್ದನು. ಆಡಳಿತಾತ್ಮಕವಾಗಿ ಸಾಮ್ರಾಜ್ಯವು ರಾಜ್ಯ, ನಾಡು ಹಾಗೂ ಗ್ರಾಮಗಳೆಂಬ ಆಡಳಿತ ಘಟಕಗಳನ್ನು ಹೊಂದಿತ್ತು.

ಅರಸನು ನ್ಯಾಯಾಂಗ ವಿಚಾರಗಳಲ್ಲಿ ಪರಮಾಧಿಕಾರವನ್ನು ಪಡೆದಿದ್ದನು. ಪ್ರಾಂತಗಳಲ್ಲಿ ಪ್ರಾಂತಾಧಿಕಾರಿಯು ನ್ಯಾಯ ತೀರ್ಮಾನ ಮಾಡುತ್ತಿದ್ದನು. ಶಿಕ್ಷೆಗಳು ಉಗ್ರವಾಗಿದ್ದವು. ಗ್ರಾಮಗಳು ಆಡಳಿತ ವ್ಯವಸ್ಥೆಯ ಕೊನೆಯ ಘಟಕಗಳಾಗಿದ್ದು, ಅಲ್ಲಿ ಗ್ರಾಮಸಭೆಗಳು ಆಡಳಿತ ನಿರ್ವಹಿಸುತ್ತಿದ್ದವು. ಗೌಡ, ಕರಣಮ್ (ಶಾನುಭೋಗ), ತಳವಾರ ಗ್ರಾಮಾಡಳಿತದಲ್ಲಿ ನೆರವಾಗುತ್ತಿದ್ದರು. ನಾಡುಗಳಲ್ಲಿ ನಾಡಗೌಡರು ಮತ್ತು ಪಟ್ಟಣಗಳಲ್ಲಿ ಪಟ್ಟಣ ಸ್ವಾಮಿ ಅಥವಾ ಪಟ್ಟಣಶೆಟ್ಟಿ ಆಡಳಿತ ನೋಡಿಕೊಳ್ಳುತ್ತಿದ್ದರು.

ವಿಜಯನಗರ ಸಮರ್ಥವಾದ ಸೈನ್ಯವನ್ನು ಹೊಂದಿತ್ತು. ಖಾಯಂ ತಂಡ, ಸಾಮಂತರ ಸೈನ್ಯ ಮತ್ತು ಸುಸಭ್ಯ (ಇದು ರಾಜನ ರಕ್ಷಣಾ ಪಡೆಯಾಗಿತ್ತು) ಸೇನಾ ಎಂಬ ಮೂರು ಹಂತಗಳಿಂದ ಕೂಡಿತ್ತು. ಕಾಲುದಳ, ಅಶ್ವದಳ, ಗಜದಳ ಮತ್ತು ಫಿರಂಗಿಗಳು ಸೈನ್ಯದ ಪ್ರಮುಖ ಭಾಗಗಳು. ಸಾ.ಶ. 1368 ರಿಂದ ಯುದ್ಧದಲ್ಲಿ ಫಿರಂಗಿಗಳ ಉಪಯೋಗ ಆರಂಭವಾಯಿತು. ಬೃಹದಾಕಾರದ ಆನೆಗಳು ಇದ್ದವು. ಅರಬ್ ದೇಶದ ಕುದುರೆಗಳು ವಿಜಯನಗರದ ಆಕರ್ಷಣೆಯಾಗಿದ್ದವು. ಸೈನ್ಯದಲ್ಲಿ ನೌಕಾಪಡೆಯೂ ಇತ್ತು. ಯಾವ ಜಾತಿಯವರಾದರೂ ಸೈನ್ಯದಲ್ಲಿ ಸೇರಿ ಗೌರವದ ಸ್ಥಾನಮಾನ ಹೊಂದಬಹುದಿತ್ತು. ಒಕ್ಕಲಿಗರು, ಬೇಡರು ಪಾಳೆಯಗಾರರಾದರು. ಕೋಟೆ–ಕೊತ್ತಲಗಳು ಯುದ್ಧದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿದ್ದವು.

**ನಿಮಗಿದು ತಿಳಿದಿರಲಿ:**

**ವಿದೇಶಿ ಪ್ರವಾಸಿಗರು**

ವಿಜಯನಗರ ಕಾಲಘಟ್ಟದ ಬಗೆಗೆ ತಿಳಿಯಲು ವಿದೇಶಿ ಪ್ರವಾಸಿಗರ ಕಥನಗಳು ಮುಖ್ಯವಾಗಿವೆ. ಈ ಕಾಲಘಟ್ಟದಲ್ಲಿ ಅಸಂಖ್ಯಾತ ಪ್ರವಾಸಿಗರು ವಿಜಯನಗರಕ್ಕೆ ಭೇಟಿ ನೀಡಿದ್ದರು. ಈ ಪ್ರವಾಸಿ ಕಥನಗಳು ವಿಜಯನಗರದ ರಾಜಕೀಯ, ಆರ್ಥಿಕತೆ, ಸಮಾಜ ಮತ್ತು ಸಂಸ್ಕೃತಿ, ಸಮಕಾಲೀನ ಇತರ ರಾಜಮನೆತನಗಳ ಕುರಿತು ಮಾಹಿತಿ ನೀಡುವುವು. ವಿಜಯನಗರಕ್ಕೆ ಭೇಟಿ ನೀಡಿದ ಪ್ರಮುಖ ಪ್ರವಾಸಿಗರೆಂದರೆ, 1ನೆಯ ಹರಿಹರ – ಇಬನ್ ಬತೂತ (ಮೊರಾಕ್ಕೊ), ಪ್ರೌಢದೇವರಾಯ – ನಿಕೊಲೊ–ಡಿ–ಕೊಂತಿ (ವೆನಿಷಿಯಾ), ಅಬ್ದುಲ್ ರಜಾಕ್ (ಪರ್ಷಿಯಾ), ನಿಕಿಟನ್ (ರಷ್ಯ), 2ನೆ ನರಸಿಂಹ – ಲೊಡೆವಿಕೊ ದಿ ವರ್ತೆಮಾ (ಇಟಲಿ), ಕೃಷ್ಣದೇವರಾಯ – ಬಾರ್ಬೋಸಾ (ಪೋರ್ಚುಗೀಸ್), ಡೊಮಿಂಗೊ ಪಯಾಸ್ (ಪೋರ್ಚುಗೀಸ್), ಅಚ್ಯುತದೇವರಾಯ – ನ್ಯೂನಿಜ್ (ಪೋರ್ಚುಗೀಸ್), ರಕ್ಕಸತಂಗಡಿ ಯುದ್ಧದ ನಂತರ ಸೀಜರ್ ಫೆಡ್ರಿಕ್ (ವೆನಿಸ್), 1ನೆಯ ರಾಜ ವೆಂಕಟನ ನಿಧನನದ ನಂತರ ಬ್ಯಾರಡಸ್ (ಇಂಗ್ಲೆಂಡ್) ಮೊದಲಾದವರು ಇವರಲ್ಲಿ ಐರೋಪ್ಯರೆ ಹೆಚ್ಚಿರುವುದಕ್ಕೆ ಕಾರಣ ಯೂರೋಪ್‌ನಿಂದ ವ್ಯಾಪಾರಕ್ಕಾಗಿ ಪೂರ್ವದೇಶಗಳಿಗೆ ಜಲಮಾರ್ಗವನ್ನು ಕಂಡುಹಿಡಿಯಲಾಗಿತ್ತು. ಜೊತೆಗೆ ಕ್ರಮೇಣ ಅರಬ್ಬರ ಹಿಡಿತದಲ್ಲಿದ್ದ ವಿದೇಶಿ ವ್ಯಾಪಾರ ಪೋರ್ಚುಗೀಸರ ವಶವಾಗುತ್ತಾ ಸಾಗಿತ್ತು.

©KTBS Not to be republished

**ಚಟುವಟಿಕೆ :**

ಇಂದಿನ ಮೈಸೂರಿನ ದಸರಾ ಮತ್ತು ಅಂದಿನ ವಿಜಯನಗರ ಸಾಮ್ರಾಜ್ಯದ ದಸರಾ ಹಬ್ಬದ ಬಗ್ಗೆ ಹೋಲಿಸಿ ಮತ್ತು ವಿಶ್ಲೇಷಿಸಿ.

**ಸಾಮಾಜಿಕ ವ್ಯವಸ್ಥೆ :** ಸಮಾಜವು ಚಾತುರ್ವರ್ಣ ವ್ಯವಸ್ಥೆಯ ಮೇಲೆ ರೂಪುಗೊಂಡಿತ್ತು. ಹೀಗಿದ್ದರೂ ಅನೇಕ ವೃತ್ತಿ ಆಧಾರಿತ ಜಾತಿ ವ್ಯವಸ್ಥೆ ಜಾರಿಯಲ್ಲಿತ್ತು. ಕುಶಲ ಕಲೆಗಾರರು, ಕಮ್ಮಾರರು, ಅಕ್ಕಸಾಲಿಗರು, ಕಂಚುಗಾರರು, ಬಡಗಿಗಳು, ನೇಕಾರರು, ಸಮಗಾರರು (ಚಮ್ಮಾರರು) ಅಧಿಕ ಸಂಖ್ಯೆಯಲ್ಲಿದ್ದರು. ಬಾಲ್ಯವಿವಾಹ, ಸಹಗಮನ ಮತ್ತು ದೇವದಾಸಿ ಪದ್ಧತಿಗಳು ರೂಢಿಯಲ್ಲಿದ್ದವು. ಸಾಮಾನ್ಯವಾಗಿ ಏಕಪತ್ನಿತ್ವ ರೂಢಿಯಲ್ಲಿದ್ದರೂ, ದೊರೆಗಳು ಮತ್ತು ಶ್ರೀಮಂತರು ಬಹುಪತ್ನಿಯರನ್ನು ಹೊಂದಿರುತ್ತಿದ್ದರು. ವಿಜಯನಗರದಲ್ಲಿ ಸ್ತ್ರೀ ಜಟ್ಟಿಗಳು (ಕುಸ್ತಿಪಟುಗಳು), ಅರಮನೆ ಕಾವಲುಗಾರ್ತಿಯರು ಇದ್ದರು. ಹೋಳಿ, ದೀಪಾವಳಿ ಮತ್ತು ದಸರಾ ಹಬ್ಬಗಳನ್ನು ಸಾರ್ವಜನಿಕವಾಗಿ ಆಚರಿಸಲಾಗುತ್ತಿತ್ತು. ದಸರಾ ಹಬ್ಬವು ಹಂಪಿಯಲ್ಲಿ ರಾಜಾಶ್ರಯದಲ್ಲಿ ವೈಭವದಿಂದ ನಡೆಯುತ್ತಿತ್ತು. ಸಂಗೀತ, ನೃತ್ಯಗಳು ಹೆಚ್ಚಿನ ಜನಮನ್ನಣೆ ಪಡೆದಿದ್ದವು.

**ನಿಮಗಿದು ತಿಳಿದಿರಲಿ:**

- ಹೊನ್ನಮ್ಮ ಎಂಬುವವಳು 2 ನೇ ದೇವರಾಯನ ಆಸ್ಥಾನದಲ್ಲಿ ವರದಿಗಾರಳಾಗಿದ್ದಳು.
- ವಿಜಯನಗರ ಕಾಲದಲ್ಲಿ ಅತ್ಯಂತ ಜನಪ್ರಿಯ ಕ್ರೀಡೆ ಕುಸ್ತಿ. ಹರಿಯಕ್ಕ ಎಂಬುವಳು ಆ ಕಾಲದ ಖ್ಯಾತ ಮಹಿಳಾ ಕುಸ್ತಿಪಟು.

**ಆರ್ಥಿಕ ವ್ಯವಸ್ಥೆ:** ವಿಜಯನಗರವು ಆರ್ಥಿಕವಾಗಿ ಸಮೃದ್ಧವಾಗಿತ್ತು. ಭೂ ಕಂದಾಯ ರಾಜ್ಯದ ಆದಾಯದ ಪ್ರಮುಖ ಮೂಲವಾಗಿತ್ತು. ಕೃಷಿಕರು ಸಾಮಾನ್ಯವಾಗಿ ತಮ್ಮ ಉತ್ಪಾದನೆಯ ನಾಲ್ಕನೆಯ ಒಂದು $\left(\frac{1}{4}\right)$ ಭಾಗವನ್ನು ಸರ್ಕಾರಕ್ಕೆ ತೆರಿಗೆ ರೂಪದಲ್ಲಿ ಕೊಡುತ್ತಿದ್ದರು. ವೃತ್ತಿ ತೆರಿಗೆ, ಮನೆ ಕಂದಾಯ, ದಾರಿ ಸುಂಕ, ಸಂತೆ ಸುಂಕ, ವಾಣಿಜ್ಯ ತೆರಿಗೆ, ಆಮದು ಮತ್ತು ರಫ್ತು ತೆರಿಗೆಗಳು, ಸಾಮಂತರಿಂದ ಬರುವ ಕಪ್ಪಕಾಣಿಕೆಗಳು ರಾಜ್ಯದ ಇತರ ಆದಾಯದ ಮೂಲಗಳಾಗಿದ್ದವು. ಕೃಷಿ ಅರ್ಥವ್ಯವಸ್ಥೆಯ ಬೆನ್ನೆಲುಬಾಗಿತ್ತು. ಇವರು ವರ್ಷದಲ್ಲಿ ಮುಂಗಾರು ಮತ್ತು ಹಿಂಗಾರು ಬೆಳೆಗಳನ್ನು ಬೆಳೆಯುತ್ತಿದ್ದರು. ಜೋಳ, ರಾಗಿ, ಭತ್ತ, ಸಜ್ಜೆ, ಗೋಧಿ, ಅವರೆ, ಹೆಸರು, ಉದ್ದು, ತೊಗರಿ, ಎಳ್ಳು, ಶೇಂಗಾ, ಹತ್ತಿ, ಕಬ್ಬು, ತೆಂಗು ಮುಖ್ಯ ಬೆಳೆಗಳಾಗಿದ್ದವು. ವಿಜಯನಗರದ ಅರಸರು ಬಾವಿ, ಕೆರೆ–ಕಾಲುವೆಗಳನ್ನು ಕಟ್ಟಿಸುವುದರ ಮೂಲಕ ಕೃಷಿ, ನೀರಾವರಿಯನ್ನು ಉತ್ತೇಜಿಸಿದರು. ಇವರ ಕಾಲದಲ್ಲಿ ಗೇಣಿ, ಗುತ್ತಿಗೆ, ಸಿದ್ಧಾಯ, ವಾರ ಮತ್ತು ಗಡಿ ಎಂಬ ಐದು ಬಗೆಯ ಭೂ ಹಿಡುವಳಿ ಪದ್ಧತಿಗಳಿದ್ದವು.

**ಚಟುವಟಿಕೆ :**

*ಹಿಂದಿನಕಾಲದ ದುಡ್ಡು, ಕಾಸುಗಳು ಮತ್ತು ನಾಣ್ಯಗಳನ್ನು ಅಥವಾ ಚಿತ್ರಗಳನ್ನು ಸಂಗ್ರಹಿಸಿ.*

ವಿಜಯನಗರ ಸಾಮ್ರಾಜ್ಯದ ಕಾಲವು ಕೈಗಾರಿಕೆ ಮತ್ತು ವಾಣಿಜ್ಯ ಕ್ಷೇತ್ರದಲ್ಲಿ ಮಹತ್ತರ ಪ್ರಗತಿಯನ್ನು ಸಾಧಿಸಿತ್ತು. ಮೆಣಸು, ಲವಂಗ, ಏಲಕ್ಕಿ ಮುಂತಾದ ಮಸಾಲೆ ಸಾಮಾನುಗಳು, ಪೆಟ್ಲುಪ್ಪು (ಸೋರುಪ್ಪು), ಕಬ್ಬಿಣದ ಅದಿರು, ವಜ್ರ, ಕಲ್ಲುಸಕ್ಕರೆ, ಕಸ್ತೂರಿ, ಶ್ರೀಗಂಧ, ಸುಗಂಧ ದ್ರವ್ಯ ಮುಂತಾದವುಗಳನ್ನು ರಫ್ತು ಮಾಡುತ್ತಿದ್ದರು. ಬಟ್ಟೆ ನೇಯ್ಗೆಯ ಮುಖ್ಯ ಕೈಗಾರಿಕೆಗಳು ಇದ್ದವು. ಚಿನ್ನದ ವರಹ, ಗದ್ಯಾಣ ಮತ್ತು ಪಗೋಡ, ಬೆಳ್ಳಿಯ ತಾರಾ, ತಾಮ್ರದ ಪಣ, ದುಡ್ಡು ಮತ್ತು ಕಾಸುಗಳು ಬಳಕೆಯಲ್ಲಿದ್ದವು.

**ನಿಮಗಿದು ತಿಳಿದಿರಲಿ :**

*ಅನಂತಪುರ ಜಿಲ್ಲೆಯ ಗುತ್ತಿ ಸಮೀಪದ ವಜ್ರಕರೂರ್ ವಜ್ರದ ಕೇಂದ್ರವಾಗಿತ್ತು. ಕ್ಯಾಲಿಕಟ್‌ನಲ್ಲಿ ನೀಲಗಳು ಹೇರಳವಾಗಿ ದೊರೆಯುತ್ತಿದ್ದವು. ಭಟ್ಕಳವು ಕಬ್ಬಿಣದ ಅದಿರಿನ ಕೇಂದ್ರವಾಗಿತ್ತು. ಪುಲಿಕಾಟ್‌ನಲ್ಲಿ ಗುಲಾಬಿ ಹೂಗಳ ಸುಗಂಧ ದ್ರವ್ಯ ತಯಾರಿಸಲಾಗುತ್ತಿತ್ತು. ವಿಜಯನಗರ ರಾಜಧಾನಿಯಲ್ಲಿ ಪೋರ್ಚುಗೀಸ್ ಪ್ರವಾಸಿ ಪೇಸ್‌ನು ದಿನಕ್ಕೊಂದು ಸಂತೆ ನಡೆಯುತಿತ್ತು ಎಂದಿದ್ದಾನೆ. ವಿರೂಪಾಕ್ಷ, ಕೃಷ್ಣ, ಪಾನ್‌ಸುಪಾರಿ, ವರದರಾಜಮ್ಮ, ಅಚ್ಯುತ, ವಿಠ್ಠಲ ಮತ್ತು ಮಾಲ್ಯವಂತ ಇವು ಪ್ರಮುಖ ಏಳು ಮಾರುಕಟ್ಟೆಗಳು.*

©KTBS Not to be republished

**ನಿಮಗಿದು ತಿಳಿದಿರಲಿ :**

ಬಂಕಾಪುರ, ಭಟ್ಕಳ, ಗೋವಾ, ಶಿವನಸಮುದ್ರ, ರಾಯಚೂರು, ಕಂಚಿ, ಚಿದಂಬರಂ, ಮಧುರೆ, ರಾಮೇಶ್ವರಗಳು ಈ ಕಾಲದ ಪ್ರಮುಖ ವ್ಯಾಪಾರಿ ಕೇಂದ್ರಗಳಾಗಿದ್ದವು. ವಿದೇಶಿ ವ್ಯಾಪಾರವು ಉತ್ತಮವಾಗಿತ್ತು. ಜಾವಾ, ಸುಮಾತ್ರ, ಬೋರ್ನಿಯೊ, ಚೀನ, ಅರೇಬೀಯಾ, ಪರ್ಷಿಯಾ, ಪೂರ್ವ ಆಫ್ರಿಕಾ, ಅಬಿಸೀನಿಯಾ, ಪೋರ್ಚುಗಲ್ ದೇಶಗಳೊಡನೆ ಮುಖ್ಯವಾಗಿ ವ್ಯಾಪಾರ ವಹಿವಾಟು ನಡೆಯುತ್ತಿತ್ತು. ಗೋವಾ, ಚೌಲ, ಹೊನ್ನಾವರ, ಬಾರಕೂರು, ಮಂಗಳೂರು, ನೀಲೇಶ್ವರ, ಭಟ್ಕಳ, ಕಲ್ಲಿಕೋಟೆ, ಮಚಲೀಪಟ್ಟಣ, ವಿಶಾಖಪಟ್ಟಣ ಇವರ ಮುಖ್ಯ ಬಂದರುಗಳು. ವಿದೇಶಗಳಿಗೆ ಬಟ್ಟೆ, ಅಕ್ಕಿ, ಕಬ್ಬಿಣ, ಪೆಟ್ಲುಪ್ಪು, ಸಕ್ಕರೆ ಮತ್ತು ಮಸಾಲೆ ಪದಾರ್ಥಗಳು ರಫ್ತಾಗುತ್ತಿದ್ದವು. ಕುದುರೆ, ಆನೆ, ಮುತ್ತು, ತಾಮ್ರ, ಹವಳ, ಪಾದರಸ, ಸಿಂಧೂರ, ಚೈನಾಸಿಲ್ಕ್ ಮತ್ತು ವೆಲ್ವೆಟ್ ಬಟ್ಟೆಗಳನ್ನು ಮುಖ್ಯವಾಗಿ ಆಮದು ಮಾಡಿಕೊಳ್ಳುತ್ತಿದ್ದರು.

**ಧಾರ್ಮಿಕ ವ್ಯವಸ್ಥೆ :** ವಿಜಯನಗರವು ಎಲ್ಲಾ ಮತಗಳಿಗೂ ಪ್ರೋತ್ಸಾಹ ನೀಡಿದ ಕೀರ್ತಿಗೆ ಪಾತ್ರವಾಗಿದೆ. ಶ್ರೀವೈಷ್ಣವ ಮತ್ತು ಜೈನ ಮತಾವಲಂಬಿಗಳು ತಮ್ಮ ತಮ್ಮ ಮತಾಭಿಪ್ರಾಯಗಳನ್ನು ಮರೆತು, ಪರಸ್ಪರ ಗೌರವದಿಂದ ಬಾಳುವಂತಹ ವಾತಾವರಣವಿತ್ತು. ವಿಜಯನಗರ ಸಾಮ್ರಾಜ್ಯವನ್ನಾಳಿದ ಆರಂಭದ ಅರಸರು ಶೈವ ಮತ್ತು ವೀರಶೈವ ಪೋಷಕರಾಗಿದ್ದರೆ, ನಂತರದವರು ವೈಷ್ಣವ ಮತದ ಉಪಾಸಕರಾಗಿದ್ದರು. ವಿಜಯನಗರ ರಾಜ್ಯವು ಮಹಾನವಮಿಯನ್ನು ವಿಶೇಷವಾಗಿ ಆಚರಿಸುತ್ತಿತ್ತು.

ವಿಜಯನಗರದಲ್ಲಿ ಮುಸ್ಲಿಮರಿಗೆ ಮಸೀದಿಗಳನ್ನು ಕಟ್ಟಿಸಲಾಗಿತ್ತು. ಪೋರ್ಚುಗೀಸರೊಂದಿಗೆ ವ್ಯಾಪಾರ ವೃದ್ಧಿಸಿಕೊಂಡ ವಿಜಯನಗರದ ಅರಸರು ಕ್ರೈಸ್ತ ಮತಕ್ಕೂ ಪ್ರೋತ್ಸಾಹ ಕೊಟ್ಟರಲ್ಲದೆ ಚರ್ಚುಗಳನ್ನು ಕಟ್ಟಲು ಅನುಮತಿ ನೀಡಿದರು.

**ನಿಮಗಿದು ತಿಳಿದಿರಲಿ:**

*ಕ್ರೈಸ್ತನೇ, ಯಹೂದಿಯೇ, ಮಹಮ್ಮದೀಯನೇ ಅಥವಾ ಹಿಂದೂವೇ ಯಾರಾದರೂ ನಿರಾತಂಕವಾಗಿ ಈ ರಾಜ್ಯದಲ್ಲಿ ಬಾಳಬಹುದು. – ಬರ್ಬೋಸಾ, ವಿದೇಶಿ ಪ್ರವಾಸಿ.*

**ಸಾಹಿತ್ಯ :** ಸಾಮ್ರಾಜ್ಯದಲ್ಲಿ ಏರ್ಪಟ್ಟಿದ್ದ ಶಾಂತಿ ಮತ್ತು ಸುವ್ಯವಸ್ಥೆ, ಆರ್ಥಿಕ ಪ್ರಗತಿಯ ಪರಿಣಾಮದಿಂದ ಸಾಹಿತ್ಯವು ಹುಲುಸಾಗಿ ಬೆಳೆಯಿತು. ಕನ್ನಡ, ಸಂಸ್ಕೃತ, ತೆಲುಗು ಮತ್ತು ತಮಿಳು ಭಾಷೆಯ ಸಾಹಿತ್ಯ ಕೃತಿಗಳು ರಚನೆಯಾದವು.

ರತ್ನಾಕರವರ್ಣಿ ಬರೆದ 'ಭರತೇಶ ವೈಭವ', ಚಾಮರಸರು ರಚಿಸಿದ 'ಪ್ರಭುಲಿಂಗಲೀಲೆ', ಕುಮಾರವ್ಯಾಸನ 'ಗದುಗಿನ ಭಾರತ' ಕನ್ನಡದ ಮುಖ್ಯ ಕಾವ್ಯಗಳಾಗಿವೆ. ಭೀಮಕವಿಯು ಪಾಲ್ಕುರಿಕೆ ಸೋಮನಾಥನ ತೆಲುಗು ಕೃತಿ 'ಬಸವ ಪುರಾಣ'ವನ್ನು ಕನ್ನಡದಲ್ಲಿ ಬರೆದಿದ್ದಾನೆ. ವೀರಶೈವರ ವಚನಗಳ ಸಂಕಲನವಾದ 'ಶೂನ್ಯ ಸಂಪಾದನೆ' ರಚನೆಯಾಯಿತು. ಲಕ್ಕಣದಂಡೇಶನ 'ಶಿವತತ್ತ್ವ ಚಿಂತಾಮಣಿ' ಅಲ್ಲದೆ ಕನ್ನಡದಲ್ಲಿ ಮಾನವ ವೈದ್ಯಶಾಸ್ತ್ರ, ಪಶುವೈದ್ಯ, ಕಾವ್ಯಶಾಸ್ತ್ರ, ಜೋತಿಷ್ಯ, ಪಾಕಶಾಸ್ತ್ರ ರಚನೆಯಾದವು. ಪುರಂದರದಾಸ, ಕನಕದಾಸ, ಶ್ರೀಪಾದರಾಯರು, ವ್ಯಾಸರಾಯರು ದಾಸ ಸಾಹಿತ್ಯವನ್ನು ಶ್ರೀಮಂತಗೊಳಿಸಿದರು. ಕನಕದಾಸರ 'ಮೋಹನ ತರಂಗಿಣಿ', 'ನಳ ಚರಿತೆ', 'ಹರಿಭಕ್ತಸಾರ' ಮತ್ತು 'ರಾಮಧಾನ್ಯ ಚರಿತೆ' ಮುಖ್ಯವಾದವು.

ಸಂಸ್ಕೃತದಲ್ಲಿ ವಿದ್ಯಾರಣ್ಯರ 'ಶಂಕರ ವಿಜಯ' ಮತ್ತು 'ಸರ್ವದರ್ಶನ ಸಂಗ್ರಹ' ರಚನೆಗೊಂಡವು. ಇವರ ಸೋದರ ಸಾಯಣಾಚಾರ್ಯರು 'ವೇದಾರ್ಥ ಪ್ರಕಾಶ' ಎಂಬ ವೇದಭಾಷ್ಯ ಮತ್ತು ಆಯುರ್ವೇದ ಸುಧಾನಿಧಿ, ಪುರುಷಾರ್ಥ ಸುಧಾನಿಧಿ ಮುಂತಾದ ಕೃತಿಗಳನ್ನು ರಚಿಸಿದರು. ಕಂಪಣರಾಯನ ಮಡದಿ ಗಂಗಾದೇವಿ

©KTBS Not to be republished

'ಮಧುರಾವಿಜಯಂ' ಎಂಬ ಕೃತಿಯನ್ನು ರಚಿಸಿದಳು. ಇದು ಕಂಪಣನ ದಂಡಯಾತ್ರೆಯನ್ನು, ಅಲ್ಲಿನ ಪವಿತ್ರ ಸ್ಥಳಗಳ ವರ್ಣನೆಯನ್ನು ತಿಳಿಸುತ್ತದೆ.

ಎರಡನೇ ದೇವರಾಯನ ಆಸ್ಥಾನ ಕವಿಯಾದ ಶ್ರೀನಾಥನು 'ಕವಿ ಚಕ್ರವರ್ತಿ' ಎಂಬ ಬಿರುದನ್ನು ಪಡೆದಿದ್ದನು. ಅಲ್ಲಸಾನಿ ಪೆದ್ದಣನ 'ಮನುಚರಿತಮು', ತಿಮ್ಮಣನ 'ಪಾರಿಜಾತಾಪಹರಣಂ', ತೆನಾಲಿ ರಾಮಕೃಷ್ಣನ 'ಉಭಟಾರಾಧ್ಯ ಚರಿತಂ' ಪ್ರಮುಖ ಕೃತಿಗಳಾಗಿವೆ.

ತಮಿಳು ಕವಿಗಳಾದ ಪರಂಜ್ಯೋತಿಯರ್, ವೀರ ರಾಘವರ್, ಮಂಡಲಪುರುಷ, ಜ್ಞಾನ ಪ್ರಕಾಶ, ಹರಿಹರ ಮುಂತಾದವರು ಕೃಷ್ಣದೇವರಾಯನ ಆಸ್ಥಾನದಲ್ಲಿದ್ದರು. ಪರಂಜ್ಯೋತಿಯರ್ ಕವಿಯು 'ತಿರುವಳಯಾಡಲ್ ಪುರಾಣಂ' ಕೃತಿಯನ್ನು ರಚಿಸಿದನು. ವಿಜಯನಗರ ಕಾಲದಲ್ಲಿ ಸಂಸ್ಕೃತ, ಕನ್ನಡ, ತೆಲುಗು, ತಮಿಳು ಭಾಷೆಗಳಿಗೆ ಪ್ರೋತ್ಸಾಹ ಸಿಕ್ಕಿತ್ತು.

## ಕಲೆ ಮತ್ತು ವಾಸ್ತುಶಿಲ್ಪ

ವಿಜಯನಗರದ ಅರಸರು ಕಲೆ ಮತ್ತು ವಾಸ್ತುಶಿಲ್ಪ ಕ್ಷೇತ್ರದಲ್ಲಿ ಮಾಡಿದ ಸಾಧನೆ ಸ್ಮರಣೀಯವಾಗಿದೆ. ಹಾಗಾಗಿ ಈ ಸಾಮ್ರಾಟರನ್ನು ವಾಸ್ತುಕಲೆಯ ಮಹಾನ್ ಪೋಷಕರು ಎನ್ನಲಾಗಿದೆ. ಇವರ ಕಾಲದಲ್ಲಿ ದೇವಾಲಯ, ಅರಮನೆ, ಕೋಟೆ, ಗೋಪುರ, ಮಹಾಮಂಟಪ, ಸಾರ್ವಜನಿಕ ಕಟ್ಟಡಗಳು, ಕೆರೆ ಕಟ್ಟೆ, ಕಾಲುವೆ, ಅಣೆಕಟ್ಟೆ ಮುಂತಾದವು ನಿರ್ಮಾಣವಾಗಿವೆ.

**ವಿಜಯನಗರದ ಕಲೆಯ ಪ್ರಮುಖ ವೈಶಿಷ್ಟ್ಯಗಳು :** ವಿಜಯನಗರದ ಅರಸರು ಚಾಲುಕ್ಯ, ಚೋಳ ಮತ್ತು ಹೊಯ್ಸಳ ವಾಸ್ತುಶೈಲಿಯ ಮಾದರಿಗಳನ್ನು ಮುಂದುವರೆಸಿದರು. ಇವರ ಶೈಲಿಯ ಪ್ರಧಾನ ಲಕ್ಷಣವೆಂದರೆ ಹಲವಾರು ಕಂಭಗಳ ಸಾಲುಗಳಿಂದ ಕೂಡಿದ ವಿಶಾಲ ಸಭಾ ಮಂಟಪ ಅಥವಾ ಕಲ್ಯಾಣ ಮಂಟಪಗಳು. ದೇವಾಲಯಗಳು ಎತ್ತರವಾದ ಗೋಪುರಗಳನ್ನು, (ರಾಯ ಗೋಪುರ) ಹೊಂದಿದ್ದು ಪತ್ರಾಕೃತಿಯ ಕಮಾನುಗಳನ್ನು ಮತ್ತು ಮಂಟಪಗಳನ್ನು ಹೊಂದಿವೆ. ಈ ಕಲೆಯಲ್ಲಿ ಅಲಂಕಾರಕ್ಕಿಂತ ಭವ್ಯತೆ, ರುದ್ರತೆ ಮತ್ತು ಗಾಂಭೀರ್ಯದ ಭಾವನೆಗಳಿಗೆ ಹೆಚ್ಚಿನ ಮಹತ್ವ ನೀಡಲಾಗಿದೆ. ಇವರು ಕಟ್ಟಡಗಳಿಗೆ ಬಿರುಸಾದ ಕಣಶಿಲೆ ಬಳಸಿದ್ದಾರೆ.

**ಚಟುವಟಿಕೆ :**

*ಹಂಪಿಗೆ ಪ್ರವಾಸ ಕೈಗೊಂಡು ಅಲ್ಲಿನ ದೇವಾಲಯಗಳು ಮತ್ತು ಕಟ್ಟಡಗಳ ಬಗ್ಗೆ ಹೆಚ್ಚಿನ ಮಾಹಿತಿ ಸಂಗ್ರಹಿಸಿರಿ.*

## ಪ್ರಮುಖ ದೇವಾಲಯಗಳು

ಇವರ ಕಾಲದಲ್ಲಿ ನಿರ್ಮಾಣವಾಗಿರುವ ದೇವಾಲಯಗಳನ್ನು ಹಂಪೆ, ಶೃಂಗೇರಿ, ತಿರುಪತಿ, ಕಂಚಿ, ಲೇಪಾಕ್ಷಿ, ಕಾರ್ಕಳ, ಮೂಡಬಿದ್ರಿ, ಭಟ್ಕಳ, ಚಿದಂಬರಂ, ಕಾಳಹಸ್ತಿ, ನಂದಿ, ಶ್ರೀಶೈಲ, ಕೋಲಾರ ಮುಂತಾದ ಕಡೆಗಳಲ್ಲಿ ಕಾಣಬಹುದು.

ಶೃಂಗೇರಿ ವಿದ್ಯಾಶಂಕರ ದೇವಾಲಯವು ವಿಜಯನಗರ ಕಾಲದ ಆರಂಭದ ದೇವಾಲಯಗಳಲ್ಲಿ ಪ್ರಮುಖವಾಗಿದೆ. ಈ ದೇವಾಲಯದ ವಿನ್ಯಾಸವು ಭಾರತದಲ್ಲಿಯೇ ಅಪೂರ್ವ ಮಾದರಿಯದಾಗಿದೆ. ವಿಜಯನಗರದಲ್ಲಿರುವ ಅತ್ಯಂತ ಪ್ರಾಚೀನ ದೇವಾಲಯವೆಂದರೆ ಹಂಪಿಯ ವಿರೂಪಾಕ್ಷ ದೇವಾಲಯ. ವಿಶಾಲವಾದ ಪ್ರಾಂಗಣವನ್ನು ಹೊಂದಿರುವ ಇದು ಸೊಗಸಾದ ಕೆತ್ತನೆಯ ಕಂಬಗಳು, ಅಲಂಕೃತ ಚಾವಣಿಗಳನ್ನು ಹೊಂದಿದೆ.

©KTBS Not to be republished



ವಿಜಯ ವಿಠ್ಠಲ ದೇವಾಲಯ



ಹಂಪಿ ವಿರೂಪಾಕ್ಷ ದೇವಾಲಯ

ಹಂಪಿಯಲ್ಲಿರುವ ವಿಜಯ ವಿಠ್ಠಲ ದೇವಾಲಯವು ಶೃಂಗಾರಮಯ ಕಲಾತ್ಮಕ ಕೆಲಸಕ್ಕೆ ಹೆಸರಾಗಿದೆ. ಸಪ್ತಸ್ವರಗಳನ್ನು ಧ್ವನಿಸುವ ಕಂಭಗಳು, ವಿಶಾಲವಾದ ಕಲ್ಯಾಣಮಂಟಪಗಳು, ಕಲ್ಲಿನಲ್ಲಿ ಕೆತ್ತಿದ ರಥ ಈ ದೇವಾಲಯದ ಸೌಂದರ್ಯವನ್ನು ಹೆಚ್ಚಿಸಿವೆ.



ಕಲ್ಲಿನರಥ

ಕೃಷ್ಣದೇವರಾಯ ನಿರ್ಮಿಸಿದ ಮಹಾನವಮಿ ದಿಬ್ಬದಲ್ಲಿ ನವರಾತ್ರಿ ಉತ್ಸವ ನಡೆಯುತ್ತಿತ್ತು. ರಾಜಧಾನಿಗೆ ಬಹಳ ದೂರದ ಪ್ರಾಂತಗಳಿಂದಲೂ ರಾಜರು, ಮಂಡಲೇಶ್ವರರೂ ಚಕ್ರವರ್ತಿಯ ಆಜ್ಞೆಯ ಮೇರೆಗೆ ಬಂದು ಸೇರುವರೆಂದು ಪರ್ಶಿಯಾದ ರಾಯಭಾರಿ ಅಬ್ದುಲ್ ರಜಾಕ್ ಹೇಳುತ್ತಾನೆ. ಕಮಲ್ ಮಹಲ್, ಗಜಶಾಲೆ, ರಾಣಿ ಸ್ನಾನಗೃಹ ಇಂಡೋ–ಮುಸ್ಲಿಂ ಶೈಲಿಯ ಉತ್ತಮ ಕಟ್ಟಡಗಳಾಗಿವೆ. ಲಕ್ಷ್ಮೀನರಸಿಂಹ, ಕಡಲೆಕಾಳು ಗಣೇಶ, ಸಾಸಿವೆಕಾಳು ಗಣೇಶ, ಉದ್ಧಾನ ವೀರಭದ್ರನ ಶಿಲ್ಪಗಳು ಆಕರ್ಷಕವಾಗಿವೆ. ವಿಜಯನಗರದ ಕಾಲದ ಹಂಪಿಯ ಕೋಟೆಯು ಭದ್ರವಾದ 7 ಸುತ್ತಿನಿಂದ ಕೂಡಿತ್ತು. ಪ್ರಸ್ತುತ 4 ಸುತ್ತುಗಳು ಉಳಿದುಕೊಂಡಿವೆ.

**ಸಂಗೀತ ಮತ್ತು ನೃತ್ಯ:** ವಿಜಯನಗರದ ದೊರೆಗಳು ಲಲಿತಕಲೆಗಳಾದ ಸಂಗೀತ, ನೃತ್ಯ, ನಾಟಕ, ಯಕ್ಷಗಾನ ಕಲೆಗಳನ್ನು ಪೋಷಿಸಿ ಬೆಳೆಸಿದರು. ಕಲಾವಿದರಿಗೆ ಅರಮನೆ ಮತ್ತು ದೇವಾಲಯಗಳಲ್ಲಿ ಹೆಚ್ಚಿನ ಗೌರವವಿತ್ತು. ಪುರಂದರದಾಸರು, ಕನಕದಾಸರು ತಮ್ಮ ಕೀರ್ತನಗಳ ಮೂಲಕ ಕರ್ನಾಟಕ ಸಂಗೀತಕ್ಕೆ ಅತ್ಯಮೂಲ್ಯ ಕೊಡುಗೆಗಳನ್ನು ನೀಡಿದ್ದಾರೆ. ನರ್ತಕಿಯರು ಸರ್ವಾಲಂಕಾರ ಭೂಷಿತರಾಗಿ ದೇವಾಲಯ ಮತ್ತು ಅರಮನೆಗಳಲ್ಲಿ ನೃತ್ಯ ಪ್ರದರ್ಶನ ನೀಡುತ್ತಿದ್ದರು.

**ನಿಮಗಿದು ತಿಳಿದಿರಲಿ:**

ಇವರು ಕಟ್ಟಿಸಿದ ದೇವಾಲಯಗಳು, ಕಟ್ಟಡಗಳು ಮತ್ತು ನಿರ್ಮಿಸಿದ ಮೂರ್ತಿಗಳನ್ನು ಉಲ್ಲೇಖಿಸಿ ಖ್ಯಾತ ಕಲಾ ಇತಿಹಾಸಕಾರರಾಗಿರುವ ಫರ್ಸಿಬ್ರೌನ್‌ರು ವಿಜಯನಗರ ವಾಸ್ತುಶಿಲ್ಪ ಶೈಲಿಯನ್ನು ದ್ರಾವಿಡ ಶೈಲಿಯ ಶ್ರೇಷ್ಠ ವಿಕಸಿತ ರೂಪ ಎಂದು ವರ್ಣಿಸಿದ್ದಾರೆ.

© KTBS Not to be republished

## ವಿಜಯನಗರ ಸಾಮ್ರಾಜ್ಯದ ಅಂತ್ಯ

ವಿಜಯನಗರದ ಚರಿತ್ರೆಯಲ್ಲಿ ಸಾ.ಶ. 1565ರಲ್ಲಿ ನಡೆದ ರಕ್ಕಸ–ತಂಗಡಿ ಯುದ್ಧವು ಅತ್ಯಂತ ನಿರ್ಣಾಯಕ ಯುದ್ಧಗಳಲ್ಲಿ ಒಂದು. ಇದು ವಿಸ್ತಾರವಾಗಿದ್ದ ಸಾಮ್ರಾಜ್ಯವನ್ನು ಮೂಲೆಗುಂಪು ಮಾಡಿ ದಕ್ಷಿಣ ಭಾರತದ ರಾಜಕೀಯ ಚಿತ್ರಣವನ್ನೇ ಬದಲಾಯಿಸಿತು. ಕೃಷ್ಣದೇವರಾಯನ ನಿಧನದ ನಂತರದಲ್ಲಿ ಅಧಿಕಾರಕ್ಕಾಗಿ ಆಂತರಿಕ ಸಂಘರ್ಷಗಳು ಕಂಡುಬಂದವು. ನಂತರದ ದೊರೆ ಅಚ್ಯುತ ದೇವರಾಯನ ನಿಧನ ಮತ್ತೊಮ್ಮೆ ಅಧಿಕಾರಕ್ಕಾಗಿ ಆಂತರಿಕ ಕದನಕ್ಕೆ ದಾರಿ ಮಾಡಿತು. ಸದಾಶಿವರಾಯನು ಪಟ್ಟಕ್ಕೆ ಬಂದರೂ ಆಡಳಿತ ಅಳಿಯ ರಾಮರಾಯನ ಕೈಯಲ್ಲಿತ್ತು. ರಾಮರಾಯ ತನ್ನ ಆಳ್ವಿಕೆಯಲ್ಲಿ ಕೈಗೊಂಡ ಯುದ್ಧಗಳು ಸಾಮ್ರಾಜ್ಯದ ವಿಸ್ತಾರ ಹೆಚ್ಚಿಸಿದ್ದರೂ ಅನೇಕ ಶತ್ರುಗಳನ್ನು ಸೃಷ್ಟಿಸಿತ್ತು. ರಾಮರಾಯನ ನೀತಿಗಳು ದಖನ್ ಸುಲ್ತಾನರನ್ನು ಒಂದುಗೂಡಿಸಿತು.

©KTBS Not to be republished


## ಬಹಮನಿ ರಾಜ್ಯ

ಸಾ.ಶ. 14ನೆಯ ಶತಮಾನದಲ್ಲಿ ಕಂಡುಬಂದ ಮತ್ತೊಂದು ಬದಲಾವಣೆಯೇ ಬಹಮನಿ ರಾಜ್ಯದ ಉದಯ. ಸಾ.ಶ. 1347ರಲ್ಲಿ ಅಲ್ಲಾಉದ್ದೀನ್ ಹಸನ್‌ಗಂಗು ಬಹಮನ್‌ಷಾನು ಇದನ್ನು ಸ್ಥಾಪಿಸಿದನು. ಸಾ.ಶ. 1347 ರಿಂದ 1527ರವರೆಗೆ ಬಹಮನಿ ಹಾಗೂ 1686ರವರೆಗೆ ಶಾಹಿ ಮನೆತನಗಳು ಆಳ್ವಿಕೆ ಮಾಡಿದವು. ಈ ಮನೆತನದಲ್ಲಿ ಮಹಮ್ಮದ್ ಷಾ, ಫಿರೋಜ್ ಷಾ, ಯೂಸೂಫ್ ಅಲಿ ಖಾನ್, ಒಂದನೇ ಇಬ್ರಾಹಿಂ ಆದಿಲ್ ಷಾ, ಪ್ರಮುಖರು.

ಬಹಮನಿಗಳ ರಾಜಕೀಯ ಚರಿತ್ರೆಯನ್ನು ಎರಡು ಹಂತಗಳಲ್ಲಿ ಗಮನಿಸಬಹುದು. ಮೊದಲ ಹಂತದಲ್ಲಿ ಗುಲ್ಬರ್ಗ ರಾಜಧಾನಿಯಾಗಿತ್ತು. ಇವರ ಮುಖ್ಯ ಪ್ರತಿಸ್ಪರ್ಧಿಗಳು ತೆಲಂಗಾಣ ಮತ್ತು ವಿಜಯನಗರದ ರಾಜರುಗಳಾಗಿದ್ದರು. ಎಂಟು ಸುಲ್ತಾನರು ಆಳ್ವಿಕೆ ನಡೆಸಿದರು. ಘಿಯಾಬುದ್ದೀನ್ ಅಹಮದ್ ರಾಜಧಾನಿಯನ್ನು ಬೀದರ್‌ಗೆ ಸ್ಥಳಾಂತರಿಸಿದನು. ಬಹಮನಿಗಳ ಅಂತ್ಯದವರೆಗು ಬೀದರ್ ರಾಜಧಾನಿಯಾಗಿತ್ತು.

**ಮಹಮ್ಮದ್ ಗವಾನ (ಸಾ.ಶ. 1411–1481):** ಸಾ.ಶ. 1347 ರಿಂದ ಸಾ.ಶ. 1426 ರವರೆಗೆ ಗುಲ್ಬರ್ಗ ಬಹಮನಿಯರ ರಾಜಧಾನಿಯಾಗಿತ್ತು. ಈ ಕಾಲಘಟ್ಟದಲ್ಲಿ ಮಹಮ್ಮದ್ ಗವಾನನು ನಿಷ್ಠೆ, ನಿಸ್ವಾರ್ಥತೆಯಿಂದ ಆಳ್ವಿಕೆ ನಡೆಸಿದನು. ಪ್ರಧಾನ ಮಂತ್ರಿಯಾಗಿ ಬಹಮನಿ ರಾಜ್ಯವನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ದನು. ಕೈರೋದಲ್ಲಿ ಇಸ್ಲಾಂ ಮತಶಾಸ್ತ್ರ ಮತ್ತು ಕಾನೂನು ಅಭ್ಯಸಿಸಿ, ಅರಬ್ಬೀ, ಪಾರಸೀ ಭಾಷೆಗಳಲ್ಲಿ ಪಾಂಡಿತ್ಯವನ್ನು ಗಳಿಸಿದನು. ಬಹಮನಿ ಸುಲ್ತಾನರಾದ ಹುಮಾಯೂನ್, ನಿಜಾಂಷಾ ಹಾಗೂ ಮೂರನೇ ಮಹಮದ್‌ಷಾನ ಆಳ್ವಿಕೆಯ ಕಾಲದಲ್ಲಿ ಮಂತ್ರಿಯಾಗಿ, ಪ್ರಧಾನ ಮಂತ್ರಿಯಾಗಿ ಸೇವೆ ಸಲ್ಲಿಸಿದನು. ಇವನು ತನ್ನ ದಿಗ್ವಿಜಯಗಳು ಹಾಗೂ ಅಚ್ಚುಕಟ್ಟಾದ ಆಡಳಿತ ಕ್ರಮದಿಂದ ಬಹಮನಿ ರಾಜ್ಯದ ಕೀರ್ತಿಯನ್ನು ಹೆಚ್ಚಿಸಿದನು. ಗವಾನನು ಕೊಂಕಣ, ಗೋವ ಮತ್ತು ಬೆಳಗಾವಿಯನ್ನು ವಶಪಡಿಸಿಕೊಂಡನು. ನಂತರ ಓರಿಸ್ಸಾದ ಮೇಲೆ ದಾಳಿ ಮಾಡಿ, ಅಲ್ಲಿಂದ ಕೊಂಡವೀಡು ಪ್ರದೇಶವನ್ನು ವಶಪಡಿಸಿಕೊಂಡನು. ಸಾ.ಶ. 1481ರಲ್ಲಿ ಕಂಚಿಯ ಮೇಲೆ ದಾಳಿ ಮಾಡಿ ಅಪಾರ ಸಂಪತ್ತನ್ನು ಲೂಟಿ ಮಾಡಿದನು. ಬಹಮನಿ ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಕಾರಣನಾದನು. ಬಹಮನಿ ರಾಜ್ಯದಲ್ಲಿ ಆಂತರಿಕ ಈರ್ಷೆಗಳು ಹೆಚ್ಚಾಗಿ ಗವಾನನ ಮೇಲೆ ಇಲ್ಲಸಲ್ಲದ ಆರೋಪಗಳನ್ನು ರಾಜನ ಬಳಿ ಅವರ ಶತ್ರುಗಳು ಮಾಡಿದರು. ಅವರ ಕುತಂತ್ರದ ರಾಜಕೀಯ ಗವಾನನು ರಾಜ ದ್ರೋಹದ ಆರೋಪವನ್ನು ಎದುರಿಸಬೇಕಾದ ಸಂದರ್ಭ ಬಂದಿತು. ಇದರ ಪರಿಣಾಮವಾಗಿ ರಾಜನ ಆಜ್ಞೆಯಂತೆ ಅವನ ಶಿರಚ್ಛೇದನವಾಯಿತು. ಇವನ ಮರಣದ ನಂತರ ಬಹಮನಿ ರಾಜ್ಯವು ದುರ್ಬಲಗೊಂಡು ಐದು ಭಾಗಗಳಲ್ಲಿ ಒಡೆದುಹೋಯಿತು.

**ನಿಮಗಿದು ತಿಳಿದಿರಲಿ:** *ಗವಾನನಿಗೆ ದೊರೆ ಮೂರನೇ ಮಹಮ್ಮದನು ನೀಡಿದ ಬಿರುದುಗಳೆಂದರೆ 'ಖ್ವಾಜಾ–ಇ–ಜಹಾನ್ ಮತ್ತು ಮಲ್ಲಿಕ್ ಉಲ್ತಜರ್.*




**ಬಹುಮನಿಯು ಐದು ರಾಜ್ಯಗಳಾಗಿ ವಿಂಗಡನೆ (ಸಾ.ಶ. 1518)**

| ಅಹಮದ್ ನಗರ | ಬಿಜಾಪುರ | ಬಿರಾರ್ | ಬೀದರ್ | ಗೋಲ್ಕೊಂಡ |
|---|---|---|---|---|
| (ನಿಜಾಮ್ ಷಾಹಿ) | (ಆದಿಲ್ ಷಾಹಿ) | (ಇಮಾದ್ ಷಾಹಿ) | (ಬರೀದ್ ಷಾಹಿ) | (ಕುತ್ಬ್ ಷಾಹಿ) |

©KTBS Not to be republished

### ಎರಡನೇ ಇಬ್ರಾಹಿಂ ಆದಿಲ್ ಷಾ (ಸಾ.ಶ. 1580–1627) :

ಆದಿಲ್ ಶಾಹಿಗಳಲ್ಲಿ ಶ್ರೇಷ್ಠ ದೊರೆಯಾದ ಎರಡನೇ ಇಬ್ರಾಹಿಂನು ತನ್ನ ಒಂಬತ್ತನೆಯ ವಯಸ್ಸಿನಲ್ಲಿ ಸಿಂಹಾಸನಾರೋಹಣ ಮಾಡಿದನು. ಈತನ ಆಡಳಿತಾವಧಿಯು 47 ವರ್ಷಗಳಾಗಿದ್ದು, ಚರಿತ್ರಾರ್ಹ ಘಟನೆಗಳನ್ನು ಒಳಗೊಂಡಿವೆ. ಈತನು ರಾಜಕೀಯವಾಗಿ ವಿಜಯಾಪುರವನ್ನು ವೈಭವದ ಉತ್ತುಂಗ ಶಿಖರಕ್ಕೆ ಏರಿಸಿ, ದಕ್ಷ ಆಡಳಿತವನ್ನು ನೀಡಿ, ಕಲೆ, ಸಾಹಿತ್ಯ, ಶಿಕ್ಷಣ ಕ್ಷೇತ್ರಗಳಲ್ಲಿ ಗಣನೀಯ ಪ್ರಗತಿಯನ್ನು ಸಾಧಿಸಿದನು.

"ಕಿತಾಬ್–ಏ–ನವರಸ" ಎಂಬ ಗ್ರಂಥದಲ್ಲಿ ಈತನು ಸರಸ್ವತಿ, ಗಣೇಶ ಮತ್ತು ನರಸಿಂಹರ ಸ್ತುತಿಯೊಂದಿಗೆ ಆರಂಭಿಸಿದ್ದು ಇದರ ವೈಶಿಷ್ಟ್ಯವಾಗಿದೆ. ಇದರಲ್ಲಿ ಮಹಮ್ಮದ್ ಪೈಗಂಬರರ ಬಗ್ಗೆಯೂ ಸ್ತುತಿಗಳಿವೆ. ಈ ಗ್ರಂಥವು ಇಬ್ರಾಹಿಂನ ವಿದ್ವತ್ತು, ಘನತೆ ಹಾಗೂ ಮತೀಯ ಉದಾರತೆಗೆ ಸಾಕ್ಷಿಯಾಗಿದೆ.

### ಬಹಮನಿ ಸುಲ್ತಾನರ ಸಾಂಸ್ಕೃತಿಕ ಕೊಡುಗೆಗಳು

ಬಹಮನಿ ಹಾಗೂ ಷಾಹಿ ಸುಲ್ತಾನರು ಸುಮಾರು ಎರಡು ಶತಮಾನಗಳ ಕಾಲ ಕರ್ನಾಟಕದಲ್ಲಿ ಆಳ್ವಿಕೆ ಮಾಡಿದರು. ಕರ್ನಾಟಕವು ಸೇರಿದಂತೆ ತಮಿಳುನಾಡಿನ ತಂಜಾವೂರಿನವರೆಗೆ ರಾಜ್ಯವನ್ನು ವಿಸ್ತರಿಸಿದ್ದರು. ಆಡಳಿತವನ್ನು ಇಸ್ಲಾಂ ಮತಶಾಸ್ತ್ರದ ಆಧಾರದ ಮೇಲೆ ವ್ಯವಸ್ಥೆಗೊಳಿಸಿದ್ದರು.

> **ನಿಮಗಿದು ತಿಳಿದಿರಲಿ:**
>
> ಎರಡನೇ ಇಬ್ರಾಹಿಂ ಆದಿಲ್ ಷಾಹನು ಮಹಿಪತಿ ದಾಸರ ಭಾಗವತ ಪ್ರವಚನದಿಂದ ಆಕರ್ಷಿತನಾಗಿ ಅವರನ್ನು ಆಸ್ಥಾನದಲ್ಲಿ ಖಾಜಾಂದಾರ್ ಅಧಿಕಾರಿಯನ್ನಾಗಿ ನೇಮಿಸಿದನು. ಮಹಿಪತಿ ದಾಸರ ಭಾಗವತದ ಭಕ್ತಿರಸವು ದಿವಾನ ಬಾದಶಹನ ಅಂತರಂಗದ ಅರಮನೆಯಲ್ಲಿ ಪ್ರವಹಿಸಿತು.

**ಆಡಳಿತ:** ಆಡಳಿತದಲ್ಲಿ ಕೇಂದ್ರ, ಪ್ರಾಂತೀಯ ಹಾಗೂ ಗ್ರಾಮ ಆಡಳಿತವೆಂಬ ಮೂರು ಭಾಗಗಳಿದ್ದವು. ಇವುಗಳಲ್ಲಿ ಕಂದಾಯ ನ್ಯಾಯ ಮತ್ತು ಸೈನ್ಯ ಆಡಳಿತಗಳಿದ್ದವು. ಕೇಂದ್ರ ಸರ್ಕಾರದಲ್ಲಿ ಸುಲ್ತಾನನೇ ಆಡಳಿತದ ಮುಖ್ಯಸ್ಥನಾಗಿರುತ್ತಿದ್ದ. ಮಂತ್ರಿಮಂಡಲಕ್ಕೆ 'ಮಜ್ಲಿಸ್–ಇ–ಇಲ್ವಿತ್' ಎಂದು ಕರೆಯುತ್ತಿದ್ದರು. ಉನ್ನತ ಅಧಿಕಾರಿಗಳು, ದಂಡನಾಯಕರು, ಉಲೇಮರು, ಅಮೀರರು ಸುಲ್ತಾನನ ಆಪ್ತರು ಮತ್ತು ಸಂಬಂಧಿಗಳು ಆಗಿದ್ದರು.

ಗವಾನನು ರಾಜ್ಯದಲ್ಲಿ ಹಿಂದೆ ಇದ್ದ ನಾಲ್ಕು ತರಫ್ (ಪ್ರಾಂತ) ಗಳನ್ನು ಎಂಟು ಘಟಕಗಳಾಗಿ ವಿಂಗಡಿಸಿದನು. ಹಾಗೆಯೆ ಪ್ರಾಂತಗಳನ್ನು 15 ಸರ್ಕಾರಗಳಾಗಿ ವಿಂಗಡಿಸಲಾಗಿತ್ತು. ಸುಭೇದಾರ ಎಂಬ ಅಧಿಕಾರಿಯು ಸರ್ಕಾರಗಳಲ್ಲಿ ಮುಖ್ಯ ಆಡಳಿತಾಧಿಕಾರಿಯಾಗಿದ್ದನು. ಸರ್ಕಾರಗಳನ್ನು ಪರಗಣಗಳಾಗಿ ವಿಂಗಡಿಸಲಾಗಿತ್ತು. ಕೊತ್ವಾಲ್, ದೇಶಮುಖ ಮತ್ತು ದೇಸಾಯಿ ಎಂಬ ಅಧಿಕಾರಿಗಳು ಪರಗಣದ ಅಧಿಕಾರಿಗಳಾಗಿದ್ದರು. ಆಡಳಿತದ ಕೊನೆಯ ಘಟಕವಾದ ಗ್ರಾಮಗಳಲ್ಲಿ ಪಟೇಲ, ಕುಲಕರ್ಣಿ ಮತ್ತು ಕಾವಲುಗಾರ ಎಂಬ ಅಧಿಕಾರಿಗಳಿದ್ದರು. ಗ್ರಾಮಾಡಳಿತ ಘಟಕಗಳು ಸ್ವಾಯತ್ತ ಸಂಸ್ಥೆಯಾಗಿದ್ದವು.

**ಕಂದಾಯ, ಸೈನ್ಯ ಮತ್ತು ನ್ಯಾಯಾಡಳಿತ :** ಅಮೀರ್–ಏ–ಜುಮ್ಲಾರು ಕಂದಾಯದ ಮುಖ್ಯಸ್ಥರಾಗಿದ್ದರು. ಭೂಕಂದಾಯವು ರಾಜ್ಯಾದಾಯದ ಮೂಲವಾಗಿತ್ತು. ಉತ್ಪತ್ತಿಯ $\frac{1}{3}$ ರಿಂದ $\frac{1}{2}$ ನೇ ಭಾಗದಷ್ಟನ್ನು ಭೂಕಂದಾಯ ರೂಪದಲ್ಲಿ ವಸೂಲಿ ಮಾಡಲಾಗುತ್ತಿತ್ತು. ಮನೆ, ಗಣಿ, ಹೊಗೆಸೊಪ್ಪು, ಹುಲ್ಲುಗಾವಲು, ವ್ಯಾಪಾರ, ವೃತ್ತಿ ಸೇರಿದಂತೆ 50 ಬಗೆಯ ತೆರಿಗೆಗಳಿದ್ದವು. ತೆರಿಗೆಯಿಂದ ಬಂದ ಹಣವನ್ನು ಅರಮನೆ, ಯುದ್ಧ, ಅಂಗರಕ್ಷಕರು, ಕೋಟೆ ಮತ್ತು ಇತರ ಕಟ್ಟಡಗಳ ನಿರ್ಮಾಣಕ್ಕೆ ಬಳಸುತ್ತಿದ್ದರು.

ಬಹಮನಿ ರಾಜ್ಯವು ಸೈನಿಕ ಬಲದ ಮೇಲೆ ನಡೆಯುತ್ತಿತ್ತು. ಸೈನ್ಯದ ಮೇಲಿನ ವೆಚ್ಚ ಬಹಳವಾಗಿತ್ತು. ಇವರ ರಾಜ್ಯದಲ್ಲಿ ನಾಲ್ಕು ಬಗೆಯ ಸೈನಿಕ ವರ್ಗಗಳಿದ್ದವು. ಖಾಯಂ ಸೈನ್ಯ, ಯುದ್ಧಕಾಲದಲ್ಲಿ ನೇಮಿಸಿಕೊಳ್ಳುತ್ತಿದ್ದ

©KTBS
Not to be republished

ಸೈನ್ಯ, ಧರ್ಮ ಯುದ್ಧಕ್ಕಾಗಿ ಸೇರಿಕೊಂಡ ಸೈನ್ಯ. ಸುಲ್ತಾನ ಹಾಗೂ ಕೋಟೆಯ ಕಾವಲುಪಡೆಗಳು. ಪದಾತಿ, ಅಶ್ವದಳ, ಗಜದಳ ಮತ್ತು ಸಿಡಿಮದ್ದು ಪಡೆಗಳು ಸೈನ್ಯದ ಮುಖ್ಯ ವಿಭಾಗಗಳಾಗಿದ್ದವು. ಆದಿಲ್‌ಶಾಹಿ ರಾಜ್ಯದ ಅನೇಕ ಕೋಟೆಗಳಲ್ಲಿ, ಬಿಜಾಪುರದ ಕೋಟೆ ಹೆಚ್ಚು ಸುಭದ್ರವಾಗಿತ್ತು.

ಸುಲ್ತಾನನು ರಾಜ್ಯದ ಸರ್ವೋಚ್ಚ ನ್ಯಾಯಾಧೀಶನಾಗಿದ್ದನು. ರೂಢಿ, ಸಂಪ್ರದಾಯ ಮತ್ತು ಇಸ್ಲಾಂ ಮತ ತತ್ವಗಳಿಗನುಸಾರವಾಗಿ ನ್ಯಾಯಪಾಲನೆ ಮಾಡುತ್ತಿದ್ದ. ಖಾಜಿಗಳು, ಹಿರಿಯ ಅಧಿಕಾರಿಗಳು ನ್ಯಾಯಪಾಲನೆಯಲ್ಲಿ ಸುಲ್ತಾನನಿಗೆ ಸಹಕರಿಸುತ್ತಿದ್ದರು. ಇವರ ದಕ್ಷ ಆಡಳಿತದಿಂದಾಗಿ ರಾಜ್ಯವು ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಪ್ರಗತಿಯನ್ನು ಸಾಧಿಸಿತು.

**ಆರ್ಥಿಕ, ಸಾಮಾಜಿಕ ಮತ್ತು ಧಾರ್ಮಿಕ ವ್ಯವಸ್ಥೆಗಳು:** ಕೃಷಿ, ಗ್ರಾಮ ಜೀವನದ ಮುಖ್ಯ ಉದ್ಯೋಗವಾಗಿತ್ತು. ನೇಕಾರಿಕೆ, ಸಕ್ಕರೆ, ಬೆಲ್ಲ ತಯಾರಿಕೆ, ನೂಲುವುದು, ನೇಯುವುದು, ಚರ್ಮಗಾರಿಕೆ, ಕುಂಬಾರಿಕೆ, ಬಡಿಗಿತನ, ಅಕ್ಕಸಾಲಿ, ಸುಗಂಧಿ, ಶಿಲ್ಪಗಾರಿಕೆ ಮುಂತಾದ ಉದ್ಯೋಗಗಳು ಅಸ್ತಿತ್ವದಲ್ಲಿದ್ದವು.

**ನಿಮಗಿದು ತಿಳಿದಿರಲಿ:**
*ಯುಸುಫ್ ಆದಿಲ್‌ಶಹನ ಹೆಂಡತಿ ಬೀಬಿಜಿ ಖಾನುಂ, ದಿಲ್‌ಷ್ ಅಘಾ, ಚಾಂದ ಬೀಬಿ, ಶಹರ ಭಾನು ಬೇಗಂರು ಈ ಮನೆತನದ ಪ್ರಖ್ಯಾತ ಮಹಿಳೆಯರಾಗಿದ್ದರು.*

ಧಾಬೋಲ್, ರಾಜಾಪುರ, ಚೌಲ ಮತ್ತು ಗೋವಾ ಈ ಕಾಲದ ಬಂದರುಗಳಾಗಿದ್ದವು. ರೇಷ್ಮೆ, ಮದ್ಯ, ಚಿನ್ನ, ಬೆಳ್ಳಿ, ತಾಮ್ರ, ತವರ, ಸೀಸ, ಗಾಜು ಮತ್ತು ಕುದುರೆಗಳು ಪ್ರಮುಖ ಆಮದುಗಳಾಗಿದ್ದವು. ವ್ಯಾಪಾರ ಹಾಗೂ ವೃತ್ತಿ ಸಂಘಗಳು ಅಸ್ತಿತ್ವದಲ್ಲಿದ್ದವು. **'ಹೊನ್ನು'** ಎಂಬ ಬಂಗಾರದ ನಾಣ್ಯ, **'ಲಾರಿ'**, **'ಟಂಕ'** ಎಂಬ ಬೆಳ್ಳಿ ನಾಣ್ಯಗಳು ಚಲಾವಣೆಯಲ್ಲಿದ್ದವು.

ಸಮಾಜದಲ್ಲಿ ಅವಿಭಕ್ತ ಪಿತೃಪ್ರಧಾನ ಕುಟುಂಬಗಳು ಮುಂದುವರೆದವು. ಜಾತಿ ಪದ್ಧತಿ ಹಾಗೂ ಬಹುಪತ್ನಿತ್ವಗಳು ರೂಢಿಯಲ್ಲಿದ್ದವು. ಭಕ್ತಿಪಂಥದ ಹರಿದಾಸರು ಮತ್ತು ಮುಸ್ಲಿಂ ಸೂಫಿ ಸಂತರು ಎರಡು ಸಮಾಜಗಳಲ್ಲೂ ಪ್ರೀತಿ ಬೆಳೆಸಲು ಪ್ರಯತ್ನಿಸಿದರು. ಮುಸ್ಲಿಂ ಸಮಾಜದಲ್ಲಿ ಸುನ್ನಿ, ಷಿಯಾ, ಸಯ್ಯದ್, ಶೇಖ್ ಮತ್ತು ಪಠಾಣ ಎಂಬ ವರ್ಗ ವಿಂಗಡಣೆಗಳಿದ್ದವು. ಮುಸ್ಲಿಂ ಸ್ತ್ರೀಯರಲ್ಲಿ ಪರದಾ ಪದ್ಧತಿ ರೂಢಿಯಲ್ಲಿತ್ತು.

**ಶಿಕ್ಷಣ, ಕಲೆ ಮತ್ತು ವಾಸ್ತುಶಿಲ್ಪ :** ಇವರ ಶೈಕ್ಷಣಿಕ ನೀತಿಯು ಇಸ್ಲಾಂ ಸಂಸ್ಕೃತಿಯನ್ನು ಬೆಳೆಸುವುದಾಗಿತ್ತು. ಮಕ್ತಬ ಎಂಬ ಶಾಲೆಗಳಿದ್ದವು. ಇವು ಮಸೀದಿಗಳ ನಿಯಂತ್ರಣದಲ್ಲಿದ್ದವು. ಮಕ್ತಬಗಳಲ್ಲಿ ಅಕ್ಷರ ಜ್ಞಾನ, ಮತ, ಕಾನೂನು, ಕಾವ್ಯ, ಅಲಂಕಾರಶಾಸ್ತ್ರಗಳನ್ನು ಬೋಧಿಸುತ್ತಿದ್ದರು. ಮದರಸಾಗಳು ಉನ್ನತ ಶಿಕ್ಷಣದ ಕೇಂದ್ರಗಳಾಗಿದ್ದವು. ಸ್ವತಃ ವಿದ್ವಾಂಸನಾಗಿದ್ದ ಮಹಮ್ಮದ್ ಗವಾನ್ ಬೀದರ್‌ನಲ್ಲಿ ಇಸ್ಲಾಂ ಮತ ಮತ್ತು ಕಾನೂನಿನ ಶಿಕ್ಷಣವನ್ನು ಪ್ರೋತ್ಸಾಹಿಸಲು ಮದರಸ (ಮಹಾವಿದ್ಯಾಲಯ) ವನ್ನು ಸ್ಥಾಪಿಸಿದನು. ಇದು 242 ಅಡಿ ಉದ್ದ, 222 ಅಡಿ ಅಗಲ ಮತ್ತು 56 ಅಡಿ ಎತ್ತರವಿರುವ ಮೂರು ಅಂತಸ್ತಿನ ದಖ್ಖನಿನ ಶೈಲಿಯ ಭವ್ಯ ಕಟ್ಟಡ. ಇಲ್ಲಿ ಸುಮಾರು 3000 ಹಸ್ತ ಪ್ರತಿಗಳುಳ್ಳ ಗ್ರಂಥಾಲಯವೂ ಇತ್ತು. ಇದು ವಿದ್ಯಾರ್ಥಿಗಳಿಗೆ, ಅಧ್ಯಾಪಕರಿಗೆ ಮತ್ತು ಸಾಂಪ್ರಾದಾಯಿಕ ವ್ಯಕ್ತಿಗಳಿಗೆ ತಂಗುದಾಣವೂ ಆಗಿತ್ತು. ಇಲ್ಲಿ ಖಗೋಳಶಾಸ್ತ್ರ, ವ್ಯಾಕರಣ, ಗಣಿತ, ತತ್ವಶಾಸ್ತ್ರ, ಇತಿಹಾಸ, ರಾಜನೀತಿಗಳ ಅಧ್ಯಯನ ನಡೆಯುತ್ತಿತ್ತು.

ಸುಲ್ತಾನರು ಇಂಡೋ ಸಾರ್ಸನಿಕ್ ಶೈಲಿಯ ವಾಸ್ತುಶಿಲ್ಪ ಬೆಳೆಸಿದರು. ಒಂದನೆಯ ಅಲಿ ಆದಿಲ್ ಶಹನು ನಿರ್ಮಾಣ ಮಾಡಿದ ಜಾಮಿಯ ಮಸೀದಿಯು ಈ ಕಾಲದ ಒಂದು ಮುಖ್ಯ ಸ್ಮಾರಕವಾಗಿದೆ. ಇಬ್ರಾಹಿಂ ರೋಜಾ, ಗೋಲಗುಂಬಜ್, ಗಗನ್‌ಮಹಲ್, ಅಸಾರ್ ಮಹಲ್‌ಗಳು ಇವರ ಪ್ರಮುಖ ಸ್ಮಾರಕಗಳಾಗಿವೆ. ಈ ಸ್ಮಾರಕಗಳಿಂದಾಗಿ ಆದಿಲ್ ಷಾಹಿಗಳು ವಿಶ್ವವಿಖ್ಯಾತರಾಗಿದ್ದಾರೆ. ವಿಶ್ವದ ಶ್ರೇಷ್ಠ ಕಟ್ಟಡಗಳಲ್ಲಿ ವಿಜಯಪುರದಲ್ಲಿರುವ

©KTBS Not to be republished

ಗೋಲಗುಂಬಜ್ ಒಂದಾಗಿದೆ. 1800 ಚದುರ ಅಡಿ ವಿಸ್ತೀರ್ಣವನ್ನು ಒಳಗೊಂಡಿದೆ. ನಾಲ್ಕು ಮೂಲೆಗಳಲ್ಲಿ ಏಳು ಅಂತಸ್ತಿನ ಒಂದೊಂದು ಮಿನಾರಗಳಿವೆ. ಮಧ್ಯದಲ್ಲಿ ಬೃಹತ್ ಗುಮ್ಮಟವಿದೆ.

***ಗೋಲ್‌ಗುಂಬಜ್ :*** *ನಮ್ಮ ರಾಜ್ಯದ ವಿಜಯಪುರದಲ್ಲಿ ಈ ಸ್ಮಾರಕವಿದೆ. ಇದನ್ನು ಮಹಮ್ಮದ್ ಆದಿಲ್ ಷಾ ನಿರ್ಮಿಸಿದನೆಂದು ತಿಳಿದಿದೆ. ಇದರ ಕಟ್ಟಡ ನಿರ್ಮಾಣ ಕಾರ್ಯವು ಸುಮಾರು ಸಾ.ಶ. 1626ರಲ್ಲಿ ಪ್ರಾರಂಭವಾಗಿ ಸಾ.ಶ. 1656ರಲ್ಲಿ ಮುಗಿಯಿತೆಂದು ತಿಳಿದಿದೆ. ಇದು ಸುಮಾರು 51ಮೀ. ಎತ್ತರವನ್ನು ಹೊಂದಿದ್ದು ವಿಶಾಲವಾದ ಗುಮ್ಮಟವಾಗಿರುತ್ತದೆ. ಗುಮ್ಮಟದಲ್ಲಿ ನಾಲ್ಕು ಕಂಬಗಳಿದ್ದು, ಅವುಗಳಿಂದ ಮೇಲೆ ಹತ್ತಲು ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. ಗುಮ್ಮಟದ ಗೋಲಾಕಾರದ ಗೋಡೆಯಲ್ಲಿ ಒಂದು ಬದಿಯಲ್ಲಿ ನಿಂತು ಪಿಸುಗುಟ್ಟಿದರೆ ಮತ್ತೊಂದು ಬದಿಯಲ್ಲಿ ಕಿವಿಕೊಟ್ಟು ಆಲಿಸಬಹುದಾಗಿರುವುದು ಇದರ ವಿಶೇಷತೆಯಾಗಿದೆ. ಇದು ಭಾರತದ ಅತ್ಯಂತ ದೊಡ್ಡ ಗುಮ್ಮಟವೂ ಆಗಿದೆ.*



**ಗೋಲ್‌ಗುಂಬಜ್**

©KTBS Not to be republished

**ನಿಮಗಿದು ತಿಳಿದಿರಲಿ: ಪಾರಿಭಾಷಿಕ ಪದಗಳು**

ಅಮಾತ್ಯ – ರಾಜನಿಗೆ ವಿವಿಧ ಕಾರ್ಯಗಳಲ್ಲಿ ನೆರವಾಗುತ್ತಿದ್ದ ಮಂತ್ರಿ

ರಾಯಸಂ – ಸಚಿವಾಲಯದ ಕಾರ್ಯದರ್ಶಿ

ರಾಯಸಸ್ವಾಮಿ – ಮುಖ್ಯ ಕಾರ್ಯದರ್ಶಿ

ಕರಣಿಕ – ಲೆಕ್ಕಪತ್ರದ ಅಧಿಕಾರಿ

ಮನೆಪ್ರಧಾನಿ – ಅರಮನೆಯ ಮೇಲ್ವಿಚಾರಕ

ಕಾರ್ಯಕರ್ತ – ರಾಜನ ಕೆಲಸಗಳನ್ನು ನೆರವೇರಿಸುವವನು

ಅಮರನಾಯಕರು/ನಾಯಂಕರ ಪದ್ಧತಿ – ವಿಜಯನಗರದ ಅರಸರಿಗೆ ಅಧೀನರಾಗಿದ್ದ ಅನೇಕ ನಾಯಕರು ರಾಜನಿಗೆ ಯುದ್ಧಗಳಲ್ಲಿ ಸಹಾಯ ಮಾಡುತ್ತಿದ್ದರು. ಇವರ ಸೇವೆಯನ್ನು ಪರಿಗಣಿಸಿ ರಾಜನು ಭೂಮಿಯನ್ನು ಉಂಬಳಿಯಾಗಿ ನೀಡುತ್ತಿದ್ದನು. ಇಲ್ಲಿ ಇವರ ಆಡಳಿತವನ್ನು ನಡೆಸುತ್ತಿದದರು. ಈ ಪ್ರದೇಶಗಳನ್ನು ಅಮರ ಎನ್ನುತ್ತಿದ್ದರು.

ಆಯಗಾರ ಪದ್ಧತಿ – ಅಂದರೆ ಪ್ರತಿ ಕೃಷಿ ಹಿಡುವಳಿಗಾರು ತಮ್ಮ ವಾರ್ಷಿಕ ಉತ್ಪಾದನೆಯ ಒಂದು ಪಾಲನ್ನು ಗೌಡ, ಶಾನುಭೋಗ, ಬಡಗಿ, ಅಗಸ, ತಳವಾರ, ಜೋಯಿಸ, ಚಮ್ಮಾರ, ಅಕ್ಕಸಾಲಿಗ, ಕಮ್ಮಾರ, ನೀರಗಂಟಿ, ಕುಂಬಾರ ಮತ್ತು ನಾಯಿಂದ ಎಂಬ 12 ಗುಂಪುಗಳಿಗೆ ನೀಡಬೇಕಿತ್ತು. ಹಳ್ಳಿಗೆ ಸಂಬಂಧಿಸಿದ ಆಡಳಿತದಲ್ಲಿ ಇವರೆಲ್ಲರ ಪಾತ್ರ ಮುಖ್ಯವಾಗಿರುತ್ತಿತ್ತು.

ಅಫಾಕಿಗಳು – ಇರಾನ್, ಟ್ರಾನ್ಸ್ಯಾಕ್ಸೋನಿಯಾನ ಮತ್ತು ಇರಾಕಿನಿಂದ ವಲಸೆಬಂದಂತವರು.

ವಕೀಲ್ ಇ ಸುಲ್ತಾನತ್ – ಪ್ರಧಾನ ಮಂತ್ರಿ

ಅಮೀರ್–ಇ–ಜುಮ್ಲ – ಆರ್ಥಿಕ ಮಂತ್ರಿ, ಕಂದಾಯ ನಿರ್ವಾಹಕ

ಮುಸ್ತಾಫ್–ಉಲ್–ಮುಲ್ಕ್ – ಸಹಾಯಕ ಆರ್ಥಿಕ ಮಂತ್ರಿ

ನಾಜಿರ್–ಇ–ಅಶ್ರಫ್ – ವಿದೇಶಮಂತ್ರಿ

ಮುಫ್ತಿ – ಕಾನೂನು ವ್ಯಾಖ್ಯಾನಕಾರರು
ದಬೀರ್ – ಕಾರ್ಯದರ್ಶಿ
ಕೊತ್ವಾಲ – ಸಾರ್ವಜನಿಕರ ರಕ್ಷಕ
ತರಫ್– ಪ್ರಾಂತ್ಯಗಳು, ಅದರ ಮುಖ್ಯಸ್ಥ ತರಫ್‌ದಾರರು
ಅಮೀರ್–ಉಲ್–ಉಮಾರ – ಮುಖ್ಯ ಸೇನಾಧಿಕಾರಿ
ಖಾಸಾ–ಇ–ಸುಲ್ತಾನಿ – ಸುಲ್ತಾನನ ಅಡಿಯಲ್ಲಿದ್ದ ಕಛೇರಿ
ದೇಶ್‌ಮುಖ ಮತ್ತು ದೇಸಾಯಿ – ಪರಗಣಗಳ ಕಂದಾಯ ನಿರ್ವಾಹಕರು


ಜಾಮಿಯಾ ಮಸೀದಿ


ಬೀದರ್ ಕೋಟೆ

©KTBS Not to be republished

## ಅಭ್ಯಾಸಗಳು

**I. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

1. ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯಾದ ವರ್ಷ ______________ .
2. ಮಧುರಾ ವಿಜಯ ಬರೆದ ಕವಯತ್ರಿ ____________ .
3. ಪ್ರೌಢದೇವರಾಯನ ಮಂತ್ರಿ _______________ .
4. ಅಮುಕ್ತ ಮಾಲ್ಯದ ಕೃತಿಯನ್ನು ತೆಲುಗಿನಲ್ಲಿ ರಚಿಸಿದ ದೊರೆ ______________ .
5. ಬೀದರಿನಲ್ಲಿ ಮದರಸವನ್ನು ಕಟ್ಟಿಸಿದವನು _____________ .
6. ಕಿತಾಬ್ ಏ ನವರಸ ಗ್ರಂಥವನ್ನು ಬರೆದವನು ____________ .

**II. ಈ ಕೆಳಗಿನ ಪ್ರಶ್ನೆಗಳಿಗೆ ಸಹಪಾಠಿಗಳೊಂದಿಗೆ ಚರ್ಚಿಸಿ ಉತ್ತರಿಸಿ.**

1. ವಿಜಯನಗರ ಸಾಮ್ರಾಜ್ಯವನ್ನು ಆಳಿದ ನಾಲ್ಕು ರಾಜ ಮನೆತನಗಳನ್ನು ಹೆಸರಿಸಿ.
2. ಎರಡನೆಯ ದೇವರಾಯನ ಸಾಧನೆಗಳೇನು ?
3. ಕೃಷ್ಣದೇವರಾಯನು ಅಧಿಕಾರಕ್ಕೆ ಬಂದಾಗ ಎದುರಿಸಿದ ಸಮಸ್ಯೆಗಳನ್ನು ತಿಳಿಸಿ.
4. ಅರ್ಥವ್ಯವಸ್ಥೆ ಮತ್ತು ಸಮಾಜಕ್ಕೆ ವಿಜಯನಗರದ ಕೊಡುಗೆಗಳೇನು?

5. ವಿಜಯನಗರ ಕಾಲದ ಕಲೆ ಮತ್ತು ವಾಸ್ತುಶಿಲ್ಪವನ್ನು ಕುರಿತು ಬರೆಯಿರಿ.
6. ಮಹಮ್ಮದ್ ಗವಾನನು ಬಹಮನಿ ರಾಜ್ಯದಲ್ಲಿ ಉತ್ತಮ ಪ್ರಧಾನಮಂತ್ರಿ ಹೇಗೆ ಎಂದು ಪರಿಗಣಿಸುವಿರಿ.?
7. ಬಹಮನಿ ಸುಲ್ತಾನರ ಆಡಳಿತ, ಕಂದಾಯ ವ್ಯವಸ್ಥೆಯನ್ನು ತಿಳಿಸಿ.
8. ಬಹಮನಿ ಸುಲ್ತಾನರ ಕಾಲದ ಶಿಕ್ಷಣ, ಕಲೆ ಮತ್ತು ವಾಸ್ತುಶಿಲ್ಪವನ್ನು ವಿವರಿಸಿ.

**III. ಚಟುವಟಿಕೆಗಳು**

1. ಹಂಪೆಯಲ್ಲಿರುವ ವಿವಿಧ ಸ್ಮಾರಕಗಳ ಚಿತ್ರ ಸಂಗ್ರಹಿಸಿ.
2. ಹಂಪೆಯಲ್ಲಿರುವ ಮಹಾನವಮಿ ದಿಬ್ಬದಲ್ಲಿ ಆಚರಿಸುತ್ತಿದ್ದ ವಿಜಯದಶಮಿ ಬಗ್ಗೆ ವಿವರಣೆಗಳನ್ನು ಸಂಗ್ರಹಿಸಿ.
3. ತೆನಾಲಿ ರಾಮಕೃಷ್ಣರ ಕಥೆಗಳನ್ನು ಓದಿ ಟಿಪ್ಪಣಿಗಳನ್ನು ಮಾಡಿಕೊಳ್ಳಿರಿ.

**IV. ನಿಯೋಜಿತ ಕಾರ್ಯ :**

1. ಹಂಪೆಗೆ ಬೇಟಿ ನೀಡಿ, ಅಲ್ಲಿನ ಸ್ಮಾರಕಗಳ ಬಗ್ಗೆ ಪ್ರಬಂಧ ಬರೆಯಿರಿ.
2. ಹಂಪೆಯಲ್ಲಿನ ವಿಜಯನಗರ ಕಾಲದ ಮಾರುಕಟ್ಟೆ ವ್ಯವಸ್ಥೆಯ ಬಗ್ಗೆ ಪ್ರಬಂಧ ರಚಿಸಿ.

©KTBS Not to be republished

# ರಾಜ್ಯಶಾಸ್ತ್ರ

## ಅಧ್ಯಾಯ-1

# ನಮ್ಮ ಸಂವಿಧಾನ

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- *ಸಂವಿಧಾನ ರಚನೆ*
- *ಸಂವಿಧಾನದ ಕರಡು ಸಮಿತಿ*
- *ಸಂವಿಧಾನದ ಪ್ರಸ್ತಾವನೆ*
- *ಸಂವಿಧಾನದ ಲಕ್ಷಣಗಳು*
- *ಮೂಲಭೂತ ಹಕ್ಕುಗಳು, ಕರ್ತವ್ಯಗಳು, ರಾಜ್ಯನಿರ್ದೇಶಕ ತತ್ವಗಳು*

ನಮ್ಮ ದೇಶವು ಸ್ವಾತಂತ್ರ್ಯ ನಂತರ ಅನೇಕ ಸವಾಲುಗಳನ್ನು ಎದುರಿಸಬೇಕಾಯಿತು. ಈ ಸಮಯದಲ್ಲಿ ಪಾಕಿಸ್ತಾನದಿಂದ ವಲಸೆ ಬಂದ ನಿರಾಶ್ರಿತರಿಗೆ ಪುನರ್‌ವಸತಿ ಕಲ್ಪಿಸುವುದು, ಸಂಸ್ಥಾನಗಳ ವಿಲೀನೀಕರಣ, ಕಾನೂನು ಸುವ್ಯವಸ್ಥೆಗೊಳಿಸುವುದು ಮುಂತಾದ ಸವಾಲುಗಳಿದ್ದವು. ಸಂಸ್ಥಾನಗಳ ವಿಲೀನೀಕರಣವನ್ನು ಸರ್ದಾರ್ ವಲ್ಲಭಭಾಯಿ ಪಟೇಲರು ಯಶಸ್ವಿಯಾಗಿ ಸಾಧಿಸಿದರು. ದೇಶದ ವ್ಯವಸ್ಥಿತ ಆಡಳಿತ ನಿರ್ವಹಣೆಗಾಗಿ ಕಾನೂನಿನ ಅವಶ್ಯಕತೆ ಮತ್ತು ಸಂವಿಧಾನದ ರಚನೆಯಂತಹ ಸವಾಲನ್ನು ಕೂಡಾ ಸಮರ್ಪಕವಾಗಿ ನಿರ್ವಹಿಸಲಾಯಿತು. ಇಂತಹ ಸಂವಿಧಾನದ ರಚನೆ, ಅದರ ಲಕ್ಷಣಗಳು ಮತ್ತು ಅದರಲ್ಲಿ ಪ್ರಸ್ತಾಪಿತವಾಗಿರುವ ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳ ಬಗ್ಗೆ ತಿಳಿಯೋಣ.


> **ನಿಮಗಿದು ತಿಳಿದಿರಲಿ :**
>
> **ಕ್ಯಾಬಿನೆಟ್ ನಿಯೋಗ :** ಲಾರ್ಡ್ ಫೆಥಿಕ್ ಲಾರೆನ್ಸ್ – ಭಾರತದ ವ್ಯವಹಾರಗಳ ಕಾರ್ಯದರ್ಶಿ, ಸರ್ ಸ್ಟಾಫೋರ್ಡ್ ಕ್ರಿಪ್ಸ್–ವಾಣಿಜ್ಯ ಮಂಡಳಿಯ ಅಧ್ಯಕ್ಷರು, ಎ.ವಿ.ಅಲೆಗ್ಸಾಂಡರ್ – ನೌಕಾ ಪಡೆಯ ಮುಖ್ಯಸ್ಥ.

**ಭಾರತ ಸಂವಿಧಾನ ರಚನಾ ಸಭೆ:** ಒಂದು ರಾಷ್ಟ್ರದ ಮೂಲಭೂತ ಕಾನೂನನ್ನು ಸಂವಿಧಾನವೆಂದು ಕರೆಯಲಾಗುತ್ತದೆ. ಸಂವಿಧಾನವು ಆಡಳಿತ ವ್ಯವಸ್ಥೆಗೆ ಚೌಕಟ್ಟನ್ನು ಒದಗಿಸುತ್ತದೆ. ಸಂವಿಧಾನ ರಚನೆಗೆ ಸಂಬಂಧಿಸಿದಂತೆ ಮೋತಿಲಾಲ್ ನೆಹರೂ ಸಮಿತಿಯ ಶಿಫಾರಸ್ಸು ಮತ್ತು 1939ರ ರಾಷ್ಟ್ರೀಯ ಕಾಂಗ್ರೆಸ್‌ನ ಕರಾಚಿ ಅಧಿವೇಶನದ ನಿರ್ಣಯಗಳು ಪ್ರೇರಕವಾದವು. ಸಂವಿಧಾನ ರಚನೆ ಮಾಡಲು ಕ್ಯಾಬಿನೆಟ್ ಆಯೋಗದ ಶಿಫಾರಸ್ಸಿನ ಅನ್ವಯ 1946ರಲ್ಲಿ ಭಾರತೀಯರಿಂದ ಕೂಡಿದ ಸಂವಿಧಾನ ರಚನಾ ಸಭೆಯನ್ನು ರಚಿಸಲಾಯಿತು. ಈ ಸಭೆಯು 389 ಸದಸ್ಯರನ್ನು ಒಳಗೊಂಡಿತ್ತು. ಭಾರತವು ಇಬ್ಭಾಗವಾಗಿ ಸ್ವಾತಂತ್ರ್ಯಗೊಂಡ ನಂತರ 299 ಸದಸ್ಯರನ್ನು ಒಳಗೊಂಡಿತು. ಮೈಸೂರು ಸಂಸ್ಥಾನದಿಂದ 7 ಜನ ಸದಸ್ಯರು ನಾಮಕರಣಗೊಂಡಿದ್ದರು.



ಡಾ. ಬಿ.ಆರ್. ಅಂಬೇಡ್ಕರ್

ಸಂವಿಧಾನ ರಚನಾ ಸಭೆಯ ಮೊದಲ ಅಧಿವೇಶನ ಡಿಸೆಂಬರ್ 9, 1946ರಂದು ನಡೆಯಿತು. ಅದೊಂದು ಐತಿಹಾಸಿಕ ಘಟನೆ. ಸಚ್ಚಿದಾನಂದ ಸಿನ್ಹಾ ಹಂಗಾಮಿ ಅಧ್ಯಕ್ಷರಾಗಿದ್ದರು. ಡಿಸೆಂಬರ್ 11, 1946ರಂದು ಡಾ. ರಾಜೇಂದ್ರಪ್ರಸಾದ್‌ರವರನ್ನು ಖಾಯಂ ಅಧ್ಯಕ್ಷರನ್ನಾಗಿಯೂ ಮತ್ತು ಟಿ.ಟಿ.ಕೃಷ್ಣಮಾಚಾರಿಯವರನ್ನು ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು. ಸಂವಿಧಾನ ರಚನೆಯಲ್ಲಿ



ಡಾ. ರಾಜೇಂದ್ರ ಪ್ರಸಾದ್

©KTBS Not to be republished

ಅನೇಕರು ಕಾರ್ಯವನ್ನು ನಿರ್ವಹಿಸಿದರು. ಅವರಲ್ಲಿ ಜವಾಹರಲಾಲ್ ನೆಹರೂ, ಸರ್ದಾರ್ ವಲ್ಲಭಬಾಯಿ ಪಟೇಲ್, ಡಾ. ಬಿ.ಆರ್.ಅಂಬೇಡ್ಕರ್, ಮೌಲಾನ ಅಬುಲ್ ಕಲಾಂ ಆಜಾದ್, ಸಿ. ರಾಜಗೋಪಾಲಚಾರಿ, ಕೆ.ಎಂ. ಮುನ್ಷಿ, ಶ್ರೀಮತಿ ಸರೋಜಿನಿ ನಾಯ್ಡು, ಶ್ರೀಮತಿ ಸುಚೇತ ಕೃಪಲಾನಿ, ಕರ್ನಾಟಕದ ಎಸ್.ನಿಜಲಿಂಗಪ್ಪ, ಕೆ.ಸಿ.ರೆಡ್ಡಿ, ಕೆಂಗಲ್ ಹನುಮಂತಯ್ಯ, ಟೇಕೂರು ಸುಬ್ರಮಣ್ಯಂ ಮೊದಲಾದವರು ಪ್ರಮುಖರಾಗಿದ್ದರು.

**ಕರಡು ರಚನಾ ಸಮಿತಿ**

ಸಂವಿಧಾನ ರಚನಾ ಸಭೆಯು ರಾಷ್ಟ್ರಕ್ಕೆ ಸಂಬಂಧಿಸಿದ ವಿಷಯಗಳನ್ನು ವಿವರವಾಗಿ ಪರಿಶೀಲಿಸಲು 22 ಸಮಿತಿಗಳನ್ನು, 5 ಉಪಸಮಿತಿಗಳನ್ನು ಹೊಂದಿತ್ತು. ಅವುಗಳಲ್ಲಿ ಪ್ರಮುಖವಾದುದು ಕರಡು ಸಮಿತಿ. ಡಾ. ಬಿ.ಆರ್. ಅಂಬೇಡ್ಕರ್‌ರವರು ಇದರ ಅಧ್ಯಕ್ಷರಾಗಿದ್ದರು. ಇವರು ಸಂವಿಧಾನ ರಚನೆಗೆ ನೀಡಿದ ಕೊಡುಗೆಯನ್ನು ಆಧರಿಸಿ ಅವರನ್ನು 'ಸಂವಿಧಾನದ ಶಿಲ್ಪಿ' ಎಂದು ಕರೆಯಲಾಗಿದೆ. ಈ ಕರಡು ಸಮಿತಿಯಲ್ಲಿ ಎನ್.ಗೋಪಾಲ ಸ್ವಾಮಿ ಅಯ್ಯಂಗಾರ್, ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್, ಕೆ.ಎಮ್. ಮುನ್ಷಿ, ಟಿ.ಟಿ.ಕೃಷ್ಣಮಾಚಾರಿ, ಮಹಮ್ಮದ್ ಸಾದುಲ್ಲಾ, ಸಿ. ಮಾಧವರಾವ್ ಅವರು ಸದಸ್ಯರಾಗಿದ್ದರು.

**ಸಂವಿಧಾನದ ರಚನೆ**

ಸಂವಿಧಾನ ರಚನಾ ಸಭೆಯು ರಚನಾ ಕಾರ್ಯವನ್ನು ಮುಗಿಸಲು ಎರಡು ವರ್ಷ 11 ತಿಂಗಳು ಮತ್ತು 18 ದಿನಗಳನ್ನು ತೆಗೆದುಕೊಂಡಿತು. ರಚನಾ ಸಭೆಯಲ್ಲಿ ಇದ್ದ ಸಮಿತಿಗಳು ನಿರಂತರವಾಗಿ ಕೆಲಸ ನಿರ್ವಹಿಸಿ ಅನೇಕ ಸದಸ್ಯರುಗಳು ಮಂಡಿಸಿದ ತಿದ್ದುಪಡಿಗಳ ಮೇಲೆ ಚರ್ಚೆ ನಡೆಸಲಾಯಿತು. ನಂತರ ಕರಡು ಸಂವಿಧಾನವನ್ನು ರಚಿಸಲಾಯಿತು. ಬ್ರಿಟಿಷ್ ಸರ್ಕಾರ ಹೊರಡಿಸಿದ 1909, 1919 ಮತ್ತು 1935ರ ಕಾಯಿದೆ, ಬ್ರಿಟನ್ನಿನ ಸಂಸದೀಯ ವ್ಯವಸ್ಥೆ, ಅಮೆರಿಕಾದ ಬಿಲ್ ಆಫ್ ರೈಟ್ಸ್, ಐರ್ಲೆಂಡಿನ ಸಾಮಾಜಿಕ ನಿರ್ದೇಶಕ ತತ್ವಗಳು ಮುಂತಾದವುಗಳನ್ನು ಅಳವಡಿಸಿಕೊಳ್ಳಲು ನಿರ್ಣಯಿಸಲಾಯಿತು. ಅಂತಿಮವಾಗಿ ನವೆಂಬರ್ 26, 1949 ರಂದು ಅಂಗೀಕರಿಸಲ್ಪಟ್ಟು ಜನವರಿ 26, 1950 ರಂದು ಜಾರಿಗೆ ಬಂದಿತು. ಈ ದಿನವನ್ನೇ ಗಣರಾಜ್ಯ ದಿನವಾಗಿ ಆಚರಿಸುತ್ತೇವೆ.

> **ನಿಮಗಿದು ತಿಳಿದಿರಲಿ:**
> *1930 ಜನವರಿ 26 ರಂದು ಲಾಹೋರ್ ಅಧಿವೇಶನದಲ್ಲಿ ಭಾರತ ಪೂರ್ಣ ಸ್ವರಾಜ್ಯ ಎಂಬ ಘೋಷಣೆ ಅಂಗೀಕರಿಸಿತ್ತು. ಅದರ ಸವಿನೆನಪಿಗಾಗಿ ನೂತನ ಸಂವಿಧಾನವನ್ನು ಜನವರಿ 26, 1950ರಂದು ಜಾರಿಗೆ ತರಲಾಯಿತು.*

**ಸಂವಿಧಾನದ ಪ್ರಸ್ತಾವನೆ (ಪೂರ್ವ ಪೀಠಿಕೆ)**

ಭಾರತ ಸಂವಿಧಾನವು ತನ್ನದೇ ಆದ ಪ್ರಸ್ತಾವನೆ ಹೊಂದಿದ್ದು, ಈ ಪ್ರಸ್ತಾವನೆ ಸಂವಿಧಾನದ ಸಂವಿಧಾನ ರಚನಾಕಾರರ ವಿಚಾರಧಾರೆಗಳನ್ನು ಒಳಗೊಂಡಿದೆ. ಸಂವಿಧಾನದ ರೂಪುರೇಷೆ, ಮೌಲ್ಯ, ಸಿದ್ಧಾಂತ ಮತ್ತು ಉದ್ದೇಶಗಳ ಸಾರಾಂಶವೇ ಸಂವಿಧಾನದ ಪ್ರಸ್ತಾವನೆ ಆಗಿದೆ. ಇದು ಜನತೆಯ ಧ್ಯೇಯಗಳನ್ನು ನಿರ್ಧರಿಸಿ ಘೋಷಿಸಿಕೊಂಡ ಆದರ್ಶ ತತ್ವವಾಗಿದೆ.

ಈ ಪ್ರಸ್ತಾವನೆಯು ಡಿಸೆಂಬರ್ 13, 1946ರಂದು ಜವಹಾರ ಲಾಲ್ ನೆಹರುರವರು ಮಂಡಿಸಿದ 'ಧ್ಯೇಯಗಳ ನಿರ್ಣಯ' (Objective Resolution) ವನ್ನು ಸಂವಿಧಾನ ರಚನಾ ಸಭೆ ಜನವರಿ 22, 1947ರಂದು ಅಂಗೀಕರಿಸಿತು. ಈ ನಿರ್ಣಯವು ಭಾರತದ ಸ್ವಾತಂತ್ರ್ಯ, ಗಣರಾಜ್ಯ, ಪ್ರಜೆಗಳ ಪರಮಾಧಿಕಾರ, ಜನತೆಯ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ನ್ಯಾಯ ಒದಗಿಸುವುದಾಗಿ ತಿಳಿಸಿದೆ.

ನಮ್ಮ ಸಂವಿಧಾನದ ಪೂರ್ವ ಪೀಠಿಕೆಯು ತುಂಬಾ ಅರ್ಥಗರ್ಭಿತವಾಗಿದ್ದು, ದೇಶದ ರಾಜಕೀಯ ವ್ಯವಸ್ಥೆಯ ಚಿತ್ರಣವನ್ನು ಚಿತ್ರಿಸುತ್ತದೆ. ಸಂವಿಧಾನದ ಕೈ ದೀಪವಾಗಿದೆ. ಇದನ್ನು ಕೆಲವರು 'ಸಂವಿಧಾನದ ಒಡವೆ' (Jewel) ಎಂದು ಬಣ್ಣಿಸಿದರೆ, ಕೆ.ಎಂ. ಮುನ್ಷಿ 'ರಾಜಕೀಯ ಜಾತಕ' ಎಂದು ಕರೆದಿದ್ದಾರೆ.

©KTBS Not to be republished









# ನಮ್ಮ
# ಭಾರತ ಸಂವಿಧಾನದ ಪ್ರಸ್ತಾವನೆ

ಭಾರತದ ಪ್ರಜೆಗಳಾದ ನಾವು ಭಾರತವನ್ನು ಒಂದು ಪರಮಾಧಿಕಾರದ, ಸಮಾಜವಾದಿ.

(* ಸಮಾಜವಾದಿ, ಸರ್ವಧರ್ಮ ಸಮಭಾವನೆ ಪದಗಳನ್ನು 1976ರ 42ನೆಯ ತಿದ್ದುಪಡಿಯಂತೆ ಸೇರ್ಪಡಿಸಲಾಗಿದೆ.)

ಸರ್ವಧರ್ಮ ಸಮನ್ವಯ (ಜಾತ್ಯತೀತ) ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ ರಚಿಸಲು ಹಾಗೂ ಅದರ ಸಮಸ್ತ ನಾಗರಿಕರಿಗೆ :

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ; ಹಾಗೂ

ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ ಸ್ವಾತಂತ್ರ್ಯ ;

ಸ್ಥಾನಮಾನ ಮತ್ತು ಅವಕಾಶ ಹಾಗೂ ಸಮಾನತೆ ದೊರೆಯುವಂತೆ ಮಾಡಲು ಮತ್ತು

ವ್ಯಕ್ತಿಗೌರವವನ್ನು, ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು ಮೂಡಿಸಿ ಎಲ್ಲರಲ್ಲಿಯೂ ಭ್ರಾತೃತ್ವ ಭಾವನೆಯನ್ನು ಬೆಳಗುವಂತೆ ಶ್ರದ್ಧಾಪೂರ್ವಕವಾದ ದೃಢಸಂಕಲ್ಪ ಮಾಡಿದವರಾಗಿ;


ನಮ್ಮ ಸಂವಿಧಾನ ಸಭೆಯಲ್ಲಿ ದಿನಾಂಕ 26, ನವೆಂಬರ್ 1949ನೆಯ ದಿನದಂದು, ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ, ಅಧಿನಿಯಮಿತಗೊಳಿಸಿ, ನಮಗೆ ನಾವೇ ಅರ್ಪಿಸಿಕೊಂಡಿದ್ದೇವೆ.

©KTBS
Not to be republished









**ಭಾರತದ ಪ್ರಜೆಗಳಾದ ನಾವು:** ನಮ್ಮ ಸಂವಿಧಾನದ ಪ್ರಸ್ತಾವನೆಯು ಭಾರತದ ಪ್ರಜೆಗಳಾದ ನಾವು ಎಂದು ಆರಂಭಗೊಳ್ಳುವುದು. ಭಾರತ ಸಂವಿಧಾನವು ಭಾರತೀಯರಿಂದಲೇ ರಚಿತಗೊಂಡಿದ್ದು, ಭಾರತದ ಪ್ರಜೆಗಳಾದ ನಾವೆಲ್ಲಾ ಭಾರತೀಯರು ಎಂಬ ಭಾವನೆ ಹೊಂದಿ ಎಲ್ಲರ ಆಶೋತ್ತರ ಕಾಪಾಡುವುದರಲ್ಲಿ ಶ್ರಮಿಸಿದೆ.

**ಸಾರ್ವಭೌಮ (ಪರಮಾಧಿಕಾರ ಸಂಪನ್ನ) ರಾಷ್ಟ್ರ:** ಭಾರತವು ಪ್ರಪಂಚದ ಯಾವುದೇ ರಾಷ್ಟ್ರಕ್ಕೆ ಅಧೀನವಾಗಿರದೆ, ಸಾರ್ವಭೌಮ ರಾಷ್ಟ್ರವಾಗಿದೆ. ವಿಶ್ವದ ಯಾವುದೇ ಬಣಕ್ಕೆ ಸೇರದೆ ತನ್ನದೇ ಆದ ಸ್ವತಂತ್ರ ವಿದೇಶಾಂಗ ನೀತಿ, ಅಲಿಪ್ತ ನೀತಿ, ಯೋಜನಾ ಪದ್ಧತಿಗಳನ್ನು ಅನುಸರಿಸಿ ಆಂತರಿಕ ಮತ್ತು ಬಾಹ್ಯ ಪರಮಾಧಿಕಾರ ಪಡೆದಿದೆ.

**ಸಮಾಜವಾದ:** ಭಾರತವನ್ನು ಸುಖೀ ರಾಜ್ಯ ಮತ್ತು ಸಮಾಜವಾದಿ ರಾಷ್ಟ್ರವನ್ನಾಗಿ ಮಾಡುವುದು ಸಂವಿಧಾನದ ಪ್ರಧಾನ ಗುರಿಯಾಗಿದೆ. ಸಮಾಜವಾದಿ ತತ್ವಗಳನ್ನು ಪ್ರಜಾಪ್ರಭುತ್ವದ ಮೂಲಕ ಜಾರಿಗೆ ತರಲು ಸಾಧ್ಯ ಎಂಬುದನ್ನು ಪ್ರಸ್ತಾವನೆ ಸೂಚಿಸುತ್ತದೆ. 'ಸಮಾಜವಾದ' ಎಂಬ ಪದವನ್ನು 1976ರಲ್ಲಿ 42ನೇ ತಿದ್ದುಪಡಿ ಮೂಲಕ ಅಳವಡಿಸಿಕೊಳ್ಳಲಾಗಿದೆ. ಸಮಾಜವಾದಿ ರಾಷ್ಟ್ರ ನಿರ್ಮಾಣದ ಬುನಾದಿಯಾದ ರಾಜ್ಯ ನಿರ್ದೇಶಕ ತತ್ವಗಳನ್ನು 42ನೇ ತಿದ್ದುಪಡಿ ಮೂಲಕ ಅಳವಡಿಸಿಕೊಳ್ಳಲಾಗಿದೆ. ಈ ಮೂಲಕ ಭೂ ಸುಧಾರಣೆ ಮತ್ತು ಪ್ರಗತಿಪರ ಆರ್ಥಿಕ ಕಾರ್ಯಕ್ರಮಗಳನ್ನು ಜಾರಿಗೆ ತರಲಾಗಿದೆ.

**ಜಾತ್ಯತೀತ (ಮತ ನಿರಪೇಕ್ಷ) ರಾಷ್ಟ್ರ:** 'ಜಾತ್ಯತೀತ' ಎಂಬ ಪದವನ್ನು ಸಂವಿಧಾನದ 42ನೇ ತಿದ್ದುಪಡಿ ಮೂಲಕ 1976ರಲ್ಲಿ ಅಳವಡಿಸಿದೆ. ಭಾರತವು ಯಾವುದೇ ಮತವನ್ನು ರಾಷ್ಟ್ರೀಯ ಮತವನ್ನಾಗಿ ಅಂಗೀಕರಿಸಿಲ್ಲ. ಆದ್ದರಿಂದ ಭಾರತ ಮತ ನಿರಪೇಕ್ಷ ರಾಷ್ಟ್ರವಾಗಿದೆ. ಪ್ರಜೆಗಳು ತಮಗೆ ಬೇಕಾದ ಮತ ಆಚರಿಸುವ, ಅನುಸರಿಸುವ ಸ್ವಾತಂತ್ರ್ಯವನ್ನು ಪಡೆದಿದ್ದಾರೆ. ಸರ್ವ ಧರ್ಮಕ್ಕೂ ಸಮಾನವಾದ ಪ್ರಾತಿನಿಧ್ಯವನ್ನು ನೀಡಲಾಗಿದೆ.

**ಪ್ರಜಾ ಸತ್ತಾತ್ಮಕ ಗಣರಾಜ್ಯ:** ಪ್ರಜಾಪ್ರಭುತ್ವದಲ್ಲಿನ ಎಲ್ಲರ ಸುಖವನ್ನು ಸಾಧಿಸುವ ಜವಾಬ್ದಾರಿ ಸರ್ಕಾರದ್ದಾಗಿದೆ. ರಾಷ್ಟ್ರದ ಸಮಸ್ಯೆಗಳನ್ನು ಚರ್ಚೆಗಳ ಮೂಲಕ ಬಗೆಹರಿಸಿಕೊಳ್ಳಲಾಗುತ್ತದೆ. ಐದು ವರ್ಷಗಳಿಗೊಮ್ಮೆ ನಡೆಯುವ ಸಾರ್ವತ್ರಿಕ ಚುನಾವಣೆಯಲ್ಲಿ ಮುಕ್ತ ಮತದಾನ ಪದ್ಧತಿಯು ನಮ್ಮ ಪ್ರಜಾಪ್ರಭುತ್ವವನ್ನು ಬಿಂಬಿಸುತ್ತದೆ. ಭಾರತದ ರಾಷ್ಟ್ರಪತಿಗಳನ್ನು ಐದು ವರ್ಷದ ಅವಧಿಗೆ ಚುನಾವಣೆ ಮೂಲಕ ಆಯ್ಕೆ ಮಾಡುವುದು ಭಾರತ ಒಂದು ಗಣರಾಜ್ಯ ವ್ಯವಸ್ಥೆ ಎಂಬುದನ್ನು ಸೂಚಿಸುತ್ತದೆ.

## ಭಾರತ ಸಂವಿಧಾನದ ಪ್ರಮುಖ ಲಕ್ಷಣಗಳು

**ಲಿಖಿತ ಮತ್ತು ಬೃಹತ್ ಸಂವಿಧಾನ:** ಭಾರತ ಸಂವಿಧಾನವು ಲಿಖಿತ ರೂಪದಲ್ಲಿದೆ. ಸರ್ಕಾರದ ಅಂಗಗಳಾದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳ ರಚನೆ, ಅಧಿಕಾರ ಮತ್ತು ಕಾರ್ಯವ್ಯಾಪ್ತಿ ಲಿಖಿತ ಆಧಾರವಾಗಿದೆ. ಮೂಲಭೂತ ಹಕ್ಕುಗಳು, ಕರ್ತವ್ಯಗಳು, ರಾಜ್ಯ ನಿರ್ದೇಶಕ ತತ್ವಗಳು ಬರವಣಿಗೆಯ ರೂಪದಲ್ಲಿವೆ. ನಮ್ಮ ಸಂವಿಧಾನವು ಮೂಲತಃ 22 ಭಾಗಗಳು, 8 ಅನುಸೂಚಿಗಳು ಮತ್ತು 395 ವಿಧಿಗಳನ್ನು ಹೊಂದಿತ್ತು. ನಂತರದಲ್ಲಿ ಹಲವಾರು ತಿದ್ದುಪಡಿಗಳಿಂದಾಗಿ 25 ಭಾಗಗಳು, 12 ಅನುಸೂಚಿಗಳು ಮತ್ತು 465 ವಿಧಿಗಳನ್ನು ಒಳಗೊಂಡ ಬೃಹತ್ ಸಂವಿಧಾನವಾಗಿದೆ.

**ಭಾಗಶಃ ನಮ್ಯ ಮತ್ತು ಭಾಗಶಃ ಅನಮ್ಯ ಸಂವಿಧಾನ :** ಯಾವ ದೇಶದ ಸಂವಿಧಾನವನ್ನು ವಿಶೇಷ ವಿಧಾನವನ್ನು ಅನುಸರಿಸದೇ ಸುಲಭವಾಗಿ ತಿದ್ದುಪಡಿ ಮಾಡಬಹುದೋ ಅದನ್ನು ನಮ್ಯ ಅಥವಾ ಸರಳ ಸಂವಿಧಾನ ಎಂದು ಕರೆಯಲಾಗುತ್ತದೆ. ಯಾವ ಸಂವಿಧಾನದ ತಿದ್ದುಪಡಿ ವಿಶೇಷ ವಿಧಾನವನ್ನು ಒಳಗೊಂಡಿರುತ್ತದೋ ಅದನ್ನು ಅನಮ್ಯ ಅಥವಾ ಕಠಿಣ ಸಂವಿಧಾನ ಎಂದು ಕರೆಯಲಾಗುತ್ತದೆ. ಭಾರತದ ಸಂವಿಧಾನವು ಅತಿ ಸುಲಭವೂ ಆಗಿರದೆ, ಅತಿ ಕಠಿಣವೂ ಆಗಿರದೆ ಸರಳ ಮತ್ತು ಕಠಿಣತೆಗಳಿಂದ ಕೂಡಿದೆ.

©KTBS Not to be republished

**ಸಂಸದೀಯ ಸರ್ಕಾರ ಪದ್ಧತಿ:** ನಮ್ಮ ಸಂವಿಧಾನವು ಸಂಸದೀಯ ಸರ್ಕಾರ ಪದ್ಧತಿಗೆ ಅವಕಾಶ ಮಾಡಿಕೊಟ್ಟಿದೆ. ಪ್ರಜೆಗಳಿಂದ ಆಯ್ಕೆಯಾದ ಸಂಸತ್ತು ಪರಮಾಧಿಕಾರ ಹೊಂದಿದೆ. ಕೇಂದ್ರ ಮತ್ತು ರಾಜ್ಯಗಳಲ್ಲಿ ಕಾರ್ಯಾಂಗ, ಶಾಸಕಾಂಗದಿಂದ ರಚನೆಯಾಗಿ ಶಾಸಕಾಂಗಕ್ಕೆ ಹೆಚ್ಚು ಹೊಣೆಯಾಗಿರುತ್ತದೆ. ಮಂತ್ರಿಮಂಡಲ ಶಾಸಕಾಂಗದ ವಿಶ್ವಾಸವಿರುವವರೆಗೂ ಅಧಿಕಾರದಲ್ಲಿರುತ್ತದೆ. ಶಾಸಕಾಂಗದ ವಿಶ್ವಾಸ ಕಳೆದುಕೊಂಡಾಗ ತಕ್ಷಣ ರಾಜೀನಾಮೆ ನೀಡಬೇಕಾಗುತ್ತದೆ.

**ಗಣತಂತ್ರ ವ್ಯವಸ್ಥೆ:** ಸಂವಿಧಾನವು ಭಾರತವನ್ನು ಗಣತಂತ್ರ ರಾಜ್ಯವೆಂದೇ ಸಾರಿದೆ. ಪ್ರಜೆಗಳಿಂದ ಪರೋಕ್ಷವಾಗಿ ನಿಗದಿತ ಅವಧಿಗಾಗಿ ಆಯ್ಕೆಯಾದ ರಾಷ್ಟ್ರದ ಮುಖ್ಯಸ್ಥರನ್ನು ಹೊಂದಿರುತ್ತದೆ. ಭಾರತದ ರಾಷ್ಟ್ರಪತಿ ದೇಶದ ಸಂವಿಧಾನದ ಮುಖ್ಯಸ್ಥರಾಗಿದ್ದು, ಅವರನ್ನು ಚುನಾವಣೆ ಮೂಲಕ ಆಯ್ಕೆ ಮಾಡಲಾಗುತ್ತದೆ. ಆದುದರಿಂದ ಇದು ಗಣರಾಜ್ಯ.

**ಸಂಯುಕ್ತ ಪದ್ಧತಿ:** ಭಾರತವು ವಿವಿಧ ಭಾಷೆ, ಜಾತಿ, ಜನಾಂಗ ಮತ್ತು ವಿಶಾಲ ಭೂಪ್ರದೇಶ ಹೊಂದಿರುವುದರಿಂದ ಸಂವಿಧಾನವು ಸಂಯುಕ್ತ ಪದ್ಧತಿಗೆ ಅವಕಾಶ ಮಾಡಿಕೊಟ್ಟಿದೆ. ಕೇಂದ್ರ ಮತ್ತು ರಾಜ್ಯಗಳಲ್ಲಿ ಅಧಿಕಾರ ಹಂಚಿಕೆಯಾಗಿದೆ (ಕೇಂದ್ರಪಟ್ಟಿ 100 ವಿಷಯಗಳು, ರಾಜ್ಯಪಟ್ಟಿ 61 ವಿಷಯಗಳು ಮತ್ತು ಸಮವರ್ತಿ ಪಟ್ಟಿ 52 ವಿಷಯಗಳನ್ನು ಒಳಗೊಂಡಂತೆ ಅಧಿಕಾರ ವಿಭಜನೆಯಾಗಿದೆ). ಈ ಎರಡೂ ಸರ್ಕಾರಗಳ ನಡುವೆ ಉಂಟಾಗುವ ವಿವಾದಗಳನ್ನು ಬಗೆಹರಿಸಲು ಸುಪ್ರೀಂಕೋರ್ಟ್ ಅಧಿಕಾರ ಪಡೆದಿದೆ.

**ಮೂಲಭೂತ ಹಕ್ಕುಗಳು:** ವ್ಯಕ್ತಿಯ ಸರ್ವತೋಮುಖ ಅಭಿವೃದ್ಧಿಗೆ ಅಗತ್ಯವಾದ ಸಂವಿಧಾನದಿಂದ ರಕ್ಷಿಸಲ್ಪಟ್ಟ ಹಕ್ಕುಗಳೇ ಮೂಲಭೂತ ಹಕ್ಕುಗಳು. ಈ ಹಕ್ಕುಗಳನ್ನು ದೇಶದ ಯಾವುದೇ ಕಾನೂನು ಕ್ರಮಗಳಿಂದಾಗಲೀ, ಕೇಂದ್ರ, ರಾಜ್ಯ ಮತ್ತು ಅಧೀನ ಸರ್ಕಾರಗಳಾಗಲೀ ಅಥವಾ ಅಧೀನ ಸಂಸ್ಥೆಗಳಾಗಲೀ ಕಿತ್ತುಕೊಳ್ಳುವಂತಿಲ್ಲ. ಮೂಲಭೂತ ಹಕ್ಕುಗಳಿಗೆ ಸಂವಿಧಾನಾತ್ಮಕ ಉಲ್ಲಂಘನೆಯಾದಲ್ಲಿ ಸುಪ್ರೀಂಕೋರ್ಟ್ ಮತ್ತು ಹೈಕೋರ್ಟ್‌ಗೆ ನೇರವಾಗಿ ಮೊರೆ ಹೋಗಬಹುದು. ಇಂತಹ ಮೂಲಭೂತ ಹಕ್ಕುಗಳನ್ನು ಸಂವಿಧಾನದ 3ನೇ ಭಾಗದಲ್ಲಿ ಅಳವಡಿಸಲಾಗಿದೆ.

**ಮೂಲಭೂತ ಕರ್ತವ್ಯಗಳು:** ರಾಜ್ಯಕ್ಕೆ ನಾವು ಏನನ್ನು ಮಾಡಬೇಕು ಎನ್ನುವುದೇ ಕರ್ತವ್ಯಗಳು. ನಮ್ಮ ಸಂವಿಧಾನದ 4 ನೇ 'ಎ' ಭಾಗದಲ್ಲಿ 51 'ಎ' ವಿಧಿಯಲ್ಲಿ 11 ಮೂಲಭೂತ ಕರ್ತವ್ಯಗಳನ್ನು ಅಳವಡಿಸಿದೆ. ಮೂಲ ಸಂವಿಧಾನವು ಮೂಲಭೂತ ಕರ್ತವ್ಯಗಳನ್ನು ಒಳಗೊಂಡಿರಲಿಲ್ಲ. 1976ರಲ್ಲಿ 42ನೆಯ ತಿದ್ದುಪಡಿ ಕಾಯ್ದೆಯನ್ವಯ 10 ಮೂಲಭೂತ ಕರ್ತವ್ಯಗಳನ್ನು ಅಳವಡಿಸಲಾಗಿದೆ. 2002 ರಲ್ಲಿ ಸಂವಿಧಾನದ 86ನೆಯ ತಿದ್ದುಪಡಿ ಮೂಲಕ 6 ರಿಂದ 14 ವರ್ಷ ವಯೋಮಿತಿಯಲ್ಲಿನ ಎಲ್ಲಾ ಮಕ್ಕಳಿಗೂ ಪೋಷಕರು ಕಡ್ಡಾಯ ಶಿಕ್ಷಣ ಕೊಡಿಸಲು ಅವಕಾಶ ಕಲ್ಪಿಸಿದೆ ಎಂಬ 11ನೆಯ ಕರ್ತವ್ಯವನ್ನು ಸೇರಿಸಲಾಗಿದೆ.

**ರಾಜ್ಯ ನಿರ್ದೇಶಕ ತತ್ವಗಳು:** ನಮ್ಮ ಸಂವಿಧಾನದ 4ನೆಯ ಭಾಗದಲ್ಲಿ ರಾಜ್ಯ ನಿರ್ದೇಶಕ ತತ್ವಗಳನ್ನು ಅಳವಡಿಸಿದೆ. ಇವುಗಳನ್ನು ಐರಿಷ್ ಸಂವಿಧಾನದಿಂದ ಪಡೆಯಲಾಗಿದೆ. ಇವುಗಳು ಸಾಮಾಜಿಕ ಮತ್ತು ಆರ್ಥಿಕ ಪ್ರಜಾಪ್ರಭುತ್ವವನ್ನು ಸ್ಥಾಪಿಸಲು ಬುನಾದಿಯಾಗಿವೆ. ಇವುಗಳನ್ನು ಸರ್ಕಾರ ಜಾರಿಗೊಳಿಸದಿದ್ದರೆ ನ್ಯಾಯಾಲಯದಲ್ಲಿ ಪ್ರಶ್ನಿಸಲು ಸಾಧ್ಯವಿಲ್ಲ. ಆದರೂ ಇವು ದೇಶದ ಆಡಳಿತಕ್ಕೆ ಮೂಲ ಬುನಾದಿಯಾಗಿವೆ. ದೇಶದ ಆಡಳಿತದಲ್ಲಿ ಇವುಗಳನ್ನು ಮೂಲಭೂತ ತತ್ವಗಳೆಂದು ಪರಿಗಣಿಸಲಾಗಿದೆ. ಆದ್ದರಿಂದ ತ್ವರಿತವಾಗಿ ಮತ್ತು ಪ್ರಾಮಾಣಿಕವಾಗಿ ಅನುಷ್ಠಾನಕ್ಕೆ ತರಬೇಕಿದೆ. ಸರ್ಕಾರಗಳು ಇವುಗಳಿಗೆ ಹೆಚ್ಚು ಗಮನವನ್ನು ನೀಡಬೇಕು.

©KTBS Not to be republished

**ಸ್ವತಂತ್ರ ಮತ್ತು ಏಕೀಕೃತ ನ್ಯಾಯಾಂಗ ವ್ಯವಸ್ಥೆ:** ನಮ್ಮ ನ್ಯಾಯಾಂಗವು ಸ್ವತಂತ್ರವಾದ ಮತ್ತು ಏಕೀಕೃತವಾದ ವ್ಯವಸ್ಥೆಯಾಗಿದೆ. ಪ್ರಜೆಗಳ ಹಕ್ಕುಗಳನ್ನು ರಕ್ಷಿಸಿ ನಿರ್ಭಯದಿಂದ ಕೆಲಸ ಮಾಡಲು ನ್ಯಾಯಾಲಯಗಳು ಸ್ವಾತಂತ್ರ್ಯ ಪಡೆದಿವೆ. ಶಾಸಕಾಂಗ ಮತ್ತು ಕಾರ್ಯಾಂಗಗಳು, ನ್ಯಾಯಾಂಗದ ಕಾರ್ಯದಲ್ಲಿ ಹಸ್ತಕ್ಷೇಪ ಮಾಡುವಂತಿಲ್ಲ. ಭಾರತದಲ್ಲಿ ಸಂಯುಕ್ತ ವ್ಯವಸ್ಥೆ ಇದ್ದರೂ, ಏಕೀಕೃತ ನ್ಯಾಯಾಂಗ ವ್ಯವಸ್ಥೆಯನ್ನು ಅಳವಡಿಸಲಾಗಿದೆ. ಆದ್ದರಿಂದ ಸರ್ವೋಚ್ಚ ನ್ಯಾಯಾಲಯ ಪ್ರಮುಖವಾಗಿರುತ್ತದೆ. ಅದರ ಅಡಿಯಲ್ಲಿ ಉಚ್ಚನ್ಯಾಯಾಲಯ (ಹೈಕೋರ್ಟ್) ಮತ್ತು ಇತರ ಅಧೀನ ನ್ಯಾಯಾಲಯಗಳು ಕಾರ್ಯನಿರ್ವಹಿಸುತ್ತವೆ.

**ಏಕ ಪೌರತ್ವ :** ಸಂವಿಧಾನವು ಜನತೆಯ ಸಂಕುಚಿತ ಪ್ರಾಂತೀಯ ಮನೋಭಾವನೆಯನ್ನು ನಿಯಂತ್ರಿಸಿ, ರಾಷ್ಟ್ರೀಯ ಭಾವನೆಯನ್ನು ಬೆಳೆಸಲು ಏಕ ಪೌರತ್ವಕ್ಕೆ ಅವಕಾಶ ಮಾಡಿಕೊಟ್ಟಿದೆ. ಭಾರತದ ಯಾವುದೇ ಪ್ರಜೆ ಯಾವುದೇ ರಾಜ್ಯದಲ್ಲಿ ಜನಿಸಿದರೂ, ಯಾವುದೇ ಪ್ರದೇಶದಲ್ಲಿ ವಾಸಿಸಿದರೂ ಎಲ್ಲರಿಗೂ ಒಂದೇ ಪೌರತ್ವ ಇದ್ದು ಇದಕ್ಕೆ ಸಂಬಂಧಿಸಿದ ಕಾನೂನನ್ನು ಮಾಡಲು ಸಂಸತ್ತಿಗೆ ಅಧಿಕಾರ ನೀಡಿದೆ. ಆದ್ದರಿಂದ ಭಾರತದ ಪ್ರಜೆಗಳೆಲ್ಲರೂ ಒಂದೇ ರೀತಿಯ ನೀತಿ–ನಿಯಮಗಳಿಗೆ ಬದ್ಧರಾಗಿರುವರು.

**ವಯಸ್ಕ ಮತದಾನ ಪದ್ಧತಿ :** ನಮ್ಮ ಸಂವಿಧಾನವು ವಯಸ್ಕ ಮತದಾನ ಪದ್ಧತಿಗೆ ಅವಕಾಶ ಮಾಡಿಕೊಟ್ಟಿದೆ. ಯಾವುದೇ ತಾರತಮ್ಯವಿಲ್ಲದೆ 18 ವರ್ಷ ಮೇಲ್ಪಟ್ಟ ಎಲ್ಲಾ ಪ್ರಜೆಗಳಿಗೂ ಮತದಾನದ ಹಕ್ಕನ್ನು ನೀಡಲಾಗಿದೆ. ಇದು ಜನತೆಯ ಪರಮಾಧಿಕಾರದ ಸಂಕೇತವಾಗಿದೆ.

**ದ್ವಿಸದನ ಶಾಸಕಾಂಗ :** ಭಾರತದ ಶಾಸಕಾಂಗವನ್ನು ಸಂಸತ್ತು ಎಂದು ಕರೆಯುತ್ತಾರೆ. ಈ ಸಂಸತ್ತು ದ್ವಿಸದನ ಪದ್ಧತಿಯನ್ನು ಒಳಗೊಂಡಿದ್ದು, ಕೆಳಮನೆ (ಲೋಕಸಭೆ) ಮತ್ತು ಮೇಲ್ಮನೆ (ರಾಜ್ಯಸಭೆ) ಯನ್ನು ಒಳಗೊಂಡಿದೆ.


**ಪಕ್ಷ ಪದ್ಧತಿ :** ರಾಜಕೀಯ ಪಕ್ಷಗಳು ಪ್ರಜಾಪ್ರಭುತ್ವ ವ್ಯವಸ್ಥೆಯ ಬುನಾದಿ. ಭಾರತದಲ್ಲಿ ಅನೇಕ ರಾಜಕೀಯ ಪಕ್ಷಗಳಿರುವುದರಿಂದ ಬಹುಪಕ್ಷ ಪದ್ಧತಿ ಅಸ್ತಿತ್ವದಲ್ಲಿದೆ. ಸಾರ್ವತ್ರಿಕ ಚುನಾವಣೆಯಲ್ಲಿ ಬಹುಮತ ಪಡೆದ ಪಕ್ಷ ಆಳುವ ಪಕ್ಷವಾದರೆ ಉಳಿದ ಪಕ್ಷಗಳು ವಿರೋಧ ಪಕ್ಷಗಳಾಗುತ್ತವೆ.

## ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳು

ವ್ಯಕ್ತಿಯ ವ್ಯಕ್ತಿತ್ವದ ವಿಕಸನಕ್ಕೆ ಅಗತ್ಯವಾದ ಸಾಮಾಜಿಕ ಮತ್ತು ರಾಜಕೀಯ ವಾತಾವರಣವನ್ನೇ ಮೂಲಭೂತ ಹಕ್ಕುಗಳು ಎಂದು ಕರೆಯುತ್ತಾರೆ. ಸಮಾಜದಲ್ಲಿ ಮನುಷ್ಯನು ನಾಗರೀಕ ಜೀವನ ನಡೆಸಲು ಮೂಲಭೂತ ಹಕ್ಕುಗಳು ಅತ್ಯವಶ್ಯಕ. ಈ ಹಕ್ಕುಗಳು ಪ್ರಜಾಪ್ರಭುತ್ವದ ಯಶಸ್ಸಿಗೆ ಅಗತ್ಯವಾದವುಗಳು. ನಮ್ಮ ಸಂವಿಧಾನದ 3ನೇ ಭಾಗದಲ್ಲಿ 7 ಮೂಲಭೂತ ಹಕ್ಕುಗಳನ್ನು ಅಳವಡಿಸಲಾಗಿತ್ತು. ಆದರೆ ಸಂವಿಧಾನದ 44ನೇ ತಿದ್ದುಪಡಿಯಿಂದಾಗಿ ಆಸ್ತಿ ಹಕ್ಕನ್ನು ರದ್ದು ಪಡಿಸಲಾಗಿದೆ. ಪ್ರಸ್ತುತ 06 ಮೂಲಭೂತ ಹಕ್ಕುಗಳಿವೆ.

**ಸಮಾನತೆಯ ಹಕ್ಕು :** ಪ್ರಜಾಪ್ರಭುತ್ವದ ಯಶಸ್ಸಿಗೆ ಈ ಹಕ್ಕು ಅಗತ್ಯವಾಗಿದ್ದು, ಶಾಸನಾತ್ಮಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಸಮಾನತೆ ಕಲ್ಪಿಸಿದ್ದಾರೆ. ಕಾನೂನಿನ ಮುಂದೆ ಎಲ್ಲರೂ ಸಮಾನರು, ಕಾನೂನಿಗಿಂತ ಯಾರೂ ಶ್ರೇಷ್ಠರಲ್ಲ. ಪ್ರತಿಯೊಬ್ಬರೂ ರಾಜ್ಯದ ಕಾನೂನಿಗೆ ಬದ್ಧರಾಗಿರಬೇಕು. ಜಾತಿ, ಧರ್ಮ, ಲಿಂಗ, ಜನ್ಮಸ್ಥಳಗಳ ಆಧಾರದ ಮೇಲೆ ಭೇದಭಾವ ಮಾಡಬಾರದು. ಸಾರ್ವಜನಿಕ ಸ್ಥಳಗಳು, ಹೋಟೆಲ್‌ಗಳು, ಅಂಗಡಿಗಳು, ಮನರಂಜನಾ ಸ್ಥಳಗಳು, ದೇವಾಲಯಗಳು ಮುಂತಾದ ಸ್ಥಳಗಳಲ್ಲಿ ಯಾರೊಬ್ಬರಿಗೂ ಪ್ರವೇಶ ನಿರಾಕರಿಸಬಾರದು. ಸರ್ಕಾರಿ ಉದ್ಯೋಗ ಸೇರಲು ಪ್ರತಿಯೊಬ್ಬರಿಗೂ ಸಮಾನ ಅವಕಾಶ ದೊರಕಿಸಿದೆ ಅಸ್ಪೃಶ್ಯತೆಯನ್ನು ಆಚರಿಸಬಾರದು.

©KTBS Not to be republished




**ನಿಮಗಿದು ತಿಳಿದಿರಲಿ:**

1895ರಲ್ಲಿ ರಾಷ್ಟ್ರೀಯ ಕಾಂಗ್ರೆಸ್, ಪ್ರಜೆಗಳ ಹಕ್ಕುಗಳ ಬಗ್ಗೆ ಆಗ್ರಹಪಡಿಸಿತು.

1895ರಲ್ಲಿ ಬಾಲಗಂಗಾಧರ ತಿಲಕ್ ತಮ್ಮ 'ಸ್ವರಾಜ್ಯ ಬಿಲ್'ನಲ್ಲಿ ಹಕ್ಕುಗಳಿಗಾಗಿ ಒತ್ತಾಯಿಸಿದ್ದರು.

1925ರಲ್ಲಿ ಶ್ರೀಮತಿ ಅನಿಬೆಸೆಂಟ್ 'ಕಾಮನ್‌ವೆಲ್ತ್ ಆಫ್ ಇಂಡಿಯಾ' ಬಿಲ್‌ನಲ್ಲಿ ವ್ಯಕ್ತಿ ಸ್ವಾತಂತ್ರ್ಯ, ಆತ್ಮಸಾಕ್ಷಿ ಸ್ವಾತಂತ್ರ್ಯ, ವಾಕ್ ಸ್ವಾತಂತ್ರ್ಯ, ಕಾನೂನಿನ ಮುಂದೆ ಸಮಾನರು ಎಂಬುದನ್ನು ಪ್ರತಿಪಾದಿಸಿದರು.

1945ರ ವರದಿ 1946ರ ಕ್ಯಾಬಿನೆಟ್ ಮಿಷನ್ ಮೂಲಭೂತ ಹಕ್ಕುಗಳನ್ನು ಬೆಂಬಲಿಸಿದವು.

**ಸ್ವಾತಂತ್ರ್ಯದ ಹಕ್ಕು:** ಮೂಲಭೂತ ಹಕ್ಕುಗಳಲ್ಲಿ ಸ್ವಾತಂತ್ರ್ಯದ ಹಕ್ಕು ಮಹತ್ವದ ಸ್ಥಾನ ಪಡೆದಿದೆ. ಈ ಹಕ್ಕಿನಡಿಯಲ್ಲಿ ವಾಕ್ ಮತ್ತು ಅಭಿಪ್ರಾಯ ವ್ಯಕ್ತಪಡಿಸುವ, ಶಸ್ತ್ರರಹಿತ ಶಾಂತಿಯುತವಾಗಿ ಸಭೆ ಸೇರುವ, ಸಂಘ ಸಂಸ್ಥೆಗಳನ್ನು ಸ್ಥಾಪಿಸುವ, ಭಾರತದಲ್ಲಿ ಸಂಚರಿಸುವ, ವಾಸಿಸುವ, ಯಾವುದೇ ವೃತ್ತಿ ಹೊಂದುವ ಸ್ವಾತಂತ್ರ್ಯ ನೀಡಲಾಗಿದೆ. ಪೌರರಿಗೆ ಇದು ರಕ್ಷಣಾತ್ಮಕ ಹಕ್ಕಾಗಿದ್ದು, ಸಕಾರಣವಿಲ್ಲದೆ ವ್ಯಕ್ತಿಯನ್ನು ಬಂಧಿಸುವಂತಿಲ್ಲ ಮತ್ತು ರಾಜ್ಯ ಕಾನೂನನ್ನು ಮಾಡುವುದರ ಮೂಲಕ ವ್ಯಕ್ತಿಯ ಜೀವ ತೆಗೆಯುವ ಅಥವಾ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವಂತಿಲ್ಲ.

**ಶೋಷಣೆಯ ವಿರುದ್ಧದ ಹಕ್ಕು :** ಶೋಷಣೆ ಒಂದು ಸಾಮಾಜಿಕ ಪಿಡುಗಾಗಿದೆ. ಈ ಪಿಡುಗನ್ನು ನಿರ್ಮೂಲನ ಮಾಡಲು ಶೋಷಣೆಯ ವಿರುದ್ಧದ ಹಕ್ಕನ್ನು ಸಂವಿಧಾನದಲ್ಲಿ ಅಳವಡಿಸಲಾಗಿದೆ. ರಾಜ್ಯವಾಗಲೀ, ಯಾವುದೇ ವ್ಯಕ್ತಿಯಾಗಲೀ, ದುರ್ಬಲರನ್ನು, ಬಡವರನ್ನು, ಮಹಿಳೆಯರನ್ನು, ಮಕ್ಕಳನ್ನು ಶೋಷಣೆ ಮಾಡುವಂತಿಲ್ಲ. ಭಿಕ್ಷಾಟನೆ, ದೇವದಾಸಿ ಪದ್ಧತಿ, ಸತಿ ಆಚರಣೆ, ಅನೈತಿಕ ಚಟುವಟಿಕೆ ಮತ್ತು ಬಲವಂತ ದುಡಿಮೆಯನ್ನು ನಿಷೇಧಿಸಲಾಗಿದೆ. 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಕಾರ್ಖಾನೆ, ಗಣಿ ಅಥವಾ ಅಪಾಯಕಾರಿ ಕೆಲಸಗಳಿಗೆ ನೇಮಿಸಿಕೊಳ್ಳುವಂತಿಲ್ಲ.

**ಧಾರ್ಮಿಕ ಸ್ವಾತಂತ್ರ್ಯದ ಹಕ್ಕು :** ಭಾರತ ಜಾತ್ಯತೀತ (ಧರ್ಮನಿರಪೇಕ್ಷ) ರಾಷ್ಟ್ರ. ಯಾವುದೇ ಧರ್ಮವನ್ನು ರಾಷ್ಟ್ರೀಯ ಧರ್ಮವನ್ನಾಗಿ ಅಂಗೀಕರಿಸಿಲ್ಲ. ಪೌರರು ತಮ್ಮ ಆತ್ಮಸಾಕ್ಷಿಗೆ ಅನುಗುಣವಾಗಿ ಯಾವುದೇ ಧರ್ಮವನ್ನು ಸ್ವೀಕರಿಸುವ, ಪಾಲಿಸುವ, ಪ್ರಚಾರ ಮಾಡುವ ಸ್ವಾತಂತ್ರ್ಯ ಪಡೆದಿದ್ದಾರೆ. ಧಾರ್ಮಿಕ ಸಂಸ್ಥೆಗಳ ನಿರ್ವಹಣೆಗಾಗಿ ತೆರಿಗೆ ಕೊಡಬೇಕೆಂದು ಒತ್ತಾಯಿಸುವಂತಿಲ್ಲ. ಧಾರ್ಮಿಕ ಸಂಸ್ಥೆಗಳನ್ನು ರಾಜಕೀಯ ಉದ್ದೇಶಗಳಿಗೆ ಬಳಸುವಂತಿಲ್ಲ.

**ಸಾಂಸ್ಕೃತಿಕ ಮತ್ತು ವಿದ್ಯಾಭ್ಯಾಸದ ಹಕ್ಕು:** ದೇಶದಲ್ಲಿ ವಾಸಿಸುವ ಪೌರರು ತಮ್ಮದೇ ಆದ ಭಾಷೆ, ಲಿಪಿ, ಸಂಸ್ಕೃತಿಯನ್ನು ಹೊಂದಿದ್ದಾರೆ. ಇವುಗಳ ರಕ್ಷಣೆ ರಾಜ್ಯದ್ದಾಗಿರುತ್ತದೆ. ಧಾರ್ಮಿಕ–ಭಾಷಾ ಅಲ್ಪಸಂಖ್ಯಾತರ ಹಿತಾಸಕ್ತಿಗಳನ್ನು ರಕ್ಷಿಸುವ ಉದ್ದೇಶದಿಂದ ಈ ಹಕ್ಕನ್ನು ಸಂವಿಧಾನದಲ್ಲಿ ಅಳವಡಿಸಲಾಗಿದೆ. ಅಲ್ಪಸಂಖ್ಯಾತರ ಸಂಸ್ಥೆಗಳು ಮತ್ತು ರಾಜ್ಯದ ಧನಸಹಾಯ ಪಡೆದು ನಡೆಸುವ ವಿದ್ಯಾ ಸಂಸ್ಥೆಗಳಲ್ಲಿ ಯಾರಿಗೇ ಆಗಲಿ ಪ್ರವೇಶ ನಿರಾಕರಿಸುವಂತಿಲ್ಲ.

©KTBS Not to be republished

**ನಿಮಗಿದು ತಿಳಿದಿರಲಿ:**

*ಸಂವಿಧಾನದ 86 ನೇ ತಿದ್ದುಪಡಿ ಮಾಡಿ 21 'ಎ' ವಿಧಿಯನ್ವಯ 2002 ರಲ್ಲಿ ಶಿಕ್ಷಣವನ್ನು ಒಂದು ಹಕ್ಕನ್ನಾಗಿ ಪರಿಗಣಿಸಲಾಗಿದೆ. ಇದರ ಅನ್ವಯ 6 ರಿಂದ 14 ವರ್ಷ ವಯಸ್ಸಿನ ಎಲ್ಲಾ ಮಕ್ಕಳಿಗೂ ರಾಜ್ಯವೇ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡಬೇಕು. ಕರ್ನಾಟಕ ರಾಜ್ಯವು ಶಿಕ್ಷಣ ಹಕ್ಕು ಕಾಯಿದೆ (ಆರ್.ಟಿ.ಇ. 2009) ಯನ್ನು ಜಾರಿಗೊಳಿಸಿದೆ.*

**ಸಂವಿಧಾನದ ಪರಿಹಾರದ ಹಕ್ಕು :** ಮೂಲಭೂತ ಹಕ್ಕುಗಳ ರಕ್ಷಣೆಗಾಗಿ ಸಂವಿಧಾನದ 32ನೇ ವಿಧಿಯಲ್ಲಿ ಅವಕಾಶ ಮಾಡಿಕೊಡಲಾಗಿದೆ. ಸಂವಿಧಾನದಲ್ಲಿ ಇದೊಂದು ವಿಶೇಷ ಲಕ್ಷಣವಾಗಿದೆ. ಆದುದರಿಂದ ಬಿ.ಆರ್. ಅಂಬೇಡ್ಕರ್ ಈ ಹಕ್ಕನ್ನು 'ಸಂವಿಧಾನದ ಆತ್ಮ ಮತ್ತು ಹೃದಯ'ವಿದ್ದಂತೆ ಎಂದಿದ್ದಾರೆ. ಮೂಲಭೂತ ಹಕ್ಕುಗಳಿಗೆ ಯಾವುದೇ ವ್ಯಕ್ತಿಯಿಂದಾಗಲೀ, ರಾಜ್ಯ ಅಥವಾ ಕೇಂದ್ರ ಸರ್ಕಾರದಿಂದಾಗಲೀ ಧಕ್ಕೆ ಉಂಟಾದರೆ ರಕ್ಷಣೆಗಾಗಿ ನೇರವಾಗಿ ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಬಹುದು. ಆದುದರಿಂದ ಸರ್ವೋಚ್ಚ ನ್ಯಾಯಾಲಯವನ್ನು 'ಮೂಲಭೂತ ಹಕ್ಕುಗಳ ರಕ್ಷಕ' ಎಂದು ಕರೆಯಲಾಗಿದೆ. ವಿಧಿ 226ರನ್ವಯ ಉಚ್ಚ ನ್ಯಾಯಾಲಯಗಳು ಕೂಡಾ ಹಕ್ಕುಗಳ ರಕ್ಷಣೆಗಾಗಿ ಈ ಕೆಳಕಂಡ ರಿಟ್‌ಗಳನ್ನು ಹೊರಡಿಸುವ ಅಧಿಕಾರ ಹೊಂದಿರುತ್ತವೆ.

**ಎ) ಬಂಧೀ ಪ್ರತ್ಯಕ್ಷೀಕರಣ :** ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯಗಳು ಅಕ್ರಮವಾಗಿ ಬಂಧಿತವಾದ ವ್ಯಕ್ತಿಯನ್ನು ತನ್ನ ಮುಂದೆ ನಿಗದಿತ ಅವಧಿಯೊಳಗೆ ಹಾಜರುಪಡಿಸುವಂತೆ ನೀಡುವ ಆಜ್ಞೆಯೇ ಬಂಧಿ ಪ್ರತ್ಯಕ್ಷೀಕರಣವಾಗಿರುತ್ತದೆ. ಇದು ವ್ಯಕ್ತಿ ಸ್ವಾತಂತ್ರ್ಯವನ್ನು ರಕ್ಷಿಸುತ್ತದೆ.

**ಚಟುವಟಿಕೆ:**

*ರಾಜ್ಯದಲ್ಲಿನ ಮಾನವ ಹಕ್ಕು ಆಯೋಗದ ಬಗ್ಗೆ ಮಾಹಿತಿ ಸಂಗ್ರಹಿಸಿ. ಮಾನವ ಹಕ್ಕು ಉಲ್ಲಂಘನೆ ಆದಾಗ ಆಯೋಗವು ತೆಗೆದುಕೊಂಡ ಕ್ರಮಗಳ ಬಗ್ಗೆ ಸುದ್ದಿ ಮಾಧ್ಯಮಗಳಲ್ಲಿನ ಮಾಹಿತಿ ತಿಳಿಯಿರಿ.*

**ಬಿ) ಪರಮಾದೇಶ :** ಶಾಸಕಾಂಗ, ಕಾರ್ಯಾಂಗ ಅಥವಾ ಅವುಗಳ ಅಧೀನ ಸಂಸ್ಥೆಗಳು ನಿರ್ವಹಿಸಬೇಕಾದ ಕಾರ್ಯಗಳನ್ನು, ನಿರ್ವಹಿಸದೇ ಇದ್ದಾಗ, ಸಂಬಂಧಪಟ್ಟ ಕಾರ್ಯಗಳನ್ನು ನಿಗದಿತ ಅವಧಿಯೊಳಗೆ ನಿರ್ವಹಿಸುವಂತೆ ಸರ್ವೋಚ್ಚ ನ್ಯಾಯಾಲಯ ಅಥವಾ ಉಚ್ಚ ನ್ಯಾಯಾಲಯ ನೀಡುವ ಆಜ್ಞೆಯೇ ಪರಮಾದೇಶವಾಗಿರುತ್ತದೆ. ಈ ಆಜ್ಞೆಯನ್ನು ಖಾಸಗಿ ವ್ಯಕ್ತಿಗಳು, ರಾಜ್ಯಪಾಲರು ಮತ್ತು ರಾಷ್ಟ್ರಾಧ್ಯಕ್ಷರ ವಿರುದ್ಧ ಹೊರಡಿಸಲು ಬರುವುದಿಲ್ಲ.

**ಸಿ) ಪ್ರತಿಬಂಧಕಾಜ್ಞೆ :** ಅಧೀನ ನ್ಯಾಯಾಲಯಗಳು ತಮ್ಮ ಅಧಿಕಾರ ವ್ಯಾಪ್ತಿಯನ್ನು ಮೀರಿ ಅಥವಾ ನೈಸರ್ಗಿಕ ನಿಯಮಗಳಿಗೆ ವಿರುದ್ಧವಾಗಿ ತೀರ್ಪು ನೀಡಿದಾಗ, ಉನ್ನತ ನ್ಯಾಯಾಲಯ ಅಂತಹ ತೀರ್ಪನ್ನು ತಕ್ಷಣ ಸ್ಥಗಿತಗೊಳಿಸುವಂತೆ ನೀಡುವ ಆಜ್ಞೆಯೇ ಪ್ರತಿಬಂಧಕಾಜ್ಞೆಯಾಗಿರುತ್ತದೆ. ಈ ಆಜ್ಞೆಯನ್ನು ಉನ್ನತ ನ್ಯಾಯಾಲಯ ಅಧೀನ ನ್ಯಾಯಾಲಯಗಳ ವಿರುದ್ಧ ಮಾತ್ರ ಹೊರಡಿಸಬಹುದಾಗಿದೆ.

**ಡಿ) ಉತ್ಪ್ರೇಕ್ಷಣಾ ಲೇಖ (ಸರ್ಷಿಯೋರರಿ) :** ಅಧಿನ ನ್ಯಾಯಾಲಯಗಳು ತಮ್ಮ ಅಧಿಕಾರ ವ್ಯಾಪ್ತಿಯನ್ನು ಮೀರಿ ಅಥವಾ ನೈಸರ್ಗಿಕ ನಿಯಮಗಳಿಗೆ ವಿರುದ್ಧವಾಗಿ ತೀರ್ಪು ನೀಡಿದಾಗ, ಉನ್ನತ ನ್ಯಾಯಾಲಯ ತೀರ್ಪಿಗೆ ಸಂಬಂಧಪಟ್ಟ ದಾಖಲೆಗಳನ್ನು ತನಗೆ ನೀಡುವಂತೆ ಆಜ್ಞೆ ಮಾಡುವದೆ ಉತ್ಪ್ರೇಕ್ಷಣಾ ಲೇಖವಾಗಿರುತ್ತದೆ.

**ಇ) ಅಧಿಕಾರ ಲೇಖ (ಕೋ–ವಾರಂಟ್) :** ಸರಿಯಾದ ವ್ಯಕ್ತಿ ಸರಿಯಾದ ಸಾರ್ವಜನಿಕ ಸ್ಥಾನವನ್ನು ಹೊಂದುವಂತೆ ಉನ್ನತ ನ್ಯಾಯಾಲಯ ನೀಡುವ ಆಜ್ಞೆಯೇ ಅಧಿಕಾರ ಲೇಖವಾಗಿರುತ್ತದೆ. ಅಕ್ರಮವಾಗಿ ಸಾರ್ವಜನಿಕ ಸ್ಥಾನಗಳನ್ನು ಹೊಂದುವರ ವಿರುದ್ಧ ಉನ್ನತ ನ್ಯಾಯಾಲಯ ಈ ಆಜ್ಞೆಯನ್ನು ಹೊರಡಿಸುತ್ತದೆ.

ಸಾಮಾಜಿಕವಾಗಿ ನಷ್ಟವಾಗಿರುವ ಹಕ್ಕುಗಳ ರಕ್ಷಣೆಗಾಗಿ ಅಥವಾ ಸಾರ್ವಜನಿಕ ಹಿತಾಸಕ್ತಿ ರಕ್ಷಿಸುವುದಕ್ಕಾಗಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಗಳನ್ನು (Public interest litigation) ಹೂಡಲಾಗುತ್ತದೆ.

©KTBS Not to be republished

ಶಾಸನೀಯ ಹಕ್ಕುಗಳು, ಜೀವನಾವಶ್ಯಕತೆಗಳನ್ನು ಪಡೆಯುವ ಹಕ್ಕು, ಪರಿಸರ ಮಾಲಿನ್ಯದಿಂದ ಜೀವ ರಕ್ಷಣೆಯ ಹಕ್ಕು, ಗೌರವಯುತ ಜೀವನದ ಹಕ್ಕು ಮೊದಲಾದವುಗಳಿಗೆ ಸಂಬಂಧಿಸಿದಂತೆ ಈ ಮೊಕದ್ದಮೆಗಳನ್ನು ಹೂಡಬಹುದಾಗಿದೆ. ಸಂಘ ಸಂಸ್ಥೆಗಳು, ವ್ಯಕ್ತಿಗಳು ಸಾಮಾನ್ಯವಾಗಿ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಬಹುದಾಗಿದೆ. ಇತ್ತೀಚೆಗೆ ಮಾಹಿತಿಯ (ಮಾಧ್ಯಮಗಳ ಮೂಲಕ) ಆಧಾರದ ಮೇಲೆ ನ್ಯಾಯಾಲಯಗಳೇ ಸ್ವಯಂ ಪ್ರೇರಿತವಾಗಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಗಳನ್ನು ದಾಖಲಿಸಿಕೊಳ್ಳುತ್ತಿರುವುದನ್ನು ಗಮನಿಸಬಹುದಾಗಿದೆ.

### ಮೂಲಭೂತ ಕರ್ತವ್ಯಗಳು

ಹಕ್ಕು ಮತ್ತು ಕರ್ತವ್ಯಗಳು ಒಂದೇ ನಾಣ್ಯದ ಎರಡು ಮುಖಗಳು. ಕರ್ತವ್ಯರಹಿತ ಹಕ್ಕಿಗೆ ಪ್ರಾಮುಖ್ಯತೆಯಾಗಲೀ, ಮೌಲ್ಯವಾಗಲೀ ಇರುವುದಿಲ್ಲ. ಸಂವಿಧಾನಕ್ಕೆ 1976ರಲ್ಲಿ 42ನೆಯ ತಿದ್ದುಪಡಿ ಮಾಡಿ 4 'ಎ' ಭಾಗ 51 'ಎ' ವಿಧಿಯಲ್ಲಿ 10 ಮೂಲಭೂತ ಕರ್ತವ್ಯಗಳನ್ನು ಸೇರಿಸಲಾಯಿತು. 2002ರಲ್ಲಿ 86ನೆಯ ಸಂವಿಧಾನ ತಿದ್ದುಪಡಿಯಂತೆ 11ನೇ ಮೂಲಭೂತ ಕರ್ತವ್ಯವನ್ನು ಸೇರಿಸಲಾಗಿದೆ. ಇವು ಈ ಕೆಳಕಂಡಂತಿವೆ.

1. ನಮ್ಮ ಸಂವಿಧಾನ, ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು.
2. ಸ್ವಾತಂತ್ರ್ಯ ಚಳವಳಿಯ ಸ್ಫೂರ್ತಿದಾಯಕ ಆದರ್ಶ ತತ್ವಗಳನ್ನು ಪಾಲಿಸುವುದು.
3. ಭಾರತದ ಸಾರ್ವಭೌಮತೆ, ಏಕತೆ, ಸಮಗ್ರತೆಯನ್ನು ಕಾಪಾಡುವುದು ಮತ್ತು ರಕ್ಷಿಸುವುದು.
4. ಅಗತ್ಯ ಬಂದಾಗ ರಾಷ್ಟ್ರವನ್ನು ರಕ್ಷಿಸಿ ದೇಶದ ಸೇವೆ ಮಾಡಬೇಕು.
5. ಭಾರತೀಯರಲ್ಲಿ ಸಾಮರಸ್ಯ ಮತ್ತು ಸಹೋದರತ್ವ ಭಾವನೆಯನ್ನು ಬೆಳೆಸಬೇಕು ಮತ್ತು ಮಹಿಳೆಯರ ಗೌರವಕ್ಕೆ ಭಂಗ ತರುವ ಆಚರಣೆಗಳನ್ನು ತ್ಯಜಿಸಬೇಕು.
6. ನಮ್ಮ ಸಂಘಟಿತ ಸಂಸ್ಕೃತಿಯ ಪರಂಪರೆಯನ್ನು ಗೌರವಿಸಿ ರಕ್ಷಿಸಬೇಕು.
7. ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯ ಮೃಗಗಳು ಸೇರಿದಂತೆ ಪ್ರಕೃತಿ, ಪರಿಸರವನ್ನು ರಕ್ಷಿಸಿ ಅಭಿವೃದ್ಧಿಪಡಿಸಬೇಕು ಹಾಗೂ ಜೀವಂತ ಪ್ರಾಣಿಗಳಿಗೆ ಅನುಕಂಪ ತೋರಿಸಬೇಕು.
8. ವೈಜ್ಞಾನಿಕ ಹಾಗೂ ಮಾನವೀಯತೆಯ ಗುಣಗಳ ವಿಚಾರಣಾ ಹಾಗೂ ಸುಧಾರಣಾ ಭಾವನೆಯನ್ನು ಬೆಳೆಸಿಕೊಳ್ಳಬೇಕು.
9. ಸಾರ್ವಜನಿಕ ಆಸ್ತಿಯನ್ನು ರಕ್ಷಿಸಬೇಕು ಮತ್ತು ಹಿಂಸಾಮಾರ್ಗವನ್ನು ತ್ಯಜಿಸಬೇಕು.
10. ವೈಯಕ್ತಿಕ ಹಾಗೂ ಸಾಮೂಹಿಕ ಚಟುವಟಿಕೆಯಲ್ಲಿ ಪ್ರಾವೀಣ್ಯತೆಯನ್ನು ಪ್ರದರ್ಶಿಸಿ ರಾಷ್ಟ್ರದ ಪ್ರಗತಿಗೆ ಶ್ರಮಿಸಬೇಕು.
11. ತಂದೆ/ತಾಯಿ ಅಥವಾ ಪೋಷಕರು 6 ವರ್ಷದಿಂದ 14 ವರ್ಷದವರೆಗೆ ತಮ್ಮ ಮಗುವಿನ ಶಿಕ್ಷಣಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕು.

ಮೂಲಭೂತ ಹಕ್ಕುಗಳಿಗಿರುವಂತೆ ಕರ್ತವ್ಯಗಳಿಗೆ ನ್ಯಾಯಾಲಯದ ರಕ್ಷಣೆ ಇರುವುದಿಲ್ಲ. ಕರ್ತವ್ಯಗಳನ್ನು ಉಲ್ಲಂಘಿಸಿದವರಿಗೆ ಸಾಮಾನ್ಯ ಕಾನೂನಿನನ್ವಯ ಶಿಕ್ಷೆ ವಿಧಿಸಲಾಗುತ್ತದೆ.

**ಚರ್ಚಿಸಿ:**

ಮೂಲಭೂತ ಹಕ್ಕುಗಳನ್ನು ಅನುಭವಿಸಲು ಬಯಸುತ್ತೇವೆಯೋ ಅದಕ್ಕಿಂತ ಹೆಚ್ಚಿನದಾಗಿ ಮೂಲಭೂತ ಕರ್ತವ್ಯಗಳನ್ನು ನಿರ್ವಹಿಸಬೇಕಿದೆ.

**ರಾಜ್ಯ ನಿರ್ದೇಶಕ ತತ್ವಗಳು :** ಸುಖೀ ರಾಜ್ಯದ ಕಲ್ಪನೆಯಿಂದ ರಾಜ್ಯ ನಿರ್ದೇಶಕ ತತ್ವಗಳನ್ನು ಸಂವಿಧಾನದಲ್ಲಿ ಅಳವಡಿಸಲಾಗಿದೆ. ಸಂವಿಧಾನದ 4ನೇ ಭಾಗದಲ್ಲಿ 36 ರಿಂದ 51ನೇ ವಿಧಿಗಳಡಿಯಲ್ಲಿ ತಿಳಿಸಲಾಗಿದೆ. ಈ ತತ್ವಗಳು ರಾಜ್ಯ ನಿರ್ವಹಿಸಬೇಕಾಗಿರುವ ಕಾರ್ಯಕ್ರಮಗಳ ಮಾರ್ಗಸೂಚಿಯಾಗಿದ್ದು,

© KTBS Not to be republished

ನಮ್ಮ ಸಂವಿಧಾನದ ರಚನಾಕಾರರು ಐರಿಷ್ ಸಂವಿಧಾನದಿಂದ ಪ್ರಭಾವಿತರಾಗಿ (ಸಾಮಾಜಿಕ ನಿರ್ದೇಶಕ ತತ್ವಗಳು) ನಮ್ಮ ಸಂವಿಧಾನದಲ್ಲಿಯೂ ಇವುಗಳನ್ನು ಅಳವಡಿಸಿದ್ದಾರೆ. ರಾಜ್ಯ ನಿರ್ದೇಶಕ ತತ್ವಗಳು ಕೇಂದ್ರ ಮತ್ತು ರಾಜ್ಯಗಳಿಗೆ ನಿರ್ದೇಶನ ಸ್ವರೂಪದಲ್ಲಿದೆ. ಸರ್ಕಾರವು ಪ್ರಜೆಗಳಿಗೆ ಆರ್ಥಿಕ, ಸಾಮಾಜಿಕ, ರಾಜಕೀಯ ನ್ಯಾಯ ದೊರಕಿಸಿಕೊಡುವ ಉದ್ದೇಶ ಹೊಂದಿದೆ. ಆದರೆ ಇವುಗಳು ನೈತಿಕ ತಳಹದಿಯ ಮೇಲೆ ನಿಂತಿದ್ದು, ಸರ್ಕಾರ ಇವುಗಳನ್ನು (ಕೇಂದ್ರ-ರಾಜ್ಯ, ಸ್ಥಳೀಯ) ಕಾರ್ಯಗತಗೊಳಿಸದಿದ್ದರೆ ನ್ಯಾಯಾಲಯದಲ್ಲಿ ಪ್ರಶ್ನಿಸುವಂತಿಲ್ಲ. ಈ ತತ್ವಗಳು ಸಮಾಜವಾದಿ, ಉದಾರವಾದಿ ಮತ್ತು ಗಾಂಧೀಜಿಯವರ ಆದರ್ಶಗಳನ್ನು ಆಧರಿಸಿ ರೂಪುಗೊಂಡಿವೆ. ಯಾವುದೇ ಪಕ್ಷವಾಗಲೀ, ವ್ಯಕ್ತಿಯಾಗಲೀ ಅಧಿಕಾರಕ್ಕೆ ಬಂದರೂ ಈ ತತ್ವಗಳನ್ನು ಗಮನದಲ್ಲಿಟ್ಟುಕೊಂಡು ಆಡಳಿತ ನಡೆಸಬೇಕು. ಆದ್ದರಿಂದ ಇವುಗಳನ್ನು ಮಾರ್ಗಸೂಚಿ ತತ್ವಗಳೆಂದು ಕರೆಯುತ್ತಾರೆ.

1. ಎಲ್ಲಾ ಪೌರರಿಗೂ ತಮ್ಮ ಜೀವನೋಪಾಯಕ್ಕೆ ಬೇಕಾದ ಸೌಲಭ್ಯಗಳನ್ನು ಒದಗಿಸುವುದು.
2. ಸಮುದಾಯದಲ್ಲಿನ ಸಂಪತ್ತು ಮತ್ತು ಉತ್ಪಾದನಾ ಸಾಧನಗಳು ಕೆಲವೇ ಜನರ ಸ್ವತ್ತಾಗದಂತೆ ತಡೆಗಟ್ಟುವುದು.
3. ಸ್ತ್ರೀ ಮತ್ತು ಪುರುಷರೆಲ್ಲರಿಗೂ ಸಮಾನ ಕೆಲಸಕ್ಕೆ ಸಮಾನ ವೇತನ ನೀಡುವುದು, ಕಾರ್ಮಿಕರ ಯೋಗಕ್ಷೇಮವನ್ನು ರಕ್ಷಿಸುವುದು.
4. ವೃದ್ಧರು, ರೋಗಿಗಳು, ದುರ್ಬಲ ವರ್ಗದವರು ಮತ್ತು ಅಸಮರ್ಥರಿಗೆ ಸಹಾಯಧನ ನೀಡುವುದು.
5. ದೇಶದಾದ್ಯಂತ ಏಕರೂಪದ ನಾಗರಿಕ ಕಾನೂನನ್ನು ಜಾರಿಗೆ ತರುವುದು.
6. 6 ವರ್ಷದವರೆಗಿನ ಎಲ್ಲಾ ಮಕ್ಕಳಿಗೆ ಬಾಲ್ಯ ಪೋಷಣೆ ಮತ್ತು ಶಾಲಾ ಪೂರ್ವ ಶಿಕ್ಷಣವನ್ನು ಕೊಡಲು ರಾಜ್ಯ ಪ್ರಯತ್ನಿಸಬೇಕು.
7. ಐತಿಹಾಸಿಕ ಸ್ಮಾರಕಗಳು ಮತ್ತು ಸ್ಥಳಗಳನ್ನು ರಕ್ಷಿಸುವುದು.
8. ನ್ಯಾಯಾಂಗವನ್ನು ಕಾರ್ಯಾಂಗದಿಂದ ಪ್ರತ್ಯೇಕಿಸುವುದು.
9. ಅಂತರರಾಷ್ಟ್ರೀಯ ಶಾಂತಿಯುತ ವಿದೇಶಿ ನೀತಿಯನ್ನು ಪಾಲಿಸುವುದು. ಭದ್ರತೆ ಕಾಪಾಡಿ ವಿಶ್ವ ಕಾನೂನನ್ನು ಗೌರವಿಸುವುದು.
10. ಗ್ರಾಮ ಪಂಚಾಯಿತಿಗಳನ್ನು ಸ್ಥಾಪಿಸುವುದು.
11. ಗ್ರಾಮೀಣ ಹಾಗೂ ಗುಡಿ ಕೈಗಾರಿಕೆಗಳನ್ನು ಪ್ರೋತ್ಸಾಹಿಸುವುದು.
12. ಕೃಷಿ ಹಾಗೂ ಪಶುಸಂಗೋಪನೆಯನ್ನು ವೈಜ್ಞಾನಿಕವಾಗಿ ಅಭಿವೃದ್ಧಿಪಡಿಸುವುದು.
13. ಪಾನ ನಿಷೇಧವನ್ನು ಜಾರಿಗೆ ತರುವುದು.
14. ವೈಜ್ಞಾನಿಕ ಆಧಾರದ ಮೇಲೆ ಬೇಸಾಯವನ್ನು ಅಭಿವೃದ್ಧಿಗೊಳಿಸುವುದು.

ರಾಜ್ಯ ನಿರ್ದೇಶಕ ತತ್ವಗಳು ಅತ್ಯಂತ ಪ್ರಮುಖವಾಗಿದ್ದು, ಎಲ್ಲರ ಸುಖವನ್ನು ಸಾಧಿಸುವುದೇ ಗುರಿಯಾಗಿದೆ. ಮೂಲಭೂತ ಹಕ್ಕು ವ್ಯಕ್ತಿಗೆ ಸಂಬಂಧಿಸಿದ್ದರೆ, ರಾಜ್ಯ ನಿರ್ದೇಶಕ ತತ್ವಗಳು ಸಮುದಾಯಕ್ಕೆ ಸಂಬಂಧಿಸಿದ್ದಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮೇಲಿನ ತತ್ವಗಳನ್ನು ಜಾರಿಗೆ ತರುವ ಪ್ರಯತ್ನ ಮಾಡುತ್ತಿವೆ. ಭಾರತದ ಸರ್ವಾಂಗೀಣ ಅಭಿವೃದ್ಧಿಗೆ ಈ ತತ್ವಗಳು ದಿಕ್ಸೂಚಿಯಾಗಿವೆ.

## ಅಭ್ಯಾಸಗಳು

**I. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿರಿ.**

1. ರಾಜ್ಯವನ್ನಾಳುವ ಮೂಲ ಕಾನೂನೇ ____________ .

©KTBS Not to be republished

2. ನೂತನ ಸಂವಿಧಾನ ರಚನಾ ಸಭೆ ____________ ರಂದು ನಡೆಯಿತು.

3. ಸಂವಿಧಾನ ಕರಡು ಸಮಿತಿಯ ಅಧ್ಯಕ್ಷತೆ ವಹಿಸಿದ್ದವರು ____________ .

4. ನಮ್ಮ ಸಂವಿಧಾನವು ____________ ಸರ್ಕಾರ ಪದ್ಧತಿಯನ್ನು ಹೊಂದಿದೆ.

5. ಜನರಿಗೆ ಪರಮಾಧಿಕಾರ ಇರುವ ರಾಜ್ಯವನ್ನು ____________ ಎಂದು ಕರೆಯಲಾಗಿದೆ.

6. ನಮ್ಮ ಸಂವಿಧಾನವು ಪ್ರಜೆಗಳಿಗೆ ____________ ಪೌರತ್ವಕ್ಕೆ ಅವಕಾಶ ಮಾಡಿಕೊಟ್ಟಿದೆ.

7. ಸಂವಿಧಾನದ ಪರಿಹಾರದ ಹಕ್ಕನ್ನು ____________ ನೇ ವಿಧಿಯಲ್ಲಿ ಅಳವಡಿಸಲಾಗಿದೆ.

8. ರಾಜ್ಯ ನಿರ್ದೇಶಕ ತತ್ವಗಳನ್ನು ____________ ಸಂವಿಧಾನದಿಂದ ಪಡೆಯಲಾಗಿದೆ.

**II. ಈ ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರ ಬರೆಯಿರಿ.**

1. ನೂತನ ಸಂವಿಧಾನ ರಚನಾ ಸಭೆಯ ಅಧ್ಯಕ್ಷರು ಯಾರು ?
2. ಸಂವಿಧಾನ ಜಾರಿಗೆ ಬಂದದ್ದು ಯಾವಾಗ ?
3. ಭಾರತ ಸಂವಿಧಾನದ ಪ್ರಸ್ತಾವನೆ ಏನನ್ನು ಒಳಗೊಂಡಿದೆ ?
4. ಮತ ನಿರಪೇಕ್ಷತೆ ಎಂದರೇನು ?
5. ನಮ್ಮ ಸಂವಿಧಾನದ ಪ್ರಮುಖ ಲಕ್ಷಣಗಳನ್ನು ವಿವರಿಸಿ.
6. ಸಂವಿಧಾನದಲ್ಲಿ ಅಳವಡಿಸಿರುವ ಮೂಲಭೂತ ಹಕ್ಕುಗಳಾವುವು ?
7. ಮೂಲಭೂತ ಕರ್ತವ್ಯಗಳನ್ನು ಬರೆಯಿರಿ.
8. ರಾಜ್ಯ ನಿರ್ದೇಶಕ ತತ್ವಗಳಾವುವು ?

**III. ಚಟುವಟಿಕೆ.**

1. ಸಂವಿಧಾನ ರಚನಾ ಸಭೆಯಲ್ಲಿ ಭಾಗವಹಿಸಿದ್ದ ಪ್ರಮುಖ ಧುರೀಣರ ಚಿತ್ರ ಮತ್ತು ವಿಷಯಗಳನ್ನು ಸಂಗ್ರಹಿಸಿ.
2. ನೀವು ಅನುಭವಿಸುತ್ತಿರುವ ಮೂಲಭೂತ ಹಕ್ಕುಗಳನ್ನು ಪಟ್ಟಿ ಮಾಡಿ.
3. ನಿಮ್ಮ ಮೂಲಭೂತ ಕರ್ತವ್ಯಗಳನ್ನು ಪಟ್ಟಿಮಾಡಿ.
4. ದೇಶಾದ್ಯಂತ ಏಕರೂಪದ ಕಾನೂನು ಜಾರಿಗೆ ತರಲು ಇರುವ ಅಡ್ಡಿಗಳನ್ನು ಚರ್ಚಿಸಿ.

**IV. ಯೋಜಿತ ಕಾರ್ಯ**

1. ತರಗತಿ ಶಿಕ್ಷಕರ ನೆರವಿನಿಂದ ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳ ಬಗ್ಗೆ ಪ್ರಬಂಧ ಸಿದ್ಧಪಡಿಸಿ, ಚರ್ಚಿಸಿ.

© KTBS Not to be republished

## ಅಧ್ಯಾಯ–2

# ಕೇಂದ್ರ ಸರ್ಕಾರ

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- *ಕೇಂದ್ರ ಶಾಸಕಾಂಗದಲ್ಲಿನ ರಾಜ್ಯಸಭೆ, ಲೋಕಸಭೆಯ ರಚನೆ, ಸದಸ್ಯತ್ವ, ಅರ್ಹತೆ ಮತ್ತು ಕಾರ್ಯಗಳು.*
- *ಕೇಂದ್ರ ಕಾರ್ಯಾಂಗ – ರಾಷ್ಟ್ರಪತಿಯವರ ಆಯ್ಕೆ, ಅರ್ಹತೆ ಮತ್ತು ಅಧಿಕಾರಗಳು.*
- *ಪ್ರಧಾನಮಂತ್ರಿ, ಅವರ ಅಧಿಕಾರ ಮತ್ತು ಕಾರ್ಯಗಳು.*

ಈಗಾಗಲೇ ಹಿಂದಿನ ಅಧ್ಯಾಯದಲ್ಲಿ ಭಾರತವು ಸಾರ್ವಭೌಮ, ಸ್ವಾತಂತ್ರ್ಯ, ಸಮಾಜವಾದಿ, ಜಾತ್ಯತೀತ, ಪ್ರಜಾಸತ್ತಾತ್ಮಕ ಗಣರಾಜ್ಯ ಎಂದು ತಿಳಿದಿದ್ದೇವೆ. ಇಂಗ್ಲೆಂಡ್ ಮತ್ತು ಫ್ರಾನ್ಸ್ ಏಕಾತ್ಮಕ ಸರ್ಕಾರವನ್ನು ಹೊಂದಿವೆ. ಎಲ್ಲ ಅಧಿಕಾರಿಗಳು ಕೇಂದ್ರ ಸರ್ಕಾರದಲ್ಲಿದ್ದು ಇದರ ಅಧೀನದಲ್ಲಿ ರಾಜ್ಯ ಸರ್ಕಾರಗಳು ಕಾರ್ಯನಿರ್ವಹಿಸುತ್ತವೆ. ಅಮೆರಿಕಾ, ಸಿಟ್ಜರ್‌ಲ್ಯಾಂಡ್ ಸಂಯುಕ್ತ ಸರ್ಕಾರ ವ್ಯವಸ್ಥೆಯನ್ನು ಹೊಂದಿವೆ. ಅಂದರೆ ಕೇಂದ್ರದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತದೆ. ಭಾರತವು ರಾಜ್ಯಗಳ ಒಕ್ಕೂಟವಾಗಿದ್ದು, ಅಧಿಕಾರವು ಕೇಂದ್ರ ಮತ್ತು ರಾಜ್ಯಗಳಲ್ಲಿ ಸಂವಿಧಾನಬದ್ಧವಾಗಿ ವಿಭಜನೆಯಾಗಿದೆ. ಆದರೆ ತುರ್ತು ಪರಿಸ್ಥಿತಿಯಂತಹ ಸಂದರ್ಭಗಳಲ್ಲಿ ಎಲ್ಲ ಅಧಿಕಾರಗಳು ಕೇಂದ್ರ ಸರ್ಕಾರಕ್ಕೆ ವರ್ಗಾವಣೆಯಾಗುತ್ತವೆ. ಆದುದರಿಂದ ಭಾರತವು ಅರೆಸಂಯುಕ್ತ ವ್ಯವಸ್ಥೆಯನ್ನು ಹೊಂದಿದೆ. ರಾಷ್ಟ್ರದ ಏಕತೆ ಮತ್ತು ಸುರಕ್ಷತೆಯ ದೃಷ್ಟಿಯಿಂದ ಕೇಂದ್ರ ಸರ್ಕಾರವು ಹೆಚ್ಚು ಅಧಿಕಾರಗಳನ್ನು ಹೊಂದಿದೆ. ಅವುಗಳನ್ನು ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳ ಮೂಲಕ ಚಲಾಯಿಸುತ್ತದೆ.

## ಕೇಂದ್ರ ಶಾಸಕಾಂಗ

ಭಾರತವು ಸಂಸದೀಯ ಮಾದರಿಯ ಸರ್ಕಾರವನ್ನು ಹೊಂದಿದ್ದು, ಕೇಂದ್ರ ಶಾಸಕಾಂಗವನ್ನು ಸಂಸತ್ತು ಎಂದು ಕರೆಯಲಾಗಿದೆ. ನಮ್ಮ ಸಂವಿಧಾನದ 79ನೇ ವಿಧಿಯು ಸಂಸತ್ತಿನ ರಚನೆಗೆ ಅವಕಾಶ ಮಾಡಿಕೊಟ್ಟಿದೆ. ಸಂಸತ್ತು ದ್ವಿಸದನ ಪದ್ಧತಿಯನ್ನು ಹೊಂದಿದ್ದು, ಮೇಲ್ಮನೆಯನ್ನು ರಾಜ್ಯಸಭೆ ಎಂದು, ಕೆಳಮನೆಯನ್ನು ಲೋಕಸಭೆ ಎಂದು ಕರೆಯಲಾಗುತ್ತದೆ.

### ರಾಜ್ಯಸಭೆ

ರಾಜ್ಯಸಭೆಯು 250 ಸದಸ್ಯರನ್ನು ಒಳಗೊಂಡಿದೆ. 238 ಸದಸ್ಯರು ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳ ವಿಧಾನಸಭೆಯ ಸದಸ್ಯರಿಂದ ಆಯ್ಕೆಯಾದರೆ, ಉಳಿದ 12 ಸದಸ್ಯರು ಸಾಹಿತ್ಯ, ಕಲೆ, ವಿಜ್ಞಾನ ಮತ್ತು ಸಮಾಜ ಸೇವೆಯಲ್ಲಿ ವಿಶೇಷ ಅನುಭವ ಪಡೆದವರನ್ನು ರಾಷ್ಟ್ರಪತಿಗಳು ನಾಮಕರಣ ಮಾಡುತ್ತಾರೆ. ಇದನ್ನು ಹಿರಿಯರ ಸದನವೆಂದೂ ಕರೆಯುತ್ತಾರೆ.

**ಅಧಿಕಾರ ಅವಧಿ :** ರಾಜ್ಯಸಭೆಯು ಖಾಯಂ ಸದನವಾಗಿದ್ದು, ಲೋಕಸಭೆಯಂತೆ ವಿಸರ್ಜಿಸಲಾಗದು. ಆದರೆ ಸದಸ್ಯರ ಅಧಿಕಾರ ಅವಧಿ 6 ವರ್ಷಗಳಾಗಿದ್ದು, ಪ್ರತಿ 2 ವರ್ಷಕ್ಕೊಮ್ಮೆ ಮೂರನೇ ಒಂದು ಭಾಗದಷ್ಟು ಸದಸ್ಯರು ನಿವೃತ್ತರಾಗುತ್ತಾರೆ ಮತ್ತು ಅಷ್ಟೇ ಸದಸ್ಯರು ಆಯ್ಕೆಯಾಗುತ್ತಾರೆ. ಸದಸ್ಯರು ತಮ್ಮ ಸ್ಥಾನದಲ್ಲಿ ಮುಂದುವರೆಯಲು ಇಷ್ಟವಿಲ್ಲದಿದ್ದರೆ ಸಭಾಧ್ಯಕ್ಷರಿಗೆ ರಾಜೀನಾಮೆ ನೀಡಬಹುದು.

©KTBS Not to be republished

**ಸದಸ್ಯರಾಗಲು ಇರಬೇಕಾದ ಅರ್ಹತೆಗಳು**

1. ಭಾರತದ ಪ್ರಜೆಯಾಗಿರಬೇಕು.
2. ಕನಿಷ್ಠ 30 ವರ್ಷ ವಯೋಮಿತಿಯನ್ನು ಹೊಂದಿರಬೇಕು.
3. ನ್ಯಾಯಾಂಗದ ಶಿಕ್ಷೆಗೆ ಒಳಗಾಗಿರಬಾರದು.
4. ಮತಿಭ್ರಮಣೆಯುಳ್ಳವರಾಗಿರಬಾರದು.
5. ಸಂಸತ್ತು ಕಾಲಕಾಲಕ್ಕೆ ನಿಗದಿಪಡಿಸುವ ಅರ್ಹತೆ ಪಡೆದಿರಬೇಕು.

ಉಪರಾಷ್ಟ್ರಪತಿಯವರು ರಾಜ್ಯಸಭೆಯ ಪದನಿಮಿತ್ತ ಅಧ್ಯಕ್ಷರಾಗಿರುತ್ತಾರೆ. ಸದನದ ಸದಸ್ಯರಲ್ಲೇ ಒಬ್ಬರನ್ನು ಉಪಸಭಾಪತಿ ಸ್ಥಾನಕ್ಕೆ ಆಯ್ಕೆ ಮಾಡುತ್ತಾರೆ. ಸಭೆಯ ಅಧಿವೇಶನ ನಡೆಯಬೇಕಾದರೆ ಸದನದ 10% ರಷ್ಟು (ಕನಿಷ್ಠ 25 ಸದಸ್ಯರು) ಸದಸ್ಯರು ಹಾಜರಿರಬೇಕು. ಒಂದು ಅಧಿವೇಶನಕ್ಕೂ ಮತ್ತೊಂದು ಅಧಿವೇಶನಕ್ಕೂ ಗರಿಷ್ಠ ಅಂತರ 6 ತಿಂಗಳ ಅಂತರ ಮೀರಬಾರದು.

**ಲೋಕಸಭೆ :**

ಲೋಕಸಭೆಯ ಸದಸ್ಯರು ಜನರಿಂದ ನೇರವಾಗಿ ಆಯ್ಕೆಯಾಗುವುದರಿಂದ ಇದನ್ನು ಜನತಾ ಸದನ ಎಂದೂ ಕರೆಯುತ್ತಾರೆ. ಪ್ರಸ್ತುತ ಒಟ್ಟು ಸದಸ್ಯರ ಸಂಖ್ಯೆ 545 ಇದ್ದು, 543 ಸದಸ್ಯರು ಸಾರ್ವತ್ರಿಕ ಚುನಾವಣೆಯಲ್ಲಿ ಆಯ್ಕೆಯಾಗುತ್ತಾರೆ. ಉಳಿದ ಇಬ್ಬರು ಆಂಗ್ಲೋ-ಇಂಡಿಯನ್ನರನ್ನು ಸದಸ್ಯರನ್ನಾಗಿ ರಾಷ್ಟ್ರಪತಿಗಳು ನಾಮಕರಣ ಮಾಡುತ್ತಾರೆ. ಪರಿಶಿಷ್ಟ ಜಾತಿಯವರಿಗೆ 79 ಸ್ಥಾನಗಳು ಮತ್ತು ಪರಿಶಿಷ್ಟ ಪಂಗಡದವರಿಗೆ 41 ಸ್ಥಾನಗಳನ್ನು ಮೀಸಲಿಡಲಾಗಿದೆ.

**ಅಧಿಕಾರ ಅವಧಿ :** ಲೋಕಸಭೆಯ ಅಧಿಕಾರ ಅವಧಿ 5 ವರ್ಷ. ಅವಧಿ ಮುಗಿಯುವುದಕ್ಕೆ ಮೊದಲೇ ಪ್ರಧಾನಿ ಸಲಹೆ ಮೇರೆಗೆ ರಾಷ್ಟ್ರಪತಿಗಳು ಲೋಕಸಭೆ ವಿಸರ್ಜಿಸಬಹುದು. ರಾಷ್ಟ್ರೀಯ ತುರ್ತುಪರಿಸ್ಥಿತಿಯ ಸಮಯದಲ್ಲಿ ಅಧಿಕಾರ ಅವಧಿಯನ್ನು ಒಂದು ವರ್ಷ ವಿಸ್ತರಿಸಬಹುದು.

**ಸದಸ್ಯರ ಅರ್ಹತೆಗಳು**

1. ಭಾರತದ ಪ್ರಜೆಯಾಗಿರಬೇಕು.
2. ಕನಿಷ್ಠ 25 ವರ್ಷ ವಯೋಮಿತಿ ಹೊಂದಿರಬೇಕು.
3. ಸರ್ಕಾರದ ಯಾವುದೇ ಹುದ್ದೆಯಲ್ಲಿರಬಾರದು.
4. ಮಾನಸಿಕ ಸ್ವಾಸ್ಥ್ಯ ಕಳೆದುಕೊಂಡಿರಬಾರದು.
5. ನ್ಯಾಯಾಲಯದಿಂದ ಶಿಕ್ಷೆಗೆ ಒಳಗಾಗಿರಬಾರದು.
6. ಸಂಸತ್ತು ಕಾಲಕಾಲಕ್ಕೆ ನಿಗದಿಪಡಿಸುವ ಅರ್ಹತೆ ಪಡೆದಿರಬೇಕು.

**ಸಭಾಧ್ಯಕ್ಷರು :** ಲೋಕಸಭಾ ಸದಸ್ಯರಲ್ಲೇ ಒಬ್ಬರನ್ನು ಸಭಾಧ್ಯಕ್ಷರನ್ನಾಗಿ (ಸ್ಪೀಕರ್), ಮತ್ತೊಬ್ಬರನ್ನು ಉಪ ಸಭಾಧ್ಯಕ್ಷರನ್ನಾಗಿ (ಡೆಪ್ಯೂಟಿ ಸ್ಪೀಕರ್) ಆಯ್ಕೆ ಮಾಡಿಕೊಳ್ಳಲಾಗುತ್ತದೆ. ಸಭಾಧ್ಯಕ್ಷರಾಗಿ ಆಯ್ಕೆಯಾದ ನಂತರ ಸದನದಲ್ಲಿ ಪಕ್ಷಾತೀತವಾಗಿ ಕಾರ್ಯನಿರ್ವಹಿಸಬೇಕಾಗುತ್ತದೆ. ಸಭೆಯ ಕಾರ್ಯಕಲಾಪಗಳ ಅಧ್ಯಕ್ಷತೆ ವಹಿಸಿ ಸದನದಲ್ಲಿ ಶಾಂತಿ ಮತ್ತು ಶಿಸ್ತನ್ನು ಕಾಪಾಡುತ್ತಾರೆ. ಸದನದಲ್ಲಿ ಚರ್ಚೆಗಳು, ಮತದಾನ ಹಾಗೂ ನಿರ್ಣಯಗಳನ್ನು ವಿಧಿ-ವಿಧಾನಗಳ ಪ್ರಕಾರ ನಡೆಸಿಕೊಡುವ ಜವಾಬ್ದಾರಿ ಸಭಾಧ್ಯಕ್ಷರದ್ದಾಗಿರುತ್ತದೆ. ನಿಯಮಗಳ ಬಗ್ಗೆ ಸ್ಪಷ್ಟತೆ ಹಾಗೂ ನಿರ್ಣಯ (Ruling) ಕೊಡುವ ಅಧಿಕಾರವೂ ಇವರದ್ದೇ ಆಗಿರುತ್ತದೆ. ಸದನದಲ್ಲಿ ಎಲ್ಲರೂ (ಪ್ರಧಾನ ಮಂತ್ರಿಯನ್ನೊಳಗೊಂಡು) ಸಭಾಧ್ಯಕ್ಷರಿಗೆ ಗೌರವ ನೀಡುವುದು ಶಿಷ್ಟಾಚಾರ. ಮಸೂದೆಯ

©KTBS Not to be republished

ಮತದಾನದ ಸಂದರ್ಭದಲ್ಲಿ ಸಮ ಪ್ರಮಾಣದ ಮತಗಳು ಬಂದಾಗ ನಿರ್ಣಾಯಕ ಮತ ಚಲಾಯಿಸುತ್ತಾರೆ. ಸಭಾಧ್ಯಕ್ಷರ ಅನುಪಸ್ಥಿತಿಯಲ್ಲಿ ಉಪಸಭಾಪತಿಯು ಸಭಾಧ್ಯಕ್ಷರ ಕಾರ್ಯನಿರ್ವಹಿಸುತ್ತಾರೆ.

**ಪ್ರತಿಪಕ್ಷ ನಾಯಕರ ಪಾತ್ರ ಮತ್ತು ಕಾರ್ಯ :**

- ಸರ್ಕಾರ ತಪ್ಪು ಎಸಗಿದರೆ ಅವುಗಳನ್ನು ಎತ್ತಿ ತೋರಿಸುವುದು.
- ಸರ್ಕಾರದ ನೀತಿ ನಿಯಮಗಳನ್ನು ಪರಾಮರ್ಶಿಸುವುದು.
- ಸರ್ಕಾರ ಮತ್ತು ಅಧಿಕಾರಿಗಳನ್ನು ಎಚ್ಚರ ಗೊಳಿಸುವುದು. ಸರಿಯಾದ ರೀತಿಯಲ್ಲಿ ಕಾರ್ಯನಿರ್ವಹಿಸುವಂತೆ ಮಾಡುವುದು
- ಪ್ರತಿಪಕ್ಷ ನಾಯಕರಿಗೆ ಗೌರವಾನ್ವಿತ ಸ್ಥಾನವಿದೆ.

**ಚಟುವಟಿಕೆ;**

ಶಾಲೆಯಲ್ಲಿ ಯುವ ಸಂಸತ್ ಸ್ಪರ್ಧೆಯನ್ನು ಆಯೋಜಿಸಿ ಇದರಲ್ಲಿ ಪ್ರಧಾನ ಮಂತ್ರಿ ಮತ್ತು ಸ್ಪೀಕರ್ ಹಾಗೂ ವಿರೋಧ ಪಕ್ಷದ ನಾಯಕರಾಗಿ ಭಾಗವಹಿಸಿ ಅನುಭವವನ್ನು ಹಂಚಿಕೊಳ್ಳಿ.

**ಸಂಸತ್ತಿನ ಅಧಿಕಾರ ಮತ್ತು ಕಾರ್ಯಗಳು**

**ಶಾಸನ ರಚನಾ ಕಾರ್ಯ :** ಸಂಸತ್ತು ಮೂಲಭೂತವಾಗಿ ಕಾನೂನು ಮಾಡುವ ಅಂಗವಾಗಿದೆ. ಕೇಂದ್ರ ಪಟ್ಟಿಯಲ್ಲಿನ ವಿಷಯಗಳಿಗೆ ಸಂಬಂಧಿಸಿದಂತೆ ಶಾಸನ ಮಾಡುವ ಅಧಿಕಾರ ಸಂಸತ್ತಿಗೆ ಇದೆ. ಹಣಕಾಸಿನ ಮಸೂದೆಯನ್ನು ಲೋಕಸಭೆಯಲ್ಲಿ ಮಾತ್ರ ಮಂಡಿಸಲಾಗುತ್ತದೆ. ಉಳಿದ ಮಸೂದೆಗಳನ್ನು ಯಾವುದೇ ಸದನಗಳಲ್ಲಿ ಮಂಡಿಸಬಹುದು. ಆದರೆ ಮಸೂದೆ ಊರ್ಜಿತವಾಗಬೇಕಾದರೆ ಚರ್ಚೆಗಳ ಮೂಲಕ ಉಭಯ ಸದನಗಳ ಅನುಮೋದನೆ ಪಡೆಯಬೇಕು. ಮಸೂದೆಯ ಬಗ್ಗೆ ಸದನಗಳ ನಡುವೆ ಭಿನ್ನಾಭಿಪ್ರಾಯ ಮೂಡಿದರೆ ರಾಷ್ಟ್ರಾಧ್ಯಕ್ಷರು ಸಂಸತ್ತಿನ ಜಂಟಿ ಅಧಿವೇಶನ ಕರೆಯಬಹುದಾಗಿದೆ. ಸದನಗಳ ಒಪ್ಪಿಗೆ ದೊರೆತರೆ ಆ ಮಸೂದೆಯನ್ನು ರಾಷ್ಟ್ರಪತಿಗಳ ಒಪ್ಪಿಗೆಗಾಗಿ ಕಳುಹಿಸಿಕೊಡಲಾಗುತ್ತದೆ. ರಾಷ್ಟ್ರಪತಿಗಳ ಒಪ್ಪಿಗೆ ನಂತರ ಮಸೂದೆಯು ಶಾಸನವಾಗಿ ಜಾರಿಗೆ ಬರುತ್ತದೆ.

**ಆಡಳಿತಾಧಿಕಾರ :** ಭಾರತ ಸಂಸದೀಯ ಸರ್ಕಾರ ವಾಗಿರುವುದರಿಂದ ಪ್ರಧಾನ ಮಂತ್ರಿ ಮತ್ತು ಮಂತ್ರಿಮಂಡಲ ನಿಜವಾದ ಕಾರ್ಯಾಂಗವಾಗಿದೆ. ಕೇಂದ್ರ ಮಂತ್ರಿಮಂಡಲವು ಲೋಕಸಭೆಗೆ ಜವಾಬ್ದಾರಿಯಾಗಿ ಕಾರ್ಯನಿರ್ವಹಿಸುತ್ತದೆ. ಸಂಸತ್ತು ಮಂತ್ರಿಮಂಡಲವನ್ನು ಪ್ರಶ್ನಿಸುವ ಮೂಲಕ ಕಾರ್ಯಾಂಗದ ಮೇಲೆ ಸಂಪೂರ್ಣ ನಿಯಂತ್ರಣ ಹೊಂದಿರುತ್ತದೆ. ಲೋಕಸಭೆಯ ವಿಶ್ವಾಸವಿರುವವರೆಗೂ ಮಂತ್ರಿಮಂಡಲ ಅಧಿಕಾರದಲ್ಲಿ ಮುಂದುವರೆಯುತ್ತದೆ. ವಿಶ್ವಾಸ ಕಳೆದುಕೊಂಡಾಗ ಮಂತ್ರಿಮಂಡಲ ರಾಜೀನಾಮೆ ನೀಡಬೇಕಾಗುತ್ತದೆ. ಕಾರ್ಯಾಂಗದ ಮೇಲೆ ಅದರಲ್ಲೂ ಪ್ರಧಾನ ಮಂತ್ರಿ ಹಾಗೂ ಮಂತ್ರಿ ಮಂಡಲದ ಮೇಲೆ ಲೋಕಸಭೆಯು ನಿಯಂತ್ರಣದಲ್ಲಿಟ್ಟುಕೊಳ್ಳುತ್ತದೆ. ಸರ್ಕಾರದ ನೀತಿ ಸಾಧನಗಳ ಬಗ್ಗೆ ಲೋಕಸಭೆಯ ಬಹುಸಂಖ್ಯಾತ ಸದಸ್ಯರಿಗೆ ವಿಶ್ವಾಸವಿಲ್ಲವೆಂದಾದರೆ ಸರ್ಕಾರ (ಪ್ರಧಾನ ಮಂತ್ರಿ ಹಾಗೂ ಮಂತ್ರಿಮಂಡಲ) ರಾಜೀನಾಮೆ ನೀಡಬೇಕಾಗುತ್ತದೆ.

**ಚಟುವಟಿಕೆ:**

ದೂರದರ್ಶನದಲ್ಲಿ ಸಂಸತ್ತು ಕಲಾಪದ ನೇರಪ್ರಸಾರವನ್ನು ವೀಕ್ಷಿಸಿ ಕೆಳಗಿನವುಗಳ ಬಗ್ಗೆ ಟಿಪ್ಪಣಿ ಬರೆಯಿರಿ.

*1) ಸಭಾಧ್ಯಕ್ಷರ ಪಾತ್ರ*

*2) ಆಡಳಿತ ಪಕ್ಷದ ನಾಯಕರ ಪಾತ್ರ*

*3) ವಿರೋಧ ಪಕ್ಷದ ಪಾತ್ರ*

**ಹಣಕಾಸಿನ ಅಧಿಕಾರ :** ಲೋಕಸಭೆಯು ರಾಷ್ಟ್ರದ ಹಣಕಾಸಿನ ಮೇಲೆ ಸಂಪೂರ್ಣ ನಿಯಂತ್ರಣ ಹೊಂದಿದೆ. ಸಂಸತ್ತಿನ ಅನುಮೋದನೆ ಇಲ್ಲದೆ ಸರ್ಕಾರ ಯಾವುದೇ ಬಗೆಯ ತೆರಿಗೆ ಸಂಗ್ರಹಣ ಮಾಡುವುದಕ್ಕಾಗಲೀ, ಖರ್ಚು ಮಾಡುವುದಕ್ಕಾಗಲೀ ಅಧಿಕಾರವಿಲ್ಲ. ಹಣಕಾಸಿನ ಮಸೂದೆಯನ್ನು (ಆಯ–ವ್ಯಯ) ಮೊದಲು ಲೋಕಸಭೆಯಲ್ಲಿ ಮಂಡಿಸುವ ನಿಯಮವಿದೆ. ಹಣಕಾಸು ಮಸೂದೆಗೆ ಲೋಕಸಭೆ ಅನುಮೋದನೆ

©KTBS Not to be republished

ಪಡೆದ ನಂತರ ರಾಜ್ಯಸಭೆಗೆ ಕಳುಹಿಸಲಾಗುತ್ತದೆ. ರಾಜ್ಯಸಭೆ ಮಸೂದೆಯ ಬಗ್ಗೆ ಕೆಲವು ಸಲಹೆ ಮತ್ತು ಸೂಚನೆ ಕೊಡುವ ಹಾಗೂ 14 ದಿನಗಳ ಕಾಲ ತಡೆಹಿಡಿಯುವ ಅವಕಾಶ ಹೊಂದಿದೆ. 14 ದಿನಗಳೊಳಗೆ ಹಿಂತಿರುಗಿಸದೇ ಹೋದರೆ ಮಸೂದೆ ಅಂಗೀಕಾರ ಪಡೆದಿದೆ ಎಂದು ಪರಿಗಣಿಸಿ ಲೋಕಸಭೆ ಅದನ್ನು ರಾಷ್ಟ್ರಪತಿಗಳ ಅನುಮೋದನೆಗೆ ಕಳುಹಿಸುತ್ತದೆ.

**ನ್ಯಾಯಾಂಗಾಧಿಕಾರ :** ಸುಪ್ರೀಂಕೋರ್ಟ್ ಅಥವಾ ಹೈಕೋರ್ಟ್ ನ್ಯಾಯಾಧೀಶರನ್ನು ಪದಚ್ಯುತಗೊಳಿಸುವ ಅಧಿಕಾರ ಸಂಸತ್ತಿನ ಎರಡೂ ಸದನಗಳಿಗಿದೆ. ನ್ಯಾಯಾಲಯಕ್ಕೆ ಸಂಬಂಧಿಸಿದ ಕೆಲವು ತನಿಖಾ ವರದಿಗಳನ್ನು ಚರ್ಚಿಸುವ ಅಧಿಕಾರ ಉಭಯ ಸದನಗಳಿಗೂ ಇದೆ.

**ಸಂವಿಧಾನ ತಿದ್ದುಪಡಿ ಮಾಡುವ ಅಧಿಕಾರ :** ಸಂವಿಧಾನ ತಿದ್ದುಪಡಿ ಮಾಡುವ ವಿಷಯದಲ್ಲಿ ಲೋಕಸಭೆ ಮತ್ತು ರಾಜ್ಯಸಭೆಗೆ ಸಮಾನ ಅಧಿಕಾರವಿದೆ. ತಿದ್ದುಪಡಿಗೆ ಸಂಬಂಧಿಸಿದ ಮಸೂದೆಯನ್ನು ಯಾವುದೇ ಸದನದಲ್ಲಿ ಮೊದಲು ಮಂಡಿಸಬಹುದು. ಆದರೆ ಮಸೂದೆಗೆ ಉಭಯ ಸದನಗಳ ಅಂಗೀಕಾರ ಪಡೆಯಬೇಕು. ಒಂದು ಸದನ ಅಂಗೀಕರಿಸಿದ ಮಸೂದೆಯನ್ನು ಇನ್ನೊಂದು ಸದನ ತಿರಸ್ಕರಿಸಿದರೆ ಸಂವಿಧಾನ ತಿದ್ದುಪಡಿ ಸಾಧ್ಯವಿಲ್ಲ. ಕೆಲವು ಸಂವಿಧಾನ ತಿದ್ದುಪಡಿಗೆ ರಾಜ್ಯಗಳ ವಿಧಾನಸಭೆಗಳ ಸಹಮತವೂ ಅವಶ್ಯಕವಾಗಿದೆ.


**ಸಂಸತ್ ಭವನ**

**ಇತರೆ ಅಧಿಕಾರ ಕಾರ್ಯಗಳು :**

1) ಸರ್ವೋಚ್ಚ ಮತ್ತು ಉಚ್ಚ ನ್ಯಾಯಾಲಯದ ಅಧಿಕಾರ ಮತ್ತು ವ್ಯಾಪ್ತಿಯ ಬಗ್ಗೆ ಕಾನೂನು ರೂಪಿಸುವುದು.
2) ಎರಡು ಅಥವಾ ಅದಕ್ಕಿಂತ ಹೆಚ್ಚು ರಾಜ್ಯಗಳಿಗೆ ಒಂದೇ ಉಚ್ಚ ನ್ಯಾಯಾಲಯದ ಸ್ಥಾಪನೆ ಅಧಿಕಾರ.
3) ಹೊಸ ರಾಜ್ಯಗಳ ಸೃಷ್ಟಿ, ಹೆಸರು ಬದಲಾವಣೆ, ರಾಜ್ಯದ ಗಡಿ ರೇಖೆ ನಿರ್ಧರಿಸುವುದು.
4) ಲೋಕಸೇವಾ ಆಯೋಗ, ಹಣಕಾಸು ಆಯೋಗ, ಚುನಾವಣಾ ಆಯೋಗ, ಹಿಂದುಳಿದ ವರ್ಗಗಳ ಆಯೋಗ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಆಯೋಗ, ಮೊದಲಾದ ಆಯೋಗಗಳ ವರದಿಗಳ ಬಗ್ಗೆ ಚರ್ಚೆ ನಡೆಸುವುದು.
5) ರಾಷ್ಟ್ರೀಯ ತುರ್ತುಪರಿಸ್ಥಿತಿ, ರಾಜ್ಯ ತುರ್ತುಪರಿಸ್ಥಿತಿ ಮತ್ತು ಹಣಕಾಸಿನ ತುರ್ತುಪರಿಸ್ಥಿತಿಯನ್ನು ಅನುಮೋದಿಸುವುದು.

## ಕೇಂದ್ರ ಕಾರ್ಯಾಂಗ

ಕೇಂದ್ರ ಶಾಸಕಾಂಗ ರೂಪಿಸುವ ಕಾಯಿದೆಗಳನ್ನು ಜಾರಿಗೊಳಿಸುವುದೇ ಕಾರ್ಯಾಂಗ. ಇದು ಕೇಂದ್ರ ಸರ್ಕಾರದ ಕಾರ್ಯಕ್ರಮಗಳು ಹಾಗೂ ನೀತಿಗಳನ್ನು ಜಾರಿಗೊಳಿಸುತ್ತದೆ. ಈ ಕಾರ್ಯಾಂಗವು ರಾಷ್ಟ್ರಪತಿ, ಪ್ರಧಾನಮಂತ್ರಿ ಒಳಗೊಂಡ ಮಂತ್ರಿಮಂಡಲವನ್ನು ಒಳಗೊಂಡಿರುತ್ತದೆ. ರಾಷ್ಟ್ರಪತಿಗಳು ನಾಮಮಾತ್ರ ಕಾರ್ಯಾಂಗದ ಮುಖ್ಯಸ್ಥರಾದರೆ ಪ್ರಧಾನಮಂತ್ರಿಯನ್ನು ಒಳಗೊಂಡ ಮಂತ್ರಿಮಂಡಲ ನಿಜವಾದ ಕಾರ್ಯಾಂಗವಾಗಿದೆ.

©KTBS Not to be republished

# ರಾಷ್ಟ್ರಪತಿ

ನಮ್ಮ ಸಂವಿಧಾನದ 52ನೆಯ ವಿಧಿಯು ರಾಷ್ಟ್ರಪತಿ ಸ್ಥಾನಕ್ಕೆ ಅವಕಾಶ ಕಲ್ಪಿಸಿಕೊಟ್ಟಿದೆ. ಭಾರತದ ರಾಷ್ಟ್ರಪತಿಯವರು ಸಂವಿಧಾನ ಮುಖ್ಯಸ್ಥರೂ, ರಾಷ್ಟ್ರದ ಪ್ರಥಮ ಪ್ರಜೆಯೂ, ಕಾರ್ಯಾಂಗದ ನಾಮಮಾತ್ರ ಮುಖ್ಯಸ್ಥರೂ ಹಾಗೂ ಮೂರು ಸೇನಾಪಡೆಗಳ (ವಾಯುಪಡೆ, ಭೂಪಡೆ, ನೌಕಾಪಡೆ) ಮಹಾದಂಡನಾಯಕರು ಆಗಿರುತ್ತಾರೆ. ರಾಷ್ಟ್ರದ ಸಮಸ್ತ ಅಧಿಕಾರವೆಲ್ಲವೂ ಇವರ ಹೆಸರಿನಲ್ಲಿದ್ದು, ಇವರು ಸರ್ವೋನ್ನತ ಸ್ಥಾನವನ್ನು ಹೊಂದಿದ್ದಾರೆ.

**ರಾಷ್ಟ್ರಪತಿಯವರ ಚುನಾವಣಾ ವಿಧಾನ :** ಸಂವಿಧಾನ 54 ಮತ್ತು 55 ನೇ ವಿಧಿಯಲ್ಲಿ ರಾಷ್ಟ್ರಪತಿಯವರನ್ನು ಚುನಾಯಿಸುವ ವಿಧಾನವನ್ನು ಅಳವಡಿಸಲಾಗಿದೆ. ರಾಷ್ಟ್ರಪತಿಯವರನ್ನು ಸಂಸತ್ತಿನ ಉಭಯ ಸದನಗಳ ಚುನಾಯಿತ ಸದಸ್ಯರು, ಎಲ್ಲಾ ರಾಜ್ಯಗಳ ಮತ್ತು ದೆಹಲಿ, ಪುದುಚೆರಿ ವಿಧಾನಸಭಾ ಚುನಾಯಿತ ಸದಸ್ಯರಿಂದ ಕೂಡಿದ ಮತದಾರ ವರ್ಗ ಚುನಾಯಿಸುತ್ತದೆ. ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಾಧೀಶರು ಇವರಿಗೆ ಪ್ರಮಾಣ ವಚನ ಬೋಧಿಸುತ್ತಾರೆ. ಇವರ ಅಧಿಕಾರಾವಧಿ 5 ವರ್ಷವಾಗಿದ್ದು, ಪುನರಾಯ್ಕೆಗೆ ಅರ್ಹರಾಗಿರುತ್ತಾರೆ. ಸಂವಿಧಾನವನ್ನು ಉಲ್ಲಂಘಿಸಿದಲ್ಲಿ ರಾಷ್ಟ್ರಪತಿಯವರನ್ನು ಮಹಾಭಿಯೋಗಗೊಳಿಸುವ ಅಧಿಕಾರ ಸಂಸತ್ತಿಗಿರುತ್ತದೆ.

***ನಿಮಗಿದು ತಿಳಿದಿರಲಿ:***

***ಮಹಾಭಿಯೋಗ:*** *ರಾಷ್ಟ್ರಪತಿಗಳು ಸಂವಿಧಾನವನ್ನು ಉಲ್ಲಂಘಿಸಿದರೆ ಸಂಸತ್ತು ಯಾವುದೇ ಸದನದಲ್ಲಿ ಮಹಾಭಿಯೋಗ ಗೊತ್ತುವಳಿಯನ್ನು ಮಂಡಿಸಬಹುದಾಗಿದೆ. ಗೊತ್ತುವಳಿಯನ್ನು ಮಂಡಿಸಿದ ಸದನದ ಕನಿಷ್ಠ* $\frac{1}{4}$ *ರಷ್ಟು ಸದಸ್ಯರ ಬೆಂಬಲದ ನೋಟಿಸನ್ನು 14 ದಿನ ಮುಂಚಿತವಾಗಿ ರಾಷ್ಟ್ರಪತಿಗೆ ನೀಡಬೇಕು. ಸಂಸತ್ತಿನ ಎರಡೂ ಸದನಗಳಲ್ಲಿ ಒಟ್ಟು ಸದಸ್ಯರ ಬಹುಮತ ಮತ್ತು ಹಾಜರಿರುವ ಸದಸ್ಯರ ಕನಿಷ್ಠ* $\frac{2}{3}$ *ರಷ್ಟು ಸದಸ್ಯರ ಬಹುಮತದಿಂದ ಸ್ವೀಕೃತವಾದರೆ ರಾಷ್ಟ್ರಪತಿಯ ಸ್ಥಾನವು ಖಾಲಿಯಾಯಿತೆಂದು ಪರಿಗಣಿಸಲಾಗುತ್ತದೆ. ಆದರೆ ಇಲ್ಲಿಯವರೆಗೆ ಯಾವುದೇ ರಾಷ್ಟ್ರಪತಿಯನ್ನು ಮಹಾಭಿಯೋಗಗೊಳಿಸಲಾಗಿರುವುದಿಲ್ಲ.*

**ಅರ್ಹತೆಗಳು**

1) ಭಾರತದ ಪ್ರಜೆಯಾಗಿರಬೇಕು.
2) ಕನಿಷ್ಠ 35 ವರ್ಷ ವಯೋಮಿತಿಯನ್ನು ಹೊಂದಿರಬೇಕು.
3) ಲೋಕಸಭೆಯ ಸದಸ್ಯರಾಗಲು ಅರ್ಹತೆ ಹೊಂದಿರಬೇಕು.
4) ಯಾವುದೇ ಲಾಭದಾಯಕ ಹುದ್ದೆಯಲ್ಲಿ ಇರಬಾರದು.



**ರಾಷ್ಟ್ರಪತಿಯವರ ಅಧಿಕಾರಗಳು**

**ಕಾರ್ಯಾಂಗಾಧಿಕಾರ :** ರಾಷ್ಟ್ರದ ಎಲ್ಲಾ ಆಡಳಿತವು ರಾಷ್ಟ್ರಪತಿಯವರ ಹೆಸರಿನಲ್ಲಿಯೇ ನಡೆಯುತ್ತಿದೆ. ಪ್ರಧಾನಮಂತ್ರಿಯವರನ್ನು ರಾಷ್ಟ್ರಪತಿಗಳು ನೇಮಿಸುತ್ತಾರೆ. ನಂತರ ಪ್ರಧಾನಮಂತ್ರಿ ಸಲಹೆ ಮೇರೆಗೆ ಇತರೆ ಮಂತ್ರಿಗಳನ್ನು ನೇಮಿಸುತ್ತಾರೆ. ಭಾರತದ ಉನ್ನತ ಹುದ್ದೆಗಳಾದ ಅಟಾರ್ನಿ ಜನರಲ್, ಕಂಟ್ರೋಲರ್ ಅಂಡ್ ಆಡಿಟರ್ ಜನರಲ್, ಸುಪ್ರೀಂಕೋರ್ಟಿನ ನ್ಯಾಯಾಧೀಶರು, ಹೈಕೋರ್ಟ್ ನ್ಯಾಯಾಧೀಶರು,

©KTBS Not to be republished

ರಾಜ್ಯಪಾಲರುಗಳು, ಹಣಕಾಸು ಆಯೋಗದ ಅಧ್ಯಕ್ಷರು ಮತ್ತು ಸದಸ್ಯರು, ಕೇಂದ್ರ ಲೋಕಸೇವಾ ಆಯೋಗದ ಅಧ್ಯಕ್ಷರು, ಸದಸ್ಯರು, ಚುನಾವಣಾ ಆಯುಕ್ತರು, ರಕ್ಷಣಾ ಪಡೆಗಳ ದಂಡನಾಯಕರುಗಳು ಹಾಗೂ ವಿವಿಧ ರಾಷ್ಟ್ರಗಳಿಗೆ ರಾಯಭಾರಿಗಳನ್ನು ನೇಮಿಸುವ ಅಧಿಕಾರ ರಾಷ್ಟ್ರಪತಿಗಳಿಗೆ ಇದೆ.

**ಶಾಸನಾಧಿಕಾರ :** ರಾಷ್ಟ್ರಪತಿಗಳು ಸಂಸತ್ತಿನ ಅಧಿವೇಶನ ಕರೆಯುವುದು, ಮುಂದೂಡುವುದು, ಜಂಟಿ ಅಧಿವೇಶನ ಉದ್ದೇಶಿಸಿ ಭಾಷಣ ಮಾಡುವುದು ಹಾಗೂ ಲೋಕಸಭೆಯನ್ನು ವಿಸರ್ಜಿಸುವ ಅಧಿಕಾರ ಹೊಂದಿದ್ದಾರೆ. ಸಂಸತ್ತಿನ ಉಭಯ ಸದನಗಳಿಂದ ಅಂಗೀಕರಿಸಲ್ಪಟ್ಟ ಮಸೂದೆಗಳಿಗೆ ಒಪ್ಪಿಗೆ ನೀಡುವ, ಪುನರ್ ಪರಿಶೀಲಿಸುವ, ಹಿಂದಿರುಗಿಸುವ ಅಥವಾ ತಡೆಹಿಡಿಯುವ ಅಧಿಕಾರ ಹೊಂದಿದ್ದಾರೆ. ಲೋಕಸಭೆಗೆ ಇಬ್ಬರು ಆಂಗ್ಲೋ–ಇಂಡಿಯನ್‌ರನ್ನು ಮತ್ತು ರಾಜ್ಯಸಭೆಗೆ 12 ಸದಸ್ಯರನ್ನು ನಾಮಕರಣ ಮಾಡುವ ಅಧಿಕಾರವಿದೆ. ಈ ಎಲ್ಲಾ ಅಧಿಕಾರಗಳನ್ನು ಮಂತ್ರಿಮಂಡಲದ ಸಲಹೆಯಂತೆ ನಿರ್ವಹಿಸುತ್ತಾರೆ.

**ನ್ಯಾಯಾಂಗಾಧಿಕಾರ :** ನ್ಯಾಯಾಲಯಗಳು ಅಪರಾಧಿಗಳಿಗೆ ನೀಡಿದ ಶಿಕ್ಷೆಯನ್ನು ಕಡಿಮೆ ಮಾಡುವ, ಮರಣ ದಂಡನೆಯಂತಹ ಕಠಿಣ ಶಿಕ್ಷೆಯನ್ನು ರದ್ದುಪಡಿಸುವ ಅಧಿಕಾರ ಹೊಂದಿದ್ದಾರೆ. ರಾಷ್ಟ್ರದ ಕಾನೂನಿಗೆ ಸಂಬಂಧಿಸಿದ ಮಹತ್ವದ ವಿಷಯಗಳಿಗೆ ಸರ್ವೋಚ್ಚ ನ್ಯಾಯಾಲಯದ ಸಲಹೆ ಕೇಳಬಹುದು.

**ಹಣಕಾಸಿನ ಅಧಿಕಾರ :** ರಾಷ್ಟ್ರಪತಿಯವರ ಅನುಮತಿ ಇಲ್ಲದೆ ಹಣಕಾಸಿನ ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸುವಂತಿಲ್ಲ. ಹಣಕಾಸು ಆಯೋಗದ ವರದಿ, ಮಹಾಲೇಖಪಾಲರು ಮತ್ತು ಪರಿಶೋಧಕರು ನೀಡಿದ ವರದಿಯನ್ನು ಸಂಸತ್ತಿನಲ್ಲಿ ಚರ್ಚಿಸುವಂತೆ ರಾಷ್ಟ್ರಪತಿಗಳು ಶಿಫಾರಸ್ಸು ಮಾಡುತ್ತಾರೆ. ಒಟ್ಟಾರೆ ಹಣಕಾಸು ಮಸೂದೆ ಕಾಯ್ದೆಯಾಗಬೇಕಾದರೆ ಅವರ ಒಪ್ಪಿಗೆ ಅವಶ್ಯಕ.

**ಮಿಲಿಟರಿ ಅಧಿಕಾರಗಳು :** ರಾಷ್ಟ್ರಪತಿಗಳು ಸಮಸ್ತ ಸೇನಾ ಪಡೆಗಳ ಮಹಾದಂಡನಾಯಕರಾಗಿದ್ದು, ಭೂಪಡೆ, ವಾಯುಪಡೆ ಮತ್ತು ನೌಕಾಪಡೆಯ ದಂಡನಾಯಕರನ್ನು ಸಚಿವ ಸಂಪುಟದ ಸಲಹೆ ಮೇರೆಗೆ ಇವರೇ ನೇಮಿಸುತ್ತಾರೆ. ಸಂಸತ್ತಿನ ಒಪ್ಪಿಗೆ ಮೇರೆಗೆ ಯುದ್ಧ ಮತ್ತು ಶಾಂತಿಯನ್ನು ಘೋಷಿಸುವ ಅಧಿಕಾರ ಹೊಂದಿದ್ದಾರೆ.

**ತುರ್ತುಪರಿಸ್ಥಿತಿಯ ಅಧಿಕಾರಗಳು:** ಅಸಾಮಾನ್ಯ ಸಂದರ್ಭದಲ್ಲಿ ರಾಷ್ಟ್ರಪತಿ ತುರ್ತುಪರಿಸ್ಥಿತಿ ಘೋಷಿಸುವ ಅಧಿಕಾರ ಹೊಂದಿರುತ್ತಾರೆ. ಸಂವಿಧಾನದ XVIIIನೇ ಭಾಗದಲ್ಲಿ 352ರಿಂದ 360ನೇ ವಿಧಿವರೆಗೆ ತಿಳಿಸಲಾಗಿದೆ. ಈ ಅಂಶಗಳನ್ನು 1935ರ ಭಾರತ ಸರ್ಕಾರದ ಶಾಸನದಿಂದ ಎರವಲು ಪಡೆದುಕೊಳ್ಳಲಾಗಿದೆ. ತುರ್ತುಪರಿಸ್ಥಿತಿ ಸಮಯದಲ್ಲಿ ಮೂಲಭೂತ ಹಕ್ಕುಗಳ ಮೇಲೆ ಉಂಟಾಗುವ ಪರಿಣಾಮವನ್ನು ಜರ್ಮನಿ (ವ್ಹೇಮರ್) ಸಂವಿಧಾನದಿಂದ ಎರವಲು ಪಡೆದುಕೊಳ್ಳಲಾಗಿದೆ. ತುರ್ತುಪರಿಸ್ಥಿತಿಯಲ್ಲಿ ಮೂರು ವಿಧಗಳಿವೆ:

1. ರಾಷ್ಟ್ರೀಯ ತುರ್ತುಪರಿಸ್ಥಿತಿ (ವಿಧಿ 352)
2. ರಾಜ್ಯ ತುರ್ತುಪರಿಸ್ಥಿತಿ (ವಿಧಿ 356)
3. ಹಣಕಾಸು ತುರ್ತುಪರಿಸ್ಥಿತಿ (ವಿಧಿ 360)


> **ಚರ್ಚಿಸಿ;**
> *ಕರ್ನಾಟಕದಲ್ಲಿ ರಾಜ್ಯ ತುರ್ತು ಪರಿಸ್ಥಿತಿ ಜಾರಿಗೆ ಬಂದ ಸಂದರ್ಭದ ಬಗ್ಗೆ ಶಿಕ್ಷಕರೊಂದಿಗೆ ಚರ್ಚಿಸಿ*

**ವಿವೇಚನಾಧಿಕಾರಗಳು :** ರಾಷ್ಟ್ರಾಧ್ಯಕ್ಷರು ಮಂತ್ರಿಮಂಡಲದ ಸಲಹೆ ಇಲ್ಲದೆ ಕೆಲವೊಂದು ಅಧಿಕಾರ ಚಲಾಯಿಸಬಹುದು. ಅವುಗಳೆಂದರೆ,

1. ಲೋಕಸಭೆಯ ಸಾರ್ವತ್ರಿಕ ಚುನಾವಣೆಯಲ್ಲಿ ಯಾವುದೇ ಪಕ್ಷ ಸ್ಪಷ್ಟ ಬಹುಮತ ಪಡೆಯದಿದ್ದಾಗ ಯಾವುದೇ ಪಕ್ಷದ ನಾಯಕನನ್ನು ಸರ್ಕಾರ ರಚಿಸುವಂತೆ ಆಮಂತ್ರಿಸುವ ಅಧಿಕಾರವಿದೆ.
2. ಸಂಸತ್ತು ಅಂಗೀಕರಿಸಿದ ಮಸೂದೆಯನ್ನು ರಾಷ್ಟ್ರಪತಿಗಳ ಒಪ್ಪಿಗೆಗೆ ಕಳುಹಿಸಿದಾಗ ಅದನ್ನು ಮತ್ತೊಮ್ಮೆ ಮರುಪರಿಶೀಲನೆಗೆ ವಾಪಸ್ಸು ಕಳುಹಿಸಬಹುದು.
3. ಲೋಕಸಭೆಯನ್ನು ವಿಸರ್ಜಿಸುವ ಅಧಿಕಾರ.

© KTBS Not to be republished

# ನಮ್ಮ ರಾಷ್ಟ್ರಪತಿಗಳು



ಡಾ|| ರಾಜೇಂದ್ರ ಪ್ರಸಾದ್
1950–1962



ಡಾ|| ಎಸ್. ರಾಧಾಕೃಷ್ಣನ್
1962–1967




ಡಾ|| ಝುಕೀರ್ ಹುಸೇನ್
1967–1969



ಡಾ|| ವಿ.ವಿ. ಗಿರಿ
1969–1974



ಡಾ|| ಫಕ್ರುದ್ದೀನ್ ಅಲಿ ಅಹಮದ್
1974–1977




ಶ್ರೀ ನೀಲಂ ಸಂಜೀವರೆಡ್ಡಿ
1977–1982



ಶ್ರೀ ಗ್ಯಾನಿ ಜೈಲ್ ಸಿಂಗ್
1982–1987



ಶ್ರೀ ಆರ್. ವೆಂಕಟರಾಮನ್
1987–1992



ಡಾ|| ಶಂಕರ ದಯಾಳ್ ಶರ್ಮ
1992–1997




ಡಾ|| ಕೆ.ಆರ್. ನಾರಾಯಣ
1997–2002



ಡಾ|| ಎ.ಪಿ.ಜೆ. ಅಬ್ದುಲ್ ಕಲಾಂ
2002–2007



ಶ್ರೀಮತಿ ಪ್ರತಿಭಾ ಪಾಟೀಲ್
2007–2012



ಶ್ರೀ ಪ್ರಣಬ್ ಮುಖರ್ಜಿ
2012–

©KTBS
Not to be republished

**ನಿಮಗಿದು ತಿಳಿದಿರಲಿ :**

**1) ರಾಷ್ಟ್ರೀಯ ತುರ್ತುಪರಿಸ್ಥಿತಿ :** (352 ನೆಯ ವಿಧಿ) ಇಡೀ ದೇಶಕ್ಕೆ ಅಥವಾ ದೇಶದ ಯಾವುದೇ ಭಾಗದ ಭದ್ರತೆಗೆ ಯುದ್ಧ ಅಥವಾ ಹೊರಗಿನ ಆಕ್ರಮಣದಿಂದ ಧಕ್ಕೆ ಉಂಟಾದಾಗ ಅಥವಾ ದೇಶದೊಳಗಡೆ ಶಸ್ತ್ರಾಸ್ತ್ರಗಳ ಹೋರಾಟದಿಂದ ಕಾನೂನು ಸುವ್ಯವಸ್ಥೆ ವಿಫಲವಾದಾಗ ರಾಷ್ಟ್ರಪತಿ ರಾಷ್ಟ್ರೀಯ ತುರ್ತುಪರಿಸ್ಥಿತಿ ಘೋಷಿಸುವ ಅಧಿಕಾರ ಹೊಂದಿರುತ್ತಾರೆ. ಘೋಷಿಸಿದ ಒಂದು ತಿಂಗಳೊಳಗೆ ಸಂಸತ್ತಿನ ಎರಡು ಸದನಗಳ ಅನುಮತಿಯನ್ನು ಪಡೆದುಕೊಂಡರೆ ತುರ್ತುಪರಿಸ್ಥಿತಿ 6 ತಿಂಗಳವರೆಗೆ ಮುಂದುವರೆಯುತ್ತದೆ. ಪ್ರತಿ 6 ತಿಂಗಳಿಗೊಮ್ಮೆ ಸಂಸತ್ತಿನ ಎರಡು ಸದನಗಳ ಅನುಮತಿಯನ್ನು ಪಡೆದುಕೊಳ್ಳುತ್ತಾ ಅನಿರ್ದಿಷ್ಟ ಅವಧಿಯವರೆಗೆ ತುರ್ತುಪರಿಸ್ಥಿತಿ ಘೋಷಿಸಬಹುದಾಗಿದೆ. ಉದಾ : 1962, 1971 ಮತ್ತು 1975ರಲ್ಲಿ ಘೋಷಿಸಲಾಗಿದೆ.

**2) ರಾಜ್ಯ ತುರ್ತುಪರಿಸ್ಥಿತಿ:** (356ನೆಯ ವಿಧಿ) ರಾಜ್ಯವೊಂದರ ರಾಜ್ಯಪಾಲರ ವರದಿಯ ಆಧಾರದ ಮೇಲೆ ಅಥವಾ ತಾವೇ ಸ್ವತಃ ಸಂವಿಧಾನದ ವಿಫಲತೆಯಾದಾಗ 356ನೆಯ ವಿಧಿಯನ್ವಯ ರಾಷ್ಟ್ರಪತಿಗಳು ತುರ್ತುಪರಿಸ್ಥಿತಿ ಘೋಷಿಸಬಹುದು. ಉದಾ: ಕರ್ನಾಟಕದಲ್ಲಿ ಆರು ಬಾರಿ ರಾಜ್ಯ ತುರ್ತುಪರಿಸ್ಥಿತಿ ಘೋಷಿಸಲಾಗಿದೆ. ಈ ತುರ್ತುಪರಿಸ್ಥಿತಿ ಘೋಷಿಸಿದ ಎರಡು ತಿಂಗಳೊಳಗೆ ಸಂಸತ್ತಿನ ಎರಡು ಸದನಗಳ ಅನುಮತಿಯನ್ನು ಪಡೆದುಕೊಂಡರೆ ಗರಿಷ್ಠ ಮೂರು ವರ್ಷಗಳವರೆಗೆ ತುರ್ತುಪರಿಸ್ಥಿತಿ ಘೋಷಿಸಬಹುದಾಗಿದೆ.

**3) ಹಣಕಾಸಿನ ತುರ್ತು ಪರಿಸ್ಥಿತಿ :** (360ನೆಯ ವಿಧಿ) ದೇಶದ ಹಣಕಾಸಿನ ಪರಿಸ್ಥಿತಿ ತೀವ್ರವಾಗಿ ಹದಗೆಟ್ಟಿದೆ ಎಂದು ಕಂಡುಬಂದರೆ 360 ನೇ ವಿಧಿಯನ್ವಯ ಹಣಕಾಸಿನ ತುರ್ತುಪರಿಸ್ಥಿತಿಯನ್ನು ಘೋಷಿಸಬಹುದು. ಆದರೆ ಇದನ್ನು ಇದುವರೆಗೂ ಘೋಷಿಸಿಲ್ಲ.

©KTBS Not to be republished

## ಪ್ರಧಾನ ಮಂತ್ರಿ


ಸಂವಿಧಾನದಲ್ಲಿ ಸೂಚಿಸಿರುವಂತೆ ರಾಷ್ಟ್ರಪತಿಯವರಿಗೆ ಆಡಳಿತದಲ್ಲಿ ಸಹಾಯ ಮತ್ತು ಸಲಹೆ ನೀಡಲು ಪ್ರಧಾನ ಮಂತ್ರಿಯನ್ನು ಒಳಗೊಂಡ ಮಂತ್ರಿಮಂಡಲಕ್ಕೆ ಅವಕಾಶ ಕಲ್ಪಿಸಿದೆ. ಆದರೂ ಪ್ರಧಾನಿಯವರು ಅಧಿಕಾರಗಳ ಕೇಂದ್ರಬಿಂದುವಾಗಿದ್ದು, ರಾಷ್ಟ್ರದ ಸಮಗ್ರ ಆಡಳಿತವನ್ನು ನಿರ್ವಹಿಸುವ ಅಧಿಕಾರ ಹೊಂದಿದ್ದಾರೆ. ರಾಷ್ಟ್ರಪತಿಯವರು ರಾಷ್ಟ್ರದ ಮುಖ್ಯಸ್ಥರಾಗಿದ್ದರೆ ಪ್ರಧಾನಿಯು ಸರ್ಕಾರದ ಮುಖ್ಯಸ್ಥರಾಗಿದ್ದಾರೆ. ಲೋಕಸಭೆಯ ವಿಶ್ವಾಸವಿರುವವರೆಗೂ ಇವರು ಅಧಿಕಾರದಲ್ಲಿ ಮುಂದುವರೆಯುತ್ತಾರೆ.

### ಪ್ರಧಾನ ಮಂತ್ರಿಯ ಅಧಿಕಾರ ಮತ್ತು ಕಾರ್ಯಗಳು


**ಮಂತ್ರಿಗಳ ನೇಮಕ, ಖಾತೆಗಳ ಹಂಚಿಕೆ ಮತ್ತು ಮಂತ್ರಿಗಳನ್ನು ವಜಾ ಮಾಡುವ ಅಧಿಕಾರ :** ಮಂತ್ರಿಮಂಡಲದ ಮುಖ್ಯಸ್ಥರಾದ ಪ್ರಧಾನ ಮಂತ್ರಿಯವರು ವಿವಿಧ ಇಲಾಖೆಗಳಿಗೆ ಮಂತ್ರಿಗಳನ್ನು ನೇಮಕ ಮಾಡುವಂತೆ ರಾಷ್ಟ್ರಪತಿಯವರಿಗೆ ಶಿಫಾರಸ್ಸು ಮಾಡುತ್ತಾರೆ ಹಾಗೂ ಮಂತ್ರಿಗಳಿಗೆ ವಿವಿಧ ಖಾತೆಗಳನ್ನು ಹಂಚುತ್ತಾರೆ. ಖಾತೆಗಳನ್ನು ಹಂಚುವಾಗ ಪ್ರಧಾನಿಗೆ ಪೂರ್ಣ ಅಧಿಕಾರವಿದೆ.

**ಸರ್ಕಾರದ ಮುಖ್ಯಸ್ಥರು :** ಸರ್ಕಾರದ ಎಲ್ಲಾ ಆಗು–ಹೋಗುಗಳಿಗೆ ಇವರೇ ಜವಾಬ್ದಾರರಾಗಿದ್ದು, ವಿವಿಧ ಇಲಾಖಾ ಮಂತ್ರಿಗಳ ನಡುವೆ ಸಮನ್ವಯ ಸಾಧಿಸುವ ಕಾರ್ಯನಿರ್ವಹಿಸುತ್ತಾರೆ. ಯೋಜನೆ, ರಕ್ಷಣೆ, ವಿದೇಶಾಂಗ ನೀತಿ ರೂಪಿಸುವಲ್ಲಿ ವಿಶೇಷ ಕಾಳಜಿ ವಹಿಸುತ್ತಾರೆ.

# ನಮ್ಮ ಪ್ರಧಾನ ಮಂತ್ರಿಗಳು



ಪಂಡಿತ ಜವಾಹರಲಾಲ್ ನೆಹರು
1947–1964



ಶ್ರೀ ಲಾಲ ಬಹದ್ದೂರ್ ಶಾಸ್ತ್ರಿ
1964–1966



ಶ್ರೀಮತಿ ಇಂದಿರಾ ಗಾಂಧಿ
1966–77, 1980–84



ಶ್ರೀ ಮೊರಾರ್ಜಿ ದೇಸಾಯಿ
1977–1979




ಶ್ರೀ ಚರಣ ಸಿಂಗ್
1979–1980



ಶ್ರೀ ರಾಜೀವ್ ಗಾಂಧಿ
1984–1989




ಶ್ರೀ ವಿ.ಪಿ. ಸಿಂಗ್
1989–1990




ಶ್ರೀ ಚಂದ್ರಶೇಖರ್
1990 ನವೆಂಬರ್–1991 ಜೂನ್




ಶ್ರೀ ಪಿ.ವಿ. ನರಸಿಂಹರಾವ್
1991–1996



ಶ್ರೀ ಎಚ್.ಡಿ. ದೇವೇಗೌಡ
1996 ಜೂನ್ – 1997 ಏಪ್ರಿಲ್




ಶ್ರೀ ಐ.ಕೆ. ಗುಜ್ರಾಲ್
1997 ಏಪ್ರಿಲ್ – 1998 ಮಾರ್ಚ್



ಶ್ರೀ ಅಟಲ್ ಬಿಹಾರಿ ವಾಜಪೇಯಿ
ಮೇ 18, 1996–31 ಮೇ 1996
19 ಮಾರ್ಚ್ 1998–2004



ಡಾ॥ ಮನಮೋಹನ ಸಿಂಗ್
2004–2014



ಶ್ರೀ ನರೇಂದ್ರ ಮೋದಿ
2014–

©KTBS Not to be republished

**ಸಚಿವ ಸಂಪುಟದ ನಾಯಕ:** ಪ್ರಧಾನಿಯವರ ಅಧ್ಯಕ್ಷತೆಯಲ್ಲೇ ಸಚಿವ ಸಂಪುಟದ ಸಭೆ ನಡೆಯುತ್ತದೆ. ಸಚಿವ ಸಂಪುಟದ ಕಾರ್ಯಕಲಾಪಗಳು, ರಾಷ್ಟ್ರೀಯ, ಅಂತರರಾಷ್ಟ್ರೀಯ ವಿಷಯಗಳ ಚರ್ಚೆ ಮತ್ತು ನಿರ್ಧಾರ ಇವರ ಅಧ್ಯಕ್ಷತೆಯಲ್ಲಿ ನಡೆಯುತ್ತದೆ. ಇವರು ರಾಷ್ಟ್ರಪತಿ ಮತ್ತು ಸಚಿವ ಸಂಪುಟದ ನಡುವೆ ಸಂಬಂಧ ಕಲ್ಪಿಸುವ ಕೊಂಡಿಯಾಗಿದ್ದಾರೆ.

**ಮಂತ್ರಿಮಂಡಲ :**

ಮಂತ್ರಿಮಂಡಲವು ನೈಜ ಕಾರ್ಯಾಂಗವಾಗಿದ್ದು, ಎರಡು ಬಗೆಯ ಸಚಿವರುಗಳನ್ನು ಹೊಂದಿದೆ. ಮೊದಲನೆಯದು ಸಂಪುಟ ದರ್ಜೆ, ಎರಡನೆಯದು ರಾಜ್ಯ ದರ್ಜೆ ಸಚಿವರು. ಮಂತ್ರಿಮಂಡಲದ ಗಾತ್ರವು ಲೋಕಸಭೆಯ ಒಟ್ಟು ಸದಸ್ಯರಲ್ಲಿ ಶೇಕಡ 15%ಕ್ಕಿಂತ ಹೆಚ್ಚಿರಬಾರದು. ಈ ಮಂತ್ರಿಮಂಡಲವು ಎರಡು ಬಗೆಯ ಹೊಣೆಗಾರಿಕೆಯನ್ನು ಹೊಂದಿದೆ. ಪ್ರತಿ ಇಲಾಖೆಯ ಮಂತ್ರಿಯು ತಮ್ಮ ಖಾತೆಯ ಆಗು–ಹೋಗುಗಳು, ಸಫಲತೆ–ವಿಫಲತೆಗೆ ರಾಷ್ಟ್ರಪತಿಗೆ ವೈಯಕ್ತಿಕ ಹೊಣೆಗಾರಿಕೆಯನ್ನು ಹೊಂದಿರುತ್ತಾರೆ ಮತ್ತು ಮಂತ್ರಿ ಮಂಡಲವು ತನ್ನ ಆಡಳಿತ ನಿರ್ವಹಣೆಗೆ, ನೀತಿ ನಿರ್ಧಾರಗಳು ಹಾಗೂ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಲೋಕಸಭೆಗೆ ಸಾಮೂಹಿಕ ಹೊಣೆಗಾರಿಕೆಯನ್ನು ಹೊಂದಿರುತ್ತದೆ. ಆದುದರಿಂದ ಮಂತ್ರಿ ಮಂಡಲವು ಲೋಕಸಭೆಯಲ್ಲಿ ವಿಶ್ವಾಸವಿರುವವರೆಗೂ ಅಧಿಕಾರದಲ್ಲಿ ಮುಂದುವರೆಯುತ್ತದೆ. ವಿಶ್ವಾಸ ಕಳೆದುಕೊಂಡರೆ ಅವಿಶ್ವಾಸ ಗೊತ್ತುವಳಿ ಮೂಲಕ ಅಧಿಕಾರದಿಂದ ತೆಗೆದುಹಾಕಬಹುದಾಗಿದೆ.

**ನಿಮಗಿದು ತಿಳಿದಿರಲಿ:**

**ಅವಿಶ್ವಾಸ ಗೊತ್ತುವಳಿ:** ಅಧಿಕಾರ ಚಲಾಯಿಸುತ್ತಿರುವ ಪ್ರಧಾನಮಂತ್ರಿ ಹಾಗೂ ಮಂತ್ರಿಮಂಡಲದ ಮೇಲೆ ಲೋಕಸಭೆಯ ಬಹುಸಂಖ್ಯಾತ ಸದಸ್ಯರು ವಿಶ್ವಾಸ ಕಳೆದುಕೊಂಡರೆ, ಪ್ರಧಾನಿ ಹಾಗೂ ಮಂತ್ರಿ ಮಂಡಲ ರಾಜೀನಾಮೆ ಕೊಡಬೇಕಾಗುತ್ತದೆ. ಇದನ್ನೇ ಅವಿಶ್ವಾಸ ಗೊತ್ತುವಳಿ ಎಂದು ಕರೆಯಲಾಗುತ್ತದೆ. ಆಡಳಿತಾರೂಢ ಪಕ್ಷ ಮತ್ತು ಸರ್ಕಾರದ ಬಗ್ಗೆ ನಮಗೆ ನಂಬಿಕೆ ವಿಶ್ವಾಸವಿಲ್ಲ ಎಂಬ ಕಾರಣ ಒಡ್ಡಿ ಸರ್ಕಾರ ಅಧಿಕಾರ ತ್ಯಾಗ ಮಾಡಬೇಕು ಎಂದು ಕೇಂದ್ರದಲ್ಲಿ ಲೋಕಸಭಾ ಸದಸ್ಯರು, ರಾಜ್ಯದಲ್ಲಿ ವಿಧಾನಸಭಾ ಸದಸ್ಯರು ಮಂಡಿಸುವ ನಿರ್ಣಯವೇ ಅವಿಶ್ವಾಸ ಗೊತ್ತುವಳಿ ನಿರ್ಣಯ. ಆದುದರಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅಧಿಕಾರ ಅವಧಿ ಕ್ರಮವಾಗಿ ಲೋಕಸಭೆ ಮತ್ತು ವಿಧಾನ ಸಭೆಯ ವಿಶ್ವಾಸವನ್ನು ಅವಲಂಬಿಸಿದೆ. ರಾಜ್ಯಸಭಾ ಸದಸ್ಯರು ಹಾಗೂ ವಿಧಾನ ಪರಿಷತ್ ಸದಸ್ಯರಿಗೆ ಅನ್ವಯವಾಗುವುದಿಲ್ಲ. ಭಾರತದ ಇತಿಹಾಸದಲ್ಲಿ ಇದುವರೆಗೂ ಸುಮಾರು 34 ಅವಿಶ್ವಾಸ ಗೊತ್ತುವಳಿ ನಿರ್ಣಯವನ್ನು ಮಂಡಿಸಲಾಗಿದೆ.

© KTBS Not to be republished

## ಅಭ್ಯಾಸಗಳು

**I. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿರಿ.**

1. ಭಾರತವು __________ ಗಳ ಒಕ್ಕೂಟವಾಗಿದೆ.
2. ಕೇಂದ್ರ ಶಾಸಕಾಂಗವನ್ನು __________ ಎಂದು ಕರೆಯಲಾಗಿದೆ.
3. ರಾಜ್ಯಸಭೆಯ ಪದನಿಮಿತ್ತ ಸಭಾಪತಿಗಳು __________ ರವರು ಆಗಿರುತ್ತಾರೆ.
4. ಲೋಕಸಭೆಯ ಸದಸ್ಯರಾಗಲು __________ ವರ್ಷ ವಯೋಮಿತಿ ಹೊಂದಿರಬೇಕು.
5. ಮೂರು ಸೇನಾಪಡೆಗಳ ಮಹಾ ದಂಡನಾಯಕರು __________ .

6. ಸಂವಿಧಾನದ __________ ಮತ್ತು ___________ ನೇ ವಿಧಿಯಲ್ಲಿ ರಾಷ್ಟ್ರಪತಿಯವರನ್ನು ಚುನಾಯಿಸುವ ವಿಧಾನವನ್ನು ಅಳವಡಿಸಲಾಗಿದೆ.
7. ಕೇಂದ್ರ ಲೋಕಸೇವಾ ಆಯೋಗದ ಅಧ್ಯಕ್ಷರನ್ನು __________ ರವರು ನೇಮಿಸುತ್ತಾರೆ.

**II. ಈ ಕೆಳಗಿನ ಪ್ರಶ್ನೆಗಳಿಗೆ ಸಹಪಾಠಿಗಳೊಂದಿಗೆ ಚರ್ಚಿಸಿ ಉತ್ತರಿಸಿ.**

1. ಸಂಸತ್ತಿನ ಎರಡು ಸದನಗಳನ್ನು ತಿಳಿಸಿ.
2. ರಾಜ್ಯಸಭೆಯ ರಚನೆಯನ್ನು ವಿವರಿಸಿ.
3. ಲೋಕಸಭೆಯ ಸದಸ್ಯರಾಗಲು ಇರಬೇಕಾದ ಅರ್ಹತೆಗಳು ಯಾವುವು ?
4. ರಾಷ್ಟ್ರಪತಿ ಚುನಾವಣಾ ಪದ್ಧತಿಯನ್ನು ವಿವರಿಸಿ.
5. ಪ್ರಧಾನಮಂತ್ರಿಯ ಅಧಿಕಾರಗಳನ್ನು ಪಟ್ಟಿ ಮಾಡಿ.
6. ಕೇಂದ್ರ ಮಂತ್ರಿಮಂಡಲದ ರಚನೆ ಮತ್ತು ಅದರ ಹೊಣೆಗಾರಿಕೆಯನ್ನು ವಿವರಿಸಿ.

**III. ಚಟುವಟಿಕೆ.**

1. ಕೇಂದ್ರ ಸಂಸತ್ತಿನಂತೆ ನಿಮ್ಮ ಶಾಲೆಯಲ್ಲಿ ಅಣುಕು ಸಂಸತ್ತನ್ನು ಏರ್ಪಡಿಸಿ.
2. ನಿಮ್ಮ ಕ್ಷೇತ್ರದ ಸಂಸತ್ ಸದಸ್ಯರೊಂದಿಗೆ ಅವರ ಕಾರ್ಯಗಳ ಬಗ್ಗೆ ಚರ್ಚಿಸಿ.

**IV. ಯೋಜಿತ ಕಾರ್ಯ**

1. ಸಂಸತ್ ಭವನದ ಚಿತ್ರ ತಯಾರಿಸಿ ಶಾಲೆಯಲ್ಲಿ ಹಾಕಿರಿ.
2. ನೀವು ಲೋಕಸಭಾ ಸದಸ್ಯರೆಂದು ಭಾವಿಸಿಕೊಂಡು ನಿಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ ಬಡತನ ನಿರ್ಮೂಲನೆಗೆ ಕ್ರಿಯಾ ಯೋಜನೆಯನ್ನು ರೂಪಿಸಿ.

©KTBS Not to be republished

## ಅಧ್ಯಾಯ –3

# ರಾಜ್ಯ ಸರ್ಕಾರ

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- *ರಾಜ್ಯ ಶಾಸಕಾಂಗದಲ್ಲಿ ವಿಧಾನಸಭೆ, ವಿಧಾನ ಪರಿಷತ್ತಿನ ಸ್ವರೂಪ, ಸದಸ್ಯತ್ವ, ಕಾರ್ಯ ನಿರ್ವಹಣೆ*
- *ರಾಜ್ಯ ಕಾರ್ಯಾಂಗದಲ್ಲಿ ರಾಜ್ಯಪಾಲರು, ಅರ್ಹತೆಗಳು ಮತ್ತು ಕಾರ್ಯಗಳು*
- *ಮುಖ್ಯಮಂತ್ರಿಯ ನೇಮಕ, ಅಧಿಕಾರ ಮತ್ತು ಕಾರ್ಯಗಳು*

ಭಾರತವು 29 ರಾಜ್ಯಗಳು ಮತ್ತು 6 ಕೇಂದ್ರಾಡಳಿತ ಪ್ರದೇಶಗಳು ಹಾಗೂ ದೆಹಲಿಯನ್ನು ರಾಷ್ಟ್ರದ ರಾಜಧಾನಿ ಭೂಪ್ರದೇಶವಾಗಿ ಒಳಗೊಂಡ ಒಕ್ಕೂಟ ರಾಷ್ಟ್ರವಾಗಿದೆ. ಕೇಂದ್ರ ಸರ್ಕಾರದ ಮಾದರಿಯಂತೆ ರಾಜ್ಯಗಳು ಕೂಡ ತಮ್ಮದೇ ಆದ ಶಾಸಕಾಂಗ, ಕಾರ್ಯಾಂಗಗಳನ್ನು ಹೊಂದಿವೆ. ರಾಜ್ಯ ಸರ್ಕಾರವು ರಾಜ್ಯ ಪಟ್ಟಿಯಲ್ಲಿರುವ ಮತ್ತು ಸಮವರ್ತಿ ಪಟ್ಟಿಯಲ್ಲಿರುವ ವಿಷಯಗಳಿಗೆ ಕಾನೂನು ಮಾಡಿ ಅವುಗಳನ್ನು ಕಾರ್ಯಾಚರಣೆಗೆ ತರುವ ಅಧಿಕಾರ ಹೊಂದಿದೆ. ಸಂಸತ್ತಿನಂತೆ ರಾಜ್ಯಗಳು ರಾಜ್ಯ ಶಾಸಕಾಂಗ (ವಿಧಾನಮಂಡಲ) ವನ್ನು ಒಳಗೊಂಡಿರುತ್ತವೆ.

> ***ನಿಮಗಿದು ತಿಳಿದಿರಲಿ:***
> *ಸಂವಿಧಾನದ ವಿಧಿ 171ರನ್ವಯ ದ್ವಿಸದನ ಶಾಸಕಾಂಗ ಹೊಂದಿರುವ ರಾಜ್ಯಗಳು ಕರ್ನಾಟಕ, ಉತ್ತರ ಪ್ರದೇಶ, ಮಹಾರಾಷ್ಟ್ರ, ಬಿಹಾರ, ಜಮ್ಮು ಕಾಶ್ಮೀರ, ಆಂಧ್ರಪ್ರದೇಶ, ತೆಲಂಗಾಣ (ನೆನಪಿರಲು ಸರಳ ವಿಧಾನ KUMBJAT)*

## ರಾಜ್ಯ ಶಾಸಕಾಂಗ

ರಾಜ್ಯ ಶಾಸಕಾಂಗವು ರಾಜ್ಯಪಾಲರನ್ನೂ ಮತ್ತು ಎರಡು ಸದನಗಳಲ್ಲಿ ಅಥವಾ ರಾಜ್ಯದಲ್ಲಿ ಒಂದೇ ಸದನವಿದ್ದರೆ ಆ ಸದನವನ್ನು ಒಳಗೊಂಡಿರುತ್ತದೆ. ಮೇಲ್ಮನೆಯನ್ನು ವಿಧಾನ ಪರಿಷತ್ ಎಂತಲೂ, ಕೆಳಮನೆಯನ್ನು ವಿಧಾನಸಭೆ ಎಂತಲೂ ಕರೆಯಲಾಗಿದೆ. ವಿಧಾನಸಭೆಯು ರಾಜ್ಯದ ಜನತೆಯನ್ನು ಪ್ರತಿನಿಧಿಸಿದರೆ, ವಿಧಾನಪರಿಷತ್ ವಿವಿಧ ಕ್ಷೇತ್ರಗಳನ್ನು ಪ್ರತಿನಿಧಿಸುತ್ತದೆ.

### ವಿಧಾನಸಭೆ

ವಿಧಾನಸಭೆಯ ಸದಸ್ಯರ ಸಂಖ್ಯೆಯು ಆ ರಾಜ್ಯದ ಜನಸಂಖ್ಯೆಯನ್ನು ಆಧರಿಸಿರುತ್ತದೆ. ಯಾವುದೇ ರಾಜ್ಯದ ವಿಧಾನಸಭಾ ಸದಸ್ಯರ ಸಂಖ್ಯೆ 500ಕ್ಕಿಂತ ಹೆಚ್ಚಾಗಿರಬಾರದು, 60ಕ್ಕಿಂತ ಕಡಿಮೆ ಇರಬಾರದು. ರಾಜ್ಯಪಾಲರು ವಿಧಾನಸಭೆಯಲ್ಲಿ ಆಂಗ್ಲೋ ಭಾರತೀಯರ ಸರಿಯಾದ ಪ್ರಾತಿನಿಧ್ಯವಿಲ್ಲವೆಂದು ನಿರ್ಧರಿಸಿದರೆ ಒಬ್ಬ ಆಂಗ್ಲೋ ಭಾರತೀಯನನ್ನು ನೇಮಕ ಮಾಡುವ ಅಧಿಕಾರ ಹೊಂದಿರುತ್ತಾರೆ. ಆದರೂ ಚಿಕ್ಕ ರಾಜ್ಯಗಳಲ್ಲಿ ಸದಸ್ಯರ ಸಂಖ್ಯೆ ಕಡಿಮೆ ಇದೆ. ಉದಾ: ಮಿಜೋರಾಂ, ಗೋವಾದಲ್ಲಿ ತಲಾ 40 ಸದಸ್ಯರಿದ್ದಾರೆ. ಕರ್ನಾಟಕ ವಿಧಾನಸಭೆಯು 225 ಸದಸ್ಯರನ್ನು ಹೊಂದಿದೆ. 224 ಸದಸ್ಯರು ಚುನಾವಣೆಯ ಮೂಲಕ ಚುನಾಯಿಸಲ್ಪಟ್ಟರೆ ಉಳಿದ ಒಬ್ಬರು ಆಂಗ್ಲೋ–ಇಂಡಿಯನ್ನರನ್ನು ರಾಜ್ಯಪಾಲರು ನಾಮಕರಣ ಮಾಡುತ್ತಾರೆ.

**ಸದಸ್ಯರಾಗಲು ಬೇಕಾದ ಅರ್ಹತೆಗಳು :** (1) ಭಾರತದ ಪ್ರಜೆಯಾಗಿರಬೇಕು. (2) ಕನಿಷ್ಠ 25 ವರ್ಷ ವಯೋಮಿತಿಯನ್ನು ಹೊಂದಿರಬೇಕು. (3) ಯಾವುದೇ ಲಾಭದಾಯಕ ಹುದ್ದೆಯನ್ನು ಹೊಂದಿರಬಾರದು. (4) ನ್ಯಾಯಾಲಯದಿಂದ ಶಿಕ್ಷೆಗೆ ಗುರಿಯಾಗಿರಬಾರದು. (5) ಮಾನಸಿಕ ಅಸ್ವಸ್ಥತೆ ಹೊಂದಿರಬಾರದು. (6) ದಿವಾಳಿಯಾಗಿರಬಾರದು. (7) ಸಂಸತ್ತು ಕಾಲಕಾಲಕ್ಕೆ ನಿರ್ಧರಿಸುವ ಇತರೆ ಅರ್ಹತೆಗಳನ್ನು ಹೊಂದಿರಬೇಕು.

©KTBS Not to be republished

**ಅಧಿಕಾರ ಅವಧಿ :** ವಿಧಾನಸಭೆಯ ಅಧಿಕಾರದ ಅವಧಿ 5 ವರ್ಷ. ಅವಧಿಗೆ ಮುಂಚೆ ಮುಖ್ಯಮಂತ್ರಿಯ ಸಲಹೆಯಂತೆ ರಾಜ್ಯಪಾಲರು ವಿಸರ್ಜಿಸಬಹುದು. ಈ ಸಂದರ್ಭದಲ್ಲಿ ರಾಜ್ಯವನ್ನು ರಾಷ್ಟ್ರಪತಿಯವರ ಆಳ್ವಿಕೆಗೆ ಒಳಪಡಿಸಲಾಗುತ್ತದೆ. ಸದಸ್ಯರು ತಮ್ಮ ಸ್ಥಾನದಲ್ಲಿ ಮುಂದುವರೆಯಲು ಇಷ್ಟವಿಲ್ಲದಿದ್ದರೆ ಸಭಾಧ್ಯಕ್ಷರಿಗೆ ರಾಜೀನಾಮೆ ನೀಡಬಹುದಾಗಿದೆ.

ಚುನಾವಣೆಯಲ್ಲಿ ಆಯ್ಕೆಯಾದ ಸದಸ್ಯರಲ್ಲಿ ಒಬ್ಬರನ್ನು ಸಭಾಧ್ಯಕ್ಷರನ್ನಾಗಿ, ಮತ್ತೊಬ್ಬರನ್ನು ಉಪಸಭಾಧ್ಯಕ್ಷರನ್ನಾಗಿ ಚುನಾಯಿಸಲಾಗುವುದು. ಅಧಿವೇಶನದ ಕಾರ್ಯಗಳು ಇವರ ಅಧ್ಯಕ್ಷತೆಯಲ್ಲಿ ನಡೆಯುತ್ತವೆ. ಸದನದಲ್ಲಿ ಶಾಂತಿ, ಶಿಸ್ತನ್ನು ಕಾಪಾಡುವ, ಘನತೆಯನ್ನು ಹೆಚ್ಚಿಸುವ, ಅಧಿವೇಶನ ಕರೆಯುವ, ಮುಂದೂಡುವ, ಸದಸ್ಯರ ಹಕ್ಕು ಬಾಧ್ಯತೆಗಳನ್ನು ರಕ್ಷಿಸುವ, ಸದನದಲ್ಲಿ ಸಮಮತಗಳು ಬಂದಾಗ ನಿರ್ಣಾಯಕ ಮತ ಚಲಾಯಿಸುವ ಕಾರ್ಯಗಳನ್ನು ನಿರ್ವಹಿಸುತ್ತಾರೆ.

## ಅಧಿಕಾರ ಕಾರ್ಯಗಳು

**ಶಾಸನೀಯ ಅಧಿಕಾರ ಕಾರ್ಯ :** ಈಗಾಗಲೇ ತಿಳಿಸಿರುವಂತೆ ರಾಜ್ಯಪಟ್ಟಿ, ಸಮವರ್ತಿ ಪಟ್ಟಿಯಲ್ಲಿ ಬರುವ ವಿಷಯದ ಮೇಲೆ ಶಾಸನ ಮಾಡುವ ಅಧಿಕಾರ ವಿಧಾನಸಭೆಗಿದೆ. ಮಸೂದೆ ಕಾಯಿದೆಗಳಾಗಬೇಕಾದರೆ ಎರಡೂ ಸದನಗಳ ಒಪ್ಪಿಗೆ ಪಡೆದು ರಾಜ್ಯಪಾಲರ ಸಹಿ ಪಡೆಯಬೇಕು. ರಾಜ್ಯಪಾಲರು ಕೆಲವು ಮಸೂದೆಗಳನ್ನು ರಾಷ್ಟ್ರಪತಿಗಳ ಒಪ್ಪಿಗೆಗೆ ಕಾಯ್ದಿರಿಸಬಹುದು.

**ಹಣಕಾಸಿನ ಅಧಿಕಾರ ಕಾರ್ಯ:** ಹಣಕಾಸಿನ ವಿಷಯದಲ್ಲಿ ವಿಧಾನಸಭೆಗೆ ಹೆಚ್ಚು ಅಧಿಕಾರವಿದೆ. ಹಣಕಾಸಿನ ಮಸೂದೆಯನ್ನು ರಾಜ್ಯಪಾಲರ ಪೂರ್ವಾನುಮತಿಯ ಮೇರೆಗೆ ವಿಧಾನಸಭೆಯಲ್ಲಿ ಮೊದಲು ಮಂಡಿಸಬೇಕು. ವಿಧಾನಸಭೆ ಅಂಗೀಕರಿಸಿದ ಮಸೂದೆಯನ್ನು ವಿಧಾನಪರಿಷತ್‌ಗೆ ಕಳುಹಿಸಲಾಗುತ್ತದೆ. ವಿಧಾನಪರಿಷತ್ ಮಸೂದೆಯನ್ನು 14 ದಿನಗಳ ಒಳಗೆ ತನ್ನ ಅಭಿಪ್ರಾಯದೊಂದಿಗೆ ಮರಳಿ ವಿಧಾನಸಭೆಗೆ ಕಳುಹಿಸಬೇಕು. ವಿಧಾನಪರಿಷತ್ತಿನ ಅಭಿಪ್ರಾಯವು ವಿಧಾನಸಭೆಗೆ ಕಡ್ಡಾಯವಾಗಿರುವುದಿಲ್ಲ. 14 ದಿನಗಳೊಳಗೆ ವಿಧಾನ ಪರಿಷತ್ತು ಮರಳಿ ವಿಧಾನಸಭೆಗೆ ಕಳುಹಿಸದಿದ್ದರೆ ವಿಧಾನ ಪರಿಷತ್ತು ಒಪ್ಪಿಗೆ ನೀಡಿದೆ ಎಂದು ಪರಿಗಣಿಸಿ ವಿಧಾನಸಭೆಯು ರಾಜ್ಯಪಾಲರ ಅನುಮತಿಗೆ ಕಳುಹಿಸುತ್ತದೆ.



**ವಿಧಾನಸೌಧ**

**ಚಟುವಟಿಕೆ:**

*ವಿಧಾನಸಭೆಯ ಅಧಿವೇಶನ ಸಮಯದಲ್ಲಿ ಭೇಟಿ ನೀಡಿ ಕಲಾಪವನ್ನು ವೀಕ್ಷಿಸಿ, ಅಲ್ಲಿ ನಡೆಯುವ ಚರ್ಚೆಗಳ ಬಗ್ಗೆ ಲಘು ಟಿಪ್ಪಣಿ ತಯಾರಿಸಿ.*

**ಚಟುವಟಿಕೆ:**

*ನಿಮ್ಮ ಕ್ಷೇತ್ರದ ವಿಧಾನಸಭಾ ಸದಸ್ಯರನ್ನು ಭೇಟಿ ಮಾಡಿ, ಅವರ ಕಾರ್ಯಗಳ ಬಗ್ಗೆ ಸಂವಾದ ನಡೆಸಿ.*

©KTBS not to be republished

**ಕಾರ್ಯಾಂಗದ ಮೇಲೆ ನಿಯಂತ್ರಣ :** ರಾಜ್ಯ ಕಾರ್ಯಾಂಗವು ವಿಧಾನಸಭೆಗೆ ಜವಾಬ್ದಾರಿಯಾಗಿರುತ್ತದೆ. ವಿಧಾನಸಭೆಯ ವಿಶ್ವಾಸವಿರುವವರೆಗೆ ಮಂತ್ರಿಮಂಡಲ ಅಧಿಕಾರದಲ್ಲಿ ಮುಂದುವರೆಯುತ್ತದೆ. ವಿಶ್ವಾಸ ಕಳೆದುಕೊಂಡಾಗ ರಾಜೀನಾಮೆ ನೀಡಬೇಕಾಗುತ್ತದೆ. ಸಂಪೂರ್ಣ ಮಂತ್ರಿಮಂಡಲ ಸಾಮೂಹಿಕವಾಗಿ ವಿಧಾನಸಭೆಗೆ ಹೊಣೆಯಾಗಿರುತ್ತದೆ.

**ಚುನಾವಣೆಯ–ಅಧಿಕಾರ ಕಾರ್ಯ :** ರಾಷ್ಟ್ರಪತಿಗಳು, ರಾಜ್ಯಸಭೆ ಸದಸ್ಯರು, ವಿಧಾನಪರಿಷತ್ ಸದಸ್ಯರು ವಿಧಾನಸಭಾಧ್ಯಕ್ಷರು, ಉಪ ಸಭಾಧ್ಯಕ್ಷರನ್ನು ಚುನಾವಣೆ ಮೂಲಕ ಆಯ್ಕೆ ಮಾಡುವ ಅಧಿಕಾರ ವಿಧಾನಸಭೆಗೆ ಇದೆ.

**ಇತರೆ ಅಧಿಕಾರ ಕಾರ್ಯ :** ಕೆಲವು ವಿಷಯಗಳಿಗೆ ಸಂಬಂಧಿಸಿದಂತೆ ಕೇಂದ್ರ ಸಂಸತ್ತು ಅಂಗೀಕರಿಸಿದ ಮಸೂದೆಯ ಬಗ್ಗೆ ವಿಧಾನಸಭೆಯಲ್ಲಿ ಚರ್ಚಿಸಬೇಕಾಗಿ ಬಂದಾಗ ತನ್ನ ಅಧಿಕಾರ ಚಲಾಯಿಸುತ್ತದೆ. ರಾಜ್ಯ ಲೋಕಸೇವಾ ಆಯೋಗದ ವರದಿ ಮತ್ತು ಇನ್ನಿತರೆ ವರದಿಗಳನ್ನು ಸದನದಲ್ಲಿ ಚರ್ಚಿಸುವ ಅಧಿಕಾರವಿದೆ.

**ವಿಧಾನ ಪರಿಷತ್ :**

ರಾಜ್ಯ ಶಾಸಕಾಂಗದ ಮೇಲ್ಮನೆಯನ್ನು ವಿಧಾನ ಪರಿಷತ್ ಎಂದು ಕರೆಯಲಾಗುತ್ತದೆ. ಇದರ ಸದಸ್ಯರ ಗರಿಷ್ಠ ಸಂಖ್ಯೆಯು ಆ ರಾಜ್ಯದ ವಿಧಾನಸಭಾ ಸದಸ್ಯರ ಮೂರನೇ ಒಂದು ಭಾಗದಷ್ಟಿರುತ್ತದೆ. ಆದರೆ 40 ಕ್ಕಿಂತ ಕಡಿಮೆ ಇರಬಾರದು. ಕರ್ನಾಟಕದ ವಿಧಾನ ಪರಿಷತ್ ಸದಸ್ಯರ ಸಂಖ್ಯೆ 75. ಈ ಸದಸ್ಯರು 5 ಕ್ಷೇತ್ರಗಳನ್ನು ಪ್ರತಿನಿಧಿಸುತ್ತಾರೆ. ವಿಧಾನಸಭಾ ಸದಸ್ಯರಿಂದ, ಸ್ಥಳೀಯ ಸಂಸ್ಥೆಗಳಿಂದ, ಪದವೀಧರ ಕ್ಷೇತ್ರದಿಂದ, ಶಿಕ್ಷಕರ ಕ್ಷೇತ್ರದಿಂದ ಚುನಾಯಿಸಲ್ಪಟ್ಟರೆ, ಕಲೆ, ಸಾಹಿತ್ಯ, ಶಿಕ್ಷಣ, ಸಮಾಜ ಸೇವೆ, ವಿಜ್ಞಾನ ಮತ್ತು ಸಹಕಾರ ಚಳವಳಿ ಕ್ಷೇತ್ರಗಳಲ್ಲಿನ ಸೇವೆಯನ್ನು ಪರಿಗಣಿಸಿ ರಾಜ್ಯಪಾಲರು ನಾಮಕರಣ ಮಾಡುತ್ತಾರೆ. ವಿಧಾನ ಪರಿಷತ್ತು ಖಾಯಂ ಸದನವಾಗಿರುತ್ತದೆ.

**ಸದಸ್ಯರಿಗಿರಬೇಕಾದ ಅರ್ಹತೆಗಳು :** (1) ಭಾರತದ ಪ್ರಜೆಯಾಗಿರಬೇಕು. (2) 30 ವರ್ಷ ವಯೋಮಿತಿ ಹೊಂದಿರಬೇಕು. (3) ವಿಧಾನಸಭಾ ಸದಸ್ಯರಾಗಲು ಇರಬೇಕಾದ ಎಲ್ಲಾ ಅರ್ಹತೆಗಳನ್ನು ಪಡೆದಿರಬೇಕು. ಪ್ರತಿ ಎರಡು ವರ್ಷಕ್ಕೊಮ್ಮೆ ಅವಧಿ ಪೂರ್ಣಗೊಂಡ $\frac{1}{3}$ರಷ್ಟು ಸದಸ್ಯರು ನಿವೃತ್ತರಾಗುತ್ತಾರೆ ಮತ್ತು ಅಷ್ಟೇ ಸದಸ್ಯರು ಆಯ್ಕೆಯಾಗುತ್ತಾರೆ. ಆಯ್ಕೆಯಾದ ಸದಸ್ಯರ ಅಧಿಕಾರ ಅವಧಿ 6 ವರ್ಷ. ಇವರಲ್ಲೇ ಒಬ್ಬರನ್ನು ಸಭಾಪತಿಯನ್ನಾಗಿ ಮತ್ತೊಬ್ಬರನ್ನು ಉಪಸಭಾಪತಿಯನ್ನಾಗಿ ಆಯ್ಕೆ ಮಾಡಿಕೊಳ್ಳುತ್ತಾರೆ. ಸಭಾಪತಿಗಳು ಸದನದ ಅಧ್ಯಕ್ಷತೆ ವಹಿಸಿಕೊಂಡು ಕಾರ್ಯಕಲಾಪಗಳನ್ನು ಯಶಸ್ವಿಯಾಗಿ ನಿರ್ವಹಿಸಿಕೊಂಡು ಹೋಗುವ ಅಧಿಕಾರ ಪಡೆದಿದ್ದಾರೆ.

**ಅಧಿಕಾರಗಳು**

**ಶಾಸನೀಯ ಅಧಿಕಾರ :** ಶಾಸನ ಮಾಡುವಲ್ಲಿ ವಿಧಾನ ಪರಿಷತ್ ಸಹ ಅಧಿಕಾರ ಪಡೆದಿದೆ. ಸಾಮಾನ್ಯ ಮಸೂದೆಯನ್ನು ಎರಡೂ ಸದನದಲ್ಲಿ ಮಂಡಿಸಬಹುದು. ಒಂದು ಸದನ ಅಂಗೀಕರಿಸಿದ ಮಸೂದೆಯನ್ನು ಇನ್ನೊಂದು ಸದನಕ್ಕೆ ಕಳುಹಿಸಲಾಗುತ್ತದೆ. ವಿಧಾನ ಪರಿಷತ್ ಮಸೂದೆಯನ್ನು 3 ತಿಂಗಳವರೆಗೆ ತಡೆಹಿಡಿಯಬಹುದು. ಎರಡನೇ ಬಾರಿಗೆ ಮತ್ತೆ ಕಳುಹಿಸಿಕೊಟ್ಟಾಗ ಒಂದು ತಿಂಗಳೊಳಗೆ ಅಂಗೀಕಾರ ನೀಡಬೇಕು. ಇಲ್ಲವಾದಲ್ಲಿ ಎರಡೂ ಸದನಗಳಿಂದ ಅಂಗೀಕರಿಸಲ್ಪಟ್ಟಿದೆ ಎಂದು ಭಾವಿಸಿ ರಾಜ್ಯಪಾಲರ ಒಪ್ಪಿಗೆಗೆ ಕಳುಹಿಸಿಕೊಡಲಾಗುತ್ತದೆ.

**ಶಾಸನ ರಚನಾ ಪ್ರಕ್ರಿಯೆ:** 1) ಮೊದಲ ಓದುವಿಕೆ : ಸದನದಲ್ಲಿ ಮಸೂದೆ ಮಂಡಿಸುವವರು ಮಸೂದೆಯನ್ನು ಗಟ್ಟಿಯಾಗಿ ಓದುತ್ತಾರೆ. 2) ಎರಡನೇ ಓದುವಿಕೆಯಲ್ಲಿ ಮಸೂದೆಯ ಬಗ್ಗೆ ಚರ್ಚೆ ನಡೆಯಬಹುದು ಅಥವಾ ಮಸೂದೆಯನ್ನು ಸಂಬಂಧಪಟ್ಟ ಸಮಿತಿಗೆ ಕಳುಹಿಸಬಹುದು. ಸಮಿತಿಯು ದೀರ್ಘವಾಗಿ ಚರ್ಚಿಸಿ ಒಂದು

©KTBS Not to be republished

ವರದಿಯನ್ನು ಸಿದ್ಧಪಡಿಸಿ ಸದನಕ್ಕೆ ವಾಪಸ್ಸು ಕಳುಹಿಸುತ್ತದೆ. ಸದನ ವರದಿಯನ್ನು ಚರ್ಚಿಸಿ ಮತದಾನದ ಮೂಲಕ ಅಂಗೀಕರಿಸಬಹುದು ಇಲ್ಲವೆ ತಿರಸ್ಕರಿಸಬಹುದು. 3) ಮೂರನೇ ಓದುವಿಕೆಯಲ್ಲಿ ಮಸೂದೆಯನ್ನು ಮೌಖಿಕ ಚರ್ಚೆ ಮಾಡಬಹುದು. ನಂತರ ಮಸೂದೆ ಅಂಗೀಕಾರವಾಗಿ ಇನ್ನೊಂದು ಸದನಕ್ಕೆ ಕಳುಹಿಸಲಾಗುತ್ತದೆ. ಆ ಸದನದಲ್ಲೂ ಮೇಲಿನ ಎಲ್ಲಾ ಪ್ರಕ್ರಿಯೆಗಳು ನಡೆದು ರಾಜ್ಯಪಾಲರ ಸಹಿಗೆ ಕಳುಹಿಸಲಾಗುತ್ತದೆ. ರಾಜ್ಯಪಾಲರು ಅದಕ್ಕೆ ಒಪ್ಪಿಗೆ ನೀಡಬಹುದು ಇಲ್ಲಾ ರಾಷ್ಟ್ರಪತಿಯವರ ಸಹಿಗೆ ಕಾಯ್ದಿರಿಸಬಹುದು.

**ಹಣಕಾಸಿನ ಅಧಿಕಾರ :** ಹಣಕಾಸಿನ ಬಗ್ಗೆ ವಿಧಾನಸಭೆ ಹೆಚ್ಚು ಅಧಿಕಾರ ಪಡೆದಿದೆ. ವಿಧಾನ ಪರಿಷತ್ ಕೇವಲ 14 ದಿನಗಳವರೆಗೆ ತಡೆಹಿಡಿಯುವ ಅಧಿಕಾರವಿದೆ. 14 ದಿನಕ್ಕಿಂತ ಹೆಚ್ಚು ಕಾಲ ತಡೆಹಿಡಿದರೆ ಎರಡೂ ಸದನಗಳಿಂದ ಅಂಗೀಕಾರವಾಗಿದೆಯೆಂದು ತಿಳಿದು ರಾಜ್ಯಪಾಲರ ಒಪ್ಪಿಗೆಗೆ ಕಳುಹಿಸಲಾಗುತ್ತದೆ.

> **ಚಟುವಟಿಕೆ:**
> *ನಿಮ್ಮ ಗ್ರಾಮ/ವಾರ್ಡ್ ಸದಸ್ಯರಿಂದ ನಿಮ್ಮ ಕ್ಷೇತ್ರದ ಲೋಕಸಭಾ ಸದಸ್ಯರವರೆಗಿನ ವಿವಿಧ ಜನಪ್ರತಿನಿಧಿಗಳ ಹೆಸರು ಗಳನ್ನು ಪಟ್ಟಿ ಮಾಡಿ.*

**ಆಡಳಿತಾಧಿಕಾರ :** ಇದು ಆಡಳಿತದ ಮೇಲೆ ಕಡಿಮೆ ನಿಯಂತ್ರಣ ಹೊಂದಿದೆ. ಸದಸ್ಯರು ಸಚಿವರುಗಳಿಗೆ ಪ್ರಶ್ನೆಗಳನ್ನು ಕೇಳುವುದರ ಮೂಲಕ ಮಾಹಿತಿ ಪಡೆಯಬಹುದು. ಉತ್ತರ ಸಮರ್ಪಕವಾಗಿಲ್ಲದಿದ್ದರೆ ಸಚಿವರ ರಾಜೀನಾಮೆಗೆ ಒತ್ತಾಯಿಸಬಹುದೇ ವಿನಃ ಅವಿಶ್ವಾಸ ನಿರ್ಣಯ ಮಂಡಿಸುವಂತಿಲ್ಲ.

**ಚರ್ಚಾ ಅಧಿಕಾರ :** ಸರ್ಕಾರದ ಕಾರ್ಯಕ್ರಮಗಳು, ನೀತಿ ನಿರ್ಧಾರಗಳು ಹಾಗೂ ಮಸೂದೆಗಳ ಬಗ್ಗೆ ಚರ್ಚಿಸಲಾಗುತ್ತದೆ. ಇದು ಹಿರಿಯರ ಸದನವಾಗಿರುವುದರಿಂದ ಚರ್ಚೆ ಬಹಳ ಗಂಭೀರವಾಗಿರುತ್ತದೆ.

## ರಾಜ್ಯ ಕಾರ್ಯಾಂಗ

ರಾಜ್ಯ ಕಾರ್ಯಾಂಗವು ರಾಜ್ಯಪಾಲರು, ಮುಖ್ಯಮಂತ್ರಿ ಒಳಗೊಂಡ ಮಂತ್ರಿಮಂಡಲವನ್ನು ಹೊಂದಿರುತ್ತದೆ. ರಾಜ್ಯಪಾಲರು ಸಂವಿಧಾನಾತ್ಮಕವಾಗಿ ಮುಖ್ಯಸ್ಥರಾದರೆ, ಮುಖ್ಯಮಂತ್ರಿಯನ್ನು ಒಳಗೊಂಡ ಮಂತ್ರಿಮಂಡಲವೇ ನಿಜವಾದ ಕಾರ್ಯಾಂಗವಾಗಿದೆ. ರಾಜ್ಯಪಾಲರು ತಾವಾಗಲೀ ಅಥವಾ ತಮ್ಮ ಅಧೀನಾಧಿಕಾರಿಗಳ ಮೂಲಕವಾಗಲೀ ಅಧಿಕಾರ ಚಲಾಯಿಸಬಹುದು.

### ರಾಜ್ಯಪಾಲರು

ಕೇಂದ್ರದ ಪ್ರಧಾನಿ ಮತ್ತು ಮಂತ್ರಿಮಂಡಲದ ಶಿಫಾರಸ್ಸಿನ ಮೇರೆಗೆ ರಾಜ್ಯಪಾಲರನ್ನು ರಾಷ್ಟ್ರಪತಿಗಳು ನೇಮಿಸುತ್ತಾರೆ. ಪ್ರತಿ ರಾಜ್ಯಕ್ಕೂ ಒಬ್ಬರು ರಾಜ್ಯಪಾಲರಿರಬೇಕೆಂದು ನಿಯಮವಿದೆ. ಆದರೆ ಎರಡು ಅಥವಾ ಅದಕ್ಕಿಂತ ಹೆಚ್ಚು ರಾಜ್ಯಗಳಿಗೆ ಒಬ್ಬರೇ ರಾಜ್ಯಪಾಲರನ್ನು ನೇಮಿಸಬಹುದು.

**ಅರ್ಹತೆ, ಅಧಿಕಾರಾವಧಿ ಮತ್ತು ವೇತನ ಸವಲತ್ತುಗಳು :** (1) ಭಾರತದ ಪ್ರಜೆಯಾಗಿರಬೇಕು. (2) 35 ವರ್ಷಕ್ಕಿಂತ ಮೇಲ್ಪಟ್ಟಿರಬೇಕು. (3) ಯಾವುದೇ ಲಾಭದಾಯಕ ಹುದ್ದೆಯನ್ನು ಹೊಂದಿರಬಾರದು. (4) ಸಂಸತ್ ಅಥವಾ ರಾಜ್ಯ ಶಾಸಕಾಂಗದ ಸದಸ್ಯರಾಗಿರಬಾರದು. ಸದಸ್ಯತ್ವ ಹೊಂದಿದ್ದರೆ ರಾಜ್ಯಪಾಲರಾಗಿ ನೇಮಕವಾದ ನಂತರ ಸದಸ್ಯತ್ವ ತ್ಯಜಿಸಬೇಕು. ರಾಜ್ಯಪಾಲರ ಅಧಿಕಾರ ಅವಧಿ 5 ವರ್ಷ. ಆದರೆ ಮುಂದಿನ ರಾಜ್ಯಪಾಲರು ನೇಮಕವಾಗುವವರೆಗೆ ಸಾಮಾನ್ಯವಾಗಿ ಅಧಿಕಾರದಲ್ಲಿ ಮುಂದುವರೆಯುತ್ತಾರೆ. ಕೇಂದ್ರ ಮಂತ್ರಿಮಂಡಲದ ಸಲಹೆ ಮೇರೆಗೆ ರಾಷ್ಟ್ರಪತಿಗಳು ರಾಜ್ಯಪಾಲರನ್ನು ಅವಧಿಗೆ ಮುಂಚಿತವಾಗಿಯೇ ವಾಪಸ್ ಕರೆಸಿಕೊಳ್ಳಬಹುದು. ಇವರಿಗೆ ಸಂಸತ್ತು ನಿಗದಿಪಡಿಸುವ ವೇತನ, ಭತ್ಯೆ, ಬಾಡಿಗೆ ಇಲ್ಲದ ಅಧಿಕೃತ ನಿವಾಸ (ರಾಜಭವನ) ವನ್ನು ನೀಡಲಾಗಿದೆ. ಇವರ ಅಧಿಕಾರ ಕಾರ್ಯಗಳನ್ನು ನ್ಯಾಯಾಲಯದಲ್ಲಿ ಪ್ರಶ್ನಿಸುವಂತಿಲ್ಲ ಹಾಗೂ ಅವರ ಅಧಿಕಾರವಧಿಯಲ್ಲಿ ಯಾವುದೇ ಮೊಕದ್ದಮೆಗಳನ್ನು ಹೂಡುವಂತಿಲ್ಲ.

© KTBS Not to be republished

**ಅಧಿಕಾರ ಕಾರ್ಯಗಳು :** ಕಾನೂನುಬದ್ಧವಾಗಿ ಎಲ್ಲಾ ಅಧಿಕಾರಗಳು ರಾಜ್ಯಪಾಲರಿಗೆ ಸೇರಿವೆ. ಆದರೆ ನೈಜವಾಗಿ ಮುಖ್ಯಮಂತ್ರಿಯನ್ನೊಳಗೊಂಡ ಮಂತ್ರಿಮಂಡಲ ಚಲಾಯಿಸುತ್ತದೆ. ಆದರೂ ರಾಜ್ಯಪಾಲರ ಅಧಿಕಾರಗಳು ಈ ಕೆಳಕಂಡಂತಿವೆ.

**ಕಾರ್ಯಾಂಗಾಧಿಕಾರ :** ಇವರು ಕಾರ್ಯಾಂಗದ ಮುಖ್ಯಸ್ಥರಾಗಿದ್ದು, ರಾಜ್ಯದ ಮುಖ್ಯಮಂತ್ರಿ ಮತ್ತು ಅವರ ಸಲಹೆ ಮೇರೆಗೆ ಇತರೆ ಮಂತ್ರಿಗಳನ್ನು ನೇಮಿಸುತ್ತಾರೆ. ರಾಜ್ಯ ಲೋಕಸೇವಾ ಆಯೋಗದ ಅಧ್ಯಕ್ಷರು, ಮತ್ತು ಸದಸ್ಯರು, ವಿಶ್ವವಿದ್ಯಾನಿಲಯಗಳ ಉಪಕುಲಪತಿಗಳು ಮತ್ತು ಇನ್ನಿತರೆ ಅಧಿಕಾರಿಗಳನ್ನು ನೇಮಿಸುವ ಅಧಿಕಾರವಿದೆ.

> **ಚರ್ಚಿಸಿ:**
> *ರಾಜ್ಯದ ಆದೇಶಗಳನ್ನು ರಾಜ್ಯಪಾಲರ ಆಜ್ಞಾನುಸಾರ ಎಂದು, ರಾಷ್ಟ್ರದ ಆದೇಶಗಳನ್ನು ರಾಷ್ಟ್ರಪತಿಗಳ ಆಜ್ಞಾನುಸಾರ ಎಂದು ಹೊರಡಿಸುತ್ತಾರೆ. ಏಕೆ? ಶಿಕ್ಷಕರೊಂದಿಗೆ ಚರ್ಚಿಸಿ.*

**ಶಾಸನೀಯ ಅಧಿಕಾರ :** ಅಧಿವೇಶನ ಕರೆಯುವ, ಮುಂದೂಡುವ ಮತ್ತು ಮುಖ್ಯಮಂತ್ರಿಯ ಶಿಫಾರಸ್ಸಿನ ಮೇರೆಗೆ ವಿಧಾನಸಭೆಯನ್ನು ವಿಸರ್ಜಿಸುವ ಅಧಿಕಾರವಿದೆ. ವಿಧಾನಸಭೆಗೆ ಒಬ್ಬರನ್ನು, ವಿಧಾನಪರಿಷತ್‌ಗೆ ಆರನೇ ಒಂದರಷ್ಟು ಸದಸ್ಯರನ್ನು ನೇಮಿಸುವ ಅಧಿಕಾರ ಹೊಂದಿದ್ದಾರೆ. ಶಾಸಕಾಂಗ ಅಂಗೀಕರಿಸಿದ ಮಸೂದೆಗೆ ತಮ್ಮ ಅಂಕಿತವನ್ನು ಹಾಕುವ, ತಡೆ ಹಿಡಿಯುವ ಅಧಿಕಾರವಿದೆ. ಅವಶ್ಯವಿದ್ದಲ್ಲಿ ರಾಷ್ಟ್ರಪತಿಯ ಅಂಕಿತಕ್ಕೂ ಕಳುಹಿಸಬಹುದು.

**ಹಣಕಾಸಿನ ಅಧಿಕಾರ :** ರಾಜ್ಯಪಾಲರ ಒಪ್ಪಿಗೆ ಇಲ್ಲದೆ ಹಣಕಾಸಿನ ಮಸೂದೆಯನ್ನು ವಿಧಾನಸಭೆಯಲ್ಲಿ ಮಂಡಿಸುವಂತಿಲ್ಲ. ರಾಜ್ಯದ ಹಣಕಾಸು ಆಯೋಗ ನೇಮಿಸುವ ಅಧಿಕಾರ ಪಡೆದಿದ್ದಾರೆ. ರಾಜ್ಯದ ಸಾದಿಲ್ವಾರು ನಿಧಿ ಇವರ ಹೆಸರಿನಲ್ಲಿದ್ದು ಬರ, ಪ್ರವಾಹ, ಭೂಕಂಪದಂತಹ ಆಕಸ್ಮಿಕ ಘಟನೆಗಳನ್ನು ನಿಭಾಯಿಸಲು ಈ ನಿಧಿಯಿಂದ ಹಣ ಬಿಡುಗಡೆ ಮಾಡುವ ಅಧಿಕಾರವಿದೆ.

**ನ್ಯಾಯಾಂಗೀಯ ಅಧಿಕಾರ :** ಅಪರಾಧ ಮಾಡಿ ಶಿಕ್ಷೆಗೆ ಗುರಿಯಾದವರಿಗೆ ಕ್ಷಮಾದಾನ ನೀಡುವ, ಕಡಿಮೆ ಮಾಡುವ, ಮುಂದೂಡುವ ಅಥವಾ ಶಿಕ್ಷೆಯನ್ನು ಬದಲಾಯಿಸುವ ಅಧಿಕಾರ ಇವರಿಗಿದೆ. ರಾಜ್ಯದ ಅಡ್ವೋಕೇಟ್ ಜನರಲ್ ಮತ್ತು ಜಿಲ್ಲಾ ನ್ಯಾಯಾಧೀಶರನ್ನು ನೇಮಿಸುವ ಅಧಿಕಾರವಿದೆ.

**ವಿವೇಚನಾಧಿಕಾರ :** ಬಹುಮತವಿಲ್ಲದಿದ್ದಾಗ ಮುಖ್ಯಮಂತ್ರಿಯನ್ನು ನೇಮಿಸುವಾಗ ವಿವೇಚನಾಧಿಕಾರ ಬಳಸುತ್ತಾರೆ. ಶಾಸಕಾಂಗ ಅಂಗೀಕರಿಸಿದ ಮಸೂದೆಯನ್ನು ರಾಷ್ಟ್ರಾಧ್ಯಕ್ಷರ ಸಹಿಗೆ ಕಾಯ್ದಿರಿಸುವ, ರಾಜ್ಯದಲ್ಲಿ ಸಂವಿಧಾನಿಕ ಬಿಕ್ಕಟ್ಟು ಅಥವಾ ವೈಫಲ್ಯತೆ ಉಂಟಾದಾಗ ರಾಷ್ಟ್ರಪತಿಗೆ ವರದಿ ಕಳುಹಿಸಿ ರಾಷ್ಟ್ರಪತಿ ಆಡಳಿತವನ್ನು ಕೋರಬಹುದು ಹಾಗೂ ಮಂತ್ರಿ ಮಂಡಲವನ್ನು ವಜಾಮಾಡಬಹುದು, ವಿಧಾನ ಸಭೆಯನ್ನು ವಿಸರ್ಜಿಸಲೂಬಹುದು.

## ರಾಜ್ಯ ಮಂತ್ರಿಮಂಡಲ

ನಮ್ಮ ಸಂವಿಧಾನವು ರಾಜ್ಯದಲ್ಲಿನ ಮುಖ್ಯಮಂತ್ರಿ ನೇತೃತ್ವದ ಮಂತ್ರಿಮಂಡಲಕ್ಕೆ ಅವಕಾಶ ಕಲ್ಪಿಸಿದೆ. ಮಂತ್ರಿಮಂಡಲವು ರಾಜ್ಯಪಾಲರಿಗೆ ಸಹಾಯ, ಸಲಹೆ ಮಾಡುತ್ತದೆ ಮತ್ತು ರಾಜ್ಯ ವಿಧಾನಸಭೆಗೆ ಜವಾಬ್ದಾರಿಯುತವಾಗಿರುತ್ತದೆ. ಈ ಮಂತ್ರಿಮಂಡಲವು ಅನೇಕ ಕಾರ್ಯಗಳನ್ನು ನಿರ್ವಹಿಸುತ್ತದೆ. ಅವುಗಳೆಂದರೆ (1) ಸರ್ಕಾರದ ನೀತಿಯನ್ನು ನಿರ್ಧರಿಸುತ್ತದೆ. (2) ರಾಜ್ಯದ ಆಯ–ವ್ಯಯ ತಯಾರಿಸಿ ಶಾಸನಸಭೆಯ ಮುಂದೆ ಮಂಡಿಸುವಂತೆ ನೋಡಿಕೊಳ್ಳುತ್ತದೆ. (3) ರಾಜ್ಯ ಲೋಕಸೇವಾ ಆಯೋಗದ ಅಧ್ಯಕ್ಷರು, ಸದಸ್ಯರು, ಲೋಕಾಯುಕ್ತರು ಮುಂತಾದ ಅಧಿಕಾರಿಗಳನ್ನು ನೇಮಕ ಮಾಡುವಾಗ ರಾಜ್ಯಪಾಲರಿಗೆ ಶಿಫಾರಸ್ಸು ಮಾಡುತ್ತದೆ. (4) ಪ್ರತಿಯೊಬ್ಬ ಮಂತ್ರಿಯೂ ತಮ್ಮ ಇಲಾಖೆಗೆ ಸಂಬಂಧಿಸಿದ ಕಾರ್ಯಗಳನ್ನು ದಕ್ಷತೆಯಿಂದ ನಿರ್ವಹಿಸುವಂತೆ ನೋಡಿಕೊಳ್ಳುವುದು ಮತ್ತು (5) ವಿವಿಧ ಇಲಾಖೆಗಳ ಕಾರ್ಯಗಳನ್ನು ಮೇಲ್ವಿಚಾರಣೆ ಮಾಡಿ ಅವುಗಳ

© KTBS Not to be republished

ನಡುವೆ ಸಮನ್ವಯ ತರುವುದು. ಹೀಗೆ ಮಂತ್ರಿಮಂಡಲ ರಾಜ್ಯದ ನೈಜ ಕಾರ್ಯಾಂಗವಾಗಿ ಕಾರ್ಯನಿರ್ವಹಿಸುತ್ತದೆ.

> **ಚಟುವಟಿಕೆ:**
> *ನಮ್ಮ ರಾಜ್ಯದ ಇದುವರೆಗಿನ ಮುಖ್ಯಮಂತ್ರಿಗಳ ಹೆಸರು ಮತ್ತು ಅವಧಿಯನ್ನು ತಿಳಿಸುವ ಪಟ್ಟಿ ತಯಾರಿಸಿ.*

**ಮುಖ್ಯಮಂತ್ರಿ:** ಮುಖ್ಯಮಂತ್ರಿಯು ರಾಜ್ಯ ಸರ್ಕಾರದ ಮುಖ್ಯಸ್ಥರಾಗಿದ್ದಾರೆ. ರಾಜ್ಯ ಸರ್ಕಾರದ ಯಶಸ್ಸು ಅಥವಾ ಅವನತಿ ಇವರ ವರ್ಚಸ್ಸನ್ನು ಆಧರಿಸಿದೆ. ಇವರು ಮಂತ್ರಿಮಂಡಲದ, ಶಾಸಕಾಂಗದ ಮತ್ತು ಬಹುಮತ ಪಡೆದ ಪಕ್ಷದ ನಾಯಕರಾಗಿರುತ್ತಾರೆ. ಮುಖ್ಯಮಂತ್ರಿಯಾಗುವವರು ರಾಜ್ಯ ಶಾಸಕಾಂಗದ ಯಾವುದಾದರೂ ಒಂದು ಸದನದ ಸದಸ್ಯತ್ವ ಹೊಂದಿರಬೇಕು. ಸದನದ ಸದಸ್ಯರಲ್ಲದವರೂ ಮುಖ್ಯಮಂತ್ರಿಗಳಾಗಬಹುದು. ಆದರೆ 6 ತಿಂಗಳ ಒಳಗಾಗಿ ಯಾವುದಾದರೂ ಒಂದು ಸದನದ ಸದಸ್ಯತ್ವ ಪಡೆಯಬೇಕು.

### ಮುಖ್ಯಮಂತ್ರಿಯ ಅಧಿಕಾರ ಕಾರ್ಯಗಳು

1. ಸಚಿವರುಗಳ ಪಟ್ಟಿ ಸಿದ್ಧಪಡಿಸಿ ರಾಜ್ಯಪಾಲರಿಗೆ ಶಿಫಾರಸ್ಸು ನೀಡುತ್ತಾರೆ.
2. ಸಚಿವರುಗಳಿಗೆ ಖಾತೆಗಳನ್ನು ಹಂಚುವುದು ಮತ್ತು ಬದಲಾಯಿಸುವಂತೆ ಶಿಫಾರಸ್ಸು ಮಾಡುತ್ತದೆ.
3. ಸರ್ಕಾರಕ್ಕೆ ನಿಷ್ಠೆ ಹೊಂದಿರದ, ಮಂತ್ರಿಮಂಡಲದ ವಿರುದ್ಧ ವರ್ತಿಸುವ, ಕ್ರಿಮಿನಲ್ ಅಪರಾಧ ಹೊಂದಿದವರನ್ನು ಸಂಪುಟದಿಂದ ವಜಾ ಮಾಡುವಂತೆ ರಾಜ್ಯಪಾಲರಿಗೆ ಶಿಫಾರಸ್ಸು ಮಾಡುತ್ತಾರೆ.
4. ಸರ್ಕಾರದ ಮುಖ್ಯಸ್ಥರಾಗಿದ್ದು, ನೀತಿ ನಿರೂಪಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ.
5. ಸಚಿವ ಸಂಪುಟದ ಅಧ್ಯಕ್ಷತೆ ವಹಿಸಿ, ಸಭೆ ಕರೆಯುವ, ಮುಂದೂಡುವ ಅಧಿಕಾರ ಹೊಂದಿದ್ದಾರೆ.
6. ವಿವಿಧ ಇಲಾಖೆಗಳ ಕಾರ್ಯದಕ್ಷತೆ ಪರಿಶೀಲಿಸಿ ಅವುಗಳ ನಡುವೆ ಹೊಂದಾಣಿಕೆ ಮೂಡಿಸುವ ಕಾರ್ಯ ಮಾಡುತ್ತಾರೆ.
7. ಅವಧಿಗೆ ಮುಂಚೆ ವಿಧಾನಸಭೆಯನ್ನು ವಿಸರ್ಜಿಸುವಂತೆ ರಾಜ್ಯಪಾಲರಿಗೆ ಶಿಫಾರಸ್ಸು ಮಾಡುತ್ತಾರೆ.
8. ರಾಜ್ಯಪಾಲರು ಮತ್ತು ಸಚಿವ ಸಂಪುಟದ ನಡುವೆ ಸಂಪರ್ಕ ಸೇತುವೆಯಾಗಿ ಕಾರ್ಯನಿರ್ವಹಿಸುತ್ತಾರೆ.
9. ರಾಜ್ಯಪಾಲರಿಗೆ ಸಲಹೆಗಾರನಂತಿದ್ದು, ವಿವಿಧ ಹುದ್ದೆಗಳ ನೇಮಕಾತಿಗೆ ತಮ್ಮ ಶಿಫಾರಸ್ಸನ್ನು ಮಾಡುತ್ತಾರೆ.

## ಅಭ್ಯಾಸಗಳು

**I. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿರಿ.**

1. ಭಾರತವು __________ ರಾಜ್ಯಗಳನ್ನು ಮತ್ತು __________ ಕೇಂದ್ರಾಡಳಿತ ಪ್ರದೇಶಗಳನ್ನು ಒಳಗೊಂಡಿದೆ.
2. ರಾಜ್ಯ ವಿಧಾನಸಭೆಗೆ ಒಬ್ಬ ಆಂಗ್ಲೋ–ಇಂಡಿಯನ್ನರನ್ನು __________ ರವರು ನಾಮಕರಣ ಮಾಡುತ್ತಾರೆ.
3. ಕರ್ನಾಟಕ ರಾಜ್ಯ ವಿಧಾನಪರಿಷತ್ __________ ಸದಸ್ಯರನ್ನು ಒಳಗೊಂಡಿದೆ.
4. ರಾಜ್ಯ ಮಂತ್ರಿಮಂಡಲವು __________ ಮತ್ತು __________ ವನ್ನು ಒಳಗೊಂಡ ನೈಜ ಕಾರ್ಯಾಂಗವಾಗಿದೆ.

© KTBS Not to be republished

5. ರಾಜ್ಯಪಾಲರನ್ನು ____________ ರವರು ನೇಮಿಸುತ್ತಾರೆ.

6. ರಾಜ್ಯದ ಅಡ್ವೋಕೇಟ್ ಜನರಲ್‌ರವರನ್ನು ____________ ರವರು ನೇಮಿಸುತ್ತಾರೆ.

**II. ಈ ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರ ಬರೆಯಿರಿ.**

1. ರಾಜ್ಯ ವಿಧಾನಸಭೆ ರಚನೆಯನ್ನು ತಿಳಿಸಿ.
2. ರಾಜ್ಯ ವಿಧಾನಪರಿಷತ್ ಸದಸ್ಯರು ಯಾವ ಯಾವ ಕ್ಷೇತ್ರಗಳನ್ನು ಪ್ರತಿನಿಧಿಸುತ್ತಾರೆ ?
3. ರಾಜ್ಯಪಾಲರ ಅರ್ಹತೆ, ಅಧಿಕಾರ ಅವಧಿಯನ್ನು ವಿವರಿಸಿ.
4. ಮುಖ್ಯಮಂತ್ರಿಯವರ ಬಗ್ಗೆ ಒಂದು ಟಿಪ್ಪಣಿ ಬರೆಯಿರಿ.

**III. ಚಟುವಟಿಕೆ.**

1. ಕರ್ನಾಟಕ ವಿಧಾನಸಭೆ ಮತ್ತು ವಿಧಾನಪರಿಷತ್‌ಗೆ ಭೇಟಿ ನೀಡಿ, ಕಲಾಪ ನಡೆಯುವುದನ್ನು ವೀಕ್ಷಿಸಿ, ದಾಖಲಿಸಿ.
2. ರಾಜ್ಯ ಶಾಸಕಾಂಗದಂತೆ ನಿಮ್ಮ ಶಾಲೆಯಲ್ಲಿ ಶಾಲಾ ಸಂಸತ್ತು ರಚಿಸಿಕೊಳ್ಳಿ.

**IV. ಯೋಜಿತ ಕಾರ್ಯ**

1. ನಿಮ್ಮ ಕ್ಷೇತ್ರದ ಶಾಸಕರೊಂದಿಗೆ, ಸದನದ ಕಲಾಪದ ಬಗ್ಗೆ ಸಂವಾದ ನಡೆಸಿರಿ.
2. ಇಲ್ಲಿಯವರೆಗಿನ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳ ಭಾವಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸಿ.

◈ ◈ ◈

©KTBS Not to be republished

# ಸಮಾಜಶಾಸ್ತ್ರ

## ಅಧ್ಯಾಯ–1

## ಕುಟುಂಬ

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಕುಟುಂಬದ ಅರ್ಥ.
- ಕುಟುಂಬದ ಲಕ್ಷಣಗಳು.
- ಕುಟುಂಬದ ಪ್ರಕಾರಗಳು.
- ಅವಿಭಕ್ತ ಕುಟುಂಬದ ಲಕ್ಷಣಗಳು.

**ಕುಟುಂಬ**

ಮಾನವ ಸಮಾಜ ಮೂಲಭೂತ ಬಯಕೆಗಳನ್ನು ಈಡೇರಿಸಿಕೊಳ್ಳುವ ಉದ್ದೇಶದಿಂದಾಗಿ ಹಲವು ಸಾಮಾಜಿಕ ಸಂಸ್ಥೆಗಳನ್ನು ರೂಪಿಸಿಕೊಂಡಿದೆ. ಇಂತಹ ಸಂಸ್ಥೆಗಳಲ್ಲಿ ಕುಟುಂಬ ಅತ್ಯಂತ ಪ್ರಮುಖವಾದದ್ದು. ಕುಟುಂಬವು ಅತ್ಯಂತ ಸಣ್ಣ ಸಾಮಾಜಿಕ ಸಂಸ್ಥೆಯಾದರೂ ಅದು ಸಮಾಜದ ಮೂಲಸಂಸ್ಥೆ. ಸಮಾಜದ ಎಲ್ಲಾ ಚಟುವಟಿಕೆಗಳು ನಡೆಯುವುದು ಕುಟುಂಬದ ಆಧಾರದಲ್ಲಿ, ಅಂದರೆ ಕುಟುಂಬದ ಸದಸ್ಯರೆ, ಸಾಮಾಜಿಕ ಸಂಸ್ಥೆಗಳ ಸದಸ್ಯರೂ ಆಗಿರುತ್ತಾರೆ. ಕುಟುಂಬದ ಲಕ್ಷಣಗಳನ್ನು ಅರ್ಥಮಾಡಿಕೊಳ್ಳುವ ಮೂಲಕ ಅದನ್ನು ವಿವರವಾಗಿ ನಾವು ತಿಳಿಯಬಹುದು.

ಕುಟುಂಬವನ್ನು ಇಂಗ್ಲೀಷಿನಲ್ಲಿ 'ಫ್ಯಾಮಿಲಿ' ಎಂದು ಕರೆಯುತ್ತಾರೆ. 'ಫ್ಯಾಮಿಲಿ' ಎಂಬ ಶಬ್ದವು 'ಫ್ಯಾಮುಲಸ್' (Famulus) ಎಂಬ ಲ್ಯಾಟಿನ್ ಶಬ್ದದಿಂದ ಬಂದಿದೆ. ಫ್ಯಾಮುಲಸ್ ಎಂದರೆ ಆಳು ಎಂದು ಅರ್ಥ. ಹಿಂದಿನ ಕಾಲದ ಕುಟುಂಬಗಳಲ್ಲಿ ಗಂಡ–ಹೆಂಡತಿ ಮತ್ತು ಮಕ್ಕಳುಗಳಲ್ಲದೆ ಇತರೆ ಸದಸ್ಯರು ಇದ್ದರೆಂದು ತಿಳಿಯುತ್ತದೆ. ಇಂದು ಇತರೆ ಮಕ್ಕಳು ಇಲ್ಲದ, ತಂದೆ ತಾಯಿಗಳು ಮಾತ್ರ ಇರುವ ಮತ್ತು ದತ್ತುಮಕ್ಕಳನ್ನು ಹೊಂದಿರುವ ಕುಟುಂಬಗಳು ಇದೆ.

ಕುಟುಂಬದ ಸದಸ್ಯರ ಒಳಗಿನ ಸಂಬಂಧವು ಒಂದೇ ರಕ್ತಸಂಬಂಧದ ಮೇಲೆ ನಿರ್ಧಾರವಾಗುತ್ತದೆ. ಇಲ್ಲಿ ವಿವಾಹ, ರಕ್ತಸಂಬಂಧ ಹಾಗೂ ದತ್ತು ಸ್ವೀಕಾರವನ್ನು ಒಳಗೊಂಡಿರುತ್ತದೆ. ಇದು ಗಂಡ–ಹೆಂಡತಿ, ತಂದೆ–ತಾಯಿ, ಮಗ–ಮಗಳು, ಸಹೋದರ–ಸಹೋದರಿ ಸಂಬಂಧವನ್ನು ಹೊಂದಿ, ತಮ್ಮ ಸ್ಥಾನಕ್ಕೆ ಪೂರಕವಾಗಿ ಪಾತ್ರಗಳನ್ನು ನಿರ್ವಹಿಸಿ, ಸಾಮಾನ್ಯ ಸಂಸ್ಕೃತಿಯನ್ನು ರೂಪಿಸಿಕೊಳ್ಳುವಲ್ಲಿ ನಿರತರಾಗಿರುತ್ತಾರೆ. ಕುಟುಂಬ ಎಂದರೆ "ಸಾಮಾನ್ಯವಾಗಿ ಬಹುಕಾಲ ಸಂತತಿ ಸಹಿತ–ಸಂತತಿ ರಹಿತ, ಗಂಡ–ಹೆಂಡತಿಯ ಸಂಘಜೀವನ ಎಂದು ಹೇಳಬಹುದು". ಇದರ ಮುಖ್ಯ ಆಧಾರ ಎಂದರೆ ರಕ್ತಸಂಬಂಧ ಮತ್ತು ಭಾವನೆಗಳು. ಕುಟುಂಬವು ಕೇವಲ ಸಂತಾನೋತ್ಪತ್ತಿ ಮತ್ತು ಮಕ್ಕಳ ಪಾಲನೆ–ಪೋಷಣೆಗಳನ್ನು ಮಾತ್ರ ಮಾಡದೆ, ಸಾಮಾಜೀಕರಣ ಪ್ರಕ್ರಿಯೆಯ ಮೂಲಕ ತನ್ನ ಸದಸ್ಯರನ್ನು ವಿಸ್ತೃತ ಸಮಾಜದ ಸದಸ್ಯರನ್ನಾಗಿ ಮಾಡುವ ಪ್ರಕ್ರಿಯೆಯಲ್ಲಿ ತೊಡಗಿಕೊಂಡಿರುತ್ತದೆ. ಅಂದರೆ ಸಾಮಾಜಿಕ ನಡವಳಿಕೆ, ಉಡುಗೆ–ತೊಡುಗೆ, ಆಚಾರ–ವಿಚಾರ ಇತ್ಯಾದಿ ವಿಷಯಗಳನ್ನು ಅಧಿಕಾರಯುತವಾಗಿ ಕುಟುಂಬವು ನಿರ್ವಹಿಸುತ್ತದೆ.

**ಕುಟುಂಬದ ಲಕ್ಷಣಗಳು**

ಕುಟುಂಬದ ಲಕ್ಷಣಗಳನ್ನು ಅರ್ಥಮಾಡಿಕೊಳ್ಳುವ ಮೂಲಕ ಕುಟುಂಬದ ಮಹತ್ವವನ್ನು ನಾವು ತಿಳಿಯಬಹುದು.

©KTBS Not to be republished

**1. ಕುಟುಂಬ ಸರ್ವವ್ಯಾಪಕವಾದದ್ದು:** ಪ್ರಪಂಚದ ಎಲ್ಲಾ ಸಮಾಜಗಳಲ್ಲಿಯೂ ಆಯಾ ಕಾಲ–ಆಯಾ ಪ್ರದೇಶಕ್ಕೆ ತಕ್ಕಂತೆ ಸ್ವಲ್ಪಮಟ್ಟಿನ ವ್ಯತ್ಯಾಸವಿದ್ದರೂ ನಾವು ಎಲ್ಲ ಸಮಾಜಗಳಲ್ಲಿ ಕುಟುಂಬವನ್ನು ಕಾಣಬಹುದು. ವಿವಾಹ, ಪಾಲನೆ, ಪೋಷಣೆ, ಬಂಧುತ್ವ, ಆಸ್ತಿ, ವಿಷಯಗಳಲ್ಲಿ ಒಂದು ಗೊತ್ತುಪಡಿಸಿಕೊಂಡ ನಿಯಮವನ್ನು ಕುಟುಂಬಗಳು ಅನುಸರಿಸಲ್ಪಟ್ಟಿರುತ್ತವೆ. ಸಾಧಾರಣವಾಗಿ ಆಯಾ ಕುಟುಂಬಕ್ಕೆ ಸೇರಿದ ಸದಸ್ಯರೆಲ್ಲರೂ ಒಂದೇ ಸ್ಥಳದಲ್ಲಿ ಅಥವಾ ಸೂರಿನಡಿಯಲ್ಲಿ ವಾಸಿಸುತ್ತಾರೆ.

**2. ಸಮಾಜದ ಎಲ್ಲಾ ಚಟುವಟಿಕೆಗಳ ಮೂಲಘಟಕ:** ಯಾವುದೇ ಸಮಾಜದ ಸಾಮಾಜಿಕ ಸಂಸ್ಥೆಗಳ ಚಟುವಟಿಕೆಗಳು ಪ್ರಾರಂಭವಾಗುವುದೇ ಕುಟುಂಬದಿಂದ. ಸಮಾಜದ ರಾಜಕೀಯ, ಆರ್ಥಿಕ, ಶೈಕ್ಷಣಿಕ, ಇನ್ನೂ ಮೊದಲಾದ ಚಟುವಟಿಕೆಗಳು ಮೊಳಕೆಯಾಗುವುದು ಕುಟುಂಬದಿಂದ. ಈ ಹಿಂದೆ ಸಾಮುದಾಯಿಕ ಪ್ರಮುಖ ಕೆಲಸಗಳಿಗೆ(ಊರೊಟ್ಟಿನ) ಕುಟುಂಬವು ತನ್ನ ಸದಸ್ಯರನ್ನು ಕಳುಹಿಸುತ್ತಿತ್ತು. ಇಂದಿನ ಸಂಕೀರ್ಣ ಸಮಾಜದಲ್ಲಿ ತನ್ನ ಕೆಲವು ಕಾರ್ಯಗಳನ್ನು ಸಮಾಜದ ಇತರೆ ಸಂಸ್ಥೆಗಳಿಗೆ ಬಿಟ್ಟುಕೊಟ್ಟಿದೆ.

**3. ಜವಾಬ್ದಾರಿ ಮತ್ತು ಸಾಮಾಜಿಕ ಹೊಣೆಗಾರಿಕೆ:** ಸಮಾಜದ ಇತರ ಸಂಸ್ಥೆಗಳ ಜೊತೆ ವಿವಿಧ ಸಂದರ್ಭಗಳಲ್ಲಿ ಯಾವ ರೀತಿ ನಡೆದುಕೊಳ್ಳಬೇಕು ಮತ್ತು ಯಾವ ಜವಾಬ್ದಾರಿಯನ್ನು ನಿರ್ವಹಿಸಬೇಕು ಎಂದು ಕುಟುಂಬ ತನ್ನ ಸದಸ್ಯರಿಗೆ ಹೇಳಿ ಕೊಡುತ್ತದೆ. ಮಕ್ಕಳಿಗೆ, ನೆರೆಹೊರೆಯವರೊಂದಿಗೆ ಹೊಂದಿಕೊಂಡು ಹೇಗೆ ಜೀವಿಸಬೇಕು ಎಂದು ಹೇಳಿಕೊಡುತ್ತದೆ. ಅಷ್ಟು ಮಾತ್ರವಲ್ಲ, ಕೆಲವು ಸಾಮಾಜಿಕ ಜವಾಬ್ದಾರಿಗಳನ್ನು ಹೇಳಿ ಕೊಡುತ್ತದೆ. ಉದಾಹರಣೆಗೆ : ಸಾರ್ವಜನಿಕ ಕುಡಿಯುವ ನೀರಿನ ವ್ಯವಸ್ಥೆ ಕಲುಷಿತಗೊಳ್ಳದಂತೆ ಎಚ್ಚರ ವಹಿಸಬೇಕಾದ ಪ್ರಾಥಮಿಕ ಜವಾಬ್ದಾರಿಗಳನ್ನು ತಿಳಿಸುತ್ತದೆ.

**4. ಪಾಲನೆ ಮತ್ತು ಪೋಷಣೆ:** ಕುಟುಂಬವು ಪ್ರಾಥಮಿಕ ಹಂತದಲ್ಲಿ ಮಕ್ಕಳ ಸಂಬಂಧಿಸಿದ ಹಕ್ಕು–ಬಾಧ್ಯತೆಗಳನ್ನು ಸೃಷ್ಟಿ ಮಾಡುತ್ತದೆ. ಅಲ್ಲದೇ ಅವುಗಳ ರಕ್ಷಣೆಗೆ ಕ್ರಮವಹಿಸುತ್ತದೆ. ಮಗುವಿನ ಲಾಲನೆ–ಪಾಲನೆ ಮತ್ತು ಅಕ್ಷರ ಕಡೆಗಿನ ದಾರಿಯನ್ನು ಸೃಷ್ಟಿಸುತ್ತದೆ. ವೃದ್ಯಾಪ್ಯದಲ್ಲಿ ಕುಟುಂಬದ ಹಿರಿಯರ (ಅಜ್ಜ–ಅಜ್ಜಿ, ತಂದೆ–ತಾಯಿ) ಆರೈಕೆ–ಪೋಷಣೆ–ಶುಶ್ರೂಷೆ ಮತ್ತು ಅವರ ರಕ್ಷಣೆಯನ್ನು ಮಾಡುವುದು ಆಯಾ ಕುಟುಂಬದ ಕರ್ತವ್ಯವಾಗಿದೆ.

**5. ಸಾಮಾಜಿಕ ವರ್ತನೆಗಳನ್ನು ಹೇಳಿ ಕೊಡುತ್ತದೆ:** ಸಾಮಾಜಿಕ ಬೆಳವಣಿಗೆಯ ಹಂತಗಳಲ್ಲಿ ಬಾಲ್ಯ–ಯೌವ್ವನ ಮುಖ್ಯ. ಮಗುವು ಕುಟುಂಬದೊಳಗೆ ಮಾತನಾಡುವ ಮಾತೃಭಾಷೆಯನ್ನು ಮೊದಲು ತಿಳಿಯುತ್ತದೆ. ಅದರ ಸಹಾಯದಿಂದ ಸಾಮಾಜಿಕ ವಿಚಾರಗಳನ್ನು ತಿಳಿದುಕೊಳ್ಳುತ್ತದೆ. ಕುಟುಂಬದ ಸುತ್ತಮುತ್ತಲಿನ ಸಾಮಾಜಿಕ ಪರಿಸರದಲ್ಲಿ ಬೆಳೆಯುವ ಮಕ್ಕಳು ಅದಕ್ಕನುಗುಣವಾದ ಗುಣಲಕ್ಷಣಗಳನ್ನು ಬೆಳೆಸಿಕೊಳ್ಳುತ್ತಾರೆ. ಸಮ ವಯಸ್ಸಿನ ಮಕ್ಕಳೊಂದಿಗೆ, ಹಿರಿಯರೊಂದಿಗೆ, ಗುಂಪುಗಳೊಂದಿಗೆ ವಿವಿಧ ಸಂದರ್ಭಗಳಲ್ಲಿ ಹೇಗೆ ಬೆರೆಯಬೇಕು ಎಂಬುದನ್ನು ಕುಟುಂಬ ಹೇಳಿಕೊಡುತ್ತಿರುತ್ತದೆ. ಅಂದರೆ ಸಾಮಾಜಿಕ ವರ್ತನೆಗಳು–ಬೇಡಿಕೆಗಳು–ನಿಯಂತ್ರಣಗಳು ಮಗುವಿನ ಮೇಲೆ ಪರೋಕ್ಷವಾದ ಪ್ರಭಾವವನ್ನು ಬೀರುತ್ತಿರುತ್ತವೆ. ಬಾಲ್ಯ–ಯೌವ್ವನ, ಮಧ್ಯವಯಸ್ಸು ಮತ್ತು ಮುಪ್ಪಿನಲ್ಲಿ ಸ್ನೇಹ, ಸ್ವಾತಂತ್ರ್ಯ, ಭದ್ರತೆ ಹಾಗೂ ಇತರೆ ವರ್ತನೆಗಳನ್ನು ಕುಟುಂಬ ಹೇಳಿಕೊಡುತ್ತದೆ.

**ತಲೆಮಾರುಗಳ ಪರಂಪರೆಯನ್ನು ತಿಳಿಸುತ್ತದೆ:** ಕುಟುಂಬ ಹಲವಾರು ತಲೆಮಾರುಗಳ ಪರಂಪರೆಯ ಮೇಲೆ ನಿಂತಿದೆ. ತಲೆಮಾರುಗಳು ರಕ್ತಸಂಬಂಧಿಗಳನ್ನು ಪರಿಚಯಿಸುತ್ತದೆ. ಅಜ್ಜ–ಅಜ್ಜಿ, ಅಪ್ಪ–ಅಮ್ಮ, ಮಕ್ಕಳ ಸಂಬಂಧಗಳನ್ನು ವಿವರಿಸುತ್ತದೆ. ಅಜ್ಜ, ಅಜ್ಜಿ ಹಿರಿಯ ಪೋಷಕರು. (Grand Parents) ಒಂದನೇ ತಲೆಮಾರಿಗೆ ಸೇರಿದವರು. ಅಪ್ಪ–ಅಮ್ಮ, ಪೋಷಕರು (Parents) ಎರಡನೇ ತಲೆಮಾರಿಗೆ ಸೇರಿದವರು. ಮಕ್ಕಳು ಮೂರನೇ



© KTBS Not to be republished

ತಲೆಮಾರಿಗೆ ಸೇರಿದವರು ಎಂದು ಹೇಳಿಕೊಡುತ್ತದೆ. ಹೀಗೆ ತಲೆಮಾರುಗಳ ಸಂಬಂಧಗಳನ್ನು ಮತ್ತು ಅದರ ಪರಂಪರೆಯನ್ನು ಪ್ರಾಥಮಿಕವಾಗಿ ಹೇಳಿಕೊಡುತ್ತದೆ.

I. ಅಪ್ಪ–ಅಮ್ಮ ಮತ್ತು ಮಕ್ಕಳು ವಾಸಿಸುವ ಕುಟುಂಬವನ್ನು ಎರಡು ತಲೆಮಾರುಗಳ ಕುಟುಂಬ ಎಂದು ಕರೆಯುತ್ತಾರೆ.

II. ಅಜ್ಜ–ಅಜ್ಜಿ, ಅಪ್ಪ–ಅಮ್ಮ ಮತ್ತು ಮಕ್ಕಳಿಂದ ಕೂಡಿದ ಸಂಬಂಧವನ್ನು ಮೂರು ತಲೆಮಾರು ಕೂಡಿದ ಕುಟುಂಬ ಎನ್ನುತ್ತಾರೆ.

III. ಅಜ್ಜ–ಅಜ್ಜಿ, ಅಪ್ಪ–ಅಮ್ಮ, ಮಕ್ಕಳು – ಮೊಮ್ಮಕ್ಕಳಿಂದ ಕೂಡಿದ ಕುಟುಂಬವನ್ನು ನಾಲ್ಕು ತಲೆಮಾರಿನ ವಿಸ್ತೃತ ಕುಟುಂಬ ಎನ್ನುತ್ತಾರೆ.

**ಕುಟುಂಬದ ಪ್ರಕಾರಗಳು**

ಕುಟುಂಬ ಆಯಾ ಸಮುದಾಯ ಮತ್ತು ಪ್ರದೇಶಗಳ ರೂಢಿ ಪದ್ಧತಿಗಳ ಆಧಾರದಲ್ಲಿ ರಚನೆಗೊಂಡಿದೆ. ಸಮಾಜಶಾಸ್ತ್ರಜ್ಞರು ಮತ್ತು ಮಾನವಶಾಸ್ತ್ರಜ್ಞರು ಕುಟುಂಬದ ರಚನೆಯ ಆಧಾರದಲ್ಲಿ ಕುಟುಂಬದ ಪ್ರಕಾರಗಳನ್ನು ನಿರೂಪಿಸಿದ್ದಾರೆ. ಈಗಾಗಲೇ ತಿಳಿಸಿದಂತೆ ತಲೆಮಾರಿನ ಆಧಾರದಲ್ಲಿ ಕುಟುಂಬವನ್ನು ಗುರುತಿಸಲಾಗಿದೆ. ಗಂಡ–ಹೆಂಡತಿ ಒಟ್ಟಿಗೆ ವಾಸಿಸುತ್ತಿರುವ ಕುಟುಂಬದಲ್ಲಿ ಹುಟ್ಟಿದ ಮಕ್ಕಳಿಗೆ ಅದು ಕೇಂದ್ರ ಕುಟುಂಬವಾಗುತ್ತದೆ. ಹೆಚ್ಚು ತಲೆಮಾರುಗಳ ರಕ್ತಸಂಬಂಧಿಗಳು ವಾಸಿಸುತ್ತಿದ್ದರೆ ಅದನ್ನು ಅವಿಭಕ್ತ ಕುಟುಂಬ ಎಂದು ಕರೆಯುತ್ತೇವೆ.

ವಿವಾಹ ಪದ್ಧತಿ ಆಧಾರದಲ್ಲಿ ಕುಟುಂಬ ಪದ್ಧತಿಗಳನ್ನು ನಿರ್ಣಯಿಸಬಹುದು. ಈ ಆಧಾರದಲ್ಲಿ ಏಕಪತ್ನಿತ್ವ ಕುಟುಂಬ ಮತ್ತು ಬಹುಪತ್ನಿತ್ವ ಕುಟುಂಬ ಮತ್ತು ಬಹುಪತಿತ್ವ ಕುಟುಂಬಗಳೆಂಬ 3 ವಿಧಗಳಿವೆ.

1. ರಕ್ತ ಸಂಬಂಧವನ್ನು ಆಧರಿಸಿದ ಕುಟುಂಬ, 2. ಸಂಗಾತಿಗಳ ವಾಸಸ್ಥಾನಗಳನ್ನು ಆಧಾರವಾಗಿಟ್ಟುಕೊಂಡು ಮಾತೃನೆಲೆ ಕುಟುಂಬ ಮತ್ತು ಪಿತೃನೆಲೆ ಕುಟುಂಬ, 3. ಅಧಿಕಾರ ಕೇಂದ್ರತೆಯ ಆಧಾರದಲ್ಲಿ ಮಾತೃಪ್ರಧಾನ ಮತ್ತು ಪಿತೃಪ್ರಧಾನ ಕುಟುಂಬ ಹೀಗೆ ವರ್ಗೀಕರಿಸಲಾಗಿದೆ. ಹಾಗೆಯೇ ವಂಶದ ಆಧಾರದಲ್ಲಿ ಮಾತೃವಂಶೀಯ ಮತ್ತು ಪಿತೃವಂಶೀಯ ಕುಟುಂಬ ಎಂಬ ಎರಡು ವಿಧಗಳಿವೆ.

**ಮಾತೃಪ್ರಧಾನ ಕುಟುಂಬ:** ಮಾತೃಪ್ರಧಾನ ಕುಟುಂಬದಲ್ಲಿ ಆಸ್ತಿಯ ಮೇಲಿನ ಹಕ್ಕು ಮತ್ತು ಉತ್ತರಾಧಿಕಾರಗಳು ಮಹಿಳೆಗೆ ಇರುತ್ತವೆ. ಆಸ್ತಿಯು ತಾಯಿಯಿಂದ ಮಗಳಿಗೆ ಹೋಗುತ್ತದೆ. ಸಾಧಾರಣವಾಗಿ ತಾಯಿಯೇ ಇಲ್ಲಿ ಕುಟುಂಬದ ಒಡತಿ, ಆಕೆಯ ಹೆಸರಿನಲ್ಲಿಯೇ ಆಸ್ತಿಯ ವಹಿವಾಟು ನಡೆಯುತ್ತದೆ. ಕರ್ನಾಟಕದ ಕರಾವಳಿ ಪ್ರದೇಶದ ಕೆಲವು ಸಮುದಾಯದಲ್ಲಿ ಮಾತೃಪ್ರಧಾನ ಕುಟುಂಬ ವ್ಯವಸ್ಥೆಯನ್ನು ಈಗಲೂ ನಾವು ಕಾಣುತ್ತೇವೆ. ಹಾಗೆಯೇ ಕೇರಳ ರಾಜ್ಯದ ಮಲಬಾರಿನ ನಾಯರ್ ಹಾಗೂ ಈಶಾನ್ಯ ಭಾರತದ ಕೆಲವು ಆದಿವಾಸಿ ಸಮುದಾಯದಲ್ಲಿ ಮಾತೃಪ್ರಧಾನ ಕುಟುಂಬಗಳು ಕಂಡು ಬರುತ್ತವೆ. ಒಟ್ಟಾರೆ ಮಾತೃಪ್ರಧಾನ ಕುಟುಂಬ ವ್ಯವಸ್ಥೆ ಎಂದರೆ ಮಹಿಳೆ ಒಡೆತನದ ವಹಿವಾಟು ಮತ್ತು ಮಹಿಳೆಯನ್ನು ಅನುಸರಿಸುವ ಅನುವಂಶಿಕ ಅಧಿಕಾರ ಮತ್ತು ಹಕ್ಕುಗಳು ತಾಯಿಯಿಂದ ಮಕ್ಕಳಿಗೆ ಲಭಿಸುವುದು.

**ಪಿತೃಪ್ರಧಾನ ಕುಟುಂಬ:** ಪಿತೃಪ್ರಧಾನ ಕುಟುಂಬದಲ್ಲಿ ತಂದೆಯೇ ಕುಟುಂಬದ ಪ್ರಮುಖ. ಆಸ್ತಿಯ ಹಕ್ಕು ಮತ್ತು ಇತರೆ ಹಕ್ಕುಗಳು ಪುರುಷ ಕೇಂದ್ರಿತವಾಗಿವೆ. ಪಿತೃಪ್ರಧಾನ ಕುಟುಂಬದಲ್ಲಿ ವಿವಾಹಿತ ಹೆಣ್ಣುಮಕ್ಕಳು ಗಂಡನ ಮನೆಯಲ್ಲಿ ವಾಸಿಸುತ್ತಾರೆ. ಈ ಕುಟುಂಬ ವ್ಯವಸ್ಥೆಯಲ್ಲಿ ಕುಟುಂಬದ ಹಿರಿಯ ಮಗನಿಗೆ ಧಾರ್ಮಿಕ ಆಚರಣೆಯಲ್ಲಿ ಪ್ರಮುಖ ಸ್ಥಾನವಿದೆ. ಪಿತೃಪ್ರಧಾನ ಕುಟುಂಬ ವ್ಯವಸ್ಥೆಯು ಗ್ರೀಕ್, ರೋಮ್, ಭಾರತ ಮತ್ತು ನೆರೆಯ ಚೀನಾ ದೇಶಗಳಲ್ಲಿ ಬಹಳ ಹಿಂದಿನಿಂದಲೂ ಆಚರಣೆಯಲ್ಲಿ ಇದ್ದು, ಈಗಲೂ ಮುಂದುವರೆದಿದೆ.

©KTBS Not to be republished

**ಆಧುನಿಕ ಕೇಂದ್ರ ಕುಟುಂಬ:** ಕುಟುಂಬದ ರಚನೆ ಮತ್ತು ಅದರಲ್ಲಿ ವಾಸಿಸುವ ಪೀಳಿಗೆಗಳ ಸಂಖ್ಯೆಯ ಆಧಾರದ ಮೇಲೆ ಕುಟುಂಬಗಳನ್ನು 'ಕೇಂದ್ರ ಕುಟುಂಬ', 'ಅವಿಭಕ್ತ ಕುಟುಂಬ' ಮತ್ತು 'ವಿಸ್ತೃತ ಕುಟುಂಬ' ಎಂಬುದಾಗಿ ವರ್ಗೀಕರಿಸುತ್ತೇವೆ. ತಂದೆ, ತಾಯಿ ಮತ್ತು ಅವರ ಅವಿವಾಹಿತ ಮಕ್ಕಳು ಮಾತ್ರ ಸದಸ್ಯರಾಗಿರುವ ಕುಟುಂಬವನ್ನು 'ಕೇಂದ್ರ ಕುಟುಂಬ' ಎಂಬುದಾಗಿ ಕರೆಯುತ್ತೇವೆ. ಕೇಂದ್ರ ಕುಟುಂಬಗಳು ಆಧುನಿಕ ಸಮಾಜದಲ್ಲಿ ಹೆಚ್ಚಳವಾಗಿವೆ. ವೈಯಕ್ತಿಕತೆ, ವೈಯಕ್ತಿಕ ಸಂತೋಷ, ಸುಖ, ಆಸ್ತಿಯ ಹಕ್ಕು ಬದಲಾದ ಸಾಮಾಜಿಕ ಮೌಲ್ಯಗಳು, ವಿಜ್ಞಾನ ಹಾಗೂ ತಂತ್ರಜ್ಞಾನದಲ್ಲಿ ಆದ ಪ್ರಗತಿ, ನಗರೀಕರಣ, ಪ್ರಜಾಸತಾತ್ಮಕ ಹಾಗೂ ಸಮಾನತೆಯ ತತ್ವಗಳು ಇವೆ ಮುಂತಾದ ಅನೇಕ ಅಂಶಗಳು ಕೇಂದ್ರ ಕುಟುಂಬದ ಹೆಚ್ಚಳಕ್ಕೆ ಕಾರಣವಾಗಿವೆ. ಕೇಂದ್ರ ಕುಟುಂಬದಲ್ಲಿ ಕಂಡುಬರುವ ಪ್ರಮುಖ ಲಕ್ಷಣಗಳು ಈ ಕೆಳಗಿನಂತಿವೆ:

1. ಗಾತ್ರದಲ್ಲಿ ಚಿಕ್ಕದ್ದು.
2. ಸರಳ ಸಾಮಾಜಿಕ ನಿಯಂತ್ರಣ
3. ಆಧುನಿಕ ತಂತ್ರಜ್ಞಾನಕ್ಕೆ ಒಲವು
4. ಸದಸ್ಯರಿಗೆ ಹೆಚ್ಚಿನ ಸ್ವಾತಂತ್ರ
5. ಸಂಕೀರ್ಣತೆ

**ಅವಿಭಕ್ತ ಕುಟುಂಬ:** ಅವಿಭಕ್ತ ಕುಟುಂಬದಲ್ಲಿ ಅಜ್ಜ-ಅಜ್ಜಿ ಅವರ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು ಕೆಲವು ಸಂದರ್ಭಗಳಲ್ಲಿ ಇನ್ನೂ ವಿಸ್ತೃತವಾಗಿ ಎರಡು ತಲೆಮಾರುಗಳಿಗಿಂತಲೂ ಹೆಚ್ಚಿನ ಜನರು ಇರುತ್ತಾರೆ. ಇಡೀ ಕುಟುಂಬ ಒಂದೇ ಬಗೆಯ ಧಾರ್ಮಿಕ ಆಚರಣೆಗಳನ್ನು ಹೊಂದಿರುತ್ತವೆ. ಅವಿಭಕ್ತ ಕುಟುಂಬವು ಸಾಮಾನ್ಯವಾಗಿ ರಕ್ತಸಂಬಂಧಿಗಳಿಂದ ಕೂಡಿರುವ ಗುಂಪಾಗಿರುತ್ತದೆ.



**ಅವಿಭಕ್ತ ಕುಟುಂಬ**

## ಅವಿಭಕ್ತ ಕುಟುಂಬದ ಲಕ್ಷಣಗಳು

**ಗಾತ್ರದಲ್ಲಿ ದೊಡ್ಡದು :** ಎರಡು ತಲೆಮಾರಿಗಿಂತಲೂ ಹೆಚ್ಚಿನ ಜನರು ಒಂದೇ ಮನೆಯಲ್ಲಿ ವಾಸ ಮಾಡುವುದರಿಂದ ಈ ಕುಟುಂಬದ ಸದಸ್ಯರ ಸಂಖ್ಯೆ ಹೆಚ್ಚಾಗಿರುತ್ತವೆ. ಅದರಿಂದ ಕುಟುಂಬದ ಗಾತ್ರ ದೊಡ್ಡದಾಗಿರುತ್ತದೆ.

**ಚಟುವಟಿಕೆ : ನೀವೇ ಮಾಡಿ**

ನಿಮ್ಮ ಮುತ್ತಾತನ ಕಾಲದಿಂದ ಇಂದಿನವರೆಗಿನ ವಂಶಾವಳಿಯನ್ನು ಕುಟುಂಬದ ಹಿರಿಯರೊಂದಿಗೆ ಚರ್ಚಿಸಿ ವಂಶವೃಕ್ಷ ರಚಿಸಿ

Not to be republished ©KTBS

**ಸಹಕಾರ ಸಹಭಾಗಿತ್ವ:** ಅವಿಭಕ್ತ ಕುಟುಂಬದಲ್ಲಿ ಸದಸ್ಯರ ಪರಸ್ಪರ ಸಹಕಾರದಿಂದ ದಿನನಿತ್ಯದ ಚಟುವಟಿಕೆಗಳು ಸೇರಿದಂತೆ ಎಲ್ಲ ಕಾರ್ಯಗಳು ನಡೆಯುತ್ತಿರುತ್ತವೆ. ಕುಟುಂಬದ ಹಿರಿಯರು ಮುಖ್ಯಸ್ಥನಾಗಿ ಕೆಲಸ ಮಾಡಿದರೂ ಸಹ, ಇವರು ಕುಟುಂಬದ ಇತರೆ ಸದಸ್ಯರೊಟ್ಟಿಗೆ ಚರ್ಚಿಸಿ ಕೆಲವು ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿರುತ್ತಾರೆ. ಕುಟುಂಬದ ಎಲ್ಲ ಚಟುವಟಿಕೆ ಮತ್ತು ಆಚರಣೆಗಳಲ್ಲಿ ಕುಟುಂಬದ ಎಲ್ಲಾ ಸದಸ್ಯರು ಭಾಗವಹಿಸುವುದನ್ನು ನಾವು ಕಾಣಬಹುದು. ವಯಸ್ಸು, ಲಿಂಗ ಮತ್ತು ಶ್ರಮದ ಆಧಾರದಲ್ಲಿ ಕೆಲಸ ಕಾರ್ಯಗಳ ವಿಭಜನೆಯನ್ನು ನಾವು ಇಲ್ಲಿ ಕಾಣಬಹುದು.

**ವಾಸಸ್ಥಾನ ಮತ್ತು ಅಡುಗೆ ಮನೆ:** ಅವಿಭಕ್ತ ಕುಟುಂಬದ ಸದಸ್ಯರೆಲ್ಲರೂ ಒಂದೇ ಸೂರಿನಡಿ ವಾಸಿಸುತ್ತಾರೆ. ಬೇರೆ ಬೇರೆ ಕಾರಣಗಳಿಗೆ(ವೃತ್ತಿ, ದುಡಿಮೆ, ಶಿಕ್ಷಣ) ಪ್ರತ್ಯೇಕ ಸ್ಥಳಗಳಲ್ಲಿ ಮನೆಮಾಡಿ ವಾಸಿಸುತ್ತಿದ್ದರೂ ಸಹ ಧಾರ್ಮಿಕ ಆಚರಣೆ ಸಂದರ್ಭಗಳಲ್ಲಿ, ಹಬ್ಬಗಳಲ್ಲಿ ಎಲ್ಲರೂ ಮೂಲ ಕುಟುಂಬದೊಂದಿಗೆ ಸಂಬಂಧವನ್ನು ಮುಂದುವರೆಸಿಕೊಂಡು ಹೋಗುತ್ತಿರುವುದನ್ನು ನಾವು ಕಾಣುತ್ತೇವೆ. ಅಲ್ಲದೆ ಅವಿಭಕ್ತ ಕುಟುಂಬದ ಸದಸ್ಯರೆಲ್ಲರೂ ಒಂದೇ ಅಡುಗೆ ಮನೆಯಲ್ಲಿ ಆಹಾರವನ್ನು ಸಿದ್ಧಪಡಿಸಿ ಒಟ್ಟಿಗೆ ಊಟ ಮಾಡುತ್ತಾರೆ.

**ಧರ್ಮ:** ಅವಿಭಕ್ತ ಕುಟುಂಬದ ಸದಸ್ಯರೆಲ್ಲರೂ ಒಂದೇ ಧರ್ಮವನ್ನು ನಂಬುತ್ತಾರೆ ಮತ್ತು ಆಚರಿಸುತ್ತಾರೆ. ಇವರ ಪೂಜಾ ಆಚರಣೆಗಳು ಮತ್ತು ನಂಬಿಕೆಗಳು ಒಂದೇ ರೀತಿ ಇರುತ್ತವೆ.

**ಸ್ವಯಂಪೂರ್ಣ ಘಟಕ:** ಅವಿಭಕ್ತ ಕುಟುಂಬವು ಸ್ವಯಂ ಪೂರ್ಣ ಘಟಕವಾಗಿ ಕಂಡು ಬರುತ್ತವೆ. ತನ್ನ ಕುಟುಂಬದ ಸದಸ್ಯರಿಗೆ ಬೇಕಾಗುವ ಬಹುಪಾಲು ಅಗತ್ಯಗಳನ್ನು ಪೂರೈಸುತ್ತದೆ.

**ಅಧಿಕಾರ ಸಂರಚನೆ:** ಅವಿಭಕ್ತ ಕುಟುಂಬದ ಹಿರಿಯ ಸದಸ್ಯರು ರಚನೆಯ ಅಧಿಕಾರ ಮತ್ತು ಜವಾಬ್ದಾರಿಯನ್ನು ಹೊಂದಿರುತ್ತಾರೆ. ಇವರಿಗೆ ಕುಟುಂಬದ ಪ್ರಮುಖ ವಿಷಯದಲ್ಲಿ ನಿರ್ಧಾರವನ್ನು ತೆಗೆದುಕೊಳ್ಳುವ ಅಧಿಕಾರ ಇರುತ್ತದೆ. ಅಧಿಕಾರದ ಹಸ್ತಾಂತರ ಕೂಡ ಸಂಪ್ರದಾಯಿಕವಾಗಿ ಮನೆಯ ಹಿರಿತನದ ಆಧಾರದ ಮೇಲೆ ಹಸ್ತಾಂತರವಾಗುತ್ತದೆ.

**ಚಟುವಟಿಕೆ :**

ನಿಮ್ಮ ತಾತನ ಕಾಲದಲ್ಲಿ ಇದ್ದ ನಿಮ್ಮ ಅವಿಭಕ್ತ ಕುಟುಂಬದಲ್ಲಿನ ಸದಸ್ಯರ ಸಂಖ್ಯೆ (ಪುರುಷ–ಮಹಿಳೆ) ಹಾಗೂ ಅವರು ನಿರ್ವಹಿಸುತ್ತಿದ್ದ ಕಾರ್ಯ ಜವಾಬ್ದಾರಿಗಳ ಬಗ್ಗೆ ನಿಮ್ಮ ತಂದೆಯವರ ಜೊತೆ ಮಾಹಿತಿ ಪಡೆಯಿರಿ.

© KTBS Not to be republished

## ಅಭ್ಯಾಸಗಳು

**I. ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

1. ಕುಟುಂಬ ಎಂಬ ಪದವು ಲ್ಯಾಟಿನ್ ಭಾಷೆಯ ____________ ಪದದಿಂದ ಉಗಮವಾಗಿದೆ.
2. ಸಮಾಜದ ಜೀವಕೋಶ ____________ ಆಗಿದೆ.
3. ತಂದೆಯೇ ಕುಟುಂಬದ ಒಡೆಯನಾದರೆ ಆ ಕುಟುಂಬವನ್ನು ____________ ಎನ್ನುತ್ತಾರೆ.
4. ಕೇರಳದ ಮಲಬಾರ್‌ನ ನಾಯರ್‌ಗಳಲ್ಲಿ ____________ ಕುಟುಂಬ ಕಂಡುಬರುತ್ತದೆ.

**II. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1. ಕುಟುಂಬವು ಸಮಾಜದ ಘಟಕ ಹೇಗೆ?
2. ಕುಟುಂಬದ ಪ್ರಕಾರಗಳನ್ನು ತಿಳಿಸಿ.

3. ಅವಿಭಕ್ತ ಕುಟುಂಬ ಎಂದರೇನು?
4. ಕೇಂದ್ರ ಕುಟುಂಬ ಎಂದರೇನು?
5. ಕುಟುಂಬದ ಲಕ್ಷಣಗಳು ಯಾವುವು?
6. ವ್ಯಕ್ತಿಯ ಸಾಮಾಜಿಕ ಬೆಳವಣಿಗೆಯ ಹಂತಗಳಲ್ಲಿ ಕುಟುಂಬದ ಪಾತ್ರವನ್ನು ತಿಳಿಸಿ.
7. ಅವಿಭಕ್ತ ಕುಟುಂಬದ ಲಕ್ಷಣಗಳನ್ನು ವಿವರಿಸಿ.
8. ಆಧುನಿಕ ಕೇಂದ್ರ ಕುಟುಂಬಗಳು ದಿನೇದಿನೇ ಹೆಚ್ಚಾಗಲು ಕಾರಣಗಳೇನು?

**III. ಚಟುವಟಿಕೆ**

1. ವಿಭಕ್ತ – ಅವಿಭಕ್ತ ಕುಟುಂಬಗಳ ಅನುಕೂಲ–ಅನಾನುಕೂಲಗಳ ಬಗ್ಗೆ ಚರ್ಚೆ ನಡೆಸಿ.
2. ಆದಿವಾಸಿ ಕುಟುಂಬ ವ್ಯವಸ್ಥೆಯನ್ನು ತಿಳಿಯಲು ಆದಿವಾಸಿ ಸ್ಥಳಗಳಿಗೆ ಭೇಟಿ ನೀಡಿ.

**IV. ನಿಯೋಜಿತ ಕಾರ್ಯ**

1. ಮಾತೃಪ್ರಧಾನ – ಪಿತೃಪ್ರಧಾನ ಕುಟುಂಬ ಪದ್ಧತಿಯ ಬಗ್ಗೆ ಹೆಚ್ಚಿನ ಮಾಹಿತಿ ಸಂಗ್ರಹಿಸಿರಿ.
2. ನಿಮ್ಮ ಮುತ್ತಾತನ ಕಾಲದಿಂದ ಇಂದಿನವರೆಗಿನ ವಂಶಾವಳಿಯನ್ನು ಕುಟುಂಬದ ಹಿರಿಯರೊಂದಿಗೆ ಚರ್ಚಿಸಿ ವಂಶವೃಕ್ಷ ರಚಿಸಿ.

©KTBS Not to be republished

## ಅಧ್ಯಾಯ–2

# ಸಾಮಾಜೀಕರಣ

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- *ಸಾಮಾಜೀಕರಣದ ಅರ್ಥ.*
- *ಸಾಮಾಜೀಕರಣದ ಕಾರ್ಯಗಳು.*
- *ಸಾಮಾಜೀಕರಣದ ನಿಯೋಗಿಗಳು/ಸಾಧನಗಳು.*
- *ಲಿಂಗ ಮತ್ತು ಸಾಮಾಜೀಕರಣ.*

### ಸಾಮಾಜೀಕರಣದ ಅರ್ಥ

ಸಮಾಜವು ಅಸ್ತಿತ್ವದಲ್ಲಿ ಇರುವುದು ವ್ಯಕ್ತಿಗಳ ಸಾಮೂಹಿಕ ನಡವಳಿಕೆಯ ಜೀವನದಿಂದ. ಮಾನವ ಸಮಾಜ ಜೀವಿ. ಮಾನವ ಶಿಶು ಹುಟ್ಟಿದಾಗ ಕೇವಲ ಒಂದು ಜೀವವಾಗಿ, ಪ್ರಾಣಿಯಾಗಿ ಇರುತ್ತಾನೆ/ಳೆ. ನಂತರ ಸಮಾಜ ಜೀವಿಯಾಗಿ ರೂಪುಗೊಳ್ಳುತ್ತಾರೆ. ಶಿಶು ಮಗುವಾಗಿ ಬೆಳೆಯತೊಡಗಿದ ಕ್ಷಣದಿಂದಲೇ ಸಮಾಜದ ವರ್ತನೆಗಳನ್ನು ಕಲಿಯಲು ಪ್ರಾರಂಭಿಸುತ್ತದೆ. ಸಾಮಾಜಿಕ ವರ್ತನೆಗಳ ಕಲಿಕೆ – ಪ್ರಕ್ರಿಯೆಯನ್ನು ಅಂದರೆ ಸಾಮಾಜಿಕ ವ್ಯಕ್ತಿಯಾಗಿ ರೂಪುಗೊಳ್ಳುವ ಕ್ರಿಯೆಯನ್ನು 'ಸಾಮಾಜೀಕರಣ' ಎಂದು ಕರೆಯುತ್ತಾರೆ. ಮಗುವು ಮಾತನಾಡುವ ಶಕ್ತಿ ಮತ್ತು ಯೋಚಿಸುವ ಶಕ್ತಿಯನ್ನು ಪಡೆದುಕೊಂಡ ಕ್ಷಣದಲ್ಲಿಯೇ ಸಮಾಜದಲ್ಲಿ ಇರುವ ಇತರ ವ್ಯಕ್ತಿಗಳ ಸಂಗಡ ಸಂಪರ್ಕವನ್ನು ಬೆಳೆಸಿಕೊಂಡು ಬರುತ್ತದೆ. ಇತರರೊಡನೆ ಸಂವಾದ ಮಾಡಲು ಪ್ರಯತ್ನಿಸುತ್ತದೆ. ಆಟವಾಡುವ ಮೂಲಕ ತನ್ನ ಹತ್ತಿರದವರನ್ನು ಅನುಕರಿಸಲು ಪ್ರಾರಂಭಿಸುತ್ತದೆ. ಹೀಗೆ ಅದು ಹಂತ ಹಂತವಾಗಿ ಸಾಮಾಜಿಕ ಪರಿಸರದ ಪ್ರಭಾವಕ್ಕೆ ಒಳಗಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಸಾಮಾಜಿಕ ಅವಲಂಬನೆ ಕಂಡು ಬರುತ್ತದೆ.

'ಸಾಮಾಜೀಕರಣ' ಎಂದರೆ ಸಮಾಜದ ಜೀವಿಗಳಲ್ಲಿ ಪರಸ್ಪರ ಅವಲಂಬನೆ ಉಂಟಾಗಿ ಅವರೆಲ್ಲರೂ ನಮ್ಮ ನಮ್ಮ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಅರಿತು ಜೀವಿಸುವ ಕ್ರಮಬದ್ಧ ಪ್ರಕ್ರಿಯೆ.

ಸಾಮಾಜೀಕರಣ ಪ್ರಕ್ರಿಯೆಯು ಹುಟ್ಟಿನಿಂದ ಸಾವಿನವರೆಗೆ ನಡೆಯುವ ನಿರಂತರ ಸಾಮಾಜಿಕ ಕ್ರಿಯೆ. ಮಾನವನ ಹುಟ್ಟಿನಿಂದ ಬರುವ ಸಹಜ ಪ್ರವೃತ್ತಿಗಳು ಸಾಮಾಜಿಕ ವರ್ತನೆಗಳ ಪ್ರಭಾವಕ್ಕೆ ಒಳಗಾಗಿ ಸಾಮಾಜಿಕ ಪರಿಸರ ಮತ್ತು ಪರಿಸ್ಥಿತಿಗಳಿಗೆ ತಕ್ಕಂತೆ ರೂಪುಗೊಳ್ಳುತ್ತವೆ. ಅಷ್ಟು ಮಾತ್ರವಲ್ಲದೆ, ಸಾಮಾಜಿಕ ವರ್ತನೆಗಳನ್ನು ಅಳವಡಿಸಿಕೊಂಡು ಸಮಾಜ ಜೀವಿಯಾಗಿ ಮನುಷ್ಯರು ರೂಪಾಂತರಗೊಳ್ಳುತ್ತಾರೆ. ಇದನ್ನೇ ಸಾಮಾಜೀಕರಣ ಎಂದು ಕರೆಯುತ್ತಾರೆ.

### ಸಾಮಾಜೀಕರಣದ ಕಾರ್ಯಗಳು

1. ಮಾನವ ಜೀವಿಯನ್ನು ಸಾಮಾಜಿಕ ಜೀವಿಯನ್ನಾಗಿಸುತ್ತದೆ.
2. ವಿವಿಧ ಕೌಶಲ್ಯಗಳ ಕಲಿಕೆ ಮತ್ತು ಅಳವಡಿಕೆಗೆ ಅವಕಾಶ ಒದಗಿಸುತ್ತದೆ.
3. ಸಾಮಾಜಿಕ ಸಂಬಂಧಗಳನ್ನು ಬೆಳೆಸುತ್ತದೆ ಮತ್ತು ಸಾಮಾಜಿಕ ವ್ಯವಸ್ಥೆಗೆ ಬದ್ಧತೆ ಮತ್ತು ಬೆಂಬಲವನ್ನು ನೀಡುತ್ತದೆ.
4. ವ್ಯಕ್ತಿತ್ವದ ಬೆಳವಣಿಗೆಗೆ ಸಹಾಯ ಮಾಡುತ್ತದೆ.
5. ಪರಂಪರೆಯ ಮುಂದುವರಿಕೆಗೆ ಸಹಕಾರಿಯಾಗಿದೆ.

© KTBS Not to be republished

**ಸಾಮಾಜೀಕರಣದ ನಿಯೋಗಿಗಳು/ಸಾಧನಗಳು**

ಸಾಮಾಜೀಕರಣದ ಮೇಲೆ ಪ್ರಭಾವ ಬೀರುವ ಅಂಶಗಳಲ್ಲಿ ಮುಖ್ಯವಾಗಿ ಎರಡು ವಿಧಗಳನ್ನು ಗುರುತಿಸಬಹುದು. ಮೊದಲನೆಯದಾಗಿ ವಯಸ್ಸು, ಅನುಭವ ಮತ್ತು ಹಿರಿಯರ ಪ್ರಭಾವ. ಎರಡನೆಯದು ಸಮವಯಸ್ಕರು ಉಂಟುಮಾಡುವ ಪ್ರಭಾವ. ಮೊದಲನೆಯ ವಿಭಾಗದಲ್ಲಿ ತಾಯಿ, ತಂದೆ, ಗುರುಹಿರಿಯರು ಹಾಗೂ ಇತರರನ್ನು ಸೇರಿಸಬಹುದು. ಎರಡನೆಯ ವಿಭಾಗದಲ್ಲಿ ಸ್ನೇಹಿತರು ಹಾಗೂ ಸಮವಯಸ್ಕರನ್ನು ಸೇರಿಸಬಹುದು. ಇದರ ಆಧಾರದ ಮೇಲೆ ಈ ಕೆಳಗಿನ ಅಂಶಗಳನ್ನು ಸಾಮಾಜೀಕರಣದ ನಿಯೋಗಿಗಳೆಂದು ಗುರುತಿಸಬಹುದು.

**ಚಟುವಟಿಕೆ :**
ನಿಮ್ಮ ಕುಟುಂಬವನ್ನು ಆಧಾರವಾಗಿಟ್ಟುಕೊಂಡು ನಿಮ್ಮ ಅಜ್ಜಿ, ತಂದೆ, ತಾಯಿ, ಸೋದರಿ/ಸೋದರ, ಅತ್ತಿಗೆ, ಅತ್ತೆ ಇವರುಗಳು ನಿರ್ವಹಿಸುತ್ತಿದ್ದು ಕಾರ್ಯ ಚಟುವಟಿಕೆಗಳನ್ನು ಪಟ್ಟಿ ಮಾಡಿ.

**1. ಕುಟುಂಬ :** ಮಗುವಿನ ಸಾಮಾಜೀಕರಣದಲ್ಲಿ ಕುಟುಂಬದ ಪಾತ್ರ ಬಹಳ ಮುಖ್ಯವಾದುದು. ತಂದೆ-ತಾಯಿ ಮಗುವಿಗೆ ನೇರವಾಗಿ ರಕ್ತಸಂಬಂಧಿಗಳು ಆಗುತ್ತಾರೆ. ತಾಯಿಯೇ ಮಗುವಿನ ಮೊದಲ ಗುರು ಎಂಬ ನಾಣ್ಣುಡಿ ಅಕ್ಷರಶಃ ನಿಜ. ತಾಯಿ ತಂದೆಯರ ನಡೆ-ನುಡಿ, ಆಚಾರ-ವಿಚಾರ, ಚಟುವಟಿಕೆಗಳು, ವ್ಯವಹರಿಸುವಿಕೆ ಮೊದಲಾದ ಅಂಶಗಳು ಮಗುವಿನ ಭಾವನಾತ್ಮಕ ಬೆಳವಣಿಗೆಯ ಮೇಲೆ ಬಹಳ ಪ್ರಭಾವ ಬೀರುತ್ತವೆ. ಪ್ರೀತಿ, ವಾತ್ಸಲ್ಯ, ವಿಶ್ವಾಸ, ಸಹನೆ, ಸಹೃದಯತೆ, ಸಹಕಾರ ಮೊದಲಾದ ಜೀವನ ಮೌಲ್ಯಗಳ ಮೊದಲ ಪಾಠಗಳನ್ನು ಮಗುವು ಮನೆಯಲ್ಲಿಯೇ ಕಲಿಯುತ್ತದೆ. ಕುಟುಂಬದ ಹೊಗಳಿಕೆಗಳು ಮಗುವಿನ ಚಟುವಟಿಕೆಗಳಿಗೆ ಉತ್ತೇಜನಕಾರಿಯಾಗುತ್ತವೆ. ತಂದೆ - ತಾಯಿಯರು ವಯಸ್ಸಿನಲ್ಲಿ, ಅನುಭವದಲ್ಲಿ, ಅಧಿಕಾರದಲ್ಲಿ ಹಿರಿಯರಾದ್ದರಿಂದ ಮಕ್ಕಳು ವಿಧೇಯತೆಯಿಂದ ನಡೆದುಕೊಳ್ಳುತ್ತಾರೆ. ತಾಯಿ-ತಂದೆಯರ ಒಡನಾಟದ ಪರಿಸರದಿಂದ ಪ್ರಭಾವಿತರಾಗುತ್ತಾರೆ. ಹೀಗೆ ಮಕ್ಕಳ ಮನಸ್ಸು ಸಾಮಾಜೀಕರಣದಿಂದಾಗಿ ಅರಳುತ್ತದೆ ಹಾಗೂ ಪ್ರಫುಲ್ಲವಾಗುತ್ತದೆ. ಇದಕ್ಕೆ ಬುನಾದಿಯೇ ಕುಟುಂಬ.

**2. ಸಮವಯಸ್ಕರ ಗುಂಪು :** ಸಾಮಾಜೀಕರಣದ ಬಹುಮುಖ್ಯ ನಿಯೋಗಿ ಸಮವಯಸ್ಕರ ಗುಂಪು. ಈ ಗುಂಪಿನಲ್ಲಿ ಸಹಪಾಠಿಗಳು, ಜೊತೆಯ ಆಟಗಾರರು ಮತ್ತು ಸ್ನೇಹಿತರು ಇರುತ್ತಾರೆ. ಈ ಸಂಬಂಧವು ಸಹಕಾರ ಹಾಗೂ ಪರಸ್ಪರ ಹೊಂದಾಣಿಕೆಯನ್ನು ಆದರಿಸುತ್ತದೆ. ಇವರು ಸಾಮಾನ್ಯವಾಗಿ ಒಂದೇ ವಯಸ್ಸಿನವರಾಗಿದ್ದು, ತನ್ನ ಪೋಷಕರಿಂದ ಮತ್ತು ಶಿಕ್ಷಕರಿಂದ ತಿಳಿಯಲಾಗದ ಸಾಮಾಜಿಕ ವರ್ತನೆಯ ವಿಷಯಗಳನ್ನು ಸ್ನೇಹಿತರಿಂದ ಮಕ್ಕಳು ತಿಳಿಯುತ್ತಾರೆ. ಈ ಅರಿವು ಸಾಮಾಜಿಕ ಸಂಬಂಧಗಳು ಮತ್ತು ನಡವಳಿಕೆಯ ದೃಷ್ಟಿಯಿಂದ ಅತ್ಯಂತ ಅಗತ್ಯ ಮತ್ತು ಮಹತ್ವದ್ದಾಗಿದೆ.

**3. ಧರ್ಮ:** ಸಾಮಾಜೀಕರಣ ಪ್ರಕ್ರಿಯೆಯಲ್ಲಿ ಧರ್ಮದ ಪಾತ್ರವೂ ಇದೆ. ಮನುಷ್ಯರು ನಂಬಿದ ಧರ್ಮವು ಸಾಮಾಜಿಕ ಜೀವನಕ್ಕೆ ಆದರ್ಶದ ತಳಹದಿ ಹಾಕುತ್ತದೆ. ನೀತಿಯುತವಾದ ಜೀವನ ನಡೆಸಲು ಬೋಧಿಸುತ್ತದೆ. ತಂದೆ - ತಾಯಿಯರು, ಹಿರಿಯರು, ಸಂಬಂಧಿಗಳು, ಧಾರ್ಮಿಕ ಸ್ಥಳಗಳಿಗೆ ಭೇಟಿ ನಿಡುವುದಲ್ಲದೆ ನಂಬಿಕೆ, ಪೂಜೆ, ಹಬ್ಬ, ಜಾತ್ರೆ, ಉತ್ಸವ ಮೊದಲಾದ ಸಾಮಾಜಿಕ ಚಟುವಟಿಕೆ ಮತ್ತು ಆಚರಣೆಯಲ್ಲಿ ಭಾಗವಹಿಸುವ ಮೂಲಕ ಧಾರ್ಮಿಕ ಚಟುವಟಿಕೆಗಳನ್ನು ಮಕ್ಕಳಲ್ಲಿ ಮೈಗೂಡಿಸಿಕೊಳ್ಳುವಂತೆ ಮಾಡುತ್ತಾರೆ. ಇದನ್ನು ಎಲ್ಲಾ ಧರ್ಮಗಳು ಬೇರೆ ಬೇರೆ ವಿಧಾನದಲ್ಲಿ ಮಾಡುತ್ತವೆ.

**4. ಶಾಲೆ :** ಮಗುವಿನ ಸಾಮಾಜೀಕರಣದಲ್ಲಿ ಶಾಲೆಯ ಪಾತ್ರ ಮಹತ್ವಪೂರ್ಣವಾದದ್ದು. ಶಾಲೆಯಲ್ಲಿ ಶಿಕ್ಷಣದ ಪ್ರಭಾವದ ಜೊತೆಗೆ ಸಹ ವಿದ್ಯಾರ್ಥಿಗಳು ಮತ್ತು ಸ್ನೇಹಿತರ ವ್ಯಕ್ತಿತ್ವದ ಪ್ರಭಾವಕ್ಕೆ ಮಕ್ಕಳು ಒಳಪಡುತ್ತಾರೆ. ಶಿಕ್ಷಣದಿಂದ ಮಗುವಿನ ಸಾಮಾಜಿಕ ವರ್ತನೆ, ಜ್ಞಾನ ಮತ್ತು ಅನುಭವಗಳು ರೂಪುಗೊಳ್ಳುತ್ತವೆ. ಮಕ್ಕಳ

©KTBS Not to be republished

ಸುಪ್ತಶಕ್ತಿ ಸಾಮರ್ಥ್ಯಗಳು ಬೆಳೆಯುತ್ತವೆ. ಮಗುವಿನ ಜೀವನವನ್ನು ವಿಶಾಲಗೊಳಿಸಿ, ಅವರನ್ನು ಸಾಮಾಜಿಕ ಜೀವನಕ್ಕೆ ಅಣಿಗೊಳಿಸುತ್ತವೆ. ಮಗುವಿನ ಸಾಮಾಜೀಕರಣದಲ್ಲಿ ಶಿಕ್ಷಕರ ಪಾತ್ರ ಮಹತ್ವ ಪೂರ್ಣವಾದುದು. ಸನ್ನಡತೆ, ಸದ್ಭಾವನೆ, ಸಮಾನತೆ, ಮುಂತಾದ ಗುಣಗಳು ಶಿಕ್ಷಕರ ನಡೆನುಡಿಯಲ್ಲಿ ಅಭಿವ್ಯಕ್ತವಾಗಿ ಮಕ್ಕಳಿಗೆ ಪ್ರೀತಿ, ವಿಶ್ವಾಸ, ಸಹನೆ, ಸಹಬಾಳ್ವೆ, ಸಹಜೀವನ, ಸಹೃದಯತೆ ಮೊದಲಾದ ಜೀವನ ಮೌಲ್ಯಗಳನ್ನು ಮೈಗೂಡಿಸಿಕೊಳ್ಳುವಂತೆ ಮಾಡುತ್ತವೆ. ಜೊತೆಗೆ ಮಕ್ಕಳು ಪಠ್ಯೇತರ ಚಟುವಟಿಕೆಗಳು, ರಚನಾತ್ಮಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತೆ ಪ್ರೇರೇಪಿಸುತ್ತದೆ.



**5. ಸಮೂಹ ಮಾಧ್ಯಮ:** ಆಧುನಿಕ ಸಮಾಜದಲ್ಲಿ ಸಮೂಹ ಮಾಧ್ಯಮಗಳು ಸಾಮಾಜೀಕರಣದ ಪ್ರಮುಖ ನಿಯೋಗಿಯಾಗಿ ಕೆಲಸ ಮಾಡುತ್ತವೆ. ರೇಡಿಯೊ, ದೂರದರ್ಶನ, ಚಲನಚಿತ್ರ, ಸುದ್ದಿಪತ್ರಿಕೆಗಳು, ನಿಯತಕಾಲಿಕೆಗಳು, ಬೀದಿನಾಟಕಗಳು ಮೊದಲಾದ ಸಮೂಹ ಮಾಧ್ಯಮಗಳು ಸಾಹಿತ್ಯವನ್ನು ವಿಪುಲವಾಗಿ ಬಳಸುತ್ತವೆ. ಜಾಹೀರಾತು, ರೇಡಿಯೊ ಕಾರ್ಯಕ್ರಮಗಳು, ಕಥೆ, ಕವನ, ಕಾದಂಬರಿಗಳು, ನಾಟಕ, ನೃತ್ಯರೂಪಕ, ಸಂಗೀತ, ಭಿತ್ತಿಪತ್ರ, ಮಹಾನ್‌ವ್ಯಕ್ತಿಗಳ ವಿಶೇಷ ಹೇಳಿಕೆಗಳು, ಅನುಭವದ ನುಡಿಗಳಿಂದ ನಾವು ಆಳವಾಗಿ ಪ್ರಭಾವಿತರಾಗುತ್ತೇವೆ. ವಾರ್ತೆಗಳು, ರಸಪ್ರಶ್ನೆ ಕಾರ್ಯಕ್ರಮಗಳು, ಪರಿಚಯ, ಸಂವಾದ, ವಿಚಾರ ಸಂಕಿರಣ ವಿವಿಧ ಸ್ಥಳಗಳ ವೀಕ್ಷಣೆ, ಅನ್ವೇಷಣೆ ಮೊದಲಾದವುಗಳಿಂದ ಸಮೂಹ ಮಾಧ್ಯಮಗಳ ಸದ್ಬಳಕೆಯಾಗುತ್ತದೆ. ಹಾಗೆಯೇ ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಸಹಾಯಕವಾಗುವ, ಶೈಕ್ಷಣಿಕ ಮಹತ್ವವುಳ್ಳ ಕಾರ್ಯಕ್ರಮಗಳು ಮಹತ್ವದ ಪರಿಣಾಮವನ್ನು ಮಕ್ಕಳ ಸಾಮಾಜಿಕ ವರ್ತನೆಯಲ್ಲಿ ಬೀರುತ್ತವೆ.

> **ನೀವೇ ಯೋಚಿಸಿ:**
> ಸಮಾಜೀಕರಣದ ಹಿನ್ನೆಲೆಯಲ್ಲಿ ಬಾಲಕ/ಕಿಯಾಗಿ ಶಾಲೆಯಲ್ಲಿ ನೀವು ನಿರ್ವಹಿಸುವ ಪಾತ್ರಗಳ ಕಾರ್ಯಕ್ಷಮತೆಯನ್ನು ಯೋಚಿಸಿ.

**6.ನೆರೆಹೊರೆ (Neighbourhood) :** ನೆರೆಹೊರೆ ಎಂದರೆ ಅಕ್ಕಪಕ್ಕದವರು ಎಂದರ್ಥ. ಇದು ಸಾಮುದಾಯಿಕ ಗುಣಗಳನ್ನು ಹೊಂದಿರುವ ಚಿಕ್ಕ ಸಮೂಹ. ನೆರೆಹೊರೆ ಗಾತ್ರದಲ್ಲಿ ಚಿಕ್ಕದಾಗಿರುತ್ತದೆ. ಇಲ್ಲಿನ ಜನರು ಪರಸ್ಪರ ಸಂಬಂಧ ಹೊಂದಿರುತ್ತಾರೆ. ಸ್ಥಳೀಯವಾಗಿ ವಾಸಿಸುವ ಜನರಿಗೆ ಹಲವಾರು ರೀತಿಯಲ್ಲಿ ಅಗತ್ಯ ಸಹಕಾರ ಮಾಡುತ್ತಾರೆ. ನೆರೆಹೊರೆಯ ಪಾತ್ರ ಗ್ರಾಮ ಮತ್ತು ನಗರ ಪ್ರದೇಶಗಳೆರಡರಲ್ಲೂ ಕಂಡು ಬರುತ್ತದೆ. ನೆರೆಹೊರೆಯ ಜನರು ಕಷ್ಟ–ಸುಖ, ಸಂತೋಷ ಸಮಾರಂಭ ಮುಂತಾದವುಗಳನ್ನು ಪರಸ್ಪರ ಹಂಚಿಕೊಂಡು ಒಂದೇ ಕುಟುಂಬದವರಂತೆ ಜೀವಿಸುವರು. ಆಸಕ್ತಿ, ಅಭಿರುಚಿ, ಹಬ್ಬ, ಜಾತ್ರೆ, ವಿವಾಹ, ಧಾರ್ಮಿಕ ಸಮಾರಂಭ ಮುಂತಾದ ಸಂದರ್ಭಗಳಲ್ಲಿ ಒಬ್ಬರಿಗೊಬ್ಬರು ಸ್ಪಂದಿಸುವರು. ಗ್ರಾಮೀಣ ಪರಿಸರದಲ್ಲಿ ಎಂತಹ ಸಂದರ್ಭದಲ್ಲಿಯೂ ನೆರೆಹೊರೆಯರಿದ್ದಾರೆ ಎಂಬ ಭಾವನೆಯೊಂದಿಗೆ ಜೀವಿಸುವವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಆದರೆ ನಗರ ಪರಿಸರದಲ್ಲಿ ಇಂತಹ ಭಾವನೆ ಕಡಿಮೆ. ಸಾಮಾನ್ಯವಾಗಿ ನಗರಗಳಲ್ಲಿ ನೆರೆಹೊರೆಯವರನ್ನು ನಮ್ಮವರು ಎಂದು ಗುರುತಿಸುವುದಕ್ಕಿಂತ ವೈಯಕ್ತಿಕವಾಗಿ ಗುರುತಿಸುವುದೇ ಹೆಚ್ಚು.

> **ಚಟುವಟಿಕೆ :**
> ನಿಮ್ಮ ಪಕ್ಕದ ಮನೆಯವರೊಂದಿಗೆ ನಿಮ್ಮ ಮನೆಯ ಸಂಬಂಧವನ್ನು ವಿಶ್ಲೇಷಿಸಿ

©KTBS Not to be republished

## ಲಿಂಗ ಹಾಗೂ ಸಾಮಾಜೀಕರಣ

ಈಗಾಗಲೇ ತಿಳಿಸಿದಂತೆ ಸಾಮಾಜೀಕರಣವು ಪ್ರತಿ ಮಾನವ ಜೀವಿಗೂ ಅತ್ಯವಶ್ಯವಾದುದು. ಸಾಮಾಜೀಕರಣದ ಪ್ರಕ್ರಿಯೆಯು ಎಲ್ಲಾ ಕುಟುಂಬದಲ್ಲಿ ಒಂದೇ ತೆರನಾಗಿ ನಡೆಯುವುದಿಲ್ಲ. ಹೆತ್ತವರ, ಆಚಾರ–ವಿಚಾರಗಳು, ಶೈಕ್ಷಣಿಕ ಮಟ್ಟ, ಆಸೆ–ಆಕಾಂಕ್ಷೆ, ಅಭಿರುಚಿ, ಆದ್ಯತೆಗಳು ಇತ್ಯಾದಿ ಸಾಮಾಜೀಕರಣದ ಪ್ರಕ್ರಿಯೆಯನ್ನು ಪ್ರಭಾವಿಸುತ್ತವೆ. ಇದರಿಂದ ಸಾಮಾಜೀಕರಣದ ಪ್ರಕ್ರಿಯೆಯಲ್ಲಿ ಅರಿತೋ ಅಥವಾ ಅರಿಯದೆಯೊ ಮೌಲ್ಯಗಳನ್ನು ಆಚಾರ–ವಿಚಾರಗಳನ್ನು ಭಿನ್ನ–ಭಿನ್ನ ರೀತಿಯಲ್ಲಿ ತಮ್ಮ ಮಕ್ಕಳಿಗೆ ತಿಳಿಸುತ್ತಾ ಇರುತ್ತಾರೆ. ಉದಾಹರಣೆಗೆ ಮಗ ಆಟವಾಡಿ ಮನೆಗೆ ವಿಳಂಬವಾಗಿ ಬಂದರೆ ಗದರಿಸುವ ರೀತಿಗೂ, ಮಗಳೂ ವಿಳಂಬದಿಂದ ಮನೆಗೆ ಬಂದರೆ ಗದರಿಸುವ ರೀತಿಗೂ ವ್ಯತ್ಯಾಸವನ್ನು ಕಾಣಬಹುದು. ಸಾಮಾನ್ಯವಾಗಿ ಮಗನನ್ನು 'ಬಂದಿಯಾ ಮಗನೆ' ಅಂದರೆ ಮಗಳಿಗೆ 'ಇಷ್ಟೇಕೆ ತಡ ಮಾಡಿದೆ ಕತ್ತಲಾಗುವ ಮುಂಚೆನೆ ಮನೆ ಸೇರಬೇಕು' ಎನ್ನುತ್ತಿರುತ್ತಾರೆ. ವಿಶೇಷವಾಗಿ ಭಾರತದಲ್ಲಿ ಅಡುಗೆಗೆ ಮತ್ತು ಕುಟುಂಬದ ಸೇವೆಗಳಿಗೆ ಮಗಳು ಸಹಾಯ ಮಾಡಲು ಅಪೇಕ್ಷಿಸುತ್ತಾರೆ. ಆದರೆ ಮಗನಿಂದ ಇದನ್ನು ನಿರೀಕ್ಷಿಸುವುದಿಲ್ಲ. ಅದೇ ರೀತಿ ಹೆಣ್ಣು ಮಗುವಿಗೆ ಆಟವಾಡಲು ಗೊಂಬೆಗಳನ್ನು, ಮಗನಿಗೆ 'ಕ್ರಿಕೆಟ್ ಬ್ಯಾಟನ್ನು' ನೀಡುತ್ತಾರೆ. ಹೀಗೆ ಭಿನ್ನವಾಗಿ ಲಿಂಗಾಧಾರಿತ ಸಾಮಾಜೀಕರಣದ ಪ್ರಕ್ರಿಯೆ ಸಾಮಾನ್ಯವಾಗಿ ನಡೆಯುತ್ತಿರುತ್ತದೆ. ಇದನ್ನು ವ್ಯತ್ಯಾಸ ತೋರುವ ಸಾಮಾಜೀಕರಣ ಎನ್ನುತ್ತೇವೆ.

> **ಚಟುವಟಿಕೆ**
> *ವಿಶೇಷ ಸಾಧನೆಗಳನ್ನು ಮಾಡಿರುವ ಮಹಿಳೆಯರ ಬಗ್ಗೆ ಮಾಹಿತಿ ಸಂಗ್ರಹಿಸಿ.*

ಇಂದಿನ ಆಧುನಿಕ ಸಂಕೀರ್ಣ ಸಮಾಜದಲ್ಲಿ ಮಹಿಳೆಯರ ಸ್ಥಾನಮಾನಗಳು ಗಣನೀಯವಾಗಿ ಬದಲಾವಣೆಯಾಗುತ್ತಿವೆ. ಇವು ಕಾಲಕಾಲಕ್ಕೆ ದೇಶದಿಂದ ದೇಶಕ್ಕೆ ಬದಲಾಗಿವೆ. ಭಾರತದಲ್ಲಿ ರಾಷ್ಟ್ರೀಯ ಮತ್ತು ಪ್ರಜಾಸತ್ತಾತ್ಮಕ ಪ್ರಜ್ಞೆ, ಹೊಸ ಅರ್ಥವ್ಯವಸ್ಥೆ, ಆಧುನಿಕ ಶಿಕ್ಷಣ ಮಹಿಳೆಯರನ್ನು ಪರಾಧೀನತೆಯಿಂದ ಬಿಡುಗಡೆಗೊಳಿಸಿ ಹೊಸ ರೂಪ ನೀಡಿತು. ಮೊದಲು ಪುರುಷರು ಮಾತ್ರ ಪಡೆಯಬಹುದಾಗಿದ್ದ ಕೆಲವು ಹಕ್ಕುಗಳನ್ನು ಸ್ತ್ರೀಯರು ಇದೀಗ ಪಡೆಯಲಾರಂಭಿಸಿದ್ದಾರೆ. ಗಣಿ ಕೆಲಸ, ಉಕ್ಕಿನ ಕಾರ್ಖಾನೆಗಳಲ್ಲಿನ ಕೆಲಸ, ಸುರಂಗ ತೋಡುವ ಕೆಲಸ, ಸಾಗರದಾಳಗಳಿಂದ ಸಂಪನ್ಮೂಲಗಳನ್ನು ತೆಗೆಯುವ ಕೆಲಸ ಮುಂತಾದ ಕಾರ್ಯಕ್ಷೇತ್ರಗಳಲ್ಲಿಯೂ ಸ್ತ್ರೀಯರು ಇತ್ತೀಚೆಗೆ ಅವಕಾಶಗಳನ್ನು ಪಡೆಯುತ್ತಿದ್ದಾರೆ. ವೈದ್ಯಕೀಯ ವೃತ್ತಿ, ವಕೀಲ ವೃತ್ತಿ, ವಿಶ್ವವಿದ್ಯಾನಿಲಯ ಮಟ್ಟದ ಸಂಶೋಧನೆ, ಕಾರ್ಖಾನೆಯ ಕಾರ್ಯ, ಸೈನಿಕಸೇವೆ, ಯುದ್ಧೋಪಕರಣಗಳ ಉತ್ಪಾದನಾ ಕಾರ್ಯಗಳಲ್ಲಿ ಮಹಿಳೆಯರು ಭಾಗವಹಿಸುತ್ತಿದ್ದಾರೆ. ಈಗಾಗಲೇ ಈ ದಿಕ್ಕಿನಲ್ಲಿ ಸಾಮಾಜೀಕರಣದ ಪ್ರಕ್ರಿಯೆ ನಡೆಯುತ್ತಿರುವುದು ಸಮಾನತೆ ಮತ್ತು ಸಮಾನ ಅವಕಾಶದ ದೃಷ್ಟಿಯಿಂದ ಪ್ರಮುಖವಾಗಿದೆ. ಅದರಲ್ಲಿಯೂ ಸ್ವಾತಂತ್ರ್ಯಾನಂತರ ಭಾರತದಲ್ಲಿ ಕಂಡು ಬಂದ ಸಮಾನತೆಯ ತತ್ವದ ಅನುಷ್ಠಾನ, ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಸರ್ಕಾರ ಕೈಗೊಂಡ ವಿಶೇಷ ಕಾರ್ಯಕ್ರಮಗಳು, ಆರ್ಥಿಕ ಪ್ರಗತಿ ಹಾಗೂ ನಗರ ಪ್ರದೇಶಗಳ ಅಭಿವೃದ್ಧಿ, ಬದಲಾದ ಸಾಮಾಜಿಕ ಧೋರಣೆಗಳು, ಸಾಮಾಜೀಕರಣದಲ್ಲಿ ಲಿಂಗ ಸಮಾನತೆಯನ್ನು ತರುವಲ್ಲಿ ಪ್ರಮುಖ ಪಾತ್ರ ವಹಿಸಿವೆ.

© KTBS Not to be republished

## ಅಭ್ಯಾಸಗಳು

**I. ಖಾಲಿ ಬಿಟ್ಟಿರುವ ಜಾಗಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

1. ಮಾನವ ಸಾಮಾಜಿಕ ವ್ಯಕ್ತಿಯಾಗುವ ಪ್ರಕ್ರಿಯೆಯನ್ನು ____________ ಎನ್ನುತ್ತೇವೆ.
2. ತಾಯಿಯೇ ಮಗುವಿನ ಮೊದಲ ____________.

3. ಸಾಮಾಜೀಕರಣದ ಪ್ರಮುಖ ನಿಯೋಗಿ ______________

4. ರೇಡಿಯೊ ಸಾಮಾಜೀಕರಣದ ______________ ನಿಯೋಗಿ.

**II. ಈ ಕೆಳಗಿನ ಪ್ರಶ್ನೆಗಳಿಗೆ ಚರ್ಚಿಸಿ ಉತ್ತರ ಬರೆಯಿರಿ.**

1. ಸಾಮಾಜೀಕರಣದಲ್ಲಿ ಶಾಲೆಯ ಪಾತ್ರವನ್ನು ವಿವರಿಸಿ.
2. ಕುಟುಂಬದ ಸದಸ್ಯರ ಜೊತೆ ಮಗು ಕಲಿಯುವ ಮೌಲ್ಯಗಳು ಯಾವುವು?
3. ಸಾಮಾಜೀಕರಣ ಪ್ರಕ್ರಿಯೆಯ ಮಹತ್ವವನ್ನು ವಿವರಿಸಿ.
4. ಸಾಮಾಜೀಕರಣ ಪ್ರಕ್ರಿಯೆಯಲ್ಲಿ ಸಮೂಹ ಮಾಧ್ಯಮದ ಪಾತ್ರವನ್ನು ವಿವರಿಸಿ.
5. ಸಾಮಾಜೀಕರಣ ಪ್ರಕ್ರಿಯೆಯಲ್ಲಿ ನೆರೆಹೊರೆಯ ಪಾತ್ರವನ್ನು ವಿವರಿಸಿ.
6. ಸಾಮಾಜೀಕರಣ ಎಂದರೇನು?

**III. ಚಟುವಟಿಕೆ :**

1. ಸಾಮಾಜೀಕರಣದ ಪಾತ್ರ ಕುರಿತು ಪ್ರಬಂಧ ಅಥವಾ ಚರ್ಚಾಸ್ಪರ್ಧೆಗಳನ್ನು ಏರ್ಪಡಿಸುವುದು.
2. ಮಾಧ್ಯಮಗಳಲ್ಲಿ ಸಾಮಾಜೀಕರಣ ಕುರಿತು ಬರುವ ಲೇಖನ ಸಾಕ್ಷ್ಯಚಿತ್ರಗಳನ್ನು ಸಂಗ್ರಹಿಸಿ ವಿವರಿಸಿ.

**IV. ನಿಯೋಜಿತ ಕಾರ್ಯ :**

1. ಕುಟುಂಬ, ಶಾಲೆ, ಸಮೂಹ ಮಾಧ್ಯಮದ ಸಾಮಾಜೀಕರಣ ಪ್ರಕ್ರಿಯೆಯ ಚಿತ್ರಗಳನ್ನು ಬರೆಯಲು ತಿಳಿಸುವುದು.

©KTBS Not to be republished

# ಭೂಗೋಳ ವಿಜ್ಞಾನ

## ಅಧ್ಯಾಯ – 1

# ನಮ್ಮ ರಾಜ್ಯ – ಕರ್ನಾಟಕ

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- *ಪೀಠಿಕೆ : ನಮ್ಮ ನಾಡಿನ ಹಿರಿಮೆ–ಗರಿಮೆ ಹಾಗೂ ಪರಂಪರೆಗಳ ಬಗ್ಗೆ.*
- *'ಕರ್ನಾಟಕ' ಎಂಬ ಹೆಸರಿನ ಹಿನ್ನೆಲೆ ಹಾಗೂ ಕರ್ನಾಟಕ ರಾಜ್ಯ ರೂಪುಗೊಂಡ ಬಗೆ.*
- *ಕರ್ನಾಟಕದ ಭೌಗೋಳಿಕ ಸ್ಥಾನ, ವಿಸ್ತೀರ್ಣ, ಭೂ ಮತ್ತು ಜಲಮೇರೆಗಳು ಹಾಗೂ ನೆರೆಯ ರಾಜ್ಯಗಳು.*

**ಪೀಠಿಕೆ :** ಹಿಂದಿನ ತರಗತಿಯಲ್ಲಿ ಪ್ರಾಕೃತಿಕ ಭೂಗೋಳಶಾಸ್ತ್ರವನ್ನು ಕುರಿತು ಅಧ್ಯಯನ ಮಾಡಲಾಗಿದೆ. ಈಗ ನಮ್ಮ ನಾಡು, ಕನ್ನಡನಾಡು, ಕರ್ನಾಟಕವನ್ನು ಕುರಿತ ಅಧ್ಯಯನಕ್ಕೆ ಅಡಿಯಿಡುತ್ತಿದ್ದೇವೆ. ಇದು ತನ್ನದೇ ಆದ ಹಿರಿಮೆ–ಗರಿಮೆ ಮತ್ತು ಪರಂಪರೆಯುಳ್ಳ ಭಾರತದ ರಾಜ್ಯಗಳಲ್ಲಿ ಒಂದು. ಉತ್ತಮ ಸನ್ನಿವೇಶ, ವೈವಿಧ್ಯ ಭೂಸ್ವರೂಪಗಳು, ಸಸ್ಯ ಮತ್ತು ಪ್ರಾಣಿವರ್ಗ, ವಿವಿಧ ಮಣ್ಣು, ನದಿಜಾಲ, ಖನಿಜ ಮತ್ತು ಜನಸಂಪತ್ತು ಮೊದಲಾದವುಗಳ ಸಮೃದ್ಧ ನಾಡು. ಸಾಹಿತ್ಯ, ಕಲೆ, ಸಂಸ್ಕೃತಿ, ಧಾರ್ಮಿಕ, ಆಧ್ಯಾತ್ಮಿಕ, ಐತಿಹಾಸಿಕ ಪ್ರಸಿದ್ಧ, ಪವಿತ್ರ ಮತ್ತು ಪುಣ್ಯಕ್ಷೇತ್ರಗಳನ್ನುಳ್ಳ ನಾಡು. ಪ್ರಕೃತಿ ಸೌಂದರ್ಯ ಮತ್ತು ವನ್ಯಜೀವಿಗಳ ಸಮೃದ್ಧಿ ಹಾಗೂ ವಿಶ್ವ ಪರಂಪರೆಯ ಸಾಲಿನಲ್ಲಿ ಪ್ರಸಿದ್ಧಿ ಪಡೆದ ಕೀರ್ತಿ ನಮ್ಮ ರಾಜ್ಯಕ್ಕಿದೆ.

**ಹೆಸರಿನ ಹಿನ್ನೆಲೆ :** ಕರ್ನಾಟಕ ಎಂಬ ಹೆಸರು ಪ್ರಾಚೀನ ಕಾಲದಿಂದಲೂ ಬಳಕೆಯಲ್ಲಿದೆ. ಇದನ್ನು ಕರುನಾಡು (ಕರ್ + ನಾಡು – ಅಂದರೆ ಕಪ್ಪುಮಣ್ಣಿನ ನಾಡು) ಎಂದು ಕರೆಯುತ್ತಿದ್ದರು. ತಮಿಳಿನ **'ಶಿಲಪ್ಪದಿಕಾರಂ'** ಪ್ರಾಚೀನ ಕೃತಿಯಲ್ಲಿ **'ಕರುನಾಟ್'** ಎಂಬ ಶಬ್ದದಿಂದ ಕರ್ನಾಟಕ ಎಂದು ಕರೆದಿರುವುದು ತಿಳಿದುಬರುತ್ತದೆ. ಕರುನಾಟ್ ಎಂದರೆ ಉನ್ನತ ಅಥವಾ ಎತ್ತರದಲ್ಲಿರುವ ನಾಡು ಎಂದರ್ಥ. ಇದು ಹಿಂದೆ ಕಾವೇರಿ ನದಿಯಿಂದ ಗೋದಾವರಿ ನದಿಯವರೆಗೂ ಹಬ್ಬಿತ್ತೆಂದು ನೃಪತುಂಗನ ಆಸ್ಥಾನಿಕ ಕವಿ ಶ್ರೀವಿಜಯನ ಅಲಂಕಾರಗ್ರಂಥ ಕವಿರಾಜಮಾರ್ಗದಲ್ಲಿ ಉಲ್ಲೇಖಿಸಲಾಗಿದೆ. ಸ್ವಾತಂತ್ರ್ಯಾನಂತರ ಭಾರತವನ್ನು ಅನೇಕ ರಾಜ್ಯಗಳನ್ನಾಗಿ ವಿಂಗಡಿಸಲಾಯಿತು. ಮೈಸೂರು ಅರಸರ ಒಡೆತನದಲ್ಲಿದ್ದ ದಕ್ಷಿಣದ 9 ಜಿಲ್ಲೆಗಳನ್ನೊಳಗೊಂಡು 1947ರಲ್ಲಿ **'ಮೈಸೂರು ರಾಜ್ಯ'** ವು ಉದಯವಾಯಿತು. ಅನಂತರ ಭಾಷಾವಾರು ಪ್ರಾಂತ್ಯಗಳಾಗಿ ವಿಂಗಡಿಸುವಾಗ ಮುಂಬಯಿ ಹೈದರಾಬಾದ್, ಮದ್ರಾಸ್ ಹಾಗೂ ಕೊಡಗು ಪ್ರಾಂತ್ಯಗಳಲ್ಲಿ ಹಂಚಿಹೋಗಿದ್ದ ಕನ್ನಡ ಭಾಷೆ ಮಾತನಾಡುವ ಜನರ ಪ್ರದೇಶಗಳನ್ನು ಒಟ್ಟಾಗಿ ಸೇರಿಸಿದ್ದರಿಂದ 1956ರ ನವೆಂಬರ್ ಒಂದರಂದು **'ವಿಶಾಲ ಮೈಸೂರು ರಾಜ್ಯ'** ಅಸ್ತಿತ್ವಕ್ಕೆ ಬಂದಿತು. ಇದರ ಸವಿನೆನಪಿಗಾಗಿ ಪ್ರತಿವರ್ಷ ನವೆಂಬರ್ ತಿಂಗಳಿನಲ್ಲಿ ರಾಜ್ಯೋತ್ಸವವನ್ನು ಆಚರಿಸಲಾಗುತ್ತಿದೆ. ಕನ್ನಡಿಗರ ಅಭಿಲಾಷೆಯಂತೆ 1973 ನವೆಂಬರ್ ಒಂದರಂದು ನಮ್ಮ ರಾಜ್ಯಕ್ಕೆ **'ಕರ್ನಾಟಕ'** ಎಂದು ಮರುನಾಮಕರಣ ಮಾಡಲಾಯಿತು.

### ಭೌಗೋಳಿಕ ಸ್ಥಾನ


ಭಾರತದ 29 ರಾಜ್ಯಗಳಲ್ಲಿ ಕರ್ನಾಟಕವೂ ಒಂದಾಗಿದೆ. ಇದು ಭಾರತದ ದಕ್ಷಿಣದಲ್ಲಿದ್ದು, ಪರ್ಯಾಯ ದ್ವೀಪದ ಪಶ್ಚಿಮ ಮಧ್ಯಭಾಗದಲ್ಲಿದೆ. ಇದು $11^0–31^I$ ಮತ್ತು $18^0–45^I$ ಉತ್ತರ ಅಕ್ಷಾಂಶಗಳು ಹಾಗೂ $74^0–12^I$ ಮತ್ತು $78^0–40^I$, ಪೂರ್ವ ರೇಖಾಂಶಗಳ ನಡುವೆ ವಿಸ್ತರಿಸಿದೆ. ಅತ್ಯಂತ ಉತ್ತರದ ತುದಿಯಾದ



©KTBS Not to be republished

ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನಿಂದ ದಕ್ಷಿಣದ ತುದಿಯಾದ ಚಾಮರಾಜನಗರ ಜಿಲ್ಲೆಯವರೆಗೆ ಒಟ್ಟು 750 ಕಿ.ಮೀ. ಉದ್ದವಿದೆ. ಪಶ್ಚಿಮದಿಂದ ಪೂರ್ವಕ್ಕೆ 400 ಕಿ.ಮೀ.ಗಳಷ್ಟು ಅಗಲವಾಗಿದೆ. ಉತ್ತರ ಕನ್ನಡ ಜಿಲ್ಲೆಯ ಕಾರವಾರವು ಅತ್ಯಂತ ಪಶ್ಚಿಮದಲ್ಲಿದ್ದು, ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕು ಪೂರ್ವ ತುದಿಯಲ್ಲಿದೆ. ಕರ್ನಾಟಕ ರಾಜ್ಯವು ಭೂ ಮತ್ತು ಜಲ ಮೇರೆಗಳೆರಡನ್ನೂ ಸಹ ಒಳಗೊಂಡಿರುವುದು.


ಪಶ್ಚಿಮಕ್ಕೆ ಅರಬ್ಬೀ ಸಮುದ್ರವಿದ್ದು, ಉತ್ತರಕ್ಕೆ ಮಹಾರಾಷ್ಟ್ರ, ಪೂರ್ವಕ್ಕೆ ಆಂಧ್ರಪ್ರದೇಶ, ದಕ್ಷಿಣ ಮತ್ತು ಆಗ್ನೇಯಕ್ಕೆ ತಮಿಳುನಾಡು, ನೈಋತ್ಯಕ್ಕೆ ಕೇರಳ, ವಾಯವ್ಯಕ್ಕೆ ಗೋವಾ ರಾಜ್ಯಗಳು ಮೇರೆಗಳಾಗಿವೆ. ಆಕಾರದಲ್ಲಿ ಕರ್ನಾಟಕವು ಗೋಡಂಬಿಯನ್ನು ಹೋಲುತ್ತದೆ.




Not to be republished ©KTBS

## ವಿಸ್ತೀರ್ಣ

ಕರ್ನಾಟಕ ರಾಜ್ಯವು 1,91,791 ಚದರ ಕಿ.ಮೀ. ವಿಸ್ತಾರವಾಗಿದೆ. ವಿಸ್ತೀರ್ಣದಲ್ಲಿ ಭಾರತದ ಎಂಟನೆಯ ದೊಡ್ಡ ರಾಜ್ಯ ಹಾಗೂ 2011 ರ ಜನಗಣತಿಯ ಪ್ರಕಾರ 6,11,30,704 ಜನಸಂಖ್ಯೆಯನ್ನು ಹೊಂದಿದ್ದು, ಜನಸಂಖ್ಯೆಯಲ್ಲಿ ಒಂಭತ್ತನೆಯ ಸ್ಥಾನವನ್ನು ಹೊಂದಿದೆ. ಭಾರತದ ಒಟ್ಟು ಭೌಗೋಳಿಕ ವಿಸ್ತೀರ್ಣದಲ್ಲಿ ಕರ್ನಾಟಕದ ವಿಸ್ತೀರ್ಣವು ಶೇ. 5.83 ಭಾಗದಷ್ಟಿದೆ.




ಕರ್ನಾಟಕದ ಜಿಲ್ಲೆ ಮತ್ತು ಜಿಲ್ಲಾ ಕೇಂದ್ರಗಳು

©KTBS Not to be republished

2011ರಲ್ಲಿದ್ದಂತೆ ನಮ್ಮ ರಾಜ್ಯದಲ್ಲಿ 30 ಜಿಲ್ಲೆಗಳಿವೆ. ಈ ಜಿಲ್ಲೆಗಳಲ್ಲಿ ಒಟ್ಟು 176 ತಾಲ್ಲೂಕುಗಳು, 769 ಹೋಬಳಿಗಳು, 347 ಪಟ್ಟಣ–ನಗರಗಳು, 29,340 ಹಳ್ಳಿಗಳಿವೆ. ಬೆಳಗಾವಿ ಜಿಲ್ಲೆ ವಿಸ್ತೀರ್ಣದಲ್ಲಿ ಅತಿ ದೊಡ್ಡದು

ಹಾಗೂ ಬೆಂಗಳೂರು ನಗರ ಅತಿ ಚಿಕ್ಕ ಜಿಲ್ಲೆಯಾಗಿದೆ. ಬೆಂಗಳೂರು ಕರ್ನಾಟಕದ ರಾಜಧಾನಿ. ಆಡಳಿತ ನಿರ್ವಹಣೆಯ ದೃಷ್ಟಿಯಿಂದ ಕರ್ನಾಟಕವನ್ನು ನಾಲ್ಕು ವಿಭಾಗಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ; ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಕಲಬುರಗಿ ವಿಭಾಗಗಳು.

**ನಿಮಗಿದು ತಿಳಿದಿರಲಿ:**
ಕೇಂದ್ರ ಸರ್ಕಾರದ ವಿಶೇಷ ಸ್ಥಾನ ಪಡೆದಿರುವ ಹೈದರಾಬಾದ್ ಕರ್ನಾಟಕದ ಜಿಲ್ಲೆಗಳು–ಬೀದರ್, ರಾಯಚೂರು, ಕಲಬುರಗಿ, ಕೊಪ್ಪಳ, ಯಾದಗಿರಿ ಮತ್ತು ಬಳ್ಳಾರಿ.

## ಅಭ್ಯಾಸಗಳು

**I. ಬಿಟ್ಟಿರುವ ಸ್ಥಳಗಳನ್ನು ಸೂಕ್ತವಾದ ಪದಗಳಿಂದ ಭರ್ತಿಮಾಡಿರಿ :**

1. ಕನ್ನಡ ರಾಜ್ಯೋತ್ಸವವನ್ನು ಪ್ರತಿವರ್ಷ ______ ದಿನಾಂಕದಂದು ಆಚರಿಸಲಾಗುತ್ತದೆ.
2. ಕರ್ನಾಟಕ ಎಂದು ಮರುನಾಮಕರಣ ಮಾಡಿದ ವರ್ಷ ______.
3. ಕರ್ನಾಟಕದ ಪೂರ್ವಭಾಗದಲ್ಲಿ ______ ಮತ್ತು ______ ರಾಜ್ಯಗಳಿವೆ.
4. ಕರ್ನಾಟಕದ ______ ಜಿಲ್ಲೆಯು ವಿಸ್ತೀರ್ಣದಲ್ಲಿ ದೊಡ್ಡದಾಗಿದೆ.
5. ಕರ್ನಾಟಕವು ಭಾರತದ ______ ಭಾಗದಲ್ಲಿದೆ.

**II. ಗುಂಪುಗಳಲ್ಲಿ ಚರ್ಚಿಸಿ ಮತ್ತು ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ.**

1. ಕರ್ನಾಟಕದ ಅಕ್ಷಾಂಶ ಮತ್ತು ರೇಖಾಂಶಗಳ ವಿಸ್ತರಣೆಯನ್ನು ಬರೆಯಿರಿ.
2. ನಮ್ಮ ನೆರೆಯ ರಾಜ್ಯಗಳನ್ನು ಹೆಸರಿಸಿ.
3. ಕರ್ನಾಟಕದ ನಾಲ್ಕು ಆಡಳಿತ ವಿಭಾಗಗಳಾವುವು?
4. ಭಾರತದಲ್ಲಿ ಕರ್ನಾಟಕದ ಭೌಗೋಳಿಕ ಸ್ಥಾನವನ್ನು ತಿಳಿಸಿ.

**III. ಚಟುವಟಿಕೆಗಳು :**

1. ಕರ್ನಾಟಕದ ರೇಖಾನಕ್ಷೆಯನ್ನು ರಚಿಸಿ ಅದರಲ್ಲಿ ಜಿಲ್ಲೆಗಳನ್ನು ಗುರುತಿಸಿ, ಹೆಸರಿಸಿ ಹಾಗೂ ಅಕ್ಷಾಂಶ ಮತ್ತು ರೇಖಾಂಶಿಕ ಸ್ಥಾನವನ್ನು ತಿಳಿಸಿ.

**IV. ಯೋಜನಾ ಕಾರ್ಯ :**

1. ನಿಮ್ಮ ಜಿಲ್ಲೆ / ನಗರದ ನಕ್ಷೆಯನ್ನು ತಯಾರಿಸಿ, ಅದರಲ್ಲಿ ಅಕ್ಷಾಂಶ ಮತ್ತು ರೇಖಾಂಶಗಳ ಸ್ಥಾನ, ನೆರೆಯ ಜಿಲ್ಲೆ ಅಥವಾ ಇತರೆ ಪ್ರದೇಶಗಳನ್ನು ನಿಮ್ಮ ಬೋಧಕರ ನೆರವಿನಿಂದ ತಯಾರಿಸಿ.

◈ ◈ ◈

©KTBS
Not to be republished

## ಅಧ್ಯಾಯ – 2

# ಕರ್ನಾಟಕದ ಪ್ರಾಕೃತಿಕ ವಿಭಾಗಗಳು

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- *ಕರ್ನಾಟಕದ ಪ್ರಾಕೃತಿಕ ಲಕ್ಷಣಗಳು.*
- *ಕರ್ನಾಟಕದ ಪ್ರಾಕೃತಿಕ ವಿಭಾಗಗಳು.*
- *ನಮ್ಮ ರಾಜ್ಯದ ಬೆಟ್ಟಗಳು, ಎತ್ತರವಾದ ಶಿಖರಗಳು.*

**ಪೀಠಿಕೆ :** ಕರ್ನಾಟಕ ರಾಜ್ಯವು ಭಾರತದ ಪರ್ಯಾಯ ದ್ವೀಪದ ಒಂದು ಭಾಗವಾಗಿದ್ದು, ವೈವಿಧ್ಯಮಯ ಪ್ರಾಕೃತಿಕ ಲಕ್ಷಣಗಳನ್ನು ಹೊಂದಿದೆ. ಇದರ ದಕ್ಷಿಣ ಭಾಗವು ಏರು–ತಗ್ಗುಗಳುಳ್ಳ ಭೂಸ್ವರೂಪಗಳನ್ನು ಹೊಂದಿದ್ದರೆ ಉತ್ತರ ಭಾಗವು ವಿಶಾಲವಾದ ಬಯಲು ಸೀಮೆಯಾಗಿದೆ. ಕರಾವಳಿ ಮತ್ತು ಮಲೆನಾಡುಗಳಲ್ಲಿ ವಿರುದ್ಧ ಸ್ವರೂಪಗಳಿವೆ. ಪೂರ್ವದ ಕಡೆಗೆ ಸಾಧಾರಣ ಇಳಿಜಾರು ಮತ್ತು ಪಶ್ಚಿಮಕ್ಕೆ ಕಡಿದಾದ ಇಳಿಜಾರಾಗಿದೆ. ಅಲ್ಲಲ್ಲಿ ಬೆಟ್ಟಗಳ ಸಾಲುಗಳಿದ್ದು, ನಡುವೆ ಕಣಿವೆ ಕಂದರಗಳು ಕಂಡುಬರುವವು. ರಾಜ್ಯದ ಬಹಳಷ್ಟು ಭಾಗವು ಸಮುದ್ರಮಟ್ಟಕ್ಕೆ 450 ರಿಂದ 900 ಮೀಟರ್ ಎತ್ತರದಲ್ಲಿದೆ. ಕೆಲವು ಭಾಗಗಳಲ್ಲಿ 1800 ಮೀಟರ್‌ಗಳಿಗೂ ಹೆಚ್ಚು ಎತ್ತರದ ಭಾಗಗಳಿವೆ.

ಭೂರಚನೆ ಮತ್ತು ಮೇಲ್ಮೈ ಲಕ್ಷಣಗಳನ್ನಾಧರಿಸಿ ಕರ್ನಾಟಕವನ್ನು ಮೂರು ಪ್ರಮುಖ ಪ್ರಾಕೃತಿಕ ವಿಭಾಗಗಳಾಗಿ ವಿಂಗಡಿಸಲಾಗಿದೆ : (1) ಕರಾವಳಿ ಮೈದಾನ (2) ಮಲೆನಾಡು (3) ಮೈದಾನ ಪ್ರದೇಶ.

### 1. ಕರಾವಳಿ ಮೈದಾನ

ಭಾಷಾವಾರು ಪ್ರಾಂತ್ಯಗಳ ವಿಂಗಡಣೆಯ ಫಲವಾಗಿ ಕರ್ನಾಟಕ ರಾಜ್ಯಕ್ಕೆ ಸಮುದ್ರ ತೀರ ಹಾಗೂ ಕರಾವಳಿ ಮೈದಾನ ಲಭ್ಯವಾಯಿತು. ಈ ಪ್ರಾಕೃತಿಕ ವಿಭಾಗವು ಅರಬ್ಬೀ ಸಮುದ್ರ ಮತ್ತು ಮಲೆನಾಡುಗಳ ಮಧ್ಯೆ ವಿಸ್ತರಿಸಿದೆ. ಇದು ದಕ್ಷಿಣದಲ್ಲಿ ಮಂಗಳೂರಿನಿಂದ ಉತ್ತರದಲ್ಲಿ ಕಾರವಾರದವರೆಗೆ 320 ಕಿ.ಮೀ. ಉದ್ದವಿದೆ ಹಾಗೂ 12 ರಿಂದ 64 ಕಿ.ಮೀ. ಅಗಲವಾಗಿದೆ. ದಕ್ಷಿಣದಲ್ಲಿ ಅಗಲವಾಗಿದ್ದು ಉತ್ತರದ ಕಡೆಗೆ ಕಿರಿದಾಗುತ್ತಾ ಕಡಿದಾದ ಇಳಿಜಾರಿನಿಂದ ಕೂಡಿದೆ. ಇದರ ಎತ್ತರ ಸಮುದ್ರ ಮಟ್ಟದಿಂದ 200 ಮೀಟರ್‌ಗಳನ್ನು ಮೀರುತ್ತದೆ. ಇದನ್ನು 'ಕೆನರಾ ಅಥವಾ ಕರ್ನಾಟಕ ಕರಾವಳಿ' ಎಂದೇ ಕರೆಯುವರು. ಕಡಲ ಕೊರೆತದಿಂದ ರಚಿತವಾದ ಈ ಕರಾವಳಿಯ ಮೂಲಕ ಹಲವು ನದಿಗಳು ರಭಸದಿಂದ ಹರಿಯುತ್ತವೆ. ಅವು ಅಳಿವೆಗಳನ್ನು ನಿರ್ಮಿಸುತ್ತವೆ. ಆದರೆ ಅವು ವಿಶಾಲ ನದಿಮುಖಜ ಭೂಮಿಯನ್ನು ನಿರ್ಮಿಸಲಾರವು.

ಕರಾವಳಿಯ ಉದ್ದಕ್ಕೂ ಅನೇಕ ಬಂದರುಗಳಿವೆ. ಅವುಗಳಲ್ಲಿ 'ನವ ಮಂಗಳೂರು' ಬಂದರು ಕರ್ನಾಟಕದ ಅತಿ ದೊಡ್ಡ ಬಂದರಾಗಿದೆ. ಭಟ್ಕಳ, ಮಲ್ಪೆ, ಕಾರವಾರ, ಕುಮಟ, ಬೇಲೆಕೇರಿ ಮತ್ತು ಹೊನ್ನಾವರಗಳು ಮೀನುಗಾರಿಕಾ ಬಂದರುಗಳು. ಇಲ್ಲಿನ ಅನೇಕ ಸುಂದರ ಸಮುದ್ರ ತೀರಗಳು ಪ್ರವಾಸಿಗರನ್ನು ಆಕರ್ಷಿಸುತ್ತವೆ. ಮಂಗಳೂರು ಸಮೀಪದ ಸೋಮೇಶ್ವರ, ಉಳ್ಳಾಲ, ಪಣಂಬೂರು, ಉಡುಪಿ ಸಮೀಪದ ಮಲ್ಪೆ, ಕಾರವಾರ, ಹೊನ್ನಾವರ ಸಮೀಪದ ಮುರ್ಡೇಶ್ವರ, ಮರವಂತೆ ಮತ್ತು ಗೋಕರ್ಣ ಸಮೀಪದ ಓಂ ಬೀಚ್ ಪ್ರಮುಖವಾಗಿವೆ. ಕರಾವಳಿಯ ಸಮೀಪ ಅನೇಕ ಸಣ್ಣ ಸಣ್ಣ ದ್ವೀಪಗಳಿವೆ. ಅವುಗಳಲ್ಲಿ ಮಲ್ಪೆಗೆ ಸಮೀಪದಲ್ಲಿರುವ ಸೇಂಟ್ ಮೇರೀಸ್ ದ್ವೀಪ (ಕೋಕೋನಟ್ ದ್ವೀಪ) ಕಾರವಾರ ಸಮೀಪದ ಅಂಜ ದ್ವೀಪ, ದೇವಗಡ, ಕಾಂಜಿಗುಡ್ಡ ದ್ವೀಪ ಮುಂತಾದುವು. ಕರಾವಳಿಯ ಜನರ ಮುಖ್ಯ ವೃತ್ತಿ ಮೀನುಗಾರಿಕೆ.


©KTBS Not to be republished

ಜೊತೆಗೆ ಕೃಷಿಯೂ ಸಹ ಮತ್ತೊಂದು ಪ್ರಮುಖ ವೃತ್ತಿಯಾಗಿದೆ. ಇಲ್ಲಿ ಗೋಡಂಬಿ, ತೆಂಗು, ಅಡಕೆ, ಏಲಕ್ಕಿ, ಭತ್ತ ಮೊದಲಾದ ಬೆಳೆಗಳನ್ನು ಬೆಳೆಯುವರು. ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳು ಕರಾವಳಿಯ ಜಿಲ್ಲೆಗಳಾಗಿವೆ.

## 2. ಮಲೆನಾಡು ಪ್ರದೇಶ

> **ನಿಮಗಿದು ತಿಳಿದಿರಲಿ :**
> - ಕರ್ನಾಟಕದ ಹೆಬ್ಬಾಗಿಲು – ನವ ಮಂಗಳೂರು ಬಂದರು.
> - ಸೇಂಟ್ ಮೇರೀಸ್ ದ್ವೀಪವನ್ನು ಸ್ಥಳೀಯವಾಗಿ 'ತೋನ್ಸೆಪಾರ್' ಎಂದು ಕರೆಯುವರು.
> - ಮುರ್ಡೇಶ್ವರದ ಸಮೀಪ 'ನೇತ್ರಾಣಿ' ದ್ವೀಪವಿದೆ. ಇಲ್ಲಿ ಪಾರಿವಾಳಗಳು ಅಧಿಕವಾಗಿರುವುದರಿಂದ ಇದನ್ನು 'ಪಿಜಿನ್ ಐಲ್ಯಾಂಡ್' ಎಂದು ಕರೆಯುತ್ತಾರೆ.

ನಮ್ಮ ರಾಜ್ಯದ ಪಶ್ಚಿಮ ಘಟ್ಟಗಳನ್ನೇ ಮಲೆನಾಡು ಎನ್ನುವರು. ಇದನ್ನೇ 'ಸಹ್ಯಾದ್ರಿ ಬೆಟ್ಟ'ಗಳೆಂತಲೂ ಕರೆಯುವರು. ಮಲೆನಾಡು ಕರಾವಳಿಗೆ ಸಮಾನಾಂತರವಾಗಿ ಹಬ್ಬಿವೆ. ಪಶ್ಚಿಮ ಭಾಗವು ಕಡಿದಾದ ಇಳಿಜಾರನ್ನು ಹೊಂದಿದ್ದು, ಪೂರ್ವದ ಕಡೆಗೆ ಹೋದಂತೆ ನಿಧಾನವಾಗಿ ಹಂತ ಹಂತವಾಗಿ ಇಳಿಜಾರಾಗುತ್ತಾ ಹೋಗುತ್ತದೆ. ಆದ್ದರಿಂದಲೇ ಇದನ್ನು ಘಟ್ಟಗಳೆಂದು ಕರೆಯುತ್ತಾರೆ. ಇದರ ಉದ್ದ 650 ಕಿ.ಮೀ. ಅಗಲ 50–76 ಕಿ.ಮೀ.ಗಳು. ಸರಾಸರಿ ಎತ್ತರವು ಸಮುದ್ರ ಮಟ್ಟಕ್ಕೆ 900 ರಿಂದ 1500 ಮೀ.ಗಳು. ಇದು ಅರಬ್ಬೀ ಸಮುದ್ರದಿಂದ ಬೀಸುವ ಮಳೆ ಮಾರುತಗಳನ್ನು ತಡೆದು 200 ಸೆಂ.ಮೀ.ಗಿಂತ ಹೆಚ್ಚು ಮಳೆ ಪಡೆಯುತ್ತದೆ. ಇಲ್ಲಿನ ಅತಿ ಎತ್ತರವಾದ ಶಿಖರಗಳೆಂದರೆ ಮುಳ್ಳಯ್ಯನ ಗಿರಿ, ಕುದುರೆಮುಖ, ಕಲ್ಹತ್ತಗಿರಿ, ರುದ್ರಗಿರಿ ಹಾಗೂ ದೇವೀರಮ್ಮನ ಬೆಟ್ಟ. ಇವು ಚಿಕ್ಕಮಗಳೂರು ಜಿಲ್ಲೆಯಲ್ಲಿವೆ. ಇದಲ್ಲದೆ ಬಲ್ಲಾಳರಾಯನದುರ್ಗ, ಮೆರ್ತಿಗುಡ್ಡ, ಪುಷ್ಪಗಿರಿ, ಕೊಡಚಾದ್ರಿ ಪಶ್ಚಿಮ ಘಟ್ಟದ ಇತರ ಉನ್ನತ ಶಿಖರಗಳಾಗಿವೆ. ಇವುಗಳಲ್ಲಿ ಮುಳ್ಳಯ್ಯನಗಿರಿಯು (1913 ಮೀ)ರಾಜ್ಯದಲ್ಲೇ ಎತ್ತರವಾದುದು.




ಕರ್ನಾಟಕದ ಪೂರ್ವದ ಮೈದಾನದಿಂದ ಪಶ್ಚಿಮ ಘಟ್ಟಗಳನ್ನು ದಾಟಿ ಕರಾವಳಿ ಮೈದಾನಕ್ಕೆ ಹೋಗುವ ಮಾರ್ಗವನ್ನು ಪರ್ವತ ಘಾಟಿ ಅಥವಾ ಘಟ್ಟ ಮಾರ್ಗಗಳೆನ್ನುವರು. ಪ್ರಮುಖ ಘಟ್ಟ ಮಾರ್ಗಗಳೆಂದರೆ :

1. **ಚಾರ್ಮಾಡಿ ಘಾಟಿ :** ಮಂಗಳೂರು ಮತ್ತು ಚಿಕ್ಕಮಗಳೂರುಗಳ ನಡುವೆ ಸಂಪರ್ಕ ಕಲ್ಪಿಸುತ್ತದೆ.

2. **ಶಿರಾಡಿ ಘಾಟಿ :** ಹಾಸನ – ಸಕಲೇಶಪುರ – ಮಂಗಳೂರುಗಳ ನಡುವೆ ಸಂಪರ್ಕ ಕಲ್ಪಿಸುತ್ತದೆ.

3. **ಆಗುಂಬೆ ಘಾಟಿ :** ಶಿವಮೊಗ್ಗ ಮತ್ತು ಉಡುಪಿಯ ನಡುವೆ ಸಂಪರ್ಕ ಕಲ್ಪಿಸುತ್ತದೆ.

4. **ಹುಲಿಕಲ್ ಘಾಟಿ :** ಶಿವಮೊಗ್ಗ – ಕುಂದಾಪುರ ನಡುವೆ ಸಂಪರ್ಕ ಕಲ್ಪಿಸುತ್ತದೆ.

©KTBS Not to be republished

ಮಲೆನಾಡು ಅಧಿಕ ಮಳೆಯನ್ನು ಪಡೆಯುವುದರಿಂದ ನಿತ್ಯಹರಿದ್ವರ್ಣದ ಅರಣ್ಯಗಳಿಂದ ಕೂಡಿದ ಮನೋಹರ ತಾಣಗಳನ್ನು ಹೊಂದಿದೆ. ಇದು ಕರ್ನಾಟಕದ ಹಲವು ನದಿಗಳ ಉಗಮಸ್ಥಾನವಾಗಿದ್ದು, ಇಲ್ಲಿಂದ ಕಡಿದಾದ ಇಳಿಜಾರಿನಲ್ಲಿ ರಭಸದಿಂದ ಹರಿಯುತ್ತಾ ಅನೇಕ ಜಲಪಾತಗಳನ್ನು ನಿರ್ಮಿಸಿವೆ. ಅವುಗಳಲ್ಲಿ ಭಾರತದಲ್ಲೇ ಎತ್ತರವಾದ ಜೋಗ್ ಜಲಪಾತ (ಶರಾವತಿ ನದಿ) ಸೇರಿದಂತೆ ಉಂಚಳ್ಳಿ, ಮಾಗೋಡು, ಗೋಕಾಕ್, ಶಿವನಸಮುದ್ರ, ಅಬ್ಬಿ ಜಲಪಾತಗಳು ಪ್ರಮುಖವಾಗಿವೆ. ಜೊತೆಗೆ ಕಣಿವೆ ಮತ್ತು ಕಂದರಗಳನ್ನೂ ನಿರ್ಮಿಸಿವೆ. ಇಲ್ಲಿ ಕಾಫಿ, ಚಹ, ರಬ್ಬರ್ ಮತ್ತು ಸಾಂಬಾರ ಪದಾರ್ಥಗಳನ್ನು ಹೇರಳವಾಗಿ ಬೆಳೆಯಲಾಗುತ್ತದೆ. ಅಧಿಕ ಕಾಫಿ ಬೆಳೆಯುವುದರಿಂದ ಚಿಕ್ಕಮಗಳೂರನ್ನು 'ಕಾಫಿನಾಡು' ಎನ್ನುವರು. ಕೊಡಗು ಜಿಲ್ಲೆಯಲ್ಲಿ ತಂಪಾದ ವಾತಾವರಣವಿರುವುದರಿಂದ 'ಕರ್ನಾಟಕದ ಕಾಶ್ಮೀರ' ಎಂದು ಕರೆಯುವರು ಹಾಗೂ ಇಲ್ಲಿ ಕಿತ್ತಳೆ ಹಣ್ಣನ್ನು ಹೆಚ್ಚಾಗಿ ಬೆಳೆಯುವುದರಿಂದ 'ಕಿತ್ತಳೆನಾಡು' ಎಂದೂ ಕರೆಯುವರು. ಇಂದು ಮಲೆನಾಡು ಪ್ರದೇಶವನ್ನು 'ಜೀವಿವೈವಿಧ್ಯತಾ ವಲಯ' ಎಂದು ಗುರುತಿಸಿ ರಕ್ಷಿಸಲಾಗುತ್ತಿದೆ. ಹಾಸನ, ಕೊಡಗು, ಶಿವಮೊಗ್ಗ ಮತ್ತು ಚಿಕ್ಕಮಗಳೂರು ಮಲೆನಾಡು ಜಿಲ್ಲೆಗಳಾಗಿವೆ.

**ನಿಮಗಿದು ತಿಳಿದಿರಲಿ:**
ಬಾಬಾಬುಡನ್‌ಗಿರಿಯ ಮತ್ತೊಂದು ಹೆಸರು ಚಂದ್ರದ್ರೋಣ ಪರ್ವತ.

## 3. ಮೈದಾನ ಪ್ರದೇಶ

ಮಲೆನಾಡಿನ ಪೂರ್ವದಿಕ್ಕಿನಲ್ಲಿ ವಿಶಾಲ ಮೈದಾನವಿದ್ದು, ಸರಾಸರಿ 450 ರಿಂದ 760 ಮೀ. ಎತ್ತರದಲ್ಲಿದೆ. ಇದು ಕೃಷ್ಣ, ತುಂಗಭದ್ರಾ ಮತ್ತು ಕಾವೇರಿ ಜಲಾನಯನ ಪ್ರದೇಶಗಳನ್ನು ಹೊಂದಿದ್ದು, ಇಲ್ಲಿ ಅನೇಕ ಕಡೆ ಬೆಟ್ಟಗುಡ್ಡಗಳ ಸಾಲುಗಳು ಕಂಡುಬರುತ್ತವೆ. ಇದು ಪೂರ್ವದ ಕಡೆಗೆ ಇಳಿಜಾರನ್ನು ಹೊಂದಿದೆ. ಉತ್ತರದಿಂದ ದಕ್ಷಿಣಕ್ಕೆ ಎತ್ತರ ಹೆಚ್ಚಾಗುತ್ತದೆ. ಇದನ್ನು ಎರಡು ಭಾಗಗಳನ್ನಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ ; (i) ಉತ್ತರದ ಮೈದಾನ ಮತ್ತು (ii) ದಕ್ಷಿಣದ ಮೈದಾನಗಳು.

**ಚಟುವಟಿಕೆ**
ನಿಮ್ಮ ಜಿಲ್ಲೆ ಯಾವ ಪ್ರಾಕೃತಿಕ ವಿಭಾಗದಲ್ಲಿ ಬರುತ್ತದೆ ? ನಿಮ್ಮ ಜಿಲ್ಲೆಯ ನೆರೆ ಜಿಲ್ಲೆಗಳನ್ನು ಹೆಸರಿಸಿ ಮತ್ತು ವಿಶೇಷ ಲಕ್ಷಣಗಳ ಪಟ್ಟಿ ಮಾಡಿ.

**(i) ಉತ್ತರದ ಮೈದಾನ :** ಇದು ಕಪ್ಪುಮಣ್ಣಿನಿಂದ ಕೂಡಿದ ಬಯಲು ಪ್ರದೇಶ ಮತ್ತು ವಿಸ್ತಾರವಾದ ಪ್ರಸ್ಥಭೂಮಿಯಾಗಿದೆ. ಸಮುದ್ರಮಟ್ಟದಿಂದ ಸರಾಸರಿ 365 ರಿಂದ 610 ಮೀ.ಗಳಷ್ಟು ಎತ್ತರವಾಗಿದೆ. ಅಲ್ಲಲ್ಲಿ ಬೆಟ್ಟಗುಡ್ಡಗಳು ಕಂಡುಬರುತ್ತವೆ. ಅವುಗಳಲ್ಲಿ ನರಗುಂದ ಬೆಟ್ಟ, ಪರಸಗಡ ಗುಡ್ಡ , ಇಳಕಲ್ ಗುಡ್ಡ ಪ್ರಮುಖವಾಗಿವೆ. ಸವದತ್ತಿ ಮತ್ತು ಬಾದಾಮಿಯ ಪೂರ್ವದಲ್ಲಿ ಸುಣ್ಣಕಲ್ಲಿನ ಕೆಲವು ಭಾಗಗಳು ಸ್ತರಭಂಗದಿಂದ ಕೂಡಿದ್ದು ಹೆಚ್ಚು ಏರಿಳಿತದ ಭೂಸ್ವರೂಪಕ್ಕೆ ಕಾರಣವಾಗಿವೆ. ಸುಮಾರು 62 ಮೀ. ಎತ್ತರದಿಂದ ಧುಮುಕುವ ಘಟಪ್ರಭಾ ನದಿಯ ಗೋಕಾಕ್ ಜಲಪಾತ ಇಲ್ಲಿ ಪ್ರಸಿದ್ಧವಾಗಿದೆ. ಇದಲ್ಲದೆ ಛಾಯ ಭಗವತಿ ಹಾಗೂ ಸೊಗಲ ಜಲಪಾತಗಳು ಉತ್ತರದ ಮೈದಾನದಲ್ಲಿವೆ. ಬೀದರ್, ವಿಜಯಪುರ, ಕಲಬುರಗಿ, ಯಾದಗಿರಿ, ಗದಗ, ಕೊಪ್ಪಳ, ರಾಯಚೂರು, ಬಳ್ಳಾರಿ, ಹಾವೇರಿ, ಬಾಗಲಕೋಟೆ ಜಿಲ್ಲೆಗಳು ಹಾಗೂ ಧಾರವಾಡ ಮತ್ತು ಬೆಳಗಾವಿಯ ಕೆಲಭಾಗಗಳು ಉತ್ತರದ ಮೈದಾನದಲ್ಲಿವೆ. ಬೇಸಿಗೆಯಲ್ಲಿ ಅಧಿಕ ಉಷ್ಣಾಂಶವಿರುವುದರಿಂದ ಇದನ್ನು 'ಬಿಸಿಲ ನಾಡು' ಎನ್ನುವರು ಈ ಭಾಗದಲ್ಲಿ ಒಣ ಬೇಸಾಯದ ಬೆಳೆಗಳಾದ ಜೋಳ, ಸಜ್ಜೆ, ಶೇಂಗಾ, ಹತ್ತಿ ಮತ್ತು ಬೇಳೆಕಾಳು ಬೆಳೆಗಳನ್ನು ಬೆಳೆಯಲಾಗುತ್ತದೆ.

**(ii) ದಕ್ಷಿಣದ ಮೈದಾನ :** ಇದು ಉತ್ತರದಲ್ಲಿ ತುಂಗಭದ್ರಾ ನದಿ ಪಾತ್ರದಿಂದ ದಕ್ಷಿಣದ ಚಾಮರಾಜನಗರ ಜಿಲ್ಲೆಯವರೆಗೂ ಹಬ್ಬಿದೆ. ಇದು ಬಹಳಷ್ಟು ಕೆಂಪುಮಣ್ಣಿನಿಂದ ಕೂಡಿರುವ ಪ್ರಸ್ಥಭೂಮಿ. ಈ ಪ್ರದೇಶವು ಏರು ತಗ್ಗಿನಿಂದ ಕೂಡಿದ್ದು, 900–975 ಮೀ. ಎತ್ತರವುಳ್ಳದ್ದು. ಉತ್ತರ ಮೈದಾನಕ್ಕಿಂತ ಎತ್ತರವಾಗಿದ್ದು, ಪೂರ್ವದ ಕಡೆಗೆ ಇಳಿಜಾರಾಗಿದೆ. ಇದು ಅನೇಕ ಬೆಟ್ಟಗಳಿಂದ ಕೂಡಿದೆ.

©KTBS Not to be republished



ಮಧುಗಿರಿ ಏಕಶಿಲಾ ಬೆಟ್ಟ



ಮುಳ್ಳಯ್ಯನ ಗಿರಿ

ಅವುಗಳೆಂದರೆ ಚಿತ್ರದುರ್ಗದ ಬೆಟ್ಟಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಾರಾಯಣದುರ್ಗ, ಸಾವನದುರ್ಗ, ಶಿವಗಂಗೆ, ತುಮಕೂರು ಜಿಲ್ಲೆಯ ಮಧುಗಿರಿ ಬೆಟ್ಟ. ಇದು ಏಷ್ಯಾ ಖಂಡದಲ್ಲಿಯೇ ಅತಿದೊಡ್ಡ ಏಕಶಿಲಾ ಬೆಟ್ಟವಾಗಿದೆ. ಚಿಕ್ಕಬಳ್ಳಾಪುರ ಜಿಲ್ಲೆಯ ನಂದಿ ಗಿರಿಧಾಮ, ಚೆನ್ನಕೇಶವ ಬೆಟ್ಟ , ಕವಲೆದುರ್ಗ ಹಾಗೂ ಸ್ಕಂದಗಿರಿ (ಹರಿಹರೇಶ್ವರ ಬೆಟ್ಟ) ಮಂಡ್ಯ ಜಿಲ್ಲೆಯ ಆದಿಚುಂಚನಗಿರಿ ಬೆಟ್ಟ, ಚಾಮರಾಜನಗರ ಜಿಲ್ಲೆಯ ಬಿಳಿಗಿರಿ ರಂಗನ ಬೆಟ್ಟ, ಮಲೆಮಹದೇಶ್ವರ ಬೆಟ್ಟ, ಗೋಪಾಲಸ್ವಾಮಿ ಬೆಟ್ಟ, ಮೈಸೂರು ಜಿಲ್ಲೆಯ ಚಾಮುಂಡಿ ಬೆಟ್ಟ ಪ್ರಮುಖವಾದವು. ಈ ಪ್ರದೇಶವೂ ಮಳೆ ನೆರಳಿನ ಪ್ರದೇಶದ ಭಾಗವಾಗಿದೆ. ಕಾವೇರಿ, ಪಾಲಾರ್, ಪೆನ್ನಾರ್ ಇಲ್ಲಿ ಹರಿಯುತ್ತಿರುವ ಪ್ರಮುಖ ನದಿಗಳು. ರಾಗಿ, ಭತ್ತ, ಕಬ್ಬು, ಶೇಂಗಾ, ಹಿಪ್ಪುನೇರಳೆ, ತರಕಾರಿಗಳು, ಹಣ್ಣು, ಹೂವುಗಳು ಈ ಭಾಗದ ಪ್ರಮುಖ ಬೆಳೆಗಳಾಗಿವೆ. ದಾವಣಗೆರೆ, ಚಿತ್ರದುರ್ಗ, ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ, ಮಂಡ್ಯ, ಮೈಸೂರು, ಚಾಮರಾಜನಗರ ಜಿಲ್ಲೆಗಳು ದಕ್ಷಿಣದ ಮೈದಾನದಲ್ಲಿವೆ.

**ಚಟುವಟಿಕೆ**

ನಿಮ್ಮ ಜಿಲ್ಲೆಯ ಪ್ರಾಕೃತಿಕ ವೈವಿಧ್ಯತೆಯ ಬಗ್ಗೆ ಟಿಪ್ಪಣಿ ಬರೆಯಿರಿ.

## ಅಭ್ಯಾಸಗಳು

**I. ಬಿಟ್ಟಿರುವ ಸ್ಥಳಗಳನ್ನು ಸೂಕ್ತವಾದ ಪದಗಳಿಂದ ಭರ್ತಿಮಾಡಿರಿ.**

1. ಮಲ್ಪೆ ಸಮೀಪದಲ್ಲಿ ____________ ದ್ವೀಪವಿದೆ.
2. ಸಹ್ಯಾದ್ರಿ ಎಂದು ____________ ಗಳನ್ನು ಕರೆಯುತ್ತಾರೆ.
3. ಆಗುಂಬೆ ಘಾಟಿಯು ____________ ಮತ್ತು ____________ ಸ್ಥಳಗಳನ್ನು ಸಂಪರ್ಕಿಸುತ್ತದೆ.
4. ಕರ್ನಾಟಕದ ಕಾಶ್ಮೀರ ಎಂದು ____________ ಜಿಲ್ಲೆಯನ್ನು ಕರೆಯುತ್ತಾರೆ.

**II. ಗುಂಪುಗಳಲ್ಲಿ ಚರ್ಚಿಸಿ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

1. ಕರ್ನಾಟಕದ ಪ್ರಮುಖ ಪ್ರಾಕೃತಿಕ ವಿಭಾಗಗಳನ್ನು ತಿಳಿಸಿರಿ.
2. ಮಲೆನಾಡು ಪ್ರದೇಶದ ಲಕ್ಷಣಗಳನ್ನು ಕುರಿತು ಬರೆಯಿರಿ.
3. ಕರ್ನಾಟಕದ ಕರಾವಳಿ ಮೈದಾನಗಳ ಬಗ್ಗೆ ಬರೆಯಿರಿ.

Not to be republished ©KTBS

4. ದಕ್ಷಿಣ ಮೈದಾನದ ಪ್ರಮುಖ ಬೆಟ್ಟಗಳನ್ನು ಹೆಸರಿಸಿ.

5. ಪಶ್ಚಿಮ ಘಟ್ಟಗಳಲ್ಲಿರುವ ಪ್ರಮುಖ ಪರ್ವತ ಘಾಟಿಗಳಾವುವು ?

**III. ಹೊಂದಿಸಿ ಬರೆಯಿರಿ.**

| ಅ | ಆ |
|---|---|
| 1) ಜೋಗ್‌ಜಲಪಾತ | ಎ) ಮಂಗಳೂರು |
| 2) ಓಂ ಬೀಚ್ | ಬಿ) ಉತ್ತರದ ಮೈದಾನ |
| 3) ನಂದಿ ಗಿರಿಧಾಮ | ಸಿ) ಶರಾವತಿ ನದಿ |
| 4) ಏಕಶಿಲಾ ಬೆಟ್ಟ | ಡಿ) ಗೋಕರ್ಣ |
| 5) ಬಿಸಿಲನಾಡು | ಇ) ಚಿಕ್ಕಬಳ್ಳಾಪುರ |
| | ಎಫ್) ಮಧುಗಿರಿ ಬೆಟ್ಟ |

**IV. ಚಟುವಟಿಕೆ :**

1. ಮಲೆನಾಡು ಮತ್ತು ಕರಾವಳಿ ಜಿಲ್ಲೆಗಳನ್ನು ಕರ್ನಾಟಕದ ನಕ್ಷೆಯಲ್ಲಿ ಗುರುತಿಸಿ, ಹೆಸರಿಸಿ ಹಾಗೂ ಕರ್ನಾಟಕದ ಪ್ರಮುಖ ಜಲಪಾತಗಳ ಚಿತ್ರಗಳನ್ನು ಸಂಗ್ರಹಿಸಿರಿ.

**V. ಯೋಜನಾಕಾರ್ಯ :**

1. ಕರ್ನಾಟಕ ರಾಜ್ಯದಲ್ಲಿರುವ ಪ್ರಸಿದ್ಧ ಬೆಟ್ಟ ಮತ್ತು ಗಿರಿಧಾಮಗಳ ಬಗ್ಗೆ ಮಾಹಿತಿ ಪಡೆದು ಟಿಪ್ಪಣಿ ಬರೆಯರಿ.

2. ಕರ್ನಾಟಕದ ಜಲಪಾತಗಳನ್ನು ಪಟ್ಟಿಮಾಡಿ ಅವುಗಳ ಛಾಯಾಚಿತ್ರಗಳನ್ನು ಸಂಗ್ರಹಿಸಿ.

©KTBS Not to be republished

### ಅಧ್ಯಾಯ – 3

# ಕರ್ನಾಟಕದ ವಾಯುಗುಣ, ಮಣ್ಣುಗಳು, ಸ್ವಾಭಾವಿಕ ಸಸ್ಯವರ್ಗ ಹಾಗೂ ಪ್ರಾಣಿ ಸಂಪತ್ತು

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- *ಕರ್ನಾಟಕದಲ್ಲಿ ಕಂಡುಬರುವ ವಾಯುಗುಣದ ಪ್ರಮುಖ ಲಕ್ಷಣಗಳು.*
- *ಕರ್ನಾಟಕದಲ್ಲಿ ಋತುಮಾನಗಳ ವಾಯುಗುಣದ ಪರಿಸ್ಥಿತಿ.*
- *ಕರ್ನಾಟಕದ ಋತುಕಾಲಿಕ ಮಳೆಯ ಹಂಚಿಕೆ ಮತ್ತು ಪರಿಣಾಮಗಳು.*
- *ಕರ್ನಾಟಕದಲ್ಲಿನ ಮಣ್ಣಿನ ವಿಧಗಳು ಹಾಗೂ ಅವುಗಳ ಹಂಚಿಕೆ.*
- *ಕರ್ನಾಟಕದ ಸ್ವಾಭಾವಿಕ ಸಸ್ಯವರ್ಗ, ವಿಧಗಳು, ಹಂಚಿಕೆ ಮತ್ತು ಪ್ರಾಣಿಸಂಪತ್ತು.*

## ಕರ್ನಾಟಕದ ವಾಯುಗುಣ

ಕರ್ನಾಟಕದಲ್ಲಿ ಉಷ್ಣವಲಯದ ಮಾನ್ಸೂನ್ ವಾಯುಗುಣವಿದೆ. ಅತಿ ಶಾಖ ಮತ್ತು ತೇವಾಂಶವುಳ್ಳ ಬೇಸಿಗೆ ಹಾಗೂ ತಂಪಾದ ಮತ್ತು ಶುಷ್ಕ ಚಳಿಗಾಲ ಈ ವಾಯುಗುಣದ ಪ್ರಮುಖ ಲಕ್ಷಣ. ಆದರೂ ವಾಯುಗುಣದಲ್ಲಿ ವೈವಿಧ್ಯವಿದೆ. ಇದಕ್ಕೆ ಭೌಗೋಳಿಕ ಸ್ಥಾನ, ಸಮುದ್ರಸಾಮಿಪ್ಯ, ಭೂಸ್ವರೂಪ, ಸಸ್ಯವರ್ಗ ಹಾಗೂ ಮಾನ್ಸೂನ್ ಮಾರುತಗಳ ಪ್ರಭಾವವು ಮುಖ್ಯ ಕಾರಣ. ಹೀಗಾಗಿ ವಾರ್ಷಿಕ ಉಷ್ಣಾಂಶ ಮತ್ತು ಮಳೆಯ ಹಂಚಿಕೆ ರಾಜ್ಯಾದ್ಯಂತ ಒಂದೇ ರೀತಿಯಾಗಿರುವುದಿಲ್ಲ.

**ವಾಯುಗುಣದ ಋತುಗಳು :** ಭಾರತದಂತೆ ಕರ್ನಾಟಕದ ವಾರ್ಷಿಕ ವಾಯುಗುಣವನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿ ತಿಳಿಯಬಹುದು.


1) ಬೇಸಿಗೆ ಕಾಲ (ಮಾರ್ಚ್–ಮೇ)
2) ಮಳೆಗಾಲ (ಜೂನ್–ಸೆಪ್ಟೆಂಬರ್)
3) ಮಾನ್ಸೂನ್ ಮಾರುತಗಳ ನಿರ್ಗಮನ ಕಾಲ (ಅಕ್ಟೋಬರ್–ನವೆಂಬರ್)
4) ಚಳಿಗಾಲ (ಡಿಸೆಂಬರ್–ಫೆಬ್ರವರಿ)

**1. ಬೇಸಿಗೆ ಕಾಲ :** ಈ ಕಾಲದಲ್ಲಿ ವಾಯುಗುಣವು ಅತಿ ಶಾಖ, ಶುಷ್ಕ ಮತ್ತು ಸೆಖೆಯಿಂದ ಕೂಡಿರುತ್ತದೆ. ಮಾರ್ಚ್ ತಿಂಗಳ ನಂತರ ರಾಜ್ಯಾದ್ಯಂತ ಉಷ್ಣಾಂಶವು ಏಕಪ್ರಕಾರವಾಗಿ ಹೆಚ್ಚಾಗುತ್ತಾ ಏಪ್ರಿಲ್–ಮೇ ತಿಂಗಳುಗಳಲ್ಲಿ ಅದು ಗರಿಷ್ಠ ಮಟ್ಟವನ್ನು ತಲುಪುವುದು. ರಾಯಚೂರಿನಲ್ಲಿ ಸಾಮಾನ್ಯವಾಗಿ ಪ್ರತಿವರ್ಷ $45.6^0$ ಸೆ. ಉಷ್ಣಾಂಶ ದಾಖಲಾಗುವುದರಿಂದ ಅದು ನಮ್ಮ ರಾಜ್ಯದಲ್ಲೇ ಅತಿ ಹೆಚ್ಚು ಉಷ್ಣಾಂಶವನ್ನು ದಾಖಲಿಸುವ ಪ್ರದೇಶವಾಗಿದೆ. ಉತ್ತರ ಮೈದಾನದ ಇತರೆ ಜಿಲ್ಲೆಗಳಲ್ಲಿಯೂ ಉಷ್ಣಾಂಶ ಹೆಚ್ಚಾಗಿರುತ್ತದೆ. ಒಟ್ಟಿನಲ್ಲಿ ಈ ಅವಧಿಯಲ್ಲಿ ಇಡೀ ಕರ್ನಾಟಕವು ಅಧಿಕ ಶಾಖದಿಂದ ಕೂಡಿರುತ್ತದೆ. ಉತ್ತರದ ಮೈದಾನದಲ್ಲಿ ಆರ್ದ್ರತೆಯ ಪ್ರಮಾಣವು ದಕ್ಷಿಣದ ಮೈದಾನಕ್ಕಿಂತ ಕಡಿಮೆಯಿರುತ್ತದೆ. ಬೇಸಿಗೆಯಲ್ಲಿ ಅಧಿಕ ಬಾಷ್ಪೀಭವನದಿಂದ ಮಳೆ ಮೋಡಗಳು ನಿರ್ಮಾಣವಾಗಿ ಗುಡುಗು, ಮಿಂಚು, ಸಿಡಿಲುಗಳ ಅಬ್ಬರದೊಂದಿಗೆ ಪರಿಸರಣ ವಿಧದ ಮಳೆಯಾಗುವುದು. ಕೆಲವೆಡೆ ಆಲಿಕಲ್ಲುಗಳು ಬೀಳುವುದುಂಟು. ಇದು ಸಾಮಾನ್ಯವಾಗಿ ಅಪರಾಹ್ನ ಸಮಯದಲ್ಲಿ

©KTBS Not to be republished

ಅಲ್ಪಾವಧಿಯವರೆಗೆ ಸಂಭವಿಸುತ್ತದೆ. ಇದು ಕಾಫಿ ಗಿಡಗಳು ಹೂ ಬಿಡಲು ನೆರವಾಗುವುದರಿಂದ ಇದನ್ನು **'ಕಾಫಿ ಹೂ ಮಳೆ'** ಎಂತಲೂ ಹಾಗೂ ಮಾವು ಫಸಲಿಗೆ ನೆರವಾಗುವುದರಿಂದ ಇದನ್ನು **'ಮಾವಿನ ಹುಯ್ಲು'** ಎಂತಲೂ ಕರೆಯುತ್ತಾರೆ. ಈ ಕಾಲದಲ್ಲಿ ರಾಜ್ಯದ ವಾರ್ಷಿಕ ಒಟ್ಟು ಮಳೆಯಲ್ಲಿ ಶೇಕಡ 7 ಭಾಗ ಬೀಳುತ್ತದೆ.

**2. ಮಳೆಗಾಲ :** ಇದನ್ನು **'ನೈಋತ್ಯ ಮಾನ್ಸೂನ್ ಮಾರುತಗಳ ಕಾಲ'** ಎಂತಲೂ ಕರೆಯುತ್ತಾರೆ. ಅರಬ್ಬಿಸಮುದ್ರದ ಮೇಲಿಂದ ಬೀಸುವ ತೇವಾಂಶಭರಿತ ಮಾರುತಗಳನ್ನು ಮಲೆನಾಡು ಘಟ್ಟಗಳು ತಡೆದು ಅಧಿಕ ಮಳೆ ಸುರಿಸುತ್ತವೆ. ಪೂರ್ವದ ಕಡೆಗೆ ಹೋದಂತೆಲ್ಲಾ ಮಳೆಯ ಪ್ರಮಾಣ ಕಡಿಮೆಯಾಗುತ್ತದೆ. ಹೀಗಾಗಿ ಪೂರ್ವದ ಮೈದಾನವು ಮಳೆ ನೆರಳಿನ ಪ್ರದೇಶವಾಗಿ ಪರಿಣಮಿಸುತ್ತದೆ. ಆಗುಂಬೆ ರಾಜ್ಯದ ಅಧಿಕ ಮಳೆ ಬೀಳುವ ಸ್ಥಳವಾಗಿದೆ. ಇದನ್ನು ದಕ್ಷಿಣದ ಚಿರಾಪುಂಜಿ ಎನ್ನುವರು. ಭಾಗಮಂಡಲ ಮತ್ತು ಹುಲಿಕಲ್‌ಗಳು ಇತರ ಅಧಿಕ ಮಳೆ ಪಡೆಯುವ ಸ್ಥಳಗಳಾಗಿವೆ. ಚಿತ್ರದುರ್ಗದ ಚಳ್ಳಕೆರೆ ಸಮೀಪದ ನಾಯಕನ ಹಟ್ಟಿ ಅತಿ ಕಡಿಮೆ ಮಳೆ ಬೀಳುವ ಸ್ಥಳ. ಈ ಅವಧಿಯಲ್ಲಿ ರಾಜ್ಯಾದ್ಯಂತ ಉಷ್ಣಾಂಶ ಹೆಚ್ಚು, ಜೊತೆಗೆ ತೇವಾಂಶವೂ ಹೆಚ್ಚಾಗಿರುತ್ತದೆ. ಮೋಡ ಕವಿದ ಪರಿಸ್ಥಿತಿ ಕಂಡುಬರುವುದು. ಈ ಋತುಮಾನದಲ್ಲಿ ಕರ್ನಾಟಕಕ್ಕೆ ಶೇಕಡ 80 ರಷ್ಟು ಮಳೆಯಾಗುತ್ತದೆ. ರಾಜ್ಯದ ಮುಂಗಾರು ಬೆಳೆಗಳ ಬೇಸಾಯಕ್ಕೆ ಈ ಕಾಲ ನೆರವಾಗುವುದು.




**3. ಮಾನ್ಸೂನ್ ಮಾರುತಗಳ ನಿರ್ಗಮನ ಕಾಲ :** ಇದನ್ನು **'ಈಶಾನ್ಯ ಮಾನ್ಸೂನ್ ಮಾರುತಗಳ ಕಾಲ'** ಎಂತಲೂ ಕರೆಯುತ್ತಾರೆ. ಉತ್ತರ ಭಾರತದಲ್ಲಿ ಉಷ್ಣಾಂಶವು ಕಡಿಮೆಯಾಗಿ ಒತ್ತಡ ಹೆಚ್ಚಾಗುವುದರಿಂದ ನೈಋತ್ಯ ಮಾನ್ಸೂನ್ ಮಾರುತಗಳು ಈಶಾನ್ಯದಿಂದ ನೈಋತ್ಯಕ್ಕೆ ಬೀಸುತ್ತ ನಿರ್ಗಮಿಸುತ್ತವೆ. ಭೂಭಾಗದಿಂದ ಬೀಸುವ ಈ ಮಾರುತಗಳು ಮಳೆ ತರುವುದಿಲ್ಲ. ಆದರೆ ಬಂಗಾಳ ಕೊಲ್ಲಿಯಿಂದ ಬೀಸುವಾಗ ದಕ್ಷಿಣ ಮೈದಾನದ ಜಿಲ್ಲೆಗಳಿಗೆ ಸ್ವಲ್ಪ ಮಳೆ ಬೀಳುತ್ತದೆ. ಬಂಗಾಳ ಕೊಲ್ಲಿಯಲ್ಲಾಗುವ ಚಂಡಮಾರುತಗಳ ಪ್ರಭಾವದಿಂದಲೂ ನವೆಂಬರ್, ಡಿಸೆಂಬರ್ ತಿಂಗಳುಗಳಲ್ಲಿ ಮಳೆಯಾಗುತ್ತದೆ. ಈ ಋತುಮಾನದಲ್ಲಿ ಶೇ.12 ಭಾಗದಷ್ಟು ರಾಜ್ಯದಲ್ಲಿ ಮಳೆಯಾಗುತ್ತದೆ.

**4. ಚಳಿಗಾಲ :** ಈ ಕಾಲದಲ್ಲಿ ಕಡಿಮೆ ಉಷ್ಣಾಂಶ, ಕಡಿಮೆ ಆರ್ದ್ರತೆ, ಮಳೆಯೂ ಕಡಿಮೆ ಹಾಗೂ ತಿಳಿಯಾದ ಆಕಾಶವುಳ್ಳ ಹವಾಗುಣವಿರುತ್ತದೆ. ಸರಾಸರಿ ಉಷ್ಣಾಂಶ $25^0$ ರಿಂದ $27^0$ ಸೆಲ್ಸಿಯಸ್. ಜನವರಿ ಅತಿ ಕಡಿಮೆ ಉಷ್ಣಾಂಶ ದಾಖಲಾಗುವ ತಿಂಗಳು. ಇದನ್ನು **'ಕರ್ನಾಟಕದ ಪ್ರವಾಸ ಮಾಸ'** ಎನ್ನುವರು. ಆಗ ಬೆಳಗಾವಿಯಲ್ಲಿ ಕನಿಷ್ಠ ಉಷ್ಣಾಂಶ $6.7^0$ ಸೆ. ಇರುತ್ತದೆ. ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಕಡಿಮೆ ಉಷ್ಣಾಂಶವಿರುತ್ತದೆ. ಉದಾ : ವಿಜಯಪುರ, ಕಲಬುರಗಿ ಮತ್ತು ಬೀದರ್. ಚಳಿಗಾಲದಲ್ಲಿ ಮಳೆಯ

©KTBS Not to be republished


ಹಂಚಿಕೆ ಅತಿ ಕಡಿಮೆ. ಅಂದರೆ ರಾಜ್ಯದ ಒಟ್ಟು ಮಳೆಯಲ್ಲಿ ಕೇವಲ ಶೇ.1 ಭಾಗ ಬೀಳುವುದು. ಒಮ್ಮೊಮ್ಮೆ ಪ್ರಾತಃಕಾಲದಲ್ಲಿ ಕಾವಳ ಕಂಡುಬರುವುದು.

**ಮಳೆಯ ಹಂಚಿಕೆ :** ಮಲೆನಾಡು ಮತ್ತು ಕರಾವಳಿ ಭಾಗಗಳು ಅಧಿಕ ಮಳೆ ಪಡೆಯುವ ಪ್ರದೇಶಗಳಾಗಿವೆ. ಪೂರ್ವಭಾಗದ ಮೈದಾನಗಳು ಕಡಿಮೆ ಮಳೆ ಪಡೆಯುವ ಪ್ರದೇಶಗಳು. ಅಕಾಲಿಕ ಮತ್ತು ಅಸಮಾನ ಮಳೆಯ ಹಂಚಿಕೆಯಿಂದ ರಾಜ್ಯದಲ್ಲಿ ಆಗಾಗ್ಗೆ ಬರಗಾಲ ಮತ್ತು ಪ್ರವಾಹಗಳು ಸಂಭವಿಸುತ್ತವೆ.

## ಕರ್ನಾಟಕದ ಮಣ್ಣುಗಳು

ಭೂಮಿಯ ಮೇಲಿನ ತೆಳುವಾದ ಪದರವೇ ಮಣ್ಣು. ಕೃಷಿ ಅಭಿವೃದ್ಧಿಗೆ ಫಲವತ್ತಾದ ಮಣ್ಣು ಅತ್ಯಗತ್ಯ. ಕರ್ನಾಟಕದಲ್ಲಿ ವಿವಿಧ ಪ್ರಕಾರದ ಮಣ್ಣುಗಳಿವೆ. ಅವುಗಳನ್ನು ನಾಲ್ಕು ವಿಧಗಳನ್ನಾಗಿ ವಿಂಗಡಿಸಲಾಗಿದೆ. 1) ಕೆಂಪು ಮಣ್ಣು, 2) ಕಪ್ಪು ಮಣ್ಣು, 3) ಜಂಬಿಟ್ಟಿಗೆ ಮಣ್ಣು ಮತ್ತು 4) ಕರಾವಳಿಯ ಮೆಕ್ಕಲು ಮಣ್ಣು.

**1. ಕೆಂಪು ಮಣ್ಣು:** ಇದು ಗ್ರ್ಯಾನೈಟ್, ನೀಸ್ ಶಿಲಾದ್ರವ್ಯಗಳಿಂದ ರೂಪುಗೊಂಡಿದ್ದು, ಕಬ್ಬಿಣದ ಆಕ್ಸೈಡ್ ಇರುವುದರಿಂದ ಈ ಮಣ್ಣು ಕೆಂಪಾಗಿರುತ್ತದೆ. ಈ ಮಣ್ಣಿನಲ್ಲಿ ಹೆಚ್ಚು ಸುಣ್ಣ ಮತ್ತು ಉಪ್ಪಿನಾಂಶವಿದ್ದು, ಸಾವಯವ ಅಂಶ ಕಡಿಮೆ. ಹೆಚ್ಚು ಹಗುರ, ತೆಳು ಪದರವುಳ್ಳ ಈ ಮಣ್ಣು ಅಷ್ಟೊಂದು ಫಲವತ್ತಾದುದಲ್ಲ. ತೇವಾಂಶ ಉಳಿಸಿಕೊಳ್ಳುವ ಸಾಮರ್ಥ್ಯ ಕಡಿಮೆ. ಈ ಮಣ್ಣಿನಲ್ಲಿ ತೃಣಧಾನ್ಯಗಳಾದ ರಾಗಿ, ನವಣೆ, ಸಜ್ಜೆ, ಜೋಳ, ಹಾರಕ ಇತ್ಯಾದಿ, ತಂಬಾಕು, ದ್ವಿದಳ ಧಾನ್ಯಗಳು, ನೆಲಗಡಲೆಗಳಂತಹ ಮಳೆ ಆಶ್ರಿತ ಬೆಳೆಗಳನ್ನು ಬೆಳೆಯಬಹುದು. ನೀರಾವರಿ ಸೌಲಭ್ಯವಿರುವ ಕಡೆ ಭತ್ತ, ಕಬ್ಬು, ಆಲೂಗೆಡ್ಡೆ, ತರಕಾರಿಗಳು, ಬಾಳೆ, ತೆಂಗು, ಅಡಕೆ ಇತ್ಯಾದಿ ಬೆಳೆಯಲು ಯೋಗ್ಯವಾಗಿದೆ. ತುಮಕೂರು, ಬೆಂಗಳೂರು, ರಾಮನಗರ, ಚಿಕ್ಕಬಳ್ಳಾಪುರ, ಕೋಲಾರ, ಚಾಮರಾಜನಗರ, ಮಂಡ್ಯ ಮತ್ತು ಮೈಸೂರು ಜಿಲ್ಲೆಗಳಲ್ಲಿ ಈ ಮಣ್ಣು ಹೆಚ್ಚಾಗಿ ಕಂಡುಬರುತ್ತದೆ.




**2. ಕಪ್ಪು ಮಣ್ಣು:** ಇದು ಬಸಾಲ್ಟ್ ಶಿಲೆಯ ಶಿಥಿಲೀಕರಣದಿಂದಾಗಿದ್ದು, ಇದರಲ್ಲಿ ಹೆಚ್ಚು ಮೆಗ್ನೀಷಿಯಂ, ಅಲ್ಯೂಮಿನಿಯಂ ಮತ್ತು ಕಬ್ಬಿಣದ ಆಕ್ಸೈಡ್‌ಗಳಿರುತ್ತವೆ. ಹೀಗಾಗಿ ಇದರ ಬಣ್ಣ ಕಪ್ಪು. ಇದನ್ನು 'ಎರೆಮಣ್ಣು'

©KTBS Not to be republished

ಅಥವಾ 'ಕಪ್ಪು ಹತ್ತಿ ಮಣ್ಣು' (Black cotton soil) ಎಂದೂ ಕರೆಯುವರು. ಇದಕ್ಕೆ ಹೆಚ್ಚು ದಿನ ತೇವಾಂಶವನ್ನು ಹಿಡಿದಿಟ್ಟುಕೊಳ್ಳುವ ಗುಣವಿದೆ. ಈ ಮಣ್ಣಿನಲ್ಲಿ ಹತ್ತಿ, ಜೋಳ, ಸೂರ್ಯಕಾಂತಿ, ಮೆಣಸಿನಕಾಯಿ, ಮೆಕ್ಕೆಜೋಳ, ಬೇಳೆಕಾಳು, ಕಬ್ಬು, ಈರುಳ್ಳಿ ಮತ್ತು ಭತ್ತವನ್ನು ಬೆಳೆಯಲಾಗುತ್ತದೆ. ಈ ಮಣ್ಣು ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ವ್ಯಾಪಕವಾಗಿ ಕಂಡುಬರುತ್ತದೆ. ಧಾರವಾಡ, ಗದಗ, ಬಳ್ಳಾರಿ, ಕೊಪ್ಪಳ, ಕಲಬುರಗಿ, ಯಾದಗಿರಿ, ಬಾಗಲಕೋಟೆ, ಬೆಳಗಾವಿ, ಚಿತ್ರದುರ್ಗ ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ಕಪ್ಪು ಮಣ್ಣಿನ ಹಂಚಿಕೆಯಿದೆ.

**3. ಜಂಬಿಟ್ಟಿಗೆ ಮಣ್ಣು :** ಅಧಿಕ ಉಷ್ಣಾಂಶ ಮತ್ತು ಅಧಿಕ ಮಳೆ ಬೀಳುವ ಭಾಗಗಳಲ್ಲಿ ಈ ವಿಧದ ಮಣ್ಣು ಕಂಡುಬರುತ್ತದೆ. ನೀರಿನಲ್ಲಿ ಕರಗುವ ಸುಣ್ಣ ಮತ್ತು ಸಿಲಿಕೇಟ್‌ಗಳು ಮಳೆ ನೀರಿನಲ್ಲಿ ಕರಗಿ ತಳದ ಮಣ್ಣಿನ ಸ್ತರಗಳಿಗೆ ಸಾಗಿಸಲ್ಪಡುತ್ತವೆ. ನೀರಿನಲ್ಲಿ ಕರಗದಂತಹ ಕಬ್ಬಿಣ ಮತ್ತು ಅಲ್ಯೂಮಿನಿಯಂಗಳು ಮೇಲ್ಪದರದಲ್ಲಿ ಉಳಿಯುತ್ತವೆ. ಇದು ಮಳೆಗಾಲದಲ್ಲಿ ಮೃದುವಾಗಿ, ಬೇಸಿಗೆಯಲ್ಲಿ ಒಣಗಿ ಗಟ್ಟಿಯಾಗಿ ಲ್ಯಾಟರೈಟ್ ಶಿಲೆಯಾಗುತ್ತದೆ. ಅದನ್ನು ಕಟ್ಟಡಗಳ ನಿರ್ಮಾಣಕ್ಕೆ ಉಪಯೋಗಿಸಲಾಗುವುದು. ಈ ಮಣ್ಣಿನಲ್ಲಿ ಗೋಡಂಬಿ, ಕಾಫಿ, ಚಹ, ಏಲಕ್ಕಿ, ಮೆಣಸು, ರಬ್ಬರ್, ತೆಂಗು ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ. ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ, ಕೊಡಗು, ಚಿಕ್ಕಮಗಳೂರು, ಶಿವಮೊಗ್ಗ, ಬೆಳಗಾವಿ ಮುಂತಾದ ಮಲೆನಾಡು ಜಿಲ್ಲೆಗಳಲ್ಲಿ ಹೆಚ್ಚಾಗಿ ಹಂಚಿಕೆಯಾಗಿದೆ.

**4. ಕರಾವಳಿಯ ಮೆಕ್ಕಲು ಮಣ್ಣು :** ನದಿ, ಸಮುದ್ರದ ಅಲೆಗಳಿಂದ ಸಾಗಿಸಲ್ಪಟ್ಟ ಮಣ್ಣು ಸಮುದ್ರ ತೀರದಲ್ಲಿ ಸಂಗ್ರಹವಾಗಿ ನಿರ್ಮಾಣವಾಗಿದೆ. ಹೀಗಾಗಿ ರಾಜ್ಯದ ಕರಾವಳಿ ಜಿಲ್ಲೆಗಳಾದ ಉಡುಪಿ, ದಕ್ಷಿಣ ಕನ್ನಡ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಈ ಮಣ್ಣು ಕಂಡುಬರುತ್ತದೆ. ಇದರಲ್ಲಿ ಮರಳು ಮತ್ತು ಜೇಡಿ ಮಿಶ್ರಣವಾಗಿರುವುದರ ಜೊತೆಗೆ ಕೊಳೆತ ಜೈವಿಕಾಂಶಗಳು ಸಮೃದ್ಧವಾಗಿರುತ್ತವೆ. ಭತ್ತ, ಗೋಡಂಬಿ, ತೆಂಗು, ಅಡಕೆ, ಬಾಳೆ ಮುಂತಾದ ಬೆಳೆಗಳ ಸಾಗುವಳಿಗೆ ಇದು ಸೂಕ್ತ.

## ಸ್ವಾಭಾವಿಕ ಸಸ್ಯವರ್ಗ


ಪ್ರಕೃತಿದತ್ತವಾಗಿ ಬೆಳೆಯುವ ವಿವಿಧ ಸಸ್ಯ ಸಮುದಾಯವನ್ನು 'ಸ್ವಾಭಾವಿಕ ಸಸ್ಯವರ್ಗ' ಎನ್ನುವರು. ಕರ್ನಾಟಕವು ವೈವಿಧ್ಯಮಯವಾದ ಮತ್ತು ಸಮೃದ್ಧ ಸಸ್ಯ ಸಂಪನ್ಮೂಲವನ್ನು ಹೊಂದಿದೆ. ಪರಿಸರ ಸಮತೋಲನ ಕಾಪಾಡುವುದರಲ್ಲಿ ಸಸ್ಯವರ್ಗವು ಪ್ರಮುಖ ಪಾತ್ರವಹಿಸುತ್ತದೆ. ಸಸ್ಯವರ್ಗವು ಮರಮುಟ್ಟು, ಕೈಗಾರಿಕೆಗಳಿಗೆ ಕಚ್ಚಾ ವಸ್ತು, ಉರುವಲು, ಗಿಡಮೂಲಿಕೆಗಳು, ಜೇನು, ಬಿದಿರು, ಬೆತ್ತ ಮುಂತಾದುವುಗಳನ್ನು ಒದಗಿಸುತ್ತದೆ. ಕಾಡುಗಳು ವನ್ಯ ಪ್ರಾಣಿಗಳ ವಾಸಸ್ಥಾನವಾಗಿವೆ. ಮನರಂಜನಾ ಮತ್ತು ಪ್ರವಾಸಿಕೇಂದ್ರಗಳನ್ನು ಸೃಷ್ಟಿಸುತ್ತವೆ. ಪರಿಸರ ಮಾಲಿನ್ಯವನ್ನು ನಿಯಂತ್ರಿಸುತ್ತವೆ. ಕರ್ನಾಟಕದ ಕಾಡುಗಳಲ್ಲಿ ವಿಶೇಷವಾಗಿ ಶ್ರೀಗಂಧದ ಮರಗಳು ಬೆಳೆಯುತ್ತವೆ. ಇದರಿಂದ ಸುಗಂಧ ದ್ರವ್ಯ, ಕುಸುರಿ ಕೆಲಸದ ಕುಶಲ ವಸ್ತುಗಳು, ಸಾಬೂನು, ಔಷಧಿಗಳನ್ನು ತಯಾರಿಸಲಾಗುವುದು. ಇವು ವಿಶ್ವವಿಖ್ಯಾತವಾಗಿದ್ದು, ದೇಶೀಯ ಅಪಾರವಾದ ಬೇಡಿಕೆ ಪೂರೈಸುವುದಲ್ಲದೆ ವಿದೇಶಗಳಿಗೂ ರಫ್ತು ಮಾಡಲಾಗುತ್ತದೆ. ಆದ್ದರಿಂದ ಕರ್ನಾಟಕವು 'ಶ್ರೀಗಂಧದ ನಾಡು' ಎಂದೇ ಪ್ರಸಿದ್ಧಿ ಪಡೆದಿದೆ.

### ಸಸ್ಯವರ್ಗದ ವಿಧಗಳು

ಮಳೆಯ ಪ್ರಮಾಣ, ಭೂಸ್ವರೂಪ ಹಾಗೂ ಮಣ್ಣಿನ ಲಕ್ಷಣಗಳನ್ನಾಧರಿಸಿ ಕರ್ನಾಟಕದ ಸ್ವಾಭಾವಿಕ ಸಸ್ಯವರ್ಗವನ್ನು ವಿಂಗಡಿಸಲಾಗಿದೆ. ಅವುಗಳೆಂದರೆ ; 1) ನಿತ್ಯ ಹರಿದ್ವರ್ಣದ ಕಾಡುಗಳು, 2) ಎಲೆ ಉದುರಿಸುವ ಸಸ್ಯವರ್ಗ, 3) ಮಿಶ್ರ ಬಗೆಯ ಕಾಡು ಮತ್ತು 4) ಕುರುಚಲು ಮತ್ತು ಹುಲ್ಲುಗಾವಲು.

©KTBS Not to be republished

**1. ನಿತ್ಯಹರಿದ್ವರ್ಣದ ಕಾಡುಗಳು :** ಪ್ರಮುಖವಾಗಿ 250 ಸೆಂ.ಮೀ.ಗಳಿಗೂ ಅಧಿಕ ವಾರ್ಷಿಕ ಮಳೆ ಬೀಳುವ ಭಾಗಗಳಲ್ಲಿ ಈ ಕಾಡುಗಳು ಬೆಳೆಯುತ್ತವೆ. ಅಧಿಕ ಮಳೆ ಮತ್ತು ಅಧಿಕ ಉಷ್ಣಾಂಶಗಳಿಂದ ಇಲ್ಲಿ ಮರಗಳು ಎತ್ತರವಾಗಿ ಹಾಗೂ ದಟ್ಟವಾಗಿ ಬೆಳೆಯುತ್ತವೆ. ಈ ಕಾಡುಗಳು ದುರ್ಗಮವಾಗಿದ್ದು, ಕೆಲವು ಕಡೆ ಸೂರ್ಯನ ಕಿರಣಗಳು ನೆಲಕ್ಕೆ ತಲುಪುವುದಿಲ್ಲ. ಇಲ್ಲಿ ಪ್ರಮುಖವಾಗಿ ಬೀಟೆ, ತೇಗ, ಮತ್ತಿ, ನಂದಿ, ದೂಪ, ಹೊನ್ನೆ, ಹೆಬ್ಬಲಸು ಮುಂತಾದ ಎತ್ತರದ ಮರಗಳು ಬೆಳೆಯುತ್ತವೆ. ಮರಗಳ ಅಡಿಯಲ್ಲಿ ದಟ್ಟ ಪೊದೆ ಸಸ್ಯಗಳು ಬೆಳೆಯುತ್ತವೆ. ಅನೇಕ ರೀತಿಯ ಸಾಂಬಾರ ಪದಾರ್ಥಗಳು, ಲವಂಗ, ಏಲಕ್ಕಿ, ದಾಲ್ಚಿನ್ನಿ, ಔಷಧಿ ಸಸ್ಯಗಳು ಹೇರಳವಾಗಿ ಬೆಳೆಯುತ್ತವೆ. ಇಂತಹ ಕಾಡುಗಳು ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ, ಶಿವಮೊಗ್ಗ, ಹಾಸನ, ಚಿಕ್ಕಮಗಳೂರು, ಚಾಮರಾಜನಗರ ಮತ್ತು ಕೊಡಗು ಜಿಲ್ಲೆಗಳಲ್ಲಿ ಕಂಡುಬರುತ್ತವೆ.




**2. ಎಲೆ ಉದುರಿಸುವ ಸಸ್ಯವರ್ಗ :** ಚಳಿಗಾಲದ ತರುವಾಯ ತೇವಾಂಶದ ಕೊರತೆಯಿಂದಾಗಿ ಮರಗಳ ಎಲೆಗಳು ಉದುರುತ್ತವೆ. ಮತ್ತೆ ವಸಂತ ಋತುವಿನಲ್ಲಿ ಚಿಗುರುತ್ತವೆ. ಇವುಗಳನ್ನು 'ಎಲೆ ಉದುರಿಸುವ ಸಸ್ಯವರ್ಗ' ಎನ್ನುವರು. ವಾರ್ಷಿಕ 60–120 ಸೆಂ.ಮೀ. ಮಳೆ ಬೀಳುವ ಭಾಗಗಳಲ್ಲಿ ಇಂತಹ ಸಸ್ಯವರ್ಗವಿದೆ. ಇಂತಹ ಕಾಡುಗಳು ಚಿಕ್ಕಮಗಳೂರು, ಮೈಸೂರು, ಚಾಮರಾಜನಗರ, ಹಾಸನ ಜಿಲ್ಲೆಗಳ ಪೂರ್ವಭಾಗ, ತುಮಕೂರು, ಚಿಕ್ಕಬಳ್ಳಾಪುರ, ಕೋಲಾರದ ದಕ್ಷಿಣ ಭಾಗಗಳು, ಮಂಡ್ಯ, ರಾಮನಗರ ಮತ್ತು ಬೆಂಗಳೂರಿನ ಗ್ರಾಮಾಂತರ ಜಿಲ್ಲೆಗಳಲ್ಲಿ ಕಂಡು ಬರುತ್ತವೆ. ತೇಗ, ಹೊನ್ನೆ, ಮತ್ತಿ, ಬೇವು, ಮಾವು, ಹಲಸು, ಮುತ್ತುಗ, ಬಾಗೆ, ಆಲ, ಶ್ರೀಗಂಧ ಮತ್ತು ಬಿದಿರು ಇಲ್ಲಿ ಬೆಳೆಯುವ ಪ್ರಮುಖ ಮರಗಳು. ಇವು ದಟ್ಟವಾಗಿ ಬೆಳೆಯುವುದಿಲ್ಲ.

**3. ಮಿಶ್ರ ಬಗೆಯ ಕಾಡುಗಳು :** ನಿತ್ಯಹರಿದ್ವರ್ಣ ಮತ್ತು ಅಗಲ ಎಲೆಗಳನ್ನುಳ್ಳ ಎಲೆ ಉದುರಿಸುವ ಪ್ರಕಾರದ ಮರಗಳು ಬೆಳೆಯುವ ಸಸ್ಯವರ್ಗವೇ ಮಿಶ್ರ ಬಗೆಯ ಕಾಡುಗಳು. ವಾರ್ಷಿಕ 120–150 ಸೆಂ.ಮೀ. ಮಳೆ ಬೀಳುವ ಭಾಗಗಳಲ್ಲಿ ಇಂತಹ ಸಸ್ಯವರ್ಗ ಕಂಡುಬರುತ್ತದೆ. ಇಂತಹ ಕಾಡುಗಳು ಉಡುಪಿ, ದಕ್ಷಿಣ ಕನ್ನಡ, ಉತ್ತರ ಕನ್ನಡದ ಕೆಲವು ಭಾಗಗಳು, ಕೊಡಗಿನ ಪೂರ್ವಭಾಗ ಹಾಗೂ ಚಿಕ್ಕಮಗಳೂರು, ಹಾಸನ ಮತ್ತು ಮೈಸೂರು ಜಿಲ್ಲೆಯ ಭಾಗಗಳಲ್ಲಿ ಕಂಡು ಬರುತ್ತವೆ. ತೇಗ, ಹೊನ್ನೆ, ಮತ್ತಿ, ನಂದಿ, ದಿಂಡಗ, ಶ್ರೀಗಂಧ, ಹಲಸು ಮತ್ತು ಬಿದಿರು ಇಲ್ಲಿ ಬೆಳೆಯುವ ಪ್ರಮುಖ ಮರಗಳು.

**4. ಹುಲ್ಲುಗಾವಲು ಮತ್ತು ಕುರುಚಲು ಸಸ್ಯಗಳು :** ಕರ್ನಾಟಕದಲ್ಲಿ 60 ಸೆಂ.ಮೀ.ಗಿಂತ ಕಡಿಮೆ ವಾರ್ಷಿಕ ಮಳೆ ಬೀಳುವ ಪ್ರದೇಶಗಳಲ್ಲಿ ಇಂತಹ ಸಸ್ಯವರ್ಗ ಹಂಚಿಕೆಯಾಗಿದೆ. ಮಳೆಯ ಕೊರತೆ ಮತ್ತು

©KTBS Not to be republished

ಒಣಹವೆಯಿಂದಾಗಿ ಕುರುಚಲು ಗಿಡ ಮತ್ತು ಮುಳ್ಳಿನ ಗಿಡಗಳು ಬೆಳೆಯುತ್ತವೆ. ಉದಾ: ಕಳ್ಳಿ, ಕತ್ತಾಳಿ, ಕರಿಜಾಲಿ, ಬೇಲ, ಈಚಲು, ಹಂಚಿ ಮತ್ತು ಕುಂತಿ ಹುಲ್ಲು ಇತ್ಯಾದಿ. ಅಲ್ಲಲ್ಲಿ ಆಲ, ಬೇವು, ಅರಳಿ, ಮುತ್ತುಗದಂತಹ ಮರಗಳು ಬೆಳೆಯುತ್ತವೆ. ಇಂತಹ ಸಸ್ಯವರ್ಗವು ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ, ವಿಜಯಪುರ, ಬಳ್ಳಾರಿ, ಚಿತ್ರದುರ್ಗ ಇತ್ಯಾದಿ ಜಿಲ್ಲೆಗಳಲ್ಲಿ ಹಂಚಿಕೆಯಾಗಿದೆ.

ಕರಾವಳಿಯಂಚಿನಲ್ಲಿರುವ ನದಿ ಮುಖಜಭೂಮಿ, ಅಳಿವೆಗಳು ಹಾಗೂ ಮರಳು ದಂಡೆಗಳ ಭಾಗಗಳಲ್ಲಿ ಬಿಳಿಲುಗಳಿಂದ ಕೂಡಿರುವ ಸಸ್ಯಗಳಿವೆ. ಇವು ಉಪ್ಪು ನೀರಿನಲ್ಲಿ ಬೆಳೆಯುವ ವಿಶಿಷ್ಟವಾದ ಸಾಮರ್ಥ್ಯವನ್ನು ಹೊಂದಿವೆ. ಇದನ್ನೇ 'ಮ್ಯಾಂಗ್ರೋವ್ ಸಸ್ಯ'ಗಳೆನ್ನುವರು. ಇವುಗಳ ಹಂಚಿಕೆ ರಾಜ್ಯದಲ್ಲಿ ಅತ್ಯಲ್ಪ.

**ನಿಮಗೆ ತಿಳಿದಿರಲಿ**

- ಬೆಂಗಳೂರು ಸಮೀಪ ರಾಮೋಹಳ್ಳಿಯಲ್ಲಿ ಅತಿದೊಡ್ಡ ಆಲದ ಮರವಿದೆ.
- ಶಿಡ್ಲಘಟ್ಟದ ಟಿ. ವೆಂಕಟಾಪುರ ಬಳಿ ಅತಿದೊಡ್ಡ ಬೇವಿನ ಮರವಿದೆ.
- ಸವಣೂರಿನ ಬಳಿ ಬೃಹತ್ ಹುಣಸೆ ಮರವಿದೆ.

ಸುಮಾರು 1400 ಮೀ. ಗಿಂತ ಹೆಚ್ಚು ಎತ್ತರವುಳ್ಳ ಭಾಗದಲ್ಲಿ ತಂಪಾದ ವಾಯುಗುಣವಿರುವ ಕುದುರೆಮುಖ, ಬಾಬಾಬುಡನ್‌ಗಿರಿ, ಬಿಳಿಗಿರಿರಂಗನಬೆಟ್ಟ, ಕೊಡಗಿನ ಬ್ರಹ್ಮಗಿರಿ ಸರಣಿಗಳ ಇಳಿಜಾರುಗಳು ಹುಲ್ಲುಗಾವಲಿನಿಂದ ಕೂಡಿವೆ. ಇವುಗಳ ತಗ್ಗಾದ ಕಣಿವೆಗಳು ಝರಿ, ತೊರೆಗಳಿಂದ ಕೂಡಿದ ಭಾಗಗಳಲ್ಲಿ ವಿಶಿಷ್ಟವಾದ 'ಶೋಲಾ ಕಾಡುಗಳು' ಬೆಳೆಯುತ್ತವೆ.

### ಅರಣ್ಯಗಳ ಹಂಚಿಕೆ

ಎಲ್ಲಾ ವಿಧದ ಅರಣ್ಯಗಳು ಒಳಗೊಂಡಂತೆ, ಕರ್ನಾಟಕದಲ್ಲಿ ದಾಖಲಾದ ಅರಣ್ಯ ಪ್ರದೇಶ 43.4 ಲಕ್ಷ ಚ.ಕಿ.ಮೀ.ಗಳು. ಇದು ರಾಜ್ಯದ ಭೌಗೋಳಿಕ ಪ್ರದೇಶದಲ್ಲಿ ಶೇ.22.6 ಭಾಗದಷ್ಟಾಯಿತು. ಭಾರತದಲ್ಲಿ ಸಮೃದ್ಧ ಅರಣ್ಯಗಳನ್ನುಳ್ಳ ರಾಜ್ಯಗಳಲ್ಲಿ ಕರ್ನಾಟಕವು ಏಳನೆಯ ಸ್ಥಾನದಲ್ಲಿದೆ. ಉತ್ತರ ಕನ್ನಡ ಹೆಚ್ಚು ಅರಣ್ಯ ಪ್ರದೇಶವನ್ನೊಳಗೊಂಡ ಜಿಲ್ಲೆ. ತರುವಾಯ ಶಿವಮೊಗ್ಗ ಮತ್ತು ಚಾಮರಾಜನಗರ ಜಿಲ್ಲೆಗಳು ಕ್ರಮವಾಗಿ ಎರಡು ಮತ್ತು ಮೂರನೆಯ ಸ್ಥಾನಗಳಲ್ಲಿವೆ. ವಿಜಯಪುರ ಅತಿ ಕಡಿಮೆ ಅರಣ್ಯವುಳ್ಳ ಜಿಲ್ಲೆಯಾಗಿದೆ.

## ಪ್ರಾಣಿ ಸಂಪತ್ತು

ಸಸ್ಯರಾಶಿ ಮತ್ತು ವೃಕ್ಷರಾಶಿಗಳಷ್ಟೇ ವನ್ಯಜೀವಿ ಸಂಪತ್ತು ಕರ್ನಾಟಕ ರಾಜ್ಯದಲ್ಲಿದೆ. ಇದಕ್ಕೆ ಸಮೃದ್ಧ ಅರಣ್ಯ ಕ್ಷೇತ್ರವೇ ಪ್ರಮುಖ ಕಾರಣ. ಪ್ರಪಂಚದಲ್ಲಿ ಗುರುತಿಸಲ್ಪಟ್ಟ ಜೀವಿವೈವಿಧ್ಯ ಉಲ್ಲಾಸ ತಾಣ (Hot spots) ಗಳಲ್ಲಿ ರಾಜ್ಯದ ಸಹ್ಯಾದ್ರಿ ಸರಣಿಗಳೂ ಸೇರಿವೆ. ಇತ್ತೀಚೆಗೆ ಅದೊಂದು ವಿಶ್ವ ಪಾರಂಪರಿಕ ಪ್ರದೇಶವೆಂದು ಘೋಷಿಸಲ್ಪಟ್ಟಿದೆ. ಭಾರತದ ಒಟ್ಟು ಆನೆಗಳಲ್ಲಿ ಶೇ.25 ಮತ್ತು ಹುಲಿಗಳಲ್ಲಿ ಶೇ.10 ಭಾಗ ನಮ್ಮ ಕರ್ನಾಟಕದಲ್ಲಿವೆ. ಅಲ್ಲದೆ ಚಿರತೆ, ಕಾಡುಹಂದಿ, ಕಾಡೆಮ್ಮೆ, ಕಡವೆ, ಜಿಂಕೆ, ಕರಡಿ, ಮುಳ್ಳು ಹಂದಿ ಮೊದಲಾದ ಪ್ರಾಣಿಗಳಿವೆ. ಜೊತೆಗೆ ವಿವಿಧ ಪ್ರಭೇದದ ಹಾವು ಮತ್ತು ವರ್ಣಮಯ ಪಕ್ಷಿಗಳೂ ಸಹ ಕಂಡುಬರುತ್ತವೆ.


**ನಿಮಗೆ ತಿಳಿದಿರಲಿ:**

- ಕರ್ನಾಟಕದಲ್ಲಿ 5 ಪ್ರಮುಖ ಹುಲಿ ಸಂರಕ್ಷಣಾ ವಲಯಗಳಿವೆ.

  ಬಂಡೀಪುರ, ನಾಗರಹೊಳೆ, ಭದ್ರಾ, ದಾಂಡೇಲಿ, ಅಣ್ಸಿ ಮತ್ತು ಬಿಳಿಗಿರಿರಂಗನಾಥ ದೇವಾಲಯಗಳು
- ಕರ್ನಾಟಕದ ಪ್ರಸಿದ್ಧ ಪಕ್ಷಿಧಾಮ – ರಂಗನತಿಟ್ಟು.

©KTBS Not to be republished

ಪಶ್ಚಿಮ ಘಟ್ಟಗಳ ಮಧ್ಯಭಾಗವಾದ ಕರ್ನಾಟಕದ ಮಲೆನಾಡು ಭಾಗವು ಮಾತ್ರ ತನ್ನ ನೈಸರ್ಗಿಕ ಜೈವಿಕ ಪಾರಂಪರಿಕತೆಯನ್ನು ಉಳಿಸಿಕೊಂಡಿದೆ. ಹೀಗಾಗಿ ಈ ಭಾಗದಲ್ಲಿ ವನ್ಯಪ್ರಾಣಿ ಸಂಕುಲ ಹೆಚ್ಚಾಗಿ ಕಂಡು ಬರುವುದು. ವನ್ಯಪ್ರಾಣಿಗಳ ನೆಲೆಯನ್ನೊಳ ಗೊಂಡ ರಾಜ್ಯದ ಪ್ರಮುಖ ಅರಣ್ಯ ಪ್ರದೇಶಗಳೆಂದರೆ – ಉತ್ತರ ಕನ್ನಡ ಮತ್ತು ಬೆಳಗಾವಿಯ ಭಾಗಗಳನ್ನೊಳಗೊಂಡ ಕರಾವಳಿಯ ಭಾಗ, ಸಹ್ಯಾದ್ರಿ–ಮಲೆನಾಡಿನ ಬೆಟ್ಟಗಳ ಸಾಲು. ಉದಾ: ಬಾಬಬುಡನ್‌ಗಿರಿ ಸರಣಿ, ಬಿಳಿಗಿರಿರಂಗನಬೆಟ್ಟ, ಮಲೆಮಹದೇಶ್ವರ ಬೆಟ್ಟ, ಗೋಪಾಲಸ್ವಾಮಿ ಬೆಟ್ಟ ಮುಂತಾದವುಗಳನ್ನುಳ್ಳ ದಕ್ಷಿಣ ಮೈದಾನ. ರಾಣೆಬೆನ್ನೂರು ಉತ್ತರ ಮೈದಾನದ ಪ್ರಮುಖ ವನ್ಯಜೀವಿಧಾಮ. ಇಂದು ಕರ್ನಾಟಕದಲ್ಲಿ 5 ರಾಷ್ಟ್ರೀಯ ಉದ್ಯಾನ, 5 ಪಕ್ಷಿಧಾಮ ಮತ್ತು ಸುಮಾರು 27 ವನ್ಯಪ್ರಾಣಿಧಾಮಗಳಿವೆ.




ಪ್ರಮುಖ ರಾಷ್ಟ್ರೀಯ ಉದ್ಯಾನ ಮತ್ತು ವನ್ಯಜೀವಿ ಧಾಮಗಳು

©KTBS Not to be republished

## ಅಭ್ಯಾಸಗಳು

**I. ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿರಿ.**

1) ಬೇಸಿಗೆ ಕಾಲವು __________ , __________ ತಿಂಗಳುಗಳಲ್ಲಿ ಇರುತ್ತದೆ.

2) ಅತಿ ಹೆಚ್ಚು ಮಳೆ ಬೀಳುವ ಋತುಮಾನ __________ ಆಗಿದೆ.

3) ಉತ್ತರ ಕರ್ನಾಟಕದಲ್ಲಿ __________ ಮಣ್ಣು ಹೆಚ್ಚಾಗಿ ಕಂಡುಬರುತ್ತದೆ.

4) ಸದಾಹಸಿರಿನಿಂದ ಕೂಡಿರುವ ಅರಣ್ಯಗಳು __________ ಪ್ರದೇಶದಲ್ಲಿದೆ.

5) ಅತಿ ಹೆಚ್ಚು ಅರಣ್ಯ ಪ್ರದೇಶವು __________ ಜಿಲ್ಲೆಯಲ್ಲಿದೆ.

**II. ಗುಂಪುಗಳಲ್ಲಿ ಚರ್ಚಿಸಿ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

1) ಕರ್ನಾಟಕದ ನಾಲ್ಕು ಋತುಮಾನಗಳಾವುವು?

2) ಕರ್ನಾಟಕದ ಮಳೆಗಾಲವನ್ನು ಕುರಿತು ಬರೆಯಿರಿ.

3) ಕರ್ನಾಟಕದಲ್ಲಿನ ಮಣ್ಣಿನ ವಿಧಗಳನ್ನು ತಿಳಿಸಿ.

4) ಕರ್ನಾಟಕದ ವಿವಿಧ ಸ್ವಾಭಾವಿಕ ಸಸ್ಯವರ್ಗಗಳನ್ನು ತಿಳಿಸಿ.

5) ಕರ್ನಾಟಕವನ್ನು ಶ್ರೀಗಂಧದ ನಾಡು ಎಂದು ಏಕೆ ಕರೆಯುತ್ತಾರೆ?

6) ನಮ್ಮ ಅರಣ್ಯಗಳಲ್ಲಿರುವ ಪ್ರಮುಖ ವನ್ಯಪ್ರಾಣಿಗಳನ್ನು ಹೆಸರಿಸಿ.

**III. ಹೊಂದಿಸಿ ಬರೆಯಿರಿ.**

| ಅ | ಆ |
|---|---|
| 1) ಆದಿಚುಂಚನಗಿರಿ | ಎ) ಪಕ್ಷಿಧಾಮ |
| 2) ಮಂದಗದ್ದೆ | ಬಿ) ರಾಷ್ಟ್ರೀಯ ಉದ್ಯಾನವನ |
| 3) ನಾಗರಹೊಳೆ | ಸಿ) ಎಲೆ ಉದುರಿಸುವ ಕಾಡು |
| 4) ಶ್ರೀಗಂಧದ ಮರ | ಡಿ) ನವಿಲುಧಾಮ |
| | ಈ) ಕೆಂಪುಮಣ್ಣು |

**IV. ಚಟುವಟಿಕೆ :**

1) ಕರ್ನಾಟಕದಲ್ಲಿನ ವನ್ಯಜೀವಿ ಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ಸಿದ್ಧಪಡಿಸಿ. ರಾಜ್ಯದ ಪಕ್ಷಿಧಾಮ ಮತ್ತು ವನ್ಯಜೀವಿಧಾಮಗಳ ಬಗ್ಗೆ ಪಟ್ಟಿಮಾಡಿರಿ.

**V. ಯೋಜನಾ ಕಾರ್ಯ :**

1) ನಿಮ್ಮ ಜಿಲ್ಲೆಯಲ್ಲಿ ಕಂಡುಬರುವ ಸಸ್ಯವರ್ಗಗಳ ಬಗ್ಗೆ ಗುಂಪಿನಲ್ಲಿ ಚರ್ಚಿಸಿ ವಿವರ ಬರೆಯಿರಿ.

©KTBS Not to be republished

# ಅಧ್ಯಾಯ – 4

# ಕರ್ನಾಟಕದ ಜಲಸಂಪನ್ಮೂಲಗಳು

## ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.

- *ಕರ್ನಾಟಕದ ಪ್ರಮುಖ ನದಿಗಳು.*
- *ಕರ್ನಾಟಕದ ನೀರಾವರಿಯ ವಿಧಗಳು.*
- *ಜಲವಿದ್ಯುಚ್ಛಕ್ತಿ ಉತ್ಪಾದನಾ ಕೇಂದ್ರಗಳು.*
- *ಕರ್ನಾಟಕದ ಪ್ರಮುಖ ಅಣೆಕಟ್ಟುಗಳು.*
- *ನದಿಗಳ ನೀರಿನ ಹಂಚಿಕೆ ವಿವಾದ ಹಾಗೂ ನದಿ ನೀರಿನ ಸಂರಕ್ಷಣೆಯ ಮಹತ್ವ.*

### ಕರ್ನಾಟಕದ ನದಿಗಳು

ಜಲ ಸಂಪನ್ಮೂಲಗಳಲ್ಲಿ ನದಿಗಳಿಗೆ ಮಹತ್ವದ ಸ್ಥಾನವಿದೆ. ಕರ್ನಾಟಕದ ನದಿ ಜಾಲಗಳನ್ನು ಮುಖ್ಯವಾಗಿ ಪೂರ್ವಾಭಿಮುಖವಾಗಿ ಹರಿಯುವ ನದಿಗಳು ಮತ್ತು ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳು ಎಂದು ಎರಡು ವಿಧಗಳಾಗಿ ವಿಂಗಡಿಸಬಹುದು.

1. **ಪೂರ್ವಾಭಿಮುಖವಾಗಿ ಹರಿಯುವ ನದಿಗಳು :** ಕೃಷ್ಣಾ, ಕಾವೇರಿ, ಪೆನ್ನಾರ್ ಮತ್ತು ಪಾಲಾರ್ ನದಿಗಳು ಪೂರ್ವಾಭಿಮುಖವಾಗಿ ಹರಿದು ಬಂಗಾಳ ಕೊಲ್ಲಿಯನ್ನು ಸೇರುವ ಪ್ರಮುಖ ನದಿಗಳು.

ಕೃಷ್ಣಾ ನದಿ ದಕ್ಷಿಣ ಭಾರತದ ಎರಡನೇ ಮುಖ್ಯ ನದಿ. ಇದು ಮಹಾಬಲೇಶ್ವರ ಎಂಬಲ್ಲಿ ಉಗಮ ಹೊಂದಿ 1392 ಕಿ.ಮೀ. ದೂರ ಪೂರ್ವದೆಡೆಗೆ ಹರಿದು ಬಂಗಾಳ ಕೊಲ್ಲಿ ಸೇರುತ್ತದೆ. ಆದರೆ ಇದು ಕರ್ನಾಟಕದಲ್ಲಿ 480 ಕಿ.ಮೀ. ದೂರ ಹರಿಯುವುದು. ಭೀಮ, ತುಂಗಭದ್ರ, ಘಟಪ್ರಭ ಮತ್ತು ಮಲಪ್ರಭ ಇದರ ಉಪನದಿಗಳಾಗಿವೆ. ಕೃಷ್ಣಾ ನದಿ ಉತ್ತರ ಕರ್ನಾಟಕದ ನೀರಾವರಿ ಮತ್ತು ಜಲವಿದ್ಯುತ್ ತಯಾರಿಕೆಗೆ ಅನುಕೂಲವಾಗಿದೆ.

ಕಾವೇರಿಯು ಕರ್ನಾಟಕದ ಅತಿ ಪ್ರಮುಖ ನದಿ. ದಕ್ಷಿಣ ಗಂಗೆ ಎಂದೇ ಪ್ರಸಿದ್ಧಿ. ಕೊಡಗು ಜಿಲ್ಲೆಯ ತಲಕಾವೇರಿಯಲ್ಲಿ ಉಗಮ ಹೊಂದಿ, ಕರ್ನಾಟಕ ಮತ್ತು ತಮಿಳುನಾಡುಗಳಲ್ಲಿ ಪೂರ್ವಾಭಿಮುಖವಾಗಿ 804 ಕಿ.ಮೀ. ದೂರ ಹರಿದು ಬಂಗಾಳ ಕೊಲ್ಲಿಗೆ ಸೇರುವುದು. ಕರ್ನಾಟಕದಲ್ಲಿ 380 ಕಿ.ಮೀ. ದೂರ ಹರಿಯುತ್ತದೆ. ಈ ನದಿಗೆ ಹಲವು ಉಪನದಿಗಳು ಸೇರುತ್ತವೆ. ಉದಾ: ಹೇಮಾವತಿ, ಹಾರಂಗಿ, ಲೋಕಪಾವನಿ, ಅರ್ಕಾವತಿ, ಶಿಂಷಾ, ಲಕ್ಷ್ಮಣತೀರ್ಥ, ಕಪಿಲೆ ಮತ್ತು ಸುವರ್ಣಾವತಿ. ಕೃಷಿ, ಜಲವಿದ್ಯುತ್ ತಯಾರಿಕೆ, ಕುಡಿಯುವ ನೀರು ಪೂರೈಕೆಗಳಿಗೆ ಈ ನದಿಗಳು ಬಹು ಉಪಯುಕ್ತವಾಗಿದೆ.

**ನಿಮಗೆ ತಿಳಿದಿರಲಿ:**

*ಕಾವೇರಿಯು ತನ್ನ ಪಾತ್ರದಲ್ಲಿ ಚುಂಚನಕಟ್ಟೆ, ಶಿವನಸಮುದ್ರ ಮತ್ತು ಹೊಗೇನ್‌ಕಲ್ ಎಂಬಲ್ಲಿ ಮೂರು ಜಲಪಾತಗಳು ಮತ್ತು ಶ್ರೀರಂಗಪಟ್ಟಣ, ಶಿವನಸಮುದ್ರ ಮತ್ತು ಶ್ರೀರಂಗ ಎಂಬಲ್ಲಿ 3 ದ್ವೀಪಗಳನ್ನು ನಿರ್ಮಿಸಿದೆ.*

**ನಿಮಗಿದು ಗೊತ್ತೆ ?**

- ಕೂಡಲಸಂಗಮದಲ್ಲಿ ಮಲಪ್ರಭಾ ನದಿಯು ಕೃಷ್ಣಾ ನದಿಯನ್ನು ಸೇರುತ್ತದೆ.
- ಕೂಡಲಿ ಎಂಬುದು ತುಂಗ ಮತ್ತು ಭದ್ರಾನದಿಗಳು ಸಂಗಮವಾಗುವ ಸ್ಥಳ.
- ಕೃಷ್ಣರಾಜ ಸಾಗರದ ಬಳಿ ಹೇಮಾವತಿ ನದಿಯು ಕಾವೇರಿ ನದಿಯನ್ನು ಸೇರುತ್ತದೆ.


©KTBS Not to be republished

ಪೆನ್ನಾರ್ ಮತ್ತು ಪಾಲಾರ್ ನದಿಗಳು ಕೋಲಾರ, ತುಮಕೂರು ಹಾಗೂ ಬೆಂಗಳೂರು ಜಿಲ್ಲೆಗಳಲ್ಲಿ ಹರಿದು ಅನಂತರ ಆಂಧ್ರಪ್ರದೇಶ ಮತ್ತು ತಮಿಳುನಾಡು ಪ್ರವೇಶಿಸುವುವು. ಉತ್ತರ ಪೆನ್ನಾರ್ ಮತ್ತು ದಕ್ಷಿಣ ಪೆನ್ನಾರ್ ಎಂಬ ಎರಡು ಪ್ರತ್ಯೇಕ ನದಿಗಳಿವೆ.

**ನಿಮಗೆ ತಿಳಿದಿರಲಿ :**

ಪೆನ್ನಾರ್ ನದಿಗೆ ಮತ್ತೊಂದು ಹೆಸರು ಪಿನಾಕಿನಿ. ತಮಿಳುನಾಡಿನಲ್ಲಿ ದಕ್ಷಿಣ ಪೆನ್ನಾರ್ ನದಿಯನ್ನು (ದಕ್ಷಿಣ ಪಿನಾಕಿನಿ) ಪೊನ್ನೈಯಾರ್ ಎಂದು ಕರೆಯುತ್ತಾರೆ.

**2. ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳು:** ಅನೇಕ ನದಿಗಳು ಮಲೆನಾಡಿನಲ್ಲಿ ಹುಟ್ಟಿ ಪಶ್ಚಿಮಕ್ಕೆ ಹರಿದು ಅರಬ್ಬೀ ಸಮುದ್ರವನ್ನು ಸೇರುತ್ತವೆ. ಉದಾ: ಶರಾವತಿ, ಕಾಳಿ, ಗಂಗಾವಳಿ (ಬೇಡ್ತಿ), ನೇತ್ರಾವತಿ, ವಾರಾಹಿ, ಅಘನಾಶಿನಿ ಇತ್ಯಾದಿ. ಇವು ಕಡಿದಾದ ಇಳಿಜಾರಿನಲ್ಲಿ ಹರಿಯುತ್ತಾ ಜಲಪಾತಗಳನ್ನು ಸೃಷ್ಟಿಸುತ್ತವೆ. ಜಲವಿದ್ಯುತ್ ತಯಾರಿಕೆಗೆ ನೆರವಾಗುತ್ತವೆ. ಶರಾವತಿ ನದಿ ನಿರ್ಮಿತ ಜೋಗ್ ಜಲಪಾತ ಜಗತ್ಪ್ರಸಿದ್ಧವಾದುದು. ಇದು ಭಾರತದ ಎತ್ತರದ ಜಲಪಾತವಾಗಿದೆ (253 ಮೀ.). ರಾಜ್ಯದ ಇತರೆ ಪ್ರಮುಖ ಜಲಪಾತಗಳೆಂದರೆ ಗೋಕಾಕ್ (ಘಟಪ್ರಭ), ಬಂಡಾಜೆ (ನೇತ್ರಾವತಿ), ಉಂಚಳ್ಳಿ (ಅಘನಾಶಿನಿ), ಛಾಯ ಭಗವತಿ (ದೋಣಿ ನದಿ), ಚುಂಚನಕಟ್ಟೆ, ಶಿಂಷಾ, ಗಗನಚುಕ್ಕಿ, ಭರಚುಕ್ಕಿ (ಕಾವೇರಿ), ಮಾಗೋಡು ಜಲಪಾತ (ಬೇಡ್ತಿ) ಇತ್ಯಾದಿ.




## ಕರ್ನಾಟಕದ ನೀರಾವರಿ


ಕೃಷಿಗಾಗಿ ಕೃತಕವಾಗಿ ನೀರು ಪೂರೈಸುವುದೇ ನೀರಾವರಿ. ಅಕಾಲಿಕ ಮತ್ತು ಅಸಮಾನ ಮಳೆಯ ಹಂಚಿಕೆ ಹಾಗೂ ಕೃಷಿ ಪ್ರಗತಿಗಾಗಿ ನೀರಾವರಿ ಅತ್ಯಾವಶ್ಯಕ. ಕರ್ನಾಟಕದಲ್ಲಿ ಪುರಾತನ ಕಾಲದಿಂದಲೂ ವಿವಿಧ ನೀರಾವರಿ ಮೂಲಗಳಿಂದ ವ್ಯವಸಾಯ ಮಾಡುವುದು ರೂಢಿಯಲ್ಲಿದೆ. ಪ್ರಮುಖ ನೀರಾವರಿ ಮೂಲಗಳೆಂದರೆ ಬಾವಿ, ಕಾಲುವೆ, ಕೆರೆ ಮುಖ್ಯವಾದವು. ಹಿಂದೆ ಹಳ್ಳಿಗಳಲ್ಲಿ ಬಾವಿಗಳನ್ನು ನಿರ್ಮಿಸಿ ಅವುಗಳ ನೀರನ್ನು ನೀರಾವರಿಗೆ ಬಳಸಲಾಗುತ್ತಿತ್ತು. ಅನಂತರ ಕಾಲುವೆಗಳನ್ನು ನಿರ್ಮಿಸಿ ನದಿಗಳಿಂದ ನೀರನ್ನು ವ್ಯವಸಾಯಕ್ಕೆ ಬಳಸುವುದು ರೂಢಿಗೆ ಬಂದಿತು. ದೊಡ್ಡ ದೊಡ್ಡ ಕೆರೆಗಳು ಈಗಲೂ ಇವೆ. ಉದಾ : ದಾವಣಗೆರೆ ಜಿಲ್ಲೆಯ ಶಾಂತಿಸಾಗರ, ಹನ್ನೊಂದನೆಯ ಶತಮಾನದಲ್ಲಿ ತೋಡಿದ ಕಲ್ಬುರ್ಗಿ ಜಿಲ್ಲೆಯ ಬಾವಿಗಳು, ವಿಜಯನಗರದ ಅರಸರ ಕಾಲದ ತುಂಗಭದ್ರಾ ಕಾಲುವೆಗಳು, ಮೈಸೂರು ಅರಸರು ನಿರ್ಮಿಸಿದ

©KTBS
Not to be republished

ವಾಣಿವಿಲಾಸ ಸಾಗರ ಮತ್ತು ಕೃಷ್ಣರಾಜಸಾಗರ ಅಣೆಕಟ್ಟೆ ಮೊದಲಾದವು ಕರ್ನಾಟಕದ ನೀರಾವರಿ ಬೆಳವಣಿಗೆಯ ಮಾರ್ಗ ಸೂಚಿಗಳಾಗಿವೆ. ಇಂದು ರಾಜ್ಯದಲ್ಲಿ ನದಿಗಳ ನೀರು ಮತ್ತು ಅಂತರ್ಜಲ ಸಂಪತ್ತು ಎರಡನ್ನೂ ನೀರಾವರಿಗೆ ಉಪಯೋಗಿಸಿಕೊಳ್ಳಲಾಗುತ್ತಿದೆ. ರಾಜ್ಯದಲ್ಲಿ ಸಾಗುವಳಿ ಭೂಮಿಯ ಶೇ.26.2 ಭಾಗವು ನೀರಾವರಿ ಸೌಲಭ್ಯ ಹೊಂದಿದೆ. ಭಾರತದ ನೀರಾವರಿ ಕ್ಷೇತ್ರದಲ್ಲಿ ಕರ್ನಾಟಕದ ಸ್ಥಾನ 9ನೆಯದಾಗಿದೆ.

ರಾಯಚೂರು ಜಿಲ್ಲೆಯು ರಾಜ್ಯದಲ್ಲೇ ಅತಿ ಹೆಚ್ಚು ಕಾಲುವೆ ನೀರಾವರಿ ಹೊಂದಿದೆ. ಶಿವಮೊಗ್ಗ ಜಿಲ್ಲೆಯಲ್ಲಿ ಅತಿ ಹೆಚ್ಚು ಕೆರೆ ನೀರಾವರಿ ಪ್ರದೇಶವಿದೆ. ಬೆಳಗಾವಿ ಜಿಲ್ಲೆಯು ರಾಜ್ಯದಲ್ಲಿ ಹೆಚ್ಚು ಬಾವಿ ನೀರಾವರಿ ಸೌಲಭ್ಯವನ್ನು ಹೊಂದಿದೆ. ಇತ್ತೀಚೆಗೆ ಕೊಳವೆ ಬಾವಿಗಳ ಪ್ರಮಾಣ ಹೆಚ್ಚಾಗಿದೆ. ಜಿಲ್ಲಾವಾರು ನೀರಾವರಿ ಪ್ರದೇಶವನ್ನು ತೆಗೆದುಕೊಂಡರೆ ಬೆಳಗಾವಿ ಜಿಲ್ಲೆ ಮೊದಲ ಸ್ಥಾನದಲ್ಲಿದೆ. ಪ್ರತಿಯಾಗಿ ಕೊಡಗು ಜಿಲ್ಲೆ ಕೊನೆಯ ಸ್ಥಾನದಲ್ಲಿ ಬರುವುದು.

**ನಿಮಗೆ ತಿಳಿದಿರಲಿ :**
ಕರ್ನಾಟಕದ ಮೊಟ್ಟಮೊದಲ ದೊಡ್ಡ ಜಲಾಶಯ ವಾಣಿವಿಲಾಸ ಸಾಗರ 1907ರಲ್ಲಿ ಹಿರಿಯೂರು ಬಳಿ ನಿರ್ಮಿಸಲಾಯಿತು. ಇದನ್ನು 'ಮಾರಿಕಣಿವೆ ಯೋಜನೆ' ಎಂದೂ ಕರೆಯುವರು.



ನೀರಾವರಿ ಕ್ಷೇತ್ರದ ಶೇಕಡಾ ಪ್ರಮಾಣ

**ತಿಳಿದಿರಲಿ :**
**ಕರ್ನಾಟಕದ ಪ್ರಮುಖ ದೊಡ್ಡ ಕೆರೆಗಳು**
ಮದಗದ ಕೆರೆ (ಕಡೂರು ಬಳಿ), ತೊಣ್ಣೂರುಕೆರೆ (ಪಾಂಡವಪುರ ಬಳಿ) ಹೈರಿಕೆರೆ (ಹುಣಸೂರು), ರಾಮುಸಮುದ್ರ ಕೆರೆ (ಚಿಕ್ಕಬಳ್ಳಾಪುರ), ಬೈರಸಾಗರ ಕೆರೆ (ಗುಡಿಬಂಡೆ),ಕಳ್ಳಂಬೆಳ್ಳ ಕೆರೆ (ಶಿರಾ) ಬೈರಮಂಗಲ ಕೆರೆ (ಬಿಡದಿ) ಇತ್ಯಾದಿ.

ರಾಜ್ಯದ ಪ್ರಮುಖ ಕಾಲುವೆ ನೀರಾವರಿ ಯೋಜನೆಗಳೆಂದರೆ, ಕೃಷ್ಣರಾಜಸಾಗರ ಅಣೆಕಟ್ಟು, ತುಂಗಭದ್ರ ಹೇಮಾವತಿ, ಕಬಿನಿ, ಹಾರಂಗಿ, ವಾಣಿವಿಲಾಸ ಸಾಗರ (ಮಾರಿಕಣಿವೆ), ಆಲಮಟ್ಟಿ, ನಾರಾಯಣಪುರ, ಮಲಪ್ರಭಾ, ಕಾರಂಜಾ, ಬೆಣ್ಣೆತೊರೆ ಯೋಜನೆ, ಹಿಪ್ಪರಗಿ ಬ್ಯಾರೇಜ್, ಭದ್ರಾ ಯೋಜನೆ ಮೊದಲಾದವು.

## ಜಲವಿದ್ಯುಚ್ಛಕ್ತಿ

ಭಾರತದಲ್ಲಿ ಮೊಟ್ಟಮೊದಲಿಗೆ ಜಲವಿದ್ಯುಚ್ಛಕ್ತಿ ತಯಾರಿಕೆಯಲ್ಲಿ ಯಶಸ್ಸು ಪಡೆದ ಹಿರಿಮೆ ಕರ್ನಾಟಕಕ್ಕೆ ಸಲ್ಲುತ್ತದೆ. ಕಲ್ಲಿದ್ದಲು ಮತ್ತು ಪೆಟ್ರೋಲಿಯಂಗಳು ಲಭ್ಯವಿಲ್ಲದ ನಮ್ಮ ರಾಜ್ಯದಲ್ಲಿ ಜಲಶಕ್ತಿ ತಯಾರಿಕೆಗೆ ಅಪಾರವಾದ ಅವಕಾಶವಿದೆ. ಸರ್ವತ್ರ ಮತ್ತು ಹೆಚ್ಚು ಶಕ್ತಿ ಪೂರೈಸುವಂತಹ ಈ ಸಂಪತ್ತನ್ನು ಸಮೃದ್ಧವಾಗಿ ನೀಡುವ ನದಿ ಕಣಿವೆಗಳು ಕರ್ನಾಟಕದಲ್ಲಿವೆ. ಪೂರ್ವಕ್ಕೆ ಹರಿಯುವ ನದಿಗಳಿಗಿಂತ ಪಶ್ಚಿಮಕ್ಕೆ ಹರಿಯುವ ನದಿಗಳಲ್ಲಿ ಜಲಶಕ್ತಿ ಸಾಮರ್ಥ್ಯ ಹೆಚ್ಚು.

ಕೋಲಾರದ ಚಿನ್ನದ ಗಣಿಗೆ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಲು 1902 ರಲ್ಲಿ ಶಿವನಸಮುದ್ರದ ಬಳಿ ವಿದ್ಯುದಾಗಾರವು ಕಾರ್ಯ ಆರಂಭಿಸಿತು. ಇದು ಕಾವೇರಿ ನದಿಗೆ ನಿರ್ಮಿಸಿದ ಯೋಜನೆ. ಇದಕ್ಕೆ ಸಮೀಪದಲ್ಲೇ ರಾಜ್ಯದ ಎರಡನೆಯ ಜಲವಿದ್ಯುತ್ ಯೋಜನೆಯನ್ನು 1940 ರಲ್ಲಿ ಶಿಂಷಾ ನದಿಗೆ ನಿರ್ಮಿಸಲಾಯಿತು. ಹೆಚ್ಚಾದ ವಿದ್ಯುತ್ ಬೇಡಿಕೆಯನ್ನು ಪೂರೈಸಲು ಶರಾವತಿ ನದಿಯ ಜೋಗ್ ಜಲಪಾತದ ಬಳಿ ಮಹಾತ್ಮ ಗಾಂಧಿ ಜಲವಿದ್ಯುತ್ ಯೋಜನೆ (1947) ಸ್ಥಾಪನೆಯಾಯಿತು. ತರುವಾಯ ಪಂಚವಾರ್ಷಿಕ


©KTBS Not to be republished

ಯೋಜನೆಗಳಡಿಯಲ್ಲಿ ಇನ್ನೂ ಹಲವು ಜಲವಿದ್ಯುಚ್ಛಕ್ತಿ ಯೋಜನೆಗಳು ಅಭಿವೃದ್ಧಿಗೊಂಡವು. ಪರಿಣಾಮವಾಗಿ ಕರ್ನಾಟಕವು ಜಲವಿದ್ಯುತ್ ಉತ್ಪಾದನೆಯಲ್ಲಿ ಭಾರತದಲ್ಲಿಯೇ ಮೊದಲನೆಯದಾಗಿದೆ.

**ಕರ್ನಾಟಕದ ಪ್ರಮುಖ ಜಲವಿದ್ಯುಚ್ಛಕ್ತಿ ಯೋಜನೆಗಳು :** ಶಿವನಸಮುದ್ರ, ಶಿಂಷಾ (ಕಾವೇರಿ ನದಿ), ಮಹಾತ್ಮ ಗಾಂಧಿ ಜಲವಿದ್ಯುತ್ ಕೇಂದ್ರ (ಶರಾವತಿ ನದಿ), ಸೂಪ, ನಾಗಝರಿ, ಕದ್ರ ಮತ್ತು ಕೊಡಸಳ್ಳಿ (ಕಾಳಿನದಿ), ವಾರಾಹಿ ಮತ್ತು ಮಾರಿಕಣಿವೆ, ಭದ್ರ, ತುಂಗಭದ್ರಾ ಮತ್ತು ಆಲಮಟ್ಟಿ (ಕೃಷ್ಣಾ ನದಿ) ಯೋಜನೆಗಳು.

### ನದಿ ಜಲವಿವಾದಗಳು

ಭಾರತದಲ್ಲಿ ಅನೇಕ ನದಿಗಳು ಅಂತರರಾಜ್ಯಗಳ ಮೂಲಕ ಹರಿಯುತ್ತಿದ್ದು, ಅವುಗಳ ನೀರಿನ ಬಳಕೆಯಲ್ಲಿ ವಿವಾದಗಳು ತಲೆದೋರಿವೆ. ಅವುಗಳಲ್ಲಿ ಕರ್ನಾಟಕ ರಾಜ್ಯದ ಕಾವೇರಿ ಮತ್ತು ಕೃಷ್ಣಾ ನದಿಗಳ ಜಲವಿವಾದಗಳೂ ಸೇರಿವೆ. ಕಾವೇರಿ ನದಿಯ ಜಲಾನಯನ ಪ್ರದೇಶ ಕರ್ನಾಟಕ, ತಮಿಳುನಾಡು, ಕೇರಳ ಮತ್ತು ಪುದುಚೇರಿ ರಾಜ್ಯಗಳಲ್ಲಿ ಹರಡಿದೆ. ಕರ್ನಾಟಕ ಮತ್ತು ತಮಿಳುನಾಡುಗಳ ನಡುವೆ ನೀರಿನ ಹಂಚಿಕೆಗೆ ಸಂಬಂಧಿಸಿದ ವಿವಾದ ಶತಮಾನಕ್ಕೂ ಹಳೆಯದು, ಈಗಲೂ ಇದೊಂದು ಜ್ವಲಂತ ಸಮಸ್ಯೆಯಾಗಿ ಮುಂದುವರಿದಿದೆ. ಕೃಷ್ಣಾ ನದಿಯೂ ಅಂತರರಾಜ್ಯಗಳಲ್ಲಿ ಹರಿಯುವ ನದಿಯಾಗಿದ್ದು, ಮಹಾರಾಷ್ಟ್ರ, ಕರ್ನಾಟಕ ಮತ್ತು ಆಂಧ್ರಪ್ರದೇಶಗಳಲ್ಲಿ ಹರಿಯುತ್ತದೆ. ಇದೂ ಕೂಡ ಕರ್ನಾಟಕದ ಮತ್ತೊಂದು ನದಿ ಜಲವಿವಾದಕ್ಕೆ ಎಡೆಮಾಡಿಕೊಟ್ಟಿದೆ.




### ನದಿ–ಜಲ ಸಾಮರಸ್ಯ

ಭಾರತದಲ್ಲಿ ನದಿಗಳು ಹಲವಾರು ರಾಜ್ಯಗಳಲ್ಲಿ ಹರಿಯುತ್ತವೆ. ಉದಾ: ಕಾವೇರಿ ನದಿಯು ಕರ್ನಾಟಕ, ತಮಿಳುನಾಡು, ಕೇರಳ ಮತ್ತು ಪಾಂಡಿಚೇರಿ ರಾಜ್ಯಗಳಲ್ಲಿ ಹರಿಯುತ್ತದೆ. ಕೃಷ್ಣಾ ನದಿಯು ಮಹಾರಾಷ್ಟ್ರ, ಕರ್ನಾಟಕ, ಆಂಧ್ರ ಪ್ರದೇಶಗಳಲ್ಲಿ ಹರಿಯುತ್ತದೆ. ಈ ರಾಜ್ಯಗಳು ಜಲವಿವಾದಗಳಿದ್ದಾಗ್ಯೂ ನದಿಯ ನೀರನ್ನು ಕೃಷಿ ಕ್ಷೇತ್ರಕ್ಕೆ, ಕೈಗಾರಿಕಾ ಕ್ಷೇತ್ರಕ್ಕೆ ಮತ್ತು ಕುಡಿಯುವ ನೀರಿನ ಉದ್ದೇಶಕ್ಕಾಗಿ ಬಳಸಿಕೊಳ್ಳುತ್ತಿದ್ದಾರೆ.

© KTBS Not to be republished

## ಅಭ್ಯಾಸಗಳು

**I. ಬಿಟ್ಟಿರುವ ಸ್ಥಳಗಳನ್ನು ಸೂಕ್ತಪದಗಳಿಂದ ಭರ್ತಿಮಾಡಿರಿ.**

1. ಕಾವೇರಿ ನದಿಯು ಕೊಡಗುಜಿಲ್ಲೆಯ ______________ ಎಂಬಲ್ಲಿ ಉಗಮ ಹೊಂದುತ್ತದೆ.
2. ಪ್ರಸಿದ್ಧ ಜೋಗ್ ಜಲಪಾತ ______________ ನದಿಯಿಂದ ಸೃಷ್ಟಿಯಾಗಿದೆ.
3. ಕೃಷ್ಣರಾಜಸಾಗರ ಅಣೆಕಟ್ಟು ______________ ಜಿಲ್ಲೆಯಲ್ಲಿದೆ.
4. ಕರ್ನಾಟಕದ ಮೊದಲ ಜಲವಿದ್ಯುತ್ ಉತ್ಪಾದನಾ ಕೇಂದ್ರ ______________ .

5) ಆಲಮಟ್ಟಿ ಅಣೆಕಟ್ಟೆಯನ್ನು ______________ ನದಿಗೆ ನಿರ್ಮಿಸಲಾಗಿದೆ.

**II. ಗುಂಪುಗಳಲ್ಲಿ ಚರ್ಚಿಸಿ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

1. ಕರ್ನಾಟಕದ ಪ್ರಮುಖ ನದಿಗಳನ್ನು ಹೆಸರಿಸಿ.
2. ಕೃಷ್ಣಾನದಿಯನ್ನು ಕುರಿತು ಟಿಪ್ಪಣಿ ಬರೆಯಿರಿ.
3. ಕಾವೇರಿ ನದಿಯ ಉಪನದಿಗಳಾವುವು?
4. ಕರ್ನಾಟಕ ನೀರಾವರಿಯ ವಿಧಗಳನ್ನು ತಿಳಿಸಿ.
5. ನಮ್ಮ ರಾಜ್ಯದ ಪ್ರಮುಖ ಜಲವಿದ್ಯುತ್ ಉತ್ಪಾದನಾ ಕೇಂದ್ರಗಳನ್ನು ಹೆಸರಿಸಿ.
6. ನದಿಗಳು ರಾಜ್ಯಗಳ ನಡುವೆ ಹೇಗೆ ಸಾಮರಸ್ಯ ಬೆಳೆಸುತ್ತವೆ?

**III. ಹೊಂದಿಸಿ ಬರೆಯಿರಿ.**

| C | D |
|---|---|
| 1) ಲಿಂಗನಮಕ್ಕಿ ಅಣೆಕಟ್ಟು | ಎ) ಜಲವಿದ್ಯುತ್ ಯೋಜನೆ |
| 2) ಗಗನಚುಕ್ಕಿ, ಭರಚುಕ್ಕಿ ಜಲಪಾತ | ಬಿ) ನದಿ |
| 3) ವಾಣಿವಿಲಾಸ ಸಾಗರ | ಸಿ) ಕಾಳಿ ನದಿ |
| 4) ನಾಗಝರಿ | ಡಿ) ಕಾವೇರಿ ನದಿ |
| 5) ಪೆನ್ನಾರ್ | ಇ) ಶರಾವತಿ ನದಿ |
| | ಎಫ್) ಮಾರಿಕಣಿವೆ |

**IV. ಚಟುವಟಿಕೆಗಳು :**

1) ಕರ್ನಾಟಕದಲ್ಲಿ ಹರಿಯುವ ನದಿಗಳು ಮತ್ತು ಅವುಗಳ ಉಪನದಿಗಳ ಪಟ್ಟಿ ಮಾಡಿರಿ.

2) ಕರ್ನಾಟಕದ ಪ್ರಮುಖ ಜಲವಿದ್ಯುತ್ ಉತ್ಪಾದನಾ ಕೇಂದ್ರಗಳ ಪಟ್ಟಿ ಸಿದ್ಧಪಡಿಸಿ.

**V. ಯೋಜನಾಕಾರ್ಯ :**

1) ನಮ್ಮ ರಾಜ್ಯದ ಅಣೆಕಟ್ಟುಗಳನ್ನು ಕರ್ನಾಟಕದ ನಕ್ಷೆಯಲ್ಲಿ ಗುರುತಿಸಿ ಮತ್ತು ಹೆಸರಿಸಿ.

2) ನಿಮ್ಮ ವಾಸಸ್ಥಳಕ್ಕೆ ಸಮೀಪದ ಕೆರೆ, ಕಾಲುವೆ, ಹೊಳೆ, ನದಿ, ಕಡಲು ಇಲ್ಲಿಗೆ ಭೇಟಿನೀಡಿ ಅವುಗಳ ಮಹತ್ವವನ್ನು ಕುರಿತು ಚರ್ಚಿಸಿ.

◈ ◈ ◈

Not to be republished ©KTBS

# ಅಧ್ಯಾಯ – 5

# ಕರ್ನಾಟಕದ ಭೂ ಸಂಪತ್ತು

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- *ಕರ್ನಾಟಕದ ಭೂ ಬಳಕೆಯ ವಿಧಗಳು.*
- *ವ್ಯವಸಾಯದ ಪ್ರಾಮುಖ್ಯತೆ, ವಿಧಗಳು.*
- *ಕರ್ನಾಟಕದ ಪ್ರಮುಖ ಬೆಳೆಗಳ ಹಂಚಿಕೆ ಮತ್ತು ಉತ್ಪಾದನೆ.*

ಕರ್ನಾಟಕ ರಾಜ್ಯವು ಭೌಗೋಳಿಕವಾಗಿ ಉತ್ತಮ ಸ್ಥಾನದಲ್ಲಿದೆ. ಅದು ವೈವಿಧ್ಯ ಭೂಸ್ವರೂಪಗಳು, ಮಣ್ಣು, ವನಸ್ಪತಿ, ಖನಿಜಗಳು, ನದಿ ಮತ್ತು ಅಂತರ್ಜಲ ಸಂಪತ್ತು ಇತ್ಯಾದಿಗಳನ್ನೊಳಗೊಂಡಿದೆ. ಇಂತಹ ಅಮೂಲ್ಯವಾದ ನೈಸರ್ಗಿಕ ಸಂಪನ್ಮೂಲಗಳಲ್ಲಿ ಭೂಮಿ ಅಮೂಲ್ಯವಾದುದು. ಅದರ ಸದುಪಯೋಗ ರಾಜ್ಯದ ಪ್ರಗತಿಗೆ ಸೂಚಕವಾಗುತ್ತದೆ.


## ಭೂ ಬಳಕೆ

ಭೂಮಿಯನ್ನು (ನೆಲ) ವಿವಿಧ ಉದ್ದೇಶಗಳಿಗೆ ಬಳಸುವುದನ್ನು **'ಭೂ ಬಳಕೆ'** ಎನ್ನುವರು. ಇದರಲ್ಲಿ ಸಾಗುವಳಿ ಭೂಮಿ, ಅರಣ್ಯಪ್ರದೇಶ, ಬೀಳುಭೂಮಿ, ಕೃಷಿಯೇತರ ವಸತಿ, ರಸ್ತೆ, ರೈಲುಮಾರ್ಗ, ಅಣೆಕಟ್ಟು, ಕಾಲುವೆ ಮುಂತಾದವುಗಳ ನಿರ್ಮಾಣ ಮೊದಲಾದವು ಸೇರುವುವು. ಭೂಮಿಯ ಸಮರ್ಪಕ ಮತ್ತು ಸೂಕ್ತ ಬಳಕೆ ಆರ್ಥಿಕಾಭಿವೃದ್ಧಿಯ ತಳಹದಿ ಇದ್ದಂತೆ.

ಕರ್ನಾಟಕ ರಾಜ್ಯವು ಒಟ್ಟು 19.05 ಲಕ್ಷ ಹೆಕ್ಟೇರ್ ಭೌಗೋಳಿಕ ಪ್ರದೇಶವನ್ನು ಹೊಂದಿದ್ದು, ಅದು ಈ ಕೆಳಕಂಡ ಪ್ರಮುಖ ಉದ್ದೇಶಗಳಿಗೆ ಬಳಕೆಯಾಗುತ್ತದೆ.

## ಕರ್ನಾಟಕದ ಭೂ ಬಳಕೆಯ ಮಾದರಿಗಳು

**1. ನಿವ್ವಳ ಸಾಗುವಳಿ ಭೂಮಿ :** ಒಟ್ಟು ಸಾಗುವಳಿಗೆ ಬಳಕೆಯಾದ ಭೂಮಿ ರಾಜ್ಯದ ಎಲ್ಲಾ ಭಾಗಗಳಲ್ಲಿ ಒಂದೇ ರೀತಿಯಾಗಿಲ್ಲ. ಕಲಬುರಗಿ ಜಿಲ್ಲೆಯು ರಾಜ್ಯದಲ್ಲೇ ಅತಿ ಹೆಚ್ಚು ಸಾಗುವಳಿ ಭೂಮಿಯನ್ನು ಹೊಂದಿದೆ. ಅನಂತರದ ಸ್ಥಾನಗಳಲ್ಲಿ ಬೆಳಗಾವಿ, ವಿಜಯಪುರ, ತುಮಕೂರು, ರಾಯಚೂರು, ಬಾಗಲಕೋಟೆ, ಬಳ್ಳಾರಿ, ಚಿತ್ರದುರ್ಗ ಮತ್ತು ಮೈಸೂರು ಜಿಲ್ಲೆಗಳು ಬರುತ್ತವೆ. ತೀವ್ರ ನಗರೀಕರಣದಿಂದ ಬೆಂಗಳೂರು ಜಿಲ್ಲೆ ಕನಿಷ್ಠ ಸಾಗುವಳಿ ಭೂಮಿಯನ್ನು ಹೊಂದಿದೆ.




©KTBS Not to be republished

## ವಿವಿಧ ಭೂ ಬಳಕೆಯ ಶೇಕಡ ಪ್ರಮಾಣ

**2. ಅರಣ್ಯ ಪ್ರದೇಶ :** ಉತ್ತರ ಕನ್ನಡ ಜಿಲ್ಲೆಯು ಹೆಚ್ಚು ಅರಣ್ಯ ಪ್ರದೇಶವನ್ನು ಹೊಂದಿದೆ. ಶಿವಮೊಗ್ಗ, ಚಾಮರಾಜನಗರ, ಚಿಕ್ಕಮಗಳೂರು, ಕೊಡಗು, ಬೆಳಗಾವಿ, ದಕ್ಷಿಣ ಕನ್ನಡ, ಉಡುಪಿ, ಬಳ್ಳಾರಿ ಜಿಲ್ಲೆಗಳಲ್ಲಿಯೂ ಅರಣ್ಯ ಪ್ರದೇಶ ಹೆಚ್ಚಾಗಿ ಕಂಡುಬರುತ್ತದೆ. ಬಿಜಾಪುರ ಜಿಲ್ಲೆಯು ಅತಿ ಕನಿಷ್ಠ ಅರಣ್ಯ ಪ್ರದೇಶವನ್ನು ಹೊಂದಿದೆ. ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಯಚೂರು, ಬೀದರ್ ಮತ್ತು ಗದಗ ಜಿಲ್ಲೆಗಳಲ್ಲಿ ಕಡಿಮೆ.

**3. ಸಾಗುವಳಿಗೆ ಲಭ್ಯವಿಲ್ಲದ ಭೂಮಿ :** ಇದು ವ್ಯವಸಾಯಕ್ಕೆ ಬದಲು ಇನ್ನಿತರ ಹಲವು ಉದ್ದೇಶಗಳಿಗೆ ಭೂಬಳಕೆಯಾಗುವುದನ್ನು ಒಳಗೊಂಡಿದೆ. ರೈಲು ಮಾರ್ಗ, ರಸ್ತೆ, ವಸತಿ, ಕೈಗಾರಿಕೆ, ನೀರಾವರಿ ಯೋಜನೆಗಳು ಇವುಗಳಲ್ಲಿ ಮುಖ್ಯವಾದವುಗಳು. ಇತ್ತೀಚೆಗೆ ಅಭಿವೃದ್ಧಿಗಾಗಿ ಇಂತಹ ಭೂ ಬಳಕೆ ಹೆಚ್ಚಾಗುತ್ತಿದೆ. ಬೆಂಗಳೂರು ನಗರ ಜಿಲ್ಲೆ ಮೊದಲ ಸ್ಥಾನದಲ್ಲಿದೆ. ಶಿವಮೊಗ್ಗ, ತುಮಕೂರು, ಬೆಳಗಾವಿ, ಬಳ್ಳಾರಿ, ಮೈಸೂರು, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿಯೂ ಹೆಚ್ಚು. ಆದರೆ ಇದು ಬೀದರ್ ಜಿಲ್ಲೆಯಲ್ಲಿ ಅತಿ ಕಡಿಮೆ ಇದ್ದು, ಉಳಿದ ಜಿಲ್ಲೆಗಳಲ್ಲಿ ಸಾಧಾರಣ ಪ್ರಮಾಣದಲ್ಲಿದೆ.

**4. ಸಾಗುವಳಿ ಮಾಡದ ಇತರೆ ಭೂಮಿ :** ಇದರಲ್ಲಿ ಖಾಯಂ ಗೋಮಾಳ, ವೃಕ್ಷ ಮತ್ತು ತೋಪುಗಳು ಸೇರುತ್ತವೆ. ಶಿವಮೊಗ್ಗ, ತುಮಕೂರು, ಕೋಲಾರ, ಚಿಕ್ಕಮಗಳೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಹೆಚ್ಚು ಕಂಡುಬರುತ್ತವೆ. ಗದಗ, ಬಾಗಲಕೋಟೆ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಕನಿಷ್ಠ. ಇಂತಹ ಭೂಮಿಯನ್ನು ಸುಧಾರಿಸಿ ಕೃಷಿಗಾಗಿ ಬಳಕೆ ಮಾಡಬಹುದು.

**5. ಬೀಳು ಭೂಮಿ :** ಎರಡು ಅಥವಾ ಮೂರು ವರ್ಷಗಳಿಗಿಂತ ಹೆಚ್ಚು ಅವಧಿಯವರೆಗೆ ನಿರಂತರವಾಗಿ ಸಾಗುವಳಿಯಾಗದ ಭೂಮಿಯನ್ನು ಬೀಳು ಭೂಮಿಯೆನ್ನುವರು. ಕಲಬುರಗಿ ಜಿಲ್ಲೆ ಅಧಿಕ ಬೀಳು ಭೂಮಿಯನ್ನು ಹೊಂದಿದೆ. ರಾಯಚೂರು, ಬೆಳಗಾವಿ, ವಿಜಯಪುರ, ಕೊಪ್ಪಳ, ತುಮಕೂರು ಜಿಲ್ಲೆಗಳು ನಂತರದ ಸ್ಥಾನಗಳಲ್ಲಿವೆ. ದಕ್ಷಿಣಕನ್ನಡ, ಚಿಕ್ಕಮಗಳೂರು, ಕೊಡಗು, ಮೈಸೂರು, ಉತ್ತರ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಬೀಳು ಭೂಮಿ ಕಡಿಮೆ ಇದ್ದರೂ ಇಲ್ಲಿಯೂ ಅದರ ವಿಸ್ತಾರ ಹೆಚ್ಚಾಗುತ್ತಿದೆ. ಇಂತಹ ಭೂಮಿಯನ್ನು ಸುಧಾರಣೆ ಮಾಡಿಕೊಳ್ಳಲು ಸಾಧ್ಯವಿದೆ.

## ವ್ಯವಸಾಯ

ಭೂಮಿಯನ್ನು ಉಳುಮೆಮಾಡಿ ಬೆಳೆ ಬೆಳೆಯುವುದನ್ನು ವ್ಯವಸಾಯ ಎನ್ನುವರು. ಅಲ್ಲದೆ ಪಶುಪಾಲನೆ, ಕೋಳಿ ಸಾಕಣೆ, ಜೇನು ಸಾಕಣೆ, ಮೀನುಗಾರಿಕೆ ಹಾಗೂ ರೇಷ್ಮೆ ಕೃಷಿಯೂ ವ್ಯವಸಾಯಕ್ಕೆ ಸೇರಿದೆ. ಕರ್ನಾಟಕದ ಶೇ.61.4 ಭಾಗದಷ್ಟು ಜನರು ಗ್ರಾಮೀಣ ಪ್ರದೇಶಗಳಲ್ಲಿ ವಾಸವಾಗಿರುವುದರಿಂದ ಅವರು ವ್ಯವಸಾಯವನ್ನೇ ತಮ್ಮ ಜೀವನೋಪಾಯಕ್ಕಾಗಿ ಅವಲಂಬಿಸಿದ್ದಾರೆ.

**ಪ್ರಾಮುಖ್ಯತೆ:** ಕರ್ನಾಟಕದ ಪುರಾತನ ಮೂಲವೃತ್ತಿಗಳಲ್ಲಿ ವ್ಯವಸಾಯವೂ ಒಂದು. ಇದು ಮುಖ್ಯ ಜೀವನಾಧಾರಿತ ವೃತ್ತಿ. ನಮ್ಮ ರಾಜ್ಯದ ಆರ್ಥಿಕತೆಯ ಬೆನ್ನೆಲುಬು. ಆರ್ಥಿಕಾಭಿವೃದ್ಧಿಯು ವ್ಯವಸಾಯವನ್ನಾಧರಿಸಿದೆ. ಜೀವನ ನಡೆಸಲು ಉದ್ಯೋಗವನ್ನು ನೀಡಿದೆ. ಜನರಿಗೆ ಆಹಾರ, ಕೈಗಾರಿಕೆಗಳಿಗೆ ಕಚ್ಚಾ ವಸ್ತುಗಳನ್ನು ಒದಗಿಸುತ್ತದೆ. ರಾಜ್ಯದ ಆದಾಯದ ಮೂಲವಾಗಿದೆ. ವಿದೇಶಿ ವಿನಿಮಯ ಗಳಿಸಿಕೊಡುತ್ತದೆ. ಕಾಫಿ, ರೇಷ್ಮೆ, ಸಾಂಬಾರ ಪದಾರ್ಥಗಳು, ತಂಬಾಕು, ಹತ್ತಿ ಮುಂತಾದುವು ರಫ್ತಾಗುವ ಕೃಷಿ ಉತ್ಪನ್ನಗಳು. ತೃತೀಯ ವೃತ್ತಿಗಳಾದ ಸಾರಿಗೆ, ಬ್ಯಾಂಕಿಂಗ್ ವ್ಯವಸ್ಥೆ, ವಿಮೆ ಇತ್ಯಾದಿಗಳ ಪ್ರಗತಿಗೂ ಇದು ಪೂರಕವಾಗುತ್ತದೆ.

**ವ್ಯವಸಾಯದ ವಿಧಗಳು :** ಕರ್ನಾಟಕ ರಾಜ್ಯದಲ್ಲಿ ಭೂ ಹಿಡುವಳಿಯ ಜೊತೆಗೆ, ಫಲವತ್ತತೆ, ನೀರಿನ ಲಭ್ಯತೆ, ಮಳೆಯ ಪ್ರಮಾಣ, ವಾಯುಗುಣ, ಭೂಸ್ವರೂಪ, ಮಾರುಕಟ್ಟೆ ಇವುಗಳಿಗನುಗುಣವಾಗಿ ವಿವಿಧ ಬೆಳೆಗಳನ್ನು

©KTBS Not to be republished

ಬೆಳೆಯಲಾಗುತ್ತದೆ. ಇವುಗಳನ್ನನುಸರಿಸಿ ವ್ಯವಸಾಯದ ವಿಧಗಳನ್ನು ವಿಂಗಡಿಸಲಾಗಿದೆ. ಜೀವನಾಧಾರ ಬೇಸಾಯ, ನೀರಾವರಿ ಬೇಸಾಯ, ಒಣ ಬೇಸಾಯ, ಮಿಶ್ರ ಬೇಸಾಯ, ಸ್ಥಳಾಂತರ ಬೇಸಾಯ, ವಾಣಿಜ್ಯ ಬೇಸಾಯ, ನೆಡುತೋಪು ಬೇಸಾಯ ಇತ್ಯಾದಿ.

ಕಾಲುವೆ, ಕೆರೆ, ಬಾವಿ ಮೂಲಗಳಿಂದ ನೀರನ್ನು ಬಳಕೆ ಮಾಡಿ ಸಾಗುವಳಿ ಮಾಡುವ ಕೃಷಿ ಪದ್ಧತಿಗೆ 'ನೀರಾವರಿ ಬೇಸಾಯ' ವೆನ್ನುವರು. ಭತ್ತ, ಕಬ್ಬು ನೀರಾವರಿ ಬೇಸಾಯದ ಪ್ರಮುಖ ಬೆಳೆಗಳು. ಮಳೆ ಆಶ್ರಿತ ಬೆಳೆಗಳ ಸಾಗುವಳಿಗೆ ಒಣ ಅಥವಾ ಶುಷ್ಕ ಬೇಸಾಯ ಎನ್ನುವರು.

ವಿಶಾಲವಾದ ಸಾಗುವಳಿ ಭೂಮಿಯಲ್ಲಿ ಹಣ ಗಳಿಕೆಗಾಗಿ ಕೆಲವೇ ಬಹುವಾರ್ಷಿಕ ಬೆಳೆಗಳನ್ನು ಸಾಗುವಳಿ ಮಾಡುವುದೇ 'ನೆಡುತೋಪು ಬೇಸಾಯ' (ಪ್ಲಾಂಟೇಷನ್). ಉದಾ: ಕಾಫಿ, ಚಹ, ರಬ್ಬರ್, ಕೋಕೋ ಇತ್ಯಾದಿ. ಸ್ವದೇಶೀ ಉಪಯೋಗಕ್ಕಲ್ಲದೆ ವಿದೇಶೀ ಮಾರುಕಟ್ಟೆಯನ್ನು ಗಮನದಲ್ಲಿಟ್ಟುಕೊಂಡು ಮಾಡುವ ಬೆಳೆಗಳ ಸಾಗುವಳಿಯೇ 'ವಾಣಿಜ್ಯ ಬೇಸಾಯ'. ಉದಾ: ತಂಬಾಕು, ಹತ್ತಿ, ಸೆಣಬು ಇತ್ಯಾದಿ. ಮಾರಾಟಕ್ಕಲ್ಲದೆ, ರೈತರ ಜೀವನೋಪಾಯಕ್ಕಾಗಿ ಬೆಳೆ ಬೆಳೆಯುವ ಕೃಷಿ ಪದ್ಧತಿಗೆ 'ಜೀವನಾಧಾರ ಬೇಸಾಯ' ಎನ್ನುವರು. ಇದು ಪುರಾತನ ಮಾದರಿ ಬೇಸಾಯ.

ಇತ್ತೀಚಿನ ದಿನಗಳಲ್ಲಿ ಮಿಶ್ರ ಬೇಸಾಯ ಹೆಚ್ಚು ಪ್ರಚಲಿತಗೊಳ್ಳುತ್ತಿದೆ. ಬೆಳೆ ಬೆಳೆಯುವುದರ ಜೊತೆಯಲ್ಲೇ ಪಶು ಸಂಗೋಪನೆ, ರೇಷ್ಮೆ ಕೃಷಿ, ಕುರಿಸಾಕಣೆ, ಕೋಳಿಸಾಕಣೆ, ಜೇನುಸಾಕಣೆ, ಮೀನುಗಾರಿಕೆ ಮುಂತಾದ ಉಪ ಕಸುಬುಗಳನ್ನು ನಿರ್ವಹಿಸುವುದನ್ನು ಮಿಶ್ರ ಬೇಸಾಯ ಎನ್ನುತ್ತಾರೆ.

**ಕರ್ನಾಟಕದ ಪ್ರಮುಖ ಬೆಳೆಗಳು**

ಈ ಮೊದಲಿಗೆ ವಿವರಿಸಿದಂತೆ ವ್ಯವಸಾಯದ ವಿವಿಧ ಪದ್ಧತಿಗಳಂತೆ ಕರ್ನಾಟಕದ ಬೆಳೆ ಪ್ರಕಾರಗಳಲ್ಲಿ ವೈವಿಧ್ಯವಿದೆ. ಇದಕ್ಕೆ ವಿವಿಧ ಭೂಸ್ವರೂಪಗಳು, ವಾಯುಗುಣದ ಪರಿಸ್ಥಿತಿ, ಮಣ್ಣಿನ ಪ್ರಕಾರ, ನೀರಾವರಿ ಪೂರೈಕೆ, ಕೃಷಿಕರ ಸಂಪ್ರದಾಯ, ಕೃಷಿ ಉತ್ಪನ್ನಗಳಿಗಿರುವ ಮಾರುಕಟ್ಟೆ ಮೊದಲಾದವು ಕಾರಣವಾಗಿವೆ.

**ಬೆಳೆಗಳ ವೈಶಿಷ್ಟ್ಯ**

| | |
|---|---|
| ನಂಜನಗೂಡು | – ರಸಬಾಳೆ |
| ಬ್ಯಾಡಗಿ | – ಮೆಣಸಿನಕಾಯಿ |
| ತಿಪಟೂರು | – ತೆಂಗಿನಕಾಯಿ |
| ಮೈಸೂರು | – ವೀಳ್ಯೆದೆಲೆ |
| ಬೆಂಗಳೂರು | – ನೀಲಿದ್ರಾಕ್ಷಿ |
| ದೇವನಹಳ್ಳಿ | – ಚಕ್ಕೋತ |
| ಈರನಗೆರೆ | – ಬದನೆಕಾಯಿ |
| ನಿಪ್ಪಾಣಿ | – ಹೊಗೆಸೊಪ್ಪು |

ಕರ್ನಾಟಕದ ಬೆಳೆಗಳನ್ನು ಈ ರೀತಿ ವಿಂಗಡಿಸಬಹುದು. ಆಹಾರ ಬೆಳೆಗಳು – ಭತ್ತ, ರಾಗಿ, ಮೆಕ್ಕೆ ಜೋಳ, ದ್ವಿದಳ ಧಾನ್ಯ, ತೃಣ ಧಾನ್ಯಗಳು ಇತ್ಯಾದಿ. ವಾಣಿಜ್ಯ ಬೆಳೆಗಳು – ಹತ್ತಿ, ತಂಬಾಕು, ಕಬ್ಬು, ಹಿಪ್ಪುನೇರಳೆ ಇತ್ಯಾದಿ. ಎಣ್ಣೆಕಾಳು ಬೆಳೆಗಳು – ಶೇಂಗ, ಎಳ್ಳು, ಹುಚ್ಚೆಳ್ಳು, ಸೂರ್ಯಕಾಂತಿ ಇತ್ಯಾದಿ. ನೆಡುತೋಪು ಬೆಳೆಗಳು – ಕಾಫಿ, ತೆಂಗು, ಅಡಕೆ, ರಬ್ಬರ್, ಬಾಳೆ ಇತ್ಯಾದಿ. ಅಲ್ಲದೆ ಕರ್ನಾಟಕದಲ್ಲಿ ವಿವಿಧ ತೋಟಗಾರಿಕೆ ಮತ್ತು ಪುಷ್ಪ ಬೆಳೆಗಳನ್ನೂ ಸಹ ಬೆಳೆಯಲಾಗುವುದು.

ಈ ಮುಂದೆ ಕರ್ನಾಟಕದ ಪ್ರಮುಖ ಬೆಳೆಗಳ ಸಂಕ್ಷಿಪ್ತ ವಿವರಣೆ ತಿಳಿಯೋಣ.

**ಆಹಾರದ ಬೆಳೆಗಳು**


**1. ಭತ್ತ :** ಇದು ಕರ್ನಾಟಕದ ಅತ್ಯಂತ ಪ್ರಮುಖ ಆಹಾರದ ಬೆಳೆ. ರಾಜ್ಯದ ಜನರು ಅಕ್ಕಿಯನ್ನು ಮುಖ್ಯ ಆಹಾರವಾಗಿ ಬಳಸುವರು. ಒಟ್ಟು ಸಾಗುವಳಿ ಪ್ರದೇಶದಲ್ಲಿ ಶೇ. 28.2 ಭಾಗದಲ್ಲಿ

**ನಿಮಗೆ ತಿಳಿದಿರಲಿ:**

ಭತ್ತವು 'ಪೊಯೆಸಿ' ಹುಲ್ಲಿನ ವರ್ಗದ ಸಸ್ಯ. ಇದರ ವೈಜ್ಞಾನಿಕ ಹೆಸರು ಒರೈಸಾ ಸಟೈವಾ.

©KTBS Not to be republished

ಭತ್ತ ಬೆಳೆಯಲಾಗುತ್ತದೆ. ನೀರಾವರಿ, ರಾಸಾಯನಿಕ ಗೊಬ್ಬರ ಹಾಗೂ ಅಧಿಕ ಇಳುವರಿ ನೀಡುವ ತಳಿಗಳ ಬಳಕೆಯಿಂದ ಭತ್ತದ ಇಳುವರಿಯಲ್ಲಿ ಇತ್ತೀಚೆಗೆ ಸುಧಾರಣೆಯಾಗಿದೆ.




ಭತ್ತವು ಉಷ್ಣವಲಯದ ಬೆಳೆ. ಇದರ ಬೇಸಾಯಕ್ಕೆ ಹೆಚ್ಚು ಮಳೆ ಮತ್ತು ಉಷ್ಣಾಂಶವಿರಬೇಕು. ಮಳೆ ಕಡಿಮೆ ಇರುವ ಪ್ರದೇಶಗಳಲ್ಲಿ ನೀರಾವರಿ ಸೌಲಭ್ಯ ಅಗತ್ಯ. ಭತ್ತದ ಬೆಳೆಗೆ ಸಮತಟ್ಟಾದ ಭೂಮಿ ಇರಬೇಕು. ಉದಾ: ಮೈದಾನ ಪ್ರದೇಶ, ಫಲವತ್ತಾದ ಜೇಡಿಮಿಶ್ರಿತ ಮಣ್ಣು ಹಾಗೂ ಮೆಕ್ಕಲು ಮಣ್ಣು ಈ ಬೆಳೆಗೆ ಬಹು ಸೂಕ್ತ. ಹಸಿರೆಲೆ ಗೊಬ್ಬರ, ಸೊಪ್ಪು, ಅಧಿಕ ಸಂಖ್ಯೆಯ ಕಾರ್ಮಿಕರೂ ಸಹ ಭತ್ತದ ಬೇಸಾಯಕ್ಕೆ ಅಗತ್ಯ. ಸುಮಾರು ಶೇ.70 ಭಾಗದಷ್ಟು ಫಸಲನ್ನು ಜೂನ್–ಆಗಸ್ಟ್ ತಿಂಗಳುಗಳಲ್ಲಿ ನಾಟಿ ಮಾಡಿ ನವೆಂಬರ್–ಡಿಸೆಂಬರ್ ತಿಂಗಳಿನಲ್ಲಿ ಕಟಾವು ಮಾಡಲಾಗುವುದು. ಇದನ್ನು 'ಹೈನುಬೆಳೆ' ಎನ್ನುವರು. ಬೇಸಿಗೆಯಲ್ಲೂ ನೀರಾವರಿ ಸೌಲಭ್ಯ ದೊರೆಯುವ ಪ್ರದೇಶಗಳಲ್ಲಿ ಭತ್ತ ಬೆಳೆಯುವರು. (ಫೆಬ್ರವರಿ–ಜೂನ್). ಇದನ್ನು 'ಕಾರುಬೆಳೆ' ಎನ್ನುವರು. ಭತ್ತವನ್ನು ಮಲೆನಾಡಿನಲ್ಲಿ ಚೆಲ್ಲುವ ವಿಧಾನ ಮತ್ತು ಮೈದಾನಗಳಲ್ಲಿ ನಾಟಿ ಮಾಡುವ ವಿಧಾನಗಳಿಂದ ಬೆಳೆಯಲಾಗುವುದು.

**ಭತ್ತ ಬೆಳೆಯುವ ಪ್ರದೇಶಗಳು** : ಭತ್ತವನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಬೆಳೆಯಲಾಗುತ್ತದೆ. ಕೃಷ್ಣಾ–ತುಂಗಭದ್ರಾ ಕಣಿವೆ, ಕಾವೇರಿ ನದಿಕಣಿವೆ ಹಾಗೂ ಕರಾವಳಿ ಜಿಲ್ಲೆಗಳು ಭತ್ತದ ಉತ್ಪಾದನೆಗೆ ಹೆಸರಾಗಿವೆ. ರಾಯಚೂರು ಜಿಲ್ಲೆ ಭತ್ತದ ಉತ್ಪಾದನೆಯಲ್ಲಿ ಪ್ರಥಮ ಸ್ಥಾನದಲ್ಲಿದೆ. ಅನಂತರ ದಾವಣಗೆರೆ, ಮೈಸೂರು, ಶಿವಮೊಗ್ಗ, ಮಂಡ್ಯ, ಕೊಪ್ಪಳ, ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ ಹಾಗೂ ಕಲಬುರಗಿ ಜಿಲ್ಲೆಗಳು ಪ್ರಮುಖವಾದವು. ರಾಜ್ಯದ ಇತರೆ ಪ್ರಮುಖ ಭತ್ತ ಬೆಳೆಯುವ ಪ್ರದೇಶಗಳೆಂದರೆ : ತುಮಕೂರು, ಹಾಸನ, ಚಿಕ್ಕಮಗಳೂರು, ಕೊಡಗು ಮತ್ತು ಬೆಳಗಾವಿ ಜಿಲ್ಲೆಗಳು. ನೀರಾವರಿಯಲ್ಲಿ ಬೆಳೆಯುವ ಭತ್ತವು ಉತ್ತಮ ಗುಣಮಟ್ಟ ಹಾಗೂ ಇಳುವರಿಯೂ ಹೆಚ್ಚಾಗಿರುತ್ತದೆ.

**ನಿಮಗೆ ತಿಳಿದಿರಲಿ:**


ಕಲಬುರಗಿಯನ್ನು ತೊಗರಿಯ ಕಣಜ ಎಂದು ಕರೆಯುತ್ತಾರೆ.

**2. ಜೋಳ :** ಭತ್ತದ ನಂತರ ಜೋಳವು ಕರ್ನಾಟಕದ ಎರಡನೆಯ ಸ್ಥಾನದ ಬೆಳೆಯಾಗಿದೆ. ಈ ಮೊದಲು ಭತ್ತ ಬೆಳೆಯುವ ಪ್ರದೇಶಕ್ಕಿಂತ ಜೋಳ ಬೆಳೆಯುವ ಕ್ಷೇತ್ರ ಹೆಚ್ಚಾಗಿತ್ತು. ಇತ್ತೀಚೆಗೆ ಜೋಳ ಬೆಳೆಯುವ ಪ್ರದೇಶವು ಕಡಿಮೆಯಾಗಿದೆ. ಒಟ್ಟು ಸಾಗುವಳಿ ಭೂಮಿಯಲ್ಲಿ ಶೇ. 26 ಭಾಗವು ಜೋಳದ ಬೆಳೆಗೆ ಬಳಕೆಯಾಗುತ್ತಿದೆ. ಭಾರತದಲ್ಲೇ ಕರ್ನಾಟಕವು ಜೋಳದ ಉತ್ಪಾದನೆಯಲ್ಲಿ

©KTBS Not to be republished

ಎರಡನೆಯ ಸ್ಥಾನದಲ್ಲಿದೆ. ಮಹಾರಾಷ್ಟ್ರ ಪ್ರಥಮ ಸ್ಥಾನದಲ್ಲಿದೆ.

ಜೋಳವು ಉತ್ತರ ಕರ್ನಾಟಕದ ಜನರ ಪ್ರಮುಖ ಆಹಾರ ಧಾನ್ಯವಾಗಿದೆ. ಇದನ್ನು ಹೆಚ್ಚಾಗಿ ರೊಟ್ಟಿ ತಯಾರಿಸಲು ಬಳಸುವರು. ಜೋಳದ ದಂಟನ್ನು ದನಕರುಗಳ ಮೇವಿಗಾಗಿ ಬಳಸುತ್ತಾರೆ. ದಕ್ಷಿಣ ಕರ್ನಾಟಕದಲ್ಲಿ ಜೋಳವನ್ನು ಜಾನುವಾರುಗಳ ಮೇವಿಗಾಗಿ ಬೆಳೆಯುತ್ತಾರೆ.




ಇದೂ ಸಹ ಹುಲ್ಲು ಜಾತಿಗೆ ಸೇರಿದ ಸಸ್ಯವರ್ಗ. ಇದನ್ನು ವೈಜ್ಞಾನಿಕವಾಗಿ **'ಸೊರ್ಗಾಮ್ ವಲ್ಗರೆ'** ಎಂದು ಕರೆಯುವರು. ಇದು ಉಷ್ಣವಲಯದ ಬೆಳೆಯಾಗಿದ್ದು, ಬೇಸಾಯಕ್ಕೆ ಸಾಧಾರಣ ಮಳೆ, ಒಣ ಹವೆ, ಕಪ್ಪು, ಕೆಂಪು ಮತ್ತು ಮೆಕ್ಕಲು ಮಿಶ್ರಿತ ಮಣ್ಣು ಬೇಕು. ಇದನ್ನು ಬಿತ್ತನೆ ಮಾಡುವ ವಿಧಾನದಿಂದ ಮಳೆ ಆಶ್ರಯದಲ್ಲಿ ಬೆಳೆಯಲಾಗುತ್ತದೆ.

**ಬೆಳೆಯುವ ಪ್ರದೇಶಗಳು :** ದಕ್ಷಿಣ ಕರ್ನಾಟಕದ ಕೆಲವು ಜಿಲ್ಲೆಗಳನ್ನು ಹೊರತುಪಡಿಸಿ ಉಳಿದೆಲ್ಲ ಜಿಲ್ಲೆಗಳಲ್ಲಿ ಜೋಳವನ್ನು ಬೆಳೆಯಲಾಗುವುದು. ವಿಜಯಪುರ, ಕಲಬುರಗಿ, ಬಾಗಲಕೋಟೆ, ರಾಯಚೂರು, ಬೆಳಗಾವಿ, ಬೀದರ್, ಬಳ್ಳಾರಿ, ದಾವಣಗೆರೆ, ಕೊಪ್ಪಳ ಮತ್ತು ಗದಗ ಜಿಲ್ಲೆಗಳಲ್ಲಿ ಜೋಳದ ಬೇಸಾಯ ಹೆಚ್ಚಾಗಿರುತ್ತದೆ. ವಿಜಯಪುರ ಜಿಲ್ಲೆಯು ಜೋಳದ ಉತ್ಪಾದನೆಯಲ್ಲಿ ರಾಜ್ಯದಲ್ಲೇ ಮೊದಲ ಸ್ಥಾನದಲ್ಲಿದೆ. ಚಿತ್ರದುರ್ಗ, ಶಿವಮೊಗ್ಗ, ಚಾಮರಾಜನಗರ, ಹಾಸನ, ತುಮಕೂರು ಮತ್ತು ಮಂಡ್ಯ ಜಿಲ್ಲೆಗಳಲ್ಲಿಯೂ ಸ್ವಲ್ಪಮಟ್ಟಿಗೆ ಜೋಳವನ್ನು ಬೆಳೆಯಲಾಗುವುದು.


**3. ರಾಗಿ:** ಇದು ಉತ್ತಮ ಪೋಷಕಾಂಶಗಳನ್ನು ಹೊಂದಿರುವ ಆಹಾರ ಧಾನ್ಯವಾಗಿದೆ. ಇದರ ವೈಜ್ಞಾನಿಕ ಹೆಸರು 'ಯೆಲಿಯುಸಿನ್ ಕೋರಾಕಾನ್'. ರಾಗಿಯಿಂದ ಮುದ್ದೆ, ಗಂಜಿ, ರೊಟ್ಟಿ, ಹುರಿಹಿಟ್ಟು, ಮಾಲ್ಟ್, ದೋಸೆ ಮುಂತಾದ ಆಹಾರ ಪದಾರ್ಥಗಳನ್ನು ತಯಾರಿಸಿ ಬಳಸಲಾಗುತ್ತದೆ. ಕರ್ನಾಟಕದಲ್ಲಿ ಭತ್ತ ಮತ್ತು ಜೋಳಗಳ ನಂತರ ರಾಗಿಯು ಮೂರನೆಯ ಮುಖ್ಯ ಆಹಾರ ಧಾನ್ಯವಾಗಿದೆ. ಸುಲಭ ಬೆಲೆಗೆ ದೊರೆಯುವುದು. ರಾಗಿಹುಲ್ಲು ದನಕರುಗಳ ಮೇವಿಗಾಗಿ ಬಳಸಲಾಗುತ್ತದೆ. ಹೆಚ್ಚು ಕಾಲ ಸಂಗ್ರಹಿಸಬಹುದಾದ ಧಾನ್ಯ.

ಇದು ಉಷ್ಣವಲಯದ ಬೆಳೆ. ಅಧಿಕ ಉಷ್ಣಾಂಶ, ಸಾಧಾರಣ ಮಳೆ, ಕೆಂಪು ಮಣ್ಣು, ಮೆಕ್ಕಲು ಮಿಶ್ರಿತ ಮಣ್ಣು ಯೋಗ್ಯವಾಗಿರುತ್ತದೆ. ಇದು ಬರ ನಿಭಾಯಿಸಬಹುದಾದ ಗುಣವನ್ನು ಹೊಂದಿದೆ. ಕೆಲವು ಕಡೆ

©KTBS Not to be republished

ನೀರಾವರಿ ಆಶ್ರಯದಲ್ಲೂ ರಾಗಿಯನ್ನು ಬೆಳೆಯಲಾಗುವುದು. ರಾಗಿ ನಾಟಿ ಮಾಡುವುದು, ಕಳೆ ಕೀಳುವುದು, ಕೊಯ್ಲು, ಒಕ್ಕಣೆ ಇತ್ಯಾದಿಗಳಿಗೆ ಕಾರ್ಮಿಕರ ಸಂಖ್ಯೆ ಹೆಚ್ಚಾಗಿರಬೇಕು. ಇದು ಪ್ರಮುಖ ಮುಂಗಾರು ಬೆಳೆ. ಬೇಸಿಗೆಯಲ್ಲೂ ಇದನ್ನು ನೀರಾವರಿ ಸಹಾಯದಿಂದ ಬೆಳೆಯಬಹುದು.

**ಬೆಳೆಯುವ ಪ್ರದೇಶಗಳು:** ರಾಗಿಯ ಉತ್ಪಾದನೆಯಲ್ಲಿ ಭಾರತದಲ್ಲೇ ಕರ್ನಾಟಕವು ಮೊದಲ ಸ್ಥಾನದಲ್ಲಿದೆ. ರಾಗಿಯ ಬಳಕೆಯು ಇತ್ತೀಚೆಗೆ ಕಡಿಮೆಯಾಗುತ್ತಾ ಬರುತ್ತಿದೆ. ಇದರ ಪರಿಣಾಮವಾಗಿ ರಾಗಿ ಬೆಳೆಯುವ ಕ್ಷೇತ್ರವೂ ಕಡಿಮೆಯಾಗಿದೆ. ದಕ್ಷಿಣದ ಮೈದಾನದ ಜಿಲ್ಲೆಗಳಲ್ಲಿ ರಾಗಿ ಬೆಳೆಯುವ ಪ್ರದೇಶಗಳು ಕೇಂದ್ರೀಕೃತವಾಗಿವೆ. ಇದು ಹಳೆಯ ಮೈಸೂರು ಪ್ರಾಂತ್ಯದ ಸಾಂಪ್ರದಾಯಿಕ ಬೆಳೆ. ಉತ್ತರ ಕರ್ನಾಟಕದಲ್ಲಿ ಜೋಳದ ಪ್ರಾಧಾನ್ಯತೆಯಿದ್ದರೆ, ದಕ್ಷಿಣ ಕರ್ನಾಟಕದಲ್ಲಿ ರಾಗಿಯೇ ಪ್ರಧಾನ. ಕರ್ನಾಟಕದಲ್ಲಿ ತುಮಕೂರು ಅತಿ ಹೆಚ್ಚು ರಾಗಿ ಬೆಳೆಯುವ ಜಿಲ್ಲೆ. ಅನಂತರದ ಸ್ಥಾನಗಳಲ್ಲಿ ರಾಮನಗರ, ಹಾಸನ, ಮಂಡ್ಯ, ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ಶಿವಮೊಗ್ಗ, ಚಿಕ್ಕಮಗಳೂರು, ಚಾಮರಾಜನಗರ ಮತ್ತು ದಾವಣಗೆರೆ ಜಿಲ್ಲೆಗಳು ರಾಗಿ ಬೆಳೆಗೆ ಪ್ರಸಿದ್ಧವಾಗಿವೆ.




## ವಾಣಿಜ್ಯ ಬೆಳೆಗಳು

**1. ಕಬ್ಬು:** ಇದು ಕರ್ನಾಟಕದ ಪ್ರಮುಖ ವಾಣಿಜ್ಯ ಹಾಗೂ ಕೈಗಾರಿಕಾ ಬೆಳೆಯಾಗಿದೆ. ಕರ್ನಾಟಕವು ಕಬ್ಬು ಉತ್ಪಾದನೆಯಲ್ಲಿ ಭಾರತದಲ್ಲಿ ನಾಲ್ಕನೆಯ ಸ್ಥಾನದಲ್ಲಿರುವ ರಾಜ್ಯವಾಗಿದೆ. ಇದು ಉಷ್ಣವಲಯದ ಬೆಳೆ. ಅಧಿಕ ಉಷ್ಣಾಂಶ ಮತ್ತು ಅಧಿಕ ಮಳೆಯಾಗುವ ಅಥವಾ ನೀರಾವರಿ ಪೂರೈಕೆಯಿರುವ ಭಾಗಗಳಲ್ಲಿ ಬೆಳೆಯಲಾಗುತ್ತದೆ. ಕಬ್ಬಿನ ಬೇಸಾಯಕ್ಕೆ ಮರಳು ಮಿಶ್ರಿತ ಮೆಕ್ಕಲು ಮಣ್ಣು, ಕೆಂಪು ಮಣ್ಣು ಉತ್ತಮವಾಗಿರುತ್ತದೆ. ಕಬ್ಬನ್ನು ಕಟಾವು ಮಾಡಿದ ಕೂಡಲೆ ಉಪಯೋಗಿಸಲು ಕಾರ್ಖಾನೆಗಳಿಗೆ ಸಾಗಿಸಬೇಕಾಗಿರುವುದರಿಂದ ಉತ್ತಮ ಸಾರಿಗೆ ಸೌಲಭ್ಯವಿರಬೇಕು.

ಇದೂ ಸಹ ಹುಲ್ಲು ಜಾತಿಗೆ ಸೇರಿದ ಸಸ್ಯ. ಇದು ಸುಮಾರು ಮೂರು ಮೀಟರ್ ಎತ್ತರದವರೆಗೆ ಬೆಳೆಯುತ್ತದೆ. ಇದರ ವೈಜ್ಞಾನಿಕ ಹೆಸರು 'ಸಖ್ಯಾರಮ್ ಅಫಿಸಿನೇರಮ್'. ಇದರಲ್ಲಿ ಸಕ್ಕರೆಯ ಅಂಶವಿದ್ದು, ಬೆಲ್ಲ, ಸಕ್ಕರೆ ತಯಾರಿಸಲು ಬಳಸಲಾಗುವುದು. ಇದು ಬಹುವಾರ್ಷಿಕ ಬೆಳೆಯಾಗಿರುವುದರಿಂದ ನೀರಾವರಿ ಸೌಲಭ್ಯ ಅಗತ್ಯ.

©KTBS
Not to be republished

**ಬೆಳೆಯುವ ಪ್ರದೇಶಗಳು :** ಬೆಳಗಾವಿಯು ರಾಜ್ಯದಲ್ಲಿಯೇ ಅತೀ ಹೆಚ್ಚು ಕಬ್ಬು ಉತ್ಪಾದಿಸುವ ಜಿಲ್ಲೆಯಾಗಿದೆ. ಆಲಮಟ್ಟಿ ಯೋಜನೆಯಿಂದ ನೀರಾವರಿ ಸೌಲಭ್ಯ ಪಡೆದಿರುವ ಬಾಗಲಕೋಟೆಯು ಎರಡನೇ ಸ್ಥಾನ ಪಡೆದಿದೆ. ಮಂಡ್ಯ, ಮೈಸೂರು, ವಿಜಯಪುರ, ಬೀದರ್, ಬಳ್ಳಾರಿ, ಶಿವಮೊಗ್ಗ, ದಾವಣಗೆರೆ, ಹಾಸನ, ಕೊಪ್ಪಳ, ಹಾವೇರಿ ಕಬ್ಬು ಬೆಳೆಯುವ ಇತರ ಜಿಲ್ಲೆಗಳು. ಸ್ವಾತಂತ್ರ್ಯ ಪೂರ್ವದಿಂದಲೂ ಕಬ್ಬು ಬೆಳೆಯುವಲ್ಲಿ ಮಂಡ್ಯಜಿಲ್ಲೆಯು ಹೆಸರುವಾಸಿಯಾಗಿದೆ.

**2. ಹತ್ತಿ:** ಹತ್ತಿಯು ನಾರಿನ ಬೆಳೆ. ಹತ್ತಿ ಬಟ್ಟೆ ಕೈಗಾರಿಕೆಯ ಕಚ್ಚಾವಸ್ತು. ಜೊತೆಗೆ ಜಮಖಾನ, ಹಗ್ಗ, ಹಾಸಿಗೆ, ದಿಂಬುಗಳ ತಯಾರಿಕೆಗೂ ಬಳಸಲಾಗುವುದು. ಇದರ ಬೀಜದಿಂದ ಖಾದ್ಯ ತೈಲ ಉತ್ಪಾದಿಸುವರು. ಇದರ ಹಿಂಡಿಯನ್ನು ದನಕರುಗಳ ಆಹಾರವಾಗಿ ಬಳಸಲಾಗುತ್ತದೆ.

**ಚಟುವಟಿಕೆ:**
ನಿಮ್ಮ ಜಿಲ್ಲೆಯಲ್ಲಿ ಬೆಳೆಯುವ ಆಹಾರ ಬೆಳೆಗಳು ಮತ್ತು ವಾಣಿಜ್ಯ ಬೆಳೆಗಳ ಪಟ್ಟಿ ಮಾಡಿರಿ.

ಇದು ಉಷ್ಣವಲಯ ಮತ್ತು ಉಪ ಉಷ್ಣವಲಯಗಳ ವಾಣಿಜ್ಯ ಬೆಳೆ. ಸಾಧಾರಣ ಮಳೆ, ಹೆಚ್ಚು ಉಷ್ಣಾಂಶ ಹಾಗೂ ಕಪ್ಪು ಮಣ್ಣು ಹತ್ತಿ ಬೆಳೆಗೆ ಸೂಕ್ತ. ನಮ್ಮ ರಾಜ್ಯದಲ್ಲಿ ಬಹಳ ವರ್ಷಗಳಿಂದಲೂ ಹತ್ತಿಯ ಬಳಕೆ ರೂಢಿಯಲ್ಲಿದೆ. ಉದ್ದ, ಮಧ್ಯಮ ಮತ್ತು ತುಂಡು ಎಳೆಯ ಹತ್ತಿಗಳ ವಿಧಗಳಿವೆ. ಆದರೆ ಕರ್ನಾಟಕದಲ್ಲಿ ಹೆಚ್ಚಾಗಿ ಮಧ್ಯಮ ಮತ್ತು ತುಂಡು ಎಳೆಯ ಹತ್ತಿಯನ್ನು ಬೆಳೆಯಲಾಗುತ್ತದೆ. ಹತ್ತಿಯನ್ನು ಕರ್ನಾಟಕದಲ್ಲಿ ಆಗಸ್ಟ್, ಸೆಪ್ಟೆಂಬರ್ ತಿಂಗಳುಗಳಲ್ಲಿ ಬಿತ್ತನೆ ಮಾಡಲಾಗುತ್ತದೆ. ಇದನ್ನು ಮಳೆ ಆಶ್ರಯದಲ್ಲಿ ಬೆಳೆಯುವುದೇ ಹೆಚ್ಚು. ನೀರಾವರಿ ಸಹಾಯದಿಂದಲೂ ಹತ್ತಿ ಬೆಳೆಯಲಾಗುವುದು.

**ಬೆಳೆಯುವ ಪ್ರದೇಶಗಳು :** ರಾಜ್ಯದಲ್ಲಿ ಹತ್ತಿ ಉತ್ಪಾದಿಸುವ ಪ್ರಮುಖ ಜಿಲ್ಲೆಗಳೆಂದರೆ: ಹಾವೇರಿ, ಧಾರವಾಡ, ಗದಗ, ಮೈಸೂರು, ಬಳ್ಳಾರಿ, ರಾಯಚೂರು, ಕಲಬುರಗಿ, ಬೆಳಗಾವಿ, ದಾವಣಗೆರೆ, ಚಿತ್ರದುರ್ಗ, ಕೊಪ್ಪಳ ಮತ್ತು ವಿಜಯಪುರ. ಹಾವೇರಿ ಜಿಲ್ಲೆ ಹತ್ತಿ ಉತ್ಪಾದನೆಯಲ್ಲಿ ರಾಜ್ಯದಲ್ಲೇ ಮೊದಲ ಸ್ಥಾನದಲ್ಲಿದೆ. ಧಾರವಾಡ ಜಿಲ್ಲೆ ಎರಡನೇ ಸ್ಥಾನದಲ್ಲಿದೆ.

ಹತ್ತಿ ಕೃಷಿಯಲ್ಲಿ ಕೀಟ ಮತ್ತು ರೋಗ ನಿಯಂತ್ರಣವು ದೊಡ್ಡ ಸಮಸ್ಯೆಯಾಗಿದೆ. ರೋಗ ನಿರೋಧಕ ಮತ್ತು ಸುಧಾರಿತ ತಳಿಗಳನ್ನು ಕೃಷಿ ಸಂಶೋಧನಾ ಸಂಸ್ಥೆ ಅಭಿವೃದ್ಧಿಪಡಿಸುತ್ತಿರುವುದರಿಂದ ಇತ್ತೀಚಿನ ದಿನಗಳಲ್ಲಿ ಇಳುವರಿ ಮತ್ತು ಉತ್ಪಾದನೆಗಳಲ್ಲಿ ಸುಧಾರಣೆ ಕಂಡುಬಂದಿದೆ.

**3. ತಂಬಾಕು (ಹೊಗೆಸೊಪ್ಪು) :** ಇದು ನಿಕೋಷಿಯಾನ ವರ್ಗಕ್ಕೆ ಸೇರಿದ ಸಸ್ಯವಾಗಿದೆ. ಇದರಲ್ಲಿ 'ನಿಕೋಟಿನ್' ಎಂಬ ಮಾದಕ ವಸ್ತುವಿದೆ. ತಂಬಾಕನ್ನು ಧೂಮಪಾನ, ಅಂದರೆ ಬೀಡಿ, ಸಿಗರೇಟು, ಸಿಗಾರ್, ನಶ್ಯ ಇತ್ಯಾದಿಗಳ ತಯಾರಿಕೆಯಲ್ಲಿ ಬಳಸಲಾಗುತ್ತದೆ. ಪೋರ್ಚುಗೀಸರು 17ನೇ ಶತಮಾನದಲ್ಲಿ ತಂಬಾಕನ್ನು ಭಾರತಕ್ಕೆ ಪರಿಚಯಿಸಿದರು. ಅನಂತರ ಕರ್ನಾಟಕದಲ್ಲಿ ಬೆಳೆಯಲು ಪ್ರಾರಂಭವಾಯಿತು. ಈಗ ಕರ್ನಾಟಕದ ಪ್ರಮುಖ ವಾಣಿಜ್ಯ ಬೆಳೆಗಳಲ್ಲಿ ಒಂದಾಗಿದೆ. ಇದನ್ನು ಸಾಧಾರಣ ಮಳೆ ಮತ್ತು ಹೆಚ್ಚು ಉಷ್ಣಾಂಶವುಳ್ಳ ಮರಳು ಮಿಶ್ರಿತ ಮಣ್ಣಿನ ಪ್ರದೇಶಗಳಲ್ಲಿ ಬೆಳೆಯಬಹುದು.

ಕರ್ನಾಟಕದಲ್ಲಿ ವರ್ಜೀನಿಯಾ, ಬೀಡಿ ತಂಬಾಕು ಮತ್ತು ಜಗಿಯಲು ಬಳಸುವಂತಹ ತಂಬಾಕನ್ನು ಬೆಳೆಯಲಾಗುತ್ತದೆ. ವರ್ಜೀನಿಯಾ ತಂಬಾಕು ಉತ್ತಮ ದರ್ಜೆಯದ್ದಾಗಿದ್ದು, ಇದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚು ಬೇಡಿಕೆ ಗಳಿಸಿದೆ. ಇದರಿಂದ ವಿದೇಶಿ ವಿನಿಮಯದ ಗಳಿಕೆ ಮತ್ತು ಅಬಕಾರಿ ರೂಪದಲ್ಲಿ ರಾಜ್ಯದ ಬೊಕ್ಕಸಕ್ಕೆ ಸಾಕಷ್ಟು ಆದಾಯ ದೊರೆಯುವುದು.

**ಬೆಳೆಯುವ ಪ್ರದೇಶಗಳು :** ಕರ್ನಾಟಕವು ಭಾರತದ ಪ್ರಮುಖ ತಂಬಾಕು ಉತ್ಪಾದಿಸುವ ರಾಜ್ಯಗಳಲ್ಲಿ

©KTBS Not to be republished

ನಾಲ್ಕನೇ ಸ್ಥಾನದಲ್ಲಿದೆ. ಮೈಸೂರು ಜಿಲ್ಲೆಯು ತಂಬಾಕು ಉತ್ಪಾದನೆಯಲ್ಲಿ ಮೊದಲ ಸ್ಥಾನದಲ್ಲಿದೆ. ಹಾಸನ, ಶಿವಮೊಗ್ಗ, ಕೊಡಗು, ಬೆಳಗಾವಿ, ಬಳ್ಳಾರಿ, ಚಿತ್ರದುರ್ಗ, ರಾಯಚೂರು, ದಾವಣಗೆರೆ, ತುಮಕೂರು, ಗದಗ ಜಿಲ್ಲೆಗಳಲ್ಲಿಯೂ ತಂಬಾಕಿನ ಬೇಸಾಯ ಹಂಚಿಕೆಯಾಗಿದೆ. ಬೆಳಗಾವಿ ಜಿಲ್ಲೆಯ 'ನಿಪ್ಪಾಣಿ' ಯು ದೇಶದಲ್ಲಿ ಬೀಡಿ ತಯಾರಿಕಾ ತಂಬಾಕು ಮಾರುಕಟ್ಟೆಗೆ ಅತ್ಯಂತ ಪ್ರಸಿದ್ಧವಾದುದು. ಕರ್ನಾಟಕದಲ್ಲಿ ಬೆಳೆಯುವ ತಂಬಾಕು ವಿಶ್ವದರ್ಜೆಯದಾಗಿದ್ದು, ಉತ್ಪಾದನೆಯ ಬಹುಪಾಲು ರಫ್ತಾಗುವುದು.

**4. ಕಾಫಿ :** ಕಾಫಿಯು ಕರ್ನಾಟಕದ ಪ್ರಸಿದ್ಧ ನೆಡುತೋಟದ ಹಾಗೂ ಪಾನೀಯ ಬೆಳೆ. ಕರ್ನಾಟಕವು ಭಾರತದಲ್ಲೇ ಕಾಫಿಯ ಉತ್ಪಾದನೆಯಲ್ಲಿ ಮೊದಲ ಸ್ಥಾನದಲ್ಲಿದೆ. ಕ್ರಿ.ಶ. 1670 ರ ಸುಮಾರಿಗೆ ಬಾಬಾಬುಡನ್ ಎಂಬ ಮುಸ್ಲಿಂ ಸಂತನು ಚಿಕ್ಕಮಗಳೂರಿನ ಬೆಟ್ಟಗಳ ಸಾಲಿನಲ್ಲಿ ಕಾಫಿ ಸಸಿಗಳನ್ನು ಬೆಳೆಸಿದನು. ಆದ್ದರಿಂದ ಆ ಬೆಟ್ಟಗಳನ್ನು ಬಾಬಾಬುಡನ್ ಗಿರಿ ಎನ್ನುವರು. ಆದರೆ ಕ್ರಮಬದ್ಧವಾದ ಬೇಸಾಯವು 1826 ರಲ್ಲಿ ಪ್ರಾರಂಭವಾಗಿ ಇಂದು ಕರ್ನಾಟಕದಲ್ಲಿ ವಿಸ್ತಾರವಾದ ಕಾಫಿ ತೋಟಗಳು ಕಂಡುಬರುತ್ತವೆ.

> **ಚಟುವಟಿಕೆ:**
> ಶಾಲೆಗೆ ರೈತರನ್ನು ಆಹ್ವಾನಿಸಿ ಅವರು ಬೆಳೆಯುವ ಬೆಳೆಗಳ ಪದ್ಧತಿ, ಅವುಗಳ ಮಾರಾಟದ ಬಗ್ಗೆ ಸಂವಾದ ನಡೆಸಿ.

ಕರ್ನಾಟಕವು ಅರೇಬಿಕ ಹಾಗೂ ರೊಬುಸ್ಟ ಎಂಬ ಎರಡು ಪ್ರಭೇದದ ಕಾಫಿಯನ್ನು ಉತ್ಪಾದಿಸುತ್ತಿದೆ. ಇದರಲ್ಲಿ ಅರೇಬಿಕ ಶ್ರೇಷ್ಠ ದರ್ಜೆಯದಾಗಿದ್ದು ವಿಶ್ವ ಮಾರುಕಟ್ಟೆಯಲ್ಲಿ ಬೇಡಿಕೆ ಪಡೆದಿದೆ. ಕಾಫಿಯು ಉಷ್ಣವಲಯದ ಅಧಿಕ ಮಳೆ ಪಡೆಯುವ ಬೆಟ್ಟಗಳ ಇಳಿಜಾರುಗಳಲ್ಲಿ ಬೆಳೆಯುವ ಬೆಳೆ. ಜೇಡಿಮಿಶ್ರಿತ ಮಣ್ಣು ಈ ಬೆಳೆಗೆ ಸೂಕ್ತ. ಕಾಫಿ ಗಿಡಕ್ಕೆ ಸೂರ್ಯನ ನೇರ ಕಿರಣಗಳು ಬೀಳದಂತೆ ನೆರಳಿನ ಮರಗಳನ್ನು ಬೆಳೆಸಬೇಕು. ಮಳೆಯ ನೀರು ಹರಿದು ಹೋಗುವಂತಿರಬೇಕು. ಈ ಎಲ್ಲಾ ಅಂಶಗಳಿರುವ ಕರ್ನಾಟಕದ ಮಲೆನಾಡಿನಲ್ಲಿ ಕಾಫಿ ಬೆಳೆಯಲಾಗುತ್ತದೆ.

**ಬೆಳೆಯುವ ಪ್ರದೇಶಗಳು :** ದೇಶದ ಕಾಫಿಯ ಉತ್ಪಾದನೆಯಲ್ಲಿ ಶೇ. 70 ಭಾಗವನ್ನು ಕರ್ನಾಟಕವೇ ಉತ್ಪಾದಿಸುತ್ತಿದೆ. ಕೊಡಗು ಜಿಲ್ಲೆಯು ಕಾಫಿ ಉತ್ಪಾದನೆಯಲ್ಲಿ ಪ್ರಥಮ ಸ್ಥಾನದಲ್ಲಿದೆ. ಚಿಕ್ಕಮಗಳೂರು, ಹಾಸನ ಪ್ರಮುಖವಾದವು. ಶಿವಮೊಗ್ಗ, ಚಾಮರಾಜನಗರ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಸ್ವಲ್ಪ ಕಾಫಿ ಬೇಸಾಯವಿದೆ.

ಕರ್ನಾಟಕದಲ್ಲಿ ಬೆಳೆಯುವ ಕಾಫಿ ಅತ್ಯುತ್ತಮವಾಗಿದ್ದು, ರುಚಿ ಮತ್ತು ಆಹ್ಲಾದತೆಗೆ ಹೆಚ್ಚು ಹೆಸರುವಾಸಿಯಾಗಿದೆ. ಇದರಿಂದಾಗಿ ದೇಶ ವಿದೇಶಗಳಲ್ಲಿ ಕಾಫಿಯು ಉತ್ತಮವಾದ ಮಾರುಕಟ್ಟೆ ಹೊಂದಿದೆ. ಇದರಿಂದ ಕರ್ನಾಟಕವು 'ಕಾಫಿಯ ನಾಡು' ಎಂದೇ ಪ್ರಸಿದ್ಧವಾಗಿದೆ.

> **ಚಟುವಟಿಕೆ:**
> ಸಾವಯವ ಕೃಷಿಯ ಬಗ್ಗೆ ಹೆಚ್ಚಿನ ಮಾಹಿತಿ ಸಂಗ್ರಹಿಸಿ.

©KTBS Not to be republished

## ಅಭ್ಯಾಸಗಳು

**I. ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿಮಾಡಿರಿ.**

1. ಭೂಮಿಯನ್ನು ವಿವಿಧ ಉದ್ದೇಶಗಳಿಗೆ ಬಳಸುವುದನ್ನು ____________ ಎನ್ನುವರು.
2. ಅತಿ ಹೆಚ್ಚು ಸಾಗುವಳಿ ಭೂಮಿಯನ್ನು ____________ ಜಿಲ್ಲೆಯು ಹೊಂದಿದೆ.
3. 'ಸೊರ್ಗಾಮ್‌ವಲ್ಗರೆ' ಎಂಬುದು ____________ ಬೆಳೆಯ ವೈಜ್ಞಾನಿಕ ಹೆಸರು.
4. ಕರ್ನಾಟಕದಲ್ಲಿ ಅತಿ ಹೆಚ್ಚು ಕಬ್ಬು ಬೆಳೆಯುವ ಜಿಲ್ಲೆ____________ .
5. ತಂಬಾಕಿನಲ್ಲಿ ____________ ಎಂಬ ಮಾದಕವಸ್ತುವಿರುತ್ತದೆ.

**II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರ ಬರೆಯಿರಿ.**

1. ಕರ್ನಾಟಕದ ಭೂ ಬಳಕೆಯ ಮಾದರಿಗಳನ್ನು ತಿಳಿಸಿ.
2. ಕರ್ನಾಟಕದಲ್ಲಿ ವ್ಯವಸಾಯದ ಪ್ರಾಮುಖ್ಯತೆಯನ್ನು ಕುರಿತು ಬರೆಯಿರಿ.
3. ನೀರಾವರಿ ಬೇಸಾಯ ಎಂದರೇನು ? ನೀರಾವರಿ ಬೆಳೆಗಳನ್ನು ಹೆಸರಿಸಿ.
4. ಮಿಶ್ರ ಬೇಸಾಯದ ಮುಖ್ಯ ಲಕ್ಷಣಗಳನ್ನು ತಿಳಿಸಿ.
5. ರಾಗಿಯ ಉಪಯೋಗಗಳನ್ನು ತಿಳಿಸಿ.

**III. ಹೊಂದಿಸಿ ಬರೆಯಿರಿ.**

| C | D |
|---|---|
| 1) ಕಾಫಿ | ಎ) ಮಿಶ್ರಬೇಸಾಯ |
| 2) ಹತ್ತಿ | ಬಿ) ಪಾನೀಯ ಬೆಳೆ |
| 3) ಕಬ್ಬು | ಸಿ) ತಂಬಾಕು |
| 4) ನಿಪ್ಪಾಣಿ | ಡಿ) ನಾರುಬೆಳೆ |
| 5) ಕುರಿಸಾಕಾಣಿಕೆ | ಇ) ನೆಡುತೋಟಗಳ ಬೆಳೆ |
| | ಎಫ್) ವಾಣಿಜ್ಯ ಬೆಳೆ |

**IV. ಚಟುವಟಿಕೆಗಳು**

1) ಕರ್ನಾಟಕದಲ್ಲಿ ಬೆಳೆಯುವ ವಿವಿಧ ಆಹಾರ ಮತ್ತು ದ್ವಿದಳ ಧಾನ್ಯಗಳನ್ನು ಸಂಗ್ರಹಿಸಿರಿ.

2) ಜೋಳ, ರಾಗಿ ಇತರೆ ಬೆಳೆ ಬೆಳೆಯುವ ಪ್ರದೇಶಗಳನ್ನು ಕರ್ನಾಟಕದ ನಕ್ಷೆಯಲ್ಲಿ ಗುರುತಿಸಿ.

**V. ಯೋಜಿತಕಾರ್ಯ**

1) ನೀವು ವಾಸಿಸುವ ಸುತ್ತ-ಮುತ್ತ ಸಾಗುವಳಿ ಮಾಡುವ ಬೆಳೆಗಳನ್ನು ಕುರಿತು ಟಿಪ್ಪಣಿ ಮಾಡಿರಿ. ಸಂಬಂಧಿಸಿದ ಚಿತ್ರಗಳನ್ನು ಸಂಗ್ರಹಿಸಿ.

©KTBS Not to be republished

# ಅರ್ಥಶಾಸ್ತ್ರ

## ಅಧ್ಯಾಯ – 1

## ನೈಸರ್ಗಿಕ ಸಂಪನ್ಮೂಲಗಳು

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಸಂಪನ್ಮೂಲಗಳ ಅರ್ಥ ಹಾಗೂ ವಿಧಗಳು.
- ಸಂಪನ್ಮೂಲಗಳ ಕೊರತೆ
- ಸಂಪನ್ಮೂಲಗಳ ಸಂರಕ್ಷಣೆ.
- ನಮ್ಮ ಪರಿಸರ ಹೆಜ್ಜೆಗುರುತನ್ನು ಕಡಿಮೆ ಮಾಡುವ ಮಾರ್ಗೋಪಾಯಗಳು.

ಈ ಮೊದಲು ನೀವು ನಮ್ಮ ಇಷ್ಟಗಳು ಅನಂತವಾಗಿದ್ದು ಅವುಗಳನ್ನು ಪೂರೈಸಿಕೊಳ್ಳಲು ಇರುವ ಸಂಪನ್ಮೂಲಗಳು ಮಿತವಾಗಿದ್ದು ಇದು ಕೊರತೆಯ ಸಮಸ್ಯೆಗೆ ಕಾರಣವಾಗುತ್ತದೆ ಎಂಬುದನ್ನು ತಿಳಿದುಕೊಂಡಿದ್ದೀರಿ. ಸಂಪನ್ಮೂಲವೆಂಬುದು ಒಂದು ವಿಶಾಲ ಅರ್ಥವುಳ್ಳ ಶಬ್ದವಾಗಿದ್ದು, ಮಾನವರು ತಾವು ಕೈಗೊಳ್ಳುವ ಎಲ್ಲ ಆರ್ಥಿಕ ಚಟುವಟಿಕೆಗಳಾದ ಉತ್ಪಾದನೆ, ವಿನಿಮಯ ಮತ್ತು ಅನುಭೋಗಗಳಲ್ಲಿ ಬಳಸುವ ಎಲ್ಲ ವಸ್ತುಗಳನ್ನು ಸೂಚಿಸುತ್ತದೆ. ವಿವಿಧ ಸಂಪನ್ಮೂಲಗಳಲ್ಲಿ ನೈಸರ್ಗಿಕ ಸಂಪನ್ಮೂಲಗಳು ಮಾನವನ ಬಳಕೆಗೆ ಲಭ್ಯವಿರುವ ಅತ್ಯಂತ ಪ್ರಮುಖವಾದವುಗಳಾಗಿವೆ. ಇವುಗಳು ನಿಸರ್ಗದ ಕೊಡುಗೆಗಳಾಗಿದ್ದು ಅವುಗಳಿಲ್ಲದೇ ಮಾನವನ ಜೀವಿತವು ಸಾಧ್ಯವೇ ಇಲ್ಲ. ಸೂರ್ಯರಶ್ಮಿ, ನೀರು, ವಾಯು, ಅರಣ್ಯಗಳು, ಮಣ್ಣು, ಜೈವಿಕ ವೈವಿಧ್ಯತೆ, ಅದಿರು, ಇತ್ಯಾದಿಗಳು ಮಾನವನ ಜೀವಿತಕ್ಕೆ ಅತ್ಯಂತ ಪ್ರಮುಖವಾಗಿವೆ. ಆದರೆ ಜಾಗತಿಕ ಜನಸಂಖ್ಯೆಯು ಏಳು ಶತಕೋಟಿಗಿಂತಲೂ ಅಧಿಕವಾಗಿ ಬೆಳೆದಿದ್ದರಿಂದ ಬಹಳಷ್ಟು ಜನರಿಗೆ ಕನಿಷ್ಠ ಅವಶ್ಯಕತೆಗಳನ್ನು ಪೂರೈಸುವುದೇ ದುಸ್ತರವಾಗುತ್ತಿದೆ. ಈ ಅಧ್ಯಾಯದಲ್ಲಿ ಸಂಪನ್ಮೂಲಗಳ ಕೊರತೆ, ಪರಿಸರ ಸಂರಕ್ಷಣೆ ಮತ್ತು ನಮ್ಮ ಪರಿಸರದ ಹೆಜ್ಜೆ ಗುರುತಿನ ಪ್ರಮಾಣವನ್ನು ಕಡಿಮೆ ಮಾಡುವುದರ ಕುರಿತು ಅಧ್ಯಯನ ಮಾಡಲಿದ್ದೇವೆ.

### ಸಂಪನ್ಮೂಲಗಳ ಅರ್ಥ ಹಾಗೂ ವಿಧಗಳು

ನೈಸರ್ಗಿಕವಾಗಿ ಲಭ್ಯವಿದ್ದು, ತಾವಿದ್ದ ಸ್ವರೂಪದಲ್ಲಿಯೇ ಮೌಲ್ಯಯುತ ಎಂದು ಪರಿಗಣಿತವಾಗಿರುವ ವಸ್ತುಗಳನ್ನು ನೈಸರ್ಗಿಕ ಸಂಪನ್ಮೂಲಗಳೆಂದು ಕರೆಯಬಹುದು. ಆಹಾರ ಬೆಳೆಯಲು ಉಪಯುಕ್ತವಿರುವ ಮಣ್ಣು, ನಮ್ಮ ಹಲವು ಚಟುವಟಿಕೆಗಳಿಗೆ ಮೂಲಾಧಾರವಾಗಿರುವ ನೀರು, ಹಲವು ಸೇವೆಗಳನ್ನು ಒದಗಿಸುವ ಮರಗಿಡಗಳು, ಜೀವಿಗಳು ಉಸಿರಾಡುವ ವಾಯು, ನಮ್ಮ ಹಲವಾರು ಉತ್ಪನ್ನಗಳಿಗೆ ಕಚ್ಚಾ ವಸ್ತುಗಳಾದ ಅದಿರುಗಳು, ಇತ್ಯಾದಿಗಳೆಲ್ಲವನ್ನೂ ನಾವು ಸಂಪನ್ಮೂಲಗಳು ಎಂದು ಕರೆಯುತ್ತೇವೆ. ಇವುಗಳು ಇಲ್ಲದಿದ್ದರೆ ನಮ್ಮ ಜೀವನ ಇಷ್ಟು ಆರಾಮದಾಯಕವಾಗುತ್ತಲೇ ಇರಲಿಲ್ಲ.

ನೈಸರ್ಗಿಕ ಸಂಪನ್ಮೂಲಗಳನ್ನು ಸಾಮಾನ್ಯವಾಗಿ 'ಪುನರುತ್ಪತ್ತಿ ಹೊಂದುವ ಅಥವಾ ನವೀಕರಣಗೊಳ್ಳುವ' ಹಾಗೂ 'ಮುಗಿದು ಹೋಗುವ' ಎಂಬ ಎರಡು ವಿಧಗಳಲ್ಲಿ ವರ್ಗೀಕರಿಸಲಾಗಿದ್ದು, ಅವುಗಳನ್ನು ಈಗ ಅಭ್ಯಸಿಸೋಣ.

©KTBS Not to be republished

**ನವೀಕರಣಗೊಳ್ಳುವ ಅಥವಾ ಪುನರುತ್ಪತ್ತಿ ಹೊಂದುವ ಸಂಪನ್ಮೂಲಗಳು:** ಕೆಲವು ನೈಸರ್ಗಿಕ ಸಂಪನ್ಮೂಲಗಳನ್ನು ನಾವು ಬಳಸಿಕೊಳ್ಳುತ್ತಾ ಹೋದಂತೆ ಅವು ಪುನಃ ತಮ್ಮ ಮೂಲ ಸ್ವರೂಪವನ್ನು ಪಡೆದುಕೊಂಡು ನಿರಂತರವಾಗಿ ನಮ್ಮ ಬಳಕೆಗೆ ದೊರಕುತ್ತವೆ. ಇಂತಹ ಸಂಪನ್ಮೂಲಗಳನ್ನು ನವೀಕರಣಗೊಳ್ಳುವ ಅಥವಾ ಪುನರುತ್ಪತ್ತಿ ಹೊಂದುವ ಅಥವಾ ಬರಿದಾಗದ ಸಂಪನ್ಮೂಲಗಳು ಎಂದು ಕರೆಯುತ್ತೇವೆ. ಇವುಗಳನ್ನು ನಾವು ಬಳಸಿದಂತೆ ಪ್ರಕೃತಿಯು ತನ್ನ ನೈಸರ್ಗಿಕ ಪ್ರಕ್ರಿಯೆಗಳ ಮೂಲಕ ಅವುಗಳನ್ನು ಮತ್ತೆ ಮತ್ತೆ ತುಂಬಿ ಕೊಡುತ್ತದೆ. ನೀರು, ಭೂಮಿ, ಅರಣ್ಯ, ಗಾಳಿ, ಸೂರ್ಯನ ಶಾಖ ಮೀನುಗಳು, ಮುಂತಾದುವು ಮುಗಿಯದ ಸಂಪನ್ಮೂಲಗಳಾಗಿವೆ.

**ಮುಗಿದು ಹೋಗುವ ಸಂಪನ್ಮೂಲಗಳು:** ಕೆಲವು ನೈಸರ್ಗಿಕ ಸಂಪನ್ಮೂಲಗಳು ನಾವು ಬಳಸಿದಂತೆ ಕ್ರಮೇಣ ಕಡಿಮೆಯಾಗಿ ಅಂತಿಮವಾಗಿ ಖಾಲಿಯಾಗುವ ಅಥವಾ ಬರಿದಾಗುವ ಲಕ್ಷಣ ಹೊಂದಿವೆ. ಅವುಗಳ ಸೃಷ್ಟಿ ಮತ್ತೆ ಸಾಧ್ಯವಿಲ್ಲ. ಇಂತಹ ಸಂಪನ್ಮೂಲಗಳನ್ನು ಮುಗಿದು ಹೋಗುವ ಸಂಪನ್ಮೂಲಗಳು ಎನ್ನುತ್ತೇವೆ. ಕಬ್ಬಿಣದ ಅದಿರು, ತಾಮ್ರ, ಚಿನ್ನ, ಮ್ಯಾಂಗನೀಸ್, ಬಾಕ್ಸೈಟ್ ಮುಂತಾದ ಖನಿಜಗಳು; ಕಲ್ಲಿದ್ದಲು, ಪೆಟ್ರೋಲಿಯಮ್, ನೈಸರ್ಗಿಕ ಅನಿಲ; ಯುರೇನಿಯಮ್, ಥೋರಿಯಮ್ ಮುಂತಾದ ಇಂಧನಮೂಲಗಳು ಬಳಸಿದಂತೆ ಮುಗಿದುಹೋಗುತ್ತವೆ. ಇವುಗಳನ್ನು ನಿಸರ್ಗವು ತನ್ನ ಪ್ರಕ್ರಿಯೆಯ ಮೂಲಕ ಮತ್ತೆ ತುಂಬಿಕೊಡಲು ಸಾಧ್ಯವಿಲ್ಲದಿರುವುದರಿಂದ ಇವುಗಳಿಗೆ 'ನವೀಕರಿಸಲಾಗದ ಸಂಪನ್ಮೂಲಗಳು' ಎಂತಲೂ ಕರೆಯುತ್ತಾರೆ.

ಸಂಪನ್ಮೂಲಗಳನ್ನು ಜೈವಿಕ ಮತ್ತು ಅಜೈವಿಕ ಸಂಪನ್ಮೂಲಗಳೆಂದೂ ವರ್ಗೀಕರಿಸಲಾಗುತ್ತದೆ. ಜೀವಿಗಳಿಂದ ಪಡೆಯಲಾದ ಸಂಪನ್ಮೂಲಗಳನ್ನು ಜೈವಿಕ ಸಂಪನ್ಮೂಲಗಳೆಂದೂ, ನಿರ್ಜೀವ ವಸ್ತುಗಳಿಂದ ಪಡೆಯಲಾದ ಸಂಪನ್ಮೂಲಗಳನ್ನು ಅಜೈವಿಕ ಸಂಪನ್ಮೂಲಗಳೆಂದೂ ವರ್ಗೀಕರಿಸಬಹುದು. ಸಸ್ಯ ಮತ್ತು ಪ್ರಾಣಿಗಳು ಜೈವಿಕ ಸಂಪನ್ಮೂಲಗಳಾದರೆ, ನೀರು, ಮಣ್ಣು, ಅದಿರುಗಳು, ಇತ್ಯಾದಿಗಳು ಅಜೈವಿಕ ಸಂಪನ್ಮೂಲಗಳಾಗಿವೆ.

**ಸಂಪನ್ಮೂಲಗಳ ಕೊರತೆ**

ನಮ್ಮ ಎಲ್ಲ ಮೂಲ ಅವಶ್ಯಕತೆಗಳಾದ ಆಹಾರ, ವಸತಿ, ಬಟ್ಟೆ, ಮುಂತಾದವುಗಳನ್ನು ವಿವಿಧ ನೈಸರ್ಗಿಕ ಸಂಪನ್ಮೂಲಗಳಾದ ಗಾಳಿ, ನೀರು, ಮಣ್ಣು, ಅದಿರು, ಕಲ್ಲಿದ್ದಲು, ಪೆಟ್ರೋಲಿಯಮ್, ಪ್ರಾಣಿ ಹಾಗೂ ಸಸ್ಯ ಸಂಕುಲ, ಇತ್ಯಾದಿಗಳಿಂದ ಪೂರೈಸಿಕೊಳ್ಳುತ್ತೇವೆ. ಆದರೆ ಇನ್ನು ಎಷ್ಟು ದಿನಗಳವರೆಗೆ ಈ ಅಮೂಲ್ಯ ಸಂಪನ್ಮೂಲಗಳು ನಮ್ಮ ಬಳಕೆಗೆ ಲಭ್ಯವಿರುತ್ತವೆ? ಏರುಗತಿಯಲ್ಲಿರುವ ಜನಸಂಖ್ಯೆಯಲ್ಲದೇ ತೀವ್ರಗೊಳ್ಳುತ್ತಿರುವ ಔದ್ಯೋಗೀಕರಣ ಹಾಗೂ ನಗರೀಕರಣಗಳು ಸಂಪನ್ಮೂಲಗಳ ಬೇಡಿಕೆಯನ್ನು ಅಗಾಧವಾಗಿ ಹೆಚ್ಚಿಸಿವೆ. ಅದರಲ್ಲೂ ಸದಾ ಹೆಚ್ಚುತ್ತಿರುವ ಮಾನವನ ಇಷ್ಟಗಳಿಗೆ ಹೋಲಿಸಿದರೆ ಸಂಪನ್ಮೂಲಗಳು ತುಂಬಾ ಕಡಿಮೆ ಪ್ರಮಾಣದಲ್ಲಿವೆ. ತೀರಿಹೋಗುವ ಸಂಪನ್ಮೂಲಗಳು ನಿರ್ದಿಷ್ಟ ಪ್ರಮಾಣದಲ್ಲಿ ಲಭ್ಯವಿದ್ದು ಬಳಕೆ ಹೆಚ್ಚಿದಂತೆ ಅವುಗಳ ಪ್ರಮಾಣ ಕುಸಿಯುತ್ತಿದೆ. ಪುನರುತ್ಪತ್ತಿ ಹೊಂದುವ ಸಂಪನ್ಮೂಲಗಳನ್ನು ಅವುಗಳ ಪುನರುಜ್ಜೀವನದ ದರಕ್ಕಿಂತ ತೀವ್ರವಾಗಿ ಬಳಕೆ ಮಾಡಲಾಗುತ್ತಿದೆ. ಕೊರತೆಯನ್ನು ಅಧಿಕಗೊಳಿಸುತ್ತಿರುವ ಪ್ರಮುಖ ಅಂಶಗಳೆಂದರೆ:

1. **ಮಿತಿಮೀರಿದ ಜನಸಂಖ್ಯೆ :** ಅಗಾಧ ಪ್ರಮಾಣದಲ್ಲಿ ಹೆಚ್ಚುತ್ತಿರುವ ಜನಸಂಖ್ಯೆಗೆ ಆಹಾರ ಮತ್ತು ವಸತಿ ಸೌಕರ್ಯ ಒದಗಿಸಲು ಹೆಚ್ಚುವರಿ ಜಮೀನು ಬೇಕಾಗುತ್ತದೆ. ಇದಕ್ಕೆ ಅರಣ್ಯಗಳನ್ನು ಕೃಷಿ ಭೂಮಿಯಾಗಿ, ಕೃಷಿ ಭೂಮಿಯನ್ನು ವಸತಿ, ವಾಣಿಜ್ಯಿಕ ಮತ್ತು ಔದ್ಯಮಿಕ ಭೂಮಿಯಾಗಿ ಮಾರ್ಪಡಿಸಿ ಪೂರೈಸಿಕೊಳ್ಳಲಾಗುತ್ತಿದೆ.

©KTBS Not to be republished

**2. ಹೆಚ್ಚುತ್ತಿರುವ ಔದ್ಯೋಗೀಕರಣ :** ಉದ್ಯಮಗಳ ಸಂಖ್ಯೆ ಹೆಚ್ಚಿದಂತೆ, ಅದಿರು, ಕಚ್ಚಾ ತೈಲ ಮತ್ತು ನೀರಿನ ಹೊರತೆಗೆಯುವಿಕೆ ಅಧಿಕವಾಗಿದ್ದು ಹಲವಾರು ಗಣಿಗಳು, ತೈಲ ಬಾವಿಗಳು ಮತ್ತು ಜಲಮೂಲಗಳು ಬರಿದಾಗಿವೆ.

> *ಆಹಾರ ಹಾಗೂ ಕೃಷಿ ಸಂಘಟನೆಯ ವರದಿಯ ಪ್ರಕಾರ, ನಗರಗಳನ್ನು ಸುತ್ತುವರೆದಿರುವ ಎಲ್ಲ ವಿಧಗಳ ಅರಣ್ಯ, ಕೃಷಿ ಹಾಗೂ ಜೌಗು ಭೂಮಿಗಳ ಪ್ರತಿಶತ 50ಕ್ಕಿಂತಲೂ ಹೆಚ್ಚಿನ ಭಾಗ ಪರಿವರ್ತಿತವಾಗಿದ್ದು, ಕಳೆದ ದಶಕವೊಂದರಲ್ಲೇ ಸುಮಾರು 130 ದಶಲಕ್ಷ ಹೆಕ್ಟೇರುಗಳಷ್ಟು ಅರಣ್ಯ ನಾಶವಾಗಿದೆ (ವಿಶ್ವ ಅರಣ್ಯಗಳ ಸ್ಥಿತಿ, 2012, ಎಫ್.ಎ.ಒ.)*

**3. ವಿಸ್ತರಣೆಯಾಗುತ್ತಿರುವ ನಗರ ಪ್ರದೇಶಗಳು :** ಒಂದು ನಿರ್ದಿಷ್ಟ ಭೌಗೋಳಿಕ ಪ್ರದೇಶದಲ್ಲಿ ಅತಿ ಹೆಚ್ಚು ಜನಸಂಖ್ಯೆ ವಾಸವಾಗಿರುವುದನ್ನು ನಾವು ನಗರ ಪ್ರದೇಶ ಎನ್ನುತ್ತೇವೆ. ಅಂಥ ಪ್ರದೇಶಗಳಲ್ಲಿ ಸಹಜವಾಗಿ ಸಂಪನ್ಮೂಲಗಳ ಬಳಕೆ ಮತ್ತು ತ್ಯಾಜ್ಯ ಉತ್ಪಾದನಾ ಪ್ರಮಾಣವು ಅತ್ಯಧಿಕವಾಗಿರುತ್ತದೆ. ಇದು ಸಂಪನ್ಮೂಲಗಳ ಪ್ರಮಾಣ ಹಾಗೂ ಗುಣಮಟ್ಟಗಳೆರಡನ್ನೂ ಕಡಿಮೆ ಮಾಡುತ್ತದೆ. ನೂರಾರು ಕಿಲೋಮೀಟರುಗಳ ದೂರದಿಂದ ನೀರು ಪಡೆದು, ಆ ಶುದ್ಧ ನೀರನ್ನು ಕುಟುಂಬಗಳು ಮತ್ತು ಉದ್ಯಮಗಳು ಅದನ್ನು ಕೊಳಚೆ ನೀರಾಗಿ ಪರಿವರ್ತಿಸುವ ಸಂಕಷ್ಟವನ್ನು ಊಹಿಸಿಕೊಂಡರೆ ನಗರೀಕರಣದ ಪರಿಣಾಮವನ್ನು ಅರ್ಥೈಸಿಕೊಳ್ಳಬಹುದಾಗಿದೆ.

**4. ವಾಯು ಮಾಲಿನ್ಯ:** ಪಳೆಯುಳಿಕೆ ಇಂಧನಗಳಾದ ಕಲ್ಲಿದ್ದಲು, ಡೀಸೆಲ್ ಮತ್ತು ಪೆಟ್ರೋಲ್ ಇವುಗಳ ದಹಿಸುವಿಕೆಯಿಂದಾಗಿ, ಹಾನಿಕಾರಕ ಅಂಶಗಳಾದ ಇಂಗಾಲದ ಡೈಆಕ್ಸೈಡ್, ಹೈಡ್ರೋಜನ್ ಸಲ್ಫೈಡ್, ಮಸಿ, ಧೂಳು ಮುಂತಾದವುಗಳು ವಾಯು ಮಂಡಲವನ್ನು ಪ್ರವೇಶಿಸಿ ಅದನ್ನು ಮಲಿನಗೊಳಿಸುತ್ತವೆ. ಇದರಿಂದಾಗಿ ಶುದ್ಧ ವಾಯುವಿನ ಲಭ್ಯತೆ ಕಡಿಮೆಯಾಗುತ್ತದೆ.

**5. ಜಲಮಾಲಿನ್ಯ ಮತ್ತು ಭೂ ಸವಕಳಿ :** ಮಾನವರ, ಆಸ್ಪತ್ರೆಗಳ, ಉದ್ಯಮಗಳ ಹಾಗೂ ಇತರ ತ್ಯಾಜ್ಯಗಳನ್ನು ಬಯಲಿನಲ್ಲಿ ಸುರಿಯುವುದರಿಂದ ಅಲ್ಲಿನ ಭೂಮಿ ಮತ್ತು ನೀರಿನ ಉಪಯುಕ್ತತೆ ಕಡಿಮೆಯಾಗುತ್ತದೆ. ಕೃಷಿ ಹಾಗೂ ಕುಟುಂಬಗಳ ಚಟುವಟಿಕೆ ದೆಸೆಯಿಂದಾಗಿ ಸಹ ಜಲ ಮಾಲಿನ್ಯ ಉಂಟಾಗುತ್ತದೆ. ಇವುಗಳ ಕಾರಣದಿಂದಾಗಿ ಭೂಮಿಯ ಫಲವತ್ತತೆ ನಶಿಸಿ ಉತ್ಪಾದನೆಯ ನಷ್ಟವಾಗುತ್ತದೆ.

ಹೀಗೆ ಏರುತ್ತಿರುವ ಜನಸಂಖ್ಯೆ ಹಾಗೂ ಅವರ ಚಟುವಟಿಕೆಗಳು ಸಂಪನ್ಮೂಲಗಳ ಕೊರತೆಯನ್ನು ಹೆಚ್ಚಿಸಿ, ಅವುಗಳ ಗುಣಮಟ್ಟದ ನಷ್ಟಕ್ಕೂ ಕಾರಣವಾಗಿವೆ.

ಆದರೆ, ಈ ಕೊರತೆಯನ್ನು ಈ ಕೆಳಗೆ ಸೂಚಿಸಿದ ಕ್ರಮಗಳ ಪಾಲನೆಯಿಂದ ತಡೆಗಟ್ಟಬಹುದಾಗಿದೆ:

1. ಸಂಪನ್ಮೂಲಗಳ ಹೊಸ ಮೂಲಗಳ ಪರಿಶೋಧನೆ ಮತ್ತು ಆವಿಷ್ಕಾರ;
2. ಪರ್ಯಾಯ ಹಾಗೂ ಬದಲಿ ವಸ್ತುಗಳ ಆವಿಷ್ಕಾರ (ಉದಾಹರಣೆಗೆ ಕಲ್ಲಿದ್ದಲು ಆಧಾರಿತ ಇಂಧನದ ಬದಲಾಗಿ ಸೌರ ಹಾಗೂ ಪವನ ಶಕ್ತಿ; ಡೀಸೆಲ್‌ನ ಬದಲಾಗಿ ಎಥನಾಲ್; ಕಟ್ಟಿಗೆ ಪೀಠೋಪಕರಣಗಳ ಬದಲಿಗೆ ಪ್ಲಾಸ್ಟಿಕ್ ಪೀಠೋಪಕರಣಗಳು, ಇತ್ಯಾದಿ);
3. ಸಂಪನ್ಮೂಲ ಬಳಕೆಯ ದಕ್ಷತೆಯನ್ನು ಹೆಚ್ಚಿಸುವುದು (ಉದಾಹರಣೆಗೆ 2 ಸ್ಟ್ರೋಕ್ ಎಂಜಿನ್ನುಗಳಿಗೆ ಹೋಲಿಸಿದರೆ 4 ಸ್ಟ್ರೋಕ್ ಎಂಜಿನ್ನುಗಳು ಕಡಿಮೆ ತೈಲ/ಇಂಧನವನ್ನು ಬಳಸುತ್ತವೆ);
4. ಸಂಪನ್ಮೂಲಗಳ ಅಪಬಳಕೆ ತಡೆಯಲು ಮತ್ತು ಮಾಲಿನ್ಯ ನಿಯಂತ್ರಿಸಲು ಸರ್ಕಾರದ ನಿಯಮಗಳು.
5. ನಿತ್ಯದ ಚಟುವಟಿಕೆಗಳಲ್ಲಿ ಸಂಪನ್ಮೂಲಗಳನ್ನು ಸಂರಕ್ಷಿಸಿ ಮತ್ತು ಮಾಲಿನ್ಯ ಕಡಿಮೆಗೊಳಿಸುವಂಥ ಕ್ರಮಗಳನ್ನು ಅಳವಡಿಸಿಕೊಳ್ಳುವ ಸಲುವಾಗಿ ಜನರನ್ನು ಜಾಗೃತಗೊಳಿಸುವುದು.

©KTBS Not to be republished

**ಸಂಪನ್ಮೂಲಗಳ ಸಂರಕ್ಷಣೆ**

ಸಂಪನ್ಮೂಲಗಳ ಬಳಕೆಯಲ್ಲಿನ ತೀವ್ರ ಏರಿಕೆ ಹೆಚ್ಚಳ ಅವುಗಳ ಮಾಲಿನ್ಯವು ಮಾನವ ಜನಾಂಗಕ್ಕೆ ಗಂಭೀರ ಸ್ವರೂಪದ ಸಮಸ್ಯೆಗಳನ್ನು ತಂದೊಡ್ಡುತ್ತದೆ. ನಮಗೆ ಕುಡಿಯಲು ಶುದ್ಧ ನೀರು ಸಿಗದಿರಬಹುದು, ಉಸಿರಾಡಲು ಶುದ್ಧ ಗಾಳಿ ಇರದಿರಬಹುದು, ಹಲವಷ್ಟು ಸಂಪನ್ಮೂಲಗಳು ಬರಿದಾಗಬಹುದು, ಜೀವ ವೈವಿಧ್ಯತೆ ವಿರಳವಾಗಿ ಇಡೀ ವಿಶ್ವವೇ ತ್ಯಾಜ್ಯಗುಂಡಿಯಾಗಿಬಿಡುವ ಅಪಾಯವಿದೆ. ಈ ಸಮಸ್ಯೆಗಳನ್ನು ಹೇಗೆ ಎದುರಿಸುವುದು? ಇದನ್ನು ಸಂಪನ್ಮೂಲಗಳ ಸಂರಕ್ಷಣೆಯ ಮೂಲಕ ಮಾಡಬಹುದಾಗಿದೆ.

ಸಂಪನ್ಮೂಲಗಳ ಸಂರಕ್ಷಣೆಯೆಂದರೆ ಅವುಗಳ ಅಪಬಳಕೆಯನ್ನು ಕಡಿಮೆ ಮಾಡಿ ಅವುಗಳ ನ್ಯಾಯೋಚಿತ ಬಳಕೆನ್ನು ಪ್ರೋತ್ಸಾಹಿಸಿ ಪರಿಸರ ಮತ್ತು ಸಂಪನ್ಮೂಲ ಬಳಕೆಗಳ ನಡುವೆ ಸಮತೋಲನ ಕಾಯ್ದುಕೊಳ್ಳುವುದಾಗಿದೆ. "ಮಾನವ ಜನಾಂಗದ ಈಗಿನ ಪೀಳಿಗೆಯ ಆಕಾಂಕ್ಷೆಗಳನ್ನು ಈಡೇರಿಸುವ ಹಾಗೂ ಮುಂದಿನ ಪೀಳಿಗೆಯವರ ಅಭೀಷ್ಟೆಗಳನ್ನೂ ಪೂರೈಸಲು ಸಾಧ್ಯವಾಗುವಂತೆ ಈ ಜೀವಗೋಳವನ್ನು ನಿರ್ವಹಿಸುವ ಕ್ರಮಗಳು" ಎಂದು ಸಂರಕ್ಷಣೆಯನ್ನು ವ್ಯಾಖ್ಯಾನಿಸಲಾಗಿದೆ. ಸಂರಕ್ಷಣೆಯು ನೈಸರ್ಗಿಕ ಸಂಪನ್ಮೂಲಗಳ ಸರಿಯಾದ ನಿರ್ವಹಣೆಗೆ ಸಂಬಂಧಿಸಿದ್ದು ಅವುಗಳ ಅತಿಯಾದ ಬಳಕೆ, ಅಪವ್ಯಯ ಮತ್ತು ಅವನತಿಗಳನ್ನು ತಡೆಯುವ ಒಂದು ಕಾರ್ಯವಾಗಿದೆ. ಅದು ಸಂಪನ್ಮೂಲಗಳಿಂದ ದೊರಕಬಹುದಾದ ಎಲ್ಲ ಪ್ರಯೋಜನಗಳನ್ನು ಪಡೆದುಕೊಳ್ಳುವುದರ ಜೊತೆಗೆ, ಅವುಗಳ ಪ್ರಮಾಣ ಹಾಗೂ ಗುಣಮಟ್ಟವನ್ನು ಕಾಯ್ದುಕೊಂಡು ಹೋಗಲು ಬಳಸಬಹುದಾದ ಚಟುವಟಿಕೆಗಳ ಒಂದು ಗುಚ್ಛವಾಗಿದೆ.

ಸಂಪನ್ಮೂಲಗಳ ಸಂರಕ್ಷಣೆಯು ನಮ್ಮೆಲ್ಲರ ಹೊಣೆಯಾಗಿದೆ. ಅದನ್ನು ಹೇಗೆ ಸಾಕಾರಗೊಳಿಸುವುದು? ಅದನ್ನು ನಾಲ್ಕು R ತಂತ್ರದ ಮೂಲಕ ಪರಿಣಾಮಕಾರಿಯಾಗಿ ಮಾಡಬಹುದಾಗಿದೆ. ಹಾಗಾದರೆ, ಆ ನಾಲ್ಕು R ಗಳು ಯಾವುವು? ಅವೆಂದರೆ, Reduce (ಸಂಪನ್ಮೂಲಗಳ ಬಳಕೆಯನ್ನು ಕಡಿಮೆ ಮಾಡುವುದು), Reuse (ಸಂಪನ್ಮೂಲಗಳ ಮರು ಬಳಕೆ ಮಾಡುವುದು), Recharge (ಸಂಪನ್ಮೂಲಗಳ ಪುನಃರ್ಭರ್ತಿ ಮಾಡುವುದು) ಅಥವಾ Regenerate (ಸಂಪನ್ಮೂಲಗಳನ್ನು ಪುನರುಜ್ಜೀವನಗೊಳಿಸುವುದು) ಮತ್ತು Research (ಸಂಶೋಧನೆ). ಈಗ ಇವುಗಳನ್ನು ಕುರಿತು ಸಂಕ್ಷಿಪ್ತವಾಗಿ ತಿಳಿಯೋಣ.

1. **ಸಂಪನ್ಮೂಲಗಳ ಬಳಕೆಯನ್ನು ಕಡಿಮೆ ಮಾಡುವುದು (Reduce) :** ಸಂಪನ್ಮೂಲಗಳನ್ನು ಆದಷ್ಟು ಕಡಿಮೆ ಬಳಕೆ ಮಾಡುವುದಲ್ಲದೇ ಅವುಗಳ ಪೋಲು ಮಾಡುವಿಕೆಯನ್ನು ಕಡಿಮೆಗೊಳಿಸುವುದಾಗಿದೆ. ಯಾವುದೇ ಕೆಲಸಕ್ಕೆ ಬೇಕಾದ ನೈಸರ್ಗಿಕ ಸಂಪನ್ಮೂಲಗಳ ಬಳಕೆಯನ್ನು ಕಡಿಮೆ ಮಾಡುವ ಪ್ರಯತ್ನ ಮಾಡಿದರೆ ಒಟ್ಟಾರೆ ಮಾಲಿನ್ಯವೂ ಕಡಿಮೆಯಾಗುತ್ತದೆ. ಉದಾಹರಣೆಗೆ ಪ್ರತಿಸಾರಿ ಮೋಟರ್ ಬೈಕ್ ಬಳಕೆಯ ಬದಲಾಗಿ ಸೈಕಲ್ ಬಳಸುವುದು ಅಥವಾ ನಡೆದು ಹೋಗುವುದು, ಪ್ರತಿಯೊಬ್ಬರೂ ಸ್ವಂತ ವಾಹನದಲ್ಲಿ ತಿರುಗಾಡದೇ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಬಳಸುವುದರಿಂದ ಪೆಟ್ರೋಲ್ ಮತ್ತು ಡೀಸಲ್‌ನ ಬಳಕೆ ಕಡಿಮೆಯಾಗುವುದಲ್ಲದೇ ವಾಯುಮಾಲಿನ್ಯವು ಸಹ ಕಡಿಮೆಯಾಗುತ್ತದೆ.

2. **ಸಂಪನ್ಮೂಲಗಳ ಮರು ಬಳಕೆ ಮಾಡುವುದು (Reuse) :** ಇದು ಸಂಪನ್ಮೂಲ ಸಂರಕ್ಷಣೆಗೆ ಒಂದು ಸರಳ ಆದರೆ ತುಂಬಾ ಪರಿಣಾಮಕಾರಿ ಮಾರ್ಗವಾಗಿದೆ. ಪ್ರತಿಯೊಂದು ಸಂಪನ್ಮೂಲಗಳನ್ನು ಬೇರೆ ಬೇರೆ ಕೆಲಸಗಳಿಗಲ್ಲದೇ ಹಲವು ಬಾರಿ ಉಪಯೋಗಿಸಬಹುದಾಗಿದೆ. ಉದಾಹರಣೆಗೆ ಸ್ನಾನಕ್ಕೆ ಬಳಸಿದ ನೀರನ್ನು ತೋಟಕ್ಕೆ ಬಳಸಬಹುದು, ಉಪಯೋಗಿಸಿದ ಕಾಗದವನ್ನು ಪೊಟ್ಟಣಗಳನ್ನು ತಯಾರಿಸಲು ಬಳಸಬಹುದು.

3. **ಸಂಪನ್ಮೂಲಗಳ ಪುನಃರ್ಭರ್ತಿ ಮಾಡುವುದು (Recharge) ಮತ್ತು ಪುನರುಜ್ಜೀವನಗೊಳಿಸುವುದು (Regenerate) :** ನಮ್ಮ ಪ್ರಜ್ಞಾಪೂರ್ವಕ ಪ್ರಯತ್ನಗಳಿಂದ ಸಂಪನ್ಮೂಲಗಳನ್ನು ವೃದ್ಧಿಸುವ

©KTBS Not to be republished

ಕಾರ್ಯಗಳು ಈ ವಿಧಗಳಲ್ಲಿ ಬರುತ್ತವೆ. ಅಂತರ್ಜಲ ಮರುಪೂರಣಗೊಳಿಸುವ ಎಲ್ಲ ಕಾರ್ಯಗಳು, ಅರಣ್ಯೀಕರಣದಿಂದ ಮರಗಿಡಗಳ ಸಂಖ್ಯೆಯ ವೃದ್ಧಿ ಹಾಗೂ ತನ್ಮೂಲಕ ಜೀವ ವೈವಿಧ್ಯತೆಯ ವಿಸ್ತರಣೆಗಳು ಇಲ್ಲಿ ನೀಡಬಹುದಾದ ಉದಾಹರಣೆಗಳಾಗಿವೆ.

4. **ಸಂಶೋಧನೆ (Research) :** ಬರಿದಾಗುವ ಸಂಪನ್ಮೂಲಗಳಿಗೆ ಪರ್ಯಾಯವಾಗಿ ಬಳಕೆ ಮಾಡಬಹುದಾದ ನವೀಕರಣಗೊಳಿಸಬಹುದಾದ ವಸ್ತುಗಳ ಸಂಶೋಧನೆ ನಿರಂತರವಾಗಿ ಆಗಬೇಕು. ನಾವು ಈಗ ಬಳಸುತ್ತಿರುವ ಇಂಧನಕ್ಕೆ ಸೌರಶಕ್ತಿ ಮತ್ತು ಪವನ ಶಕ್ತಿಗಳು ಉತ್ತಮ ಪರ್ಯಾಯಗಳಾಗಿವೆ.

**ಚಟುವಟಿಕೆ:** ನಿಮ್ಮ ಮನೆ ಹಾಗೂ ಶಾಲೆಯಲ್ಲಿ ಅಳವಡಿಸಿಕೊಳ್ಳಬಹುದಾದಂಥ 4Rಗಳ ಪಟ್ಟಿ ಮಾಡಿರಿ.

ಈ ಕೆಳಗೆ ಸೂಚಿಸಿದ ಅಂಶಗಳು ನೀವು ಸಂಪನ್ಮೂಲಗಳನ್ನು ಸಂರಕ್ಷಿಸಲು ಏನು ಮಾಡಬಹುದು ಎಂಬದನ್ನು ತಿಳಿಸುತ್ತವೆ:

- ಕಡಿಮೆ ಸರಕನ್ನು ಖರೀದಿಸಿ (ಈಗಾಗಲೇ ಇರುವಂಥವುಗಳನ್ನು ಎಷ್ಟು ದೀರ್ಘಕಾಲವೂ ಅಷ್ಟು ಉಪಯೋಗಿಸಿ, ಹೊಸದನ್ನು ಖರೀದಿಸುವಾಗ ಅದು ಅವಶ್ಯವಿದೆಯಾ ಎಂದು ಪ್ರಶ್ನಿಸಿಕೊಳ್ಳಿ).
- ಅನವಶ್ಯಕ ಪ್ಯಾಕಿಂಗ್‌ನ್ನು ವರ್ಜಿಸಿ (ಉದಾ: ಬಾಟಲಿ ನೀರು ಖರೀದಿಸುವ ಬದಲಾಗಿ ನಳದಿಂದ ನೀರು ಕುಡಿಯಿರಿ)
- ಮೆಟಲ್ ಡಬ್ಬಿಗಳು, ಹಳೆಯ ಸೆಲ್ ಫೋನ್‌ಗಳು ಮತ್ತು ಪ್ಲಾಸ್ಟಿಕ್ ಬಾಟಲುಗಳನ್ನು ಮರುಬಳಕೆ ಮಾಡಿರಿ.
- ಪುರುತ್ಪಾದಿಸಿದ ಸರಕಿನಿಂದ ಮಾಡಿದ ವಸ್ತುಗಳನ್ನು ಹೆಚ್ಚು ಖರೀದಿಸಿರಿ.
- ವಾತಾವರಣವನ್ನು ಮಲಿನಗೊಳಿಸದೇ ನೀರು ಮತ್ತು ಗಾಳಿಯನ್ನು ಶುದ್ಧವಾಗಿಡಿ.
- ಮಣ್ಣಿನ ಸವಕಳಿಯನ್ನು ತಡೆಗಟ್ಟಿರಿ.
- ಒಂದು ಮರವನ್ನು ಅನಿವಾರ್ಯವಾಗಿ ಕತ್ತರಿಸಿದಾಗ ಅದರ ಬದಲಾಗಿ ಇನ್ನೊಂದು ಸಸಿಯನ್ನು ನೆಡಿರಿ.
- ಸ್ವಂತ ವಾಹನವನ್ನು ಕಡಿಮೆ ಚಲಾಯಿಸಿ, ಸಾರ್ವಜನಿಕ ಸಾರಿಗೆಯನ್ನು ಬಳಸಿ; ಸೈಕಲ್ ಉಪಯೋಗಿಸಿ ಅಥವಾ ನಡೆದಾಡಿರಿ.
- ಮನೆಯಲ್ಲಿ ಇಂಧನವನ್ನು ಉಳಿಸಿ (ಉದಾ : ದೀಪಗಳನ್ನು ಅವಶ್ಯವಿಲ್ಲದಿದ್ದಾಗ ಆರಿಸುವುದು).

ಇದೇ ಸಂರಕ್ಷಣೆಯ ಅಂಶವನ್ನು ಜಗತ್ತಿನ ಬಹುತೇಕ ರಾಷ್ಟ್ರಗಳು 'ಸುಸ್ಥಿರ ಅಭಿವೃದ್ಧಿ'ಯ ತತ್ವವನ್ನು ಅಳವಡಿಸಿಕೊಳ್ಳುವುದರ ಮೂಲಕ ಸಾಕಾರಗೊಳಿಸಲು ಪ್ರಯತ್ನಿಸುತ್ತಿವೆ. ಸುಸ್ಥಿರ ಅಭಿವೃದ್ಧಿಯೆಂದರೆ ಮುಂದಿನ ಪೀಳಿಗೆಯವರಿಗೂ ಉತ್ತಮ ಜೀವನ ಮಟ್ಟ ಲಭಿಸುವಂತೆ ಸಂಪನ್ಮೂಲಗಳ ನ್ಯಾಯೋಚಿತ ಬಳಕೆ, ಸಂರಕ್ಷಣೆ ಮತ್ತು ಅವುಗಳ ಗುಣಮಟ್ಟವನ್ನು ಕಾಪಾಡಿಕೊಂಡು ಹೋಗುವಂಥ ಒಂದು ಮಾರ್ಗವಾಗಿದೆ.

## ನಮ್ಮ ಜೀವಪರಿಸರದ ಹೆಜ್ಜೆ ಗುರುತನ್ನು ಕಡಿಮೆ ಮಾಡುವುದು

ಮಾನವ ಜನಾಂಗ ಪೃಥ್ವಿಯ ಪರಿಸರದ ಮೇಲೆ ಹಾಕುತ್ತಿರುವ ಒಟ್ಟಾರೆ ಒತ್ತಡದ ಪ್ರಮಾಣವೆಷ್ಟು? ಅದನ್ನು ಅಳೆಯಲು ಯಾವುದಾದರೂ ಸಾಧನವಿದೆಯಾ? ವರ್ಲ್ಡ್ ವೈಲ್ಡ್‌ಲೈಫ್ ಫಂಡ್ (WWF) ಸಂಸ್ಥೆಯು

©KTBS Not to be republished

'ಜೀವಪರಿಸರದ ಹೆಜ್ಜೆಗುರುತು' ಎಂಬ ಸಾಧನವನ್ನು ಸಿದ್ಧಪಡಿಸಿ ಅದರ ಮೂಲಕ ಒಂದು ರಾಷ್ಟ್ರ ಅಥವಾ ಯಾವುದೇ ರಾಷ್ಟ್ರದ ಒಬ್ಬ ವ್ಯಕ್ತಿಯ ಸಂಪನ್ಮೂಲಗಳ ಬಳಕೆ ಮತ್ತು ತ್ಯಾಜ್ಯ ಉತ್ಪನ್ನದ ಪ್ರಮಾಣಗಳ ಮೂಲಕ ಪರಿಸರದ ಮೇಲೆ ಬೀಳುವ ಒತ್ತಡವನ್ನು ಅಳೆಯುತ್ತಿದೆ. ಸದ್ಯದ ತಾಂತ್ರಿಕತೆಯನ್ನು ಬಳಸುತ್ತಾ ಒಬ್ಬ ವ್ಯಕ್ತಿ ಪೃಥ್ವಿಯ ಎಷ್ಟು ಭೌತಿಕ ಪ್ರದೇಶವನ್ನು ಬಳಸಿ ಜೀವಿಸುತ್ತಿದ್ದಾನೆ ಎಂಬುದನ್ನು ಸೂಚಿಸುವ ಸಾಧನವೇ ಪರಿಸರದ ಹೆಜ್ಜೆಗುರುತು. ಈ ಭೌತಿಕ ಪ್ರದೇಶವು ಒಬ್ಬ ವ್ಯಕ್ತಿಗೆ ಅವಶ್ಯವಿರುವ ಆಹಾರ, ನೀರು, ಇಂಧನ, ಬಟ್ಟೆ ಹಾಗೂ ಕಟ್ಟಡ ನಿರ್ಮಾಣ ಸಾಮಗ್ರಿಗಳನ್ನು ಉತ್ಪಾದಿಸುವ ಜೈವಿಕ ಪ್ರದೇಶವಲ್ಲದೇ, ಆ ವ್ಯಕ್ತಿಯು ಸೃಷ್ಟಿಸುವ ತ್ಯಾಜ್ಯಗಳನ್ನು ಹಿಂಗಿಸಿಕೊಳ್ಳಲು ಬೇಕಾಗಿರುವ ಪ್ರದೇಶವೂ ಆಗಿದೆ. ಅಂದರೆ, ಒಬ್ಬ ವ್ಯಕ್ತಿಯ ಪೃಥ್ವಿಯ ಜೈವಿಕ ಸಾಮರ್ಥ್ಯದ ಬೇಡಿಕೆಯ ಮೂಲಕ ಪರಿಸರದ ಹೆಜ್ಜೆಗುರುತನ್ನು ಅಳೆಯಬಹುದಾಗಿದೆ.



WWF ಸಂಸ್ಥೆಯು ಒಂದು ದೇಶದ ಜೀವ ಪರಿಸರದ ಹೆಜ್ಜೆಗುರುತನ್ನು "ಆ ದೇಶವು ಬಳಸುವ ಆಹಾರ, ಬಟ್ಟೆ ಹಾಗೂ ಕಟ್ಟಿಗೆಯನ್ನು ಉತ್ಪಾದಿಸಲು ಬೇಕಾಗುವ ಎಲ್ಲ ಕೃಷಿ, ಜಾನುವಾರು ಮೇಯಿಸುವ, ಅರಣ್ಯ ಮತ್ತು ಮೀನುಗಾರಿಕೆಗೆ ಲಭ್ಯವಿರುವ ಭೂಮಿಯ ಪ್ರಮಾಣವಲ್ಲದೇ; ಇಂಧನ ಬಳಸಿದಾಗ ಹೊರಹೊಮ್ಮುವ ತ್ಯಾಜ್ಯಗಳನ್ನು ಹೀರಿಕೊಳ್ಳಲು ಬೇಕಾದ ಜಮೀನು; ಮತ್ತು ಮೂಲ ಸೌಕರ್ಯಗಳನ್ನು ಕಲ್ಪಿಸಲು ಬೇಕಾದ ಒಟ್ಟು ಜಮೀನಿನ ಪ್ರಮಾಣ" ಎಂದು ವ್ಯಾಖ್ಯಾನಿಸಿದೆ.

ಅದೇ ಸಂಸ್ಥೆಯು ತನ್ನ 2014ರ Living Planet Reportನಲ್ಲಿ 2010ನೇ ಸಾಲಿನಲ್ಲಿ, ಒಟ್ಟು ಜಾಗತಿಕ ಜೀವ ಪರಿಸರದ ಹೆಜ್ಜೆ ಗುರುತಿನ ಪ್ರಮಾಣವು 18.1 ಶತಕೋಟಿ ಹೆಕ್ಟೇರುಗಳು ಅಥವಾ ತಲಾ ಒಬ್ಬರಿಗೆ 2.6 ಹೆಕ್ಟೇರುಗಳಷ್ಟಿತ್ತು ಎಂದು ಅಂದಾಜಿಸಿದೆ. ಆದರೆ ಪೃಥ್ವಿಯ ಜೈವಿಕ ಸಾಮರ್ಥ್ಯವನ್ನು 12 ಶತಕೋಟಿ ಹೆಕ್ಟೇರುಗಳು ಅಥವಾ ತಲಾ ಒಬ್ಬರಿಗೆ 1.7 ಹೆಕ್ಟೇರುಗಳು ಮಾತ್ರ ಎಂದು ಅಂದಾಜಿಸಲಾಗಿದೆ. ಇದರರ್ಥ, ಪ್ರತಿಯೊಬ್ಬರೂ ಸದ್ಯದ ಜೀವನ ಶೈಲಿಯನ್ನು ಮುಂದುವರೆಸಿಕೊಂಡು ಹೋಗಲು 18 ಶತಕೋಟಿ ಹೆಕ್ಟೇರುಗಳಷ್ಟು ಭೂಪ್ರದೇಶದ ಅವಶ್ಯಕತೆಯಿದ್ದು, ಇದ್ದದ್ದು ಕೇವಲ 12 ಶತಕೋಟಿ ಹೆಕ್ಟೇರುಗಳಷ್ಟು ಮಾತ್ರ. ಅಂದರೆ 2010ರಲ್ಲಿ, ಮಾನವರು ಪೃಥ್ವಿಯು ನೀಡಬಹುದಾದಂಥ ಸಂಪನ್ಮೂಲಗಳಿಗಿಂತ ಶೇ.50ರಷ್ಟು ಹೆಚ್ಚಿನ ಪ್ರಮಾಣದ ಸಂಪನ್ಮೂಲಗಳನ್ನು, ಅಂದರೆ ಒಂದೂವರೆಯಷ್ಟು ಪೃಥ್ವಿಯನ್ನು ಬಳಸುತ್ತಿದ್ದರು ಎಂದರ್ಥ. ನಾವು ಇದೇ ರೀತಿ ನಮ್ಮ ಸಂಪನ್ಮೂಲ ಬಳಕೆಯನ್ನು ಮುಂದುವರೆಸಿದರೆ, ಕೆಲವೇ ದಶಕಗಳಲ್ಲಿ ಪೃಥ್ವಿಯ ಮರುಸೃಷ್ಟಿ ಸಾಮರ್ಥ್ಯ ಮೀರಿಸುವೆವಲ್ಲದೇ, ನಮ್ಮ ಜೀವನ ನಡೆಸಲು ಇಂಥ ಐದು ಭೂಮಿಗಳು ಬೇಕಾಗಬಹುದು ಎಂದು ಅಂದಾಜಿಸಲಾಗಿದೆ. ಆದ್ದರಿಂದ ಏನು ಮಾಡಬೇಕು? ಈ ಸಂಗತಿಯು ನಮ್ಮ ಜೀವನ ಶೈಲಿಯ ಬದಲಾವಣೆಯಲ್ಲದೇ ಕಡಿಮೆ ಸಂಪನ್ಮೂಲಗಳನ್ನು ಬಳಸಲು ಸ್ಪಷ್ಟ ಸಂದೇಶ ನೀಡುತ್ತದೆ.

ನಮ್ಮ ಪ್ರತಿಯೊಬ್ಬರದೂ ಜೀವಪರಿಸರದ ಹೆಜ್ಜೆ ಗುರುತು ಇದ್ದು, ಒಟ್ಟಾರೆ ಹೆಜ್ಜೆಗುರುತಿನ ಹೆಚ್ಚಳಕ್ಕೆ ಕೊಡುಗೆ ನೀಡುತ್ತಿದ್ದೇವೆ. ಆದ್ದರಿಂದ ಜೀವಪರಿಸರದ ಹೆಜ್ಜೆಗುರುತನ್ನು ಕಡಿಮೆ ಮಾಡಬೇಕಾದರೆ ನಾವೇ ಮೊದಲು ಅದನ್ನು ಪ್ರಾರಂಭಿಸುವುದು ಸೂಕ್ತ. ಇಲ್ಲಿ ಬಹು ಪ್ರಮುಖವಾದ ಸಂಗತಿಯೆಂದರೆ ಈ ಕುರಿತು ನಾವು ಅರಿತುಕೊಂಡು, ನಮ್ಮ ಸಮೀಪದವರಿಗೆ ಮನದಟ್ಟು ಮಾಡಿಸಿ, ಜನರ ಒಟ್ಟಾರೆ ತಿಳುವಳಿಕೆಯನ್ನು ಹೆಚ್ಚಿಸುವುದಾಗಿದೆ. ಈ ಮೂಲಕ ನಿಮ್ಮ ಪ್ರಭಾವ ಅರ್ಥಪೂರ್ಣವಾಗುತ್ತದೆ. ಉದಾಹರಣೆಗೆ, ತ್ಯಾಜ್ಯ ವಸ್ತುಗಳ ಮರುಬಳಕೆಯನ್ನು ನೀವು ಪ್ರಾರಂಭಿಸಿ, ನಿಮ್ಮ ಮನೆಯವರಿಗೆ ಅದರ ಕುರಿತು ಜಾಗೃತಿ ಮೂಡಿಸಿದಾಗ

©KTBS Not to be republished

ಅವರೂ ಅದನ್ನು ಅಳವಡಿಸಿಕೊಳ್ಳುತ್ತಾರಲ್ಲದೇ ಈ ವಿಷಯವೂ ನೆರೆಹೊರೆಯವರಿಗೂ ಹಬ್ಬುವುದು. ಇದು ಒಂದು ಸಣ್ಣ ಪ್ರಯತ್ನವಾದರೂ ವಿಶಾಲ ಪರಿಣಾಮ ಬೀರುವಂಥಹುದಾಗಿದೆ.

**ನಿಮ್ಮ ಪರಿಸರದ ಹೆಜ್ಜೆ ಗುರುತನ್ನು ಕಡಿಮೆ ಮಾಡಲು ನೀವು ಏನು ಮಾಡಬಹುದು?**

**ಆಹಾರ**

- ಸಾವಯವ ಅಥವಾ ಸ್ಥಳೀಯವಾಗಿ ಬೆಳೆದ ಆಹಾರವನ್ನು ಖರೀದಿಸಿರಿ.
- ಒಂದು ಕೈತೋಟವನ್ನು ಬೆಳೆಸಿರಿ (ತನ್ಮೂಲಕ ನೀವು ಆಹಾರ ಸಾಗಾಟದಿಂದಾಗುವ ಮಾಲಿನ್ಯ, ರಸಗೊಬ್ಬರ ಬಳಕೆ, ಪೊಟ್ಟಣಗಳ ಅವಶ್ಯಕತೆಯನ್ನು ಕಡಿಮೆ ಮಾಡಬಹುದಲ್ಲದೇ, ನಿಮಗೆ ತಾಜಾ ತರಕಾರಿ ಲಭ್ಯವಾಗುತ್ತದೆ).
- ಅಂಗಡಿಗಳಿಗೆ ನಿಮ್ಮದೇ ಕೈಚೀಲಗಳನ್ನು ತೆಗೆದುಕೊಂಡು ಹೋಗಿರಿ.
- ಆದಷ್ಟು ಕಡಿಮೆ ಪ್ರಮಾಣದಲ್ಲಿ ಸಂಸ್ಕರಿಸಿದ ಆಹಾರವನ್ನು ಬಳಸಿರಿ.
- ಹಣ್ಣಿನ ರಸದ ಪೊಟ್ಟಣ ಕೊಳ್ಳುವುದರ ಬದಲಾಗಿ ಹಣ್ಣನ್ನೇ ಖರೀದಿಸಿರಿ.
- ಮಾಂಸ ಮತ್ತು ಡೇರಿ ಉತ್ಪನ್ನಗಳ ಬಳಕೆಯನ್ನು ಕಡಿಮೆ ಮಾಡಿರಿ, ನಿಮಗೆ ಬೇರೆ ಮೂಲಗಳಿಂದಲೂ ಪ್ರೋಟೀನ್ ದೊರಕುತ್ತದೆ.
- ಹೊರಗಿನಿಂದ ಆಹಾರ ತರಿಸಿಕೊಳ್ಳುವುದಕ್ಕಿಂತ ಮನೆಯಲ್ಲಿಯೇ ತಯಾರಿಸಿಸುವುದು ಉತ್ತಮ

**ಇಂಧನ/ವಿದ್ಯುಚ್ಛಕ್ತಿ**

- ಬಳಕೆ ಮುಗಿದ ಮೇಲೆ ಎಲ್ಲ ವಿದ್ಯುದ್ದೀಪಗಳನ್ನು ಆರಿಸಿರಿ
- ರಾತ್ರಿ ಹೊತ್ತಿನಲ್ಲಿ ಏರ್ ಕಂಡೀಷನರ್ ಮತ್ತು ಹೀಟರ್‌ಗಳನ್ನು ಆರಿಸಿರಿ.
- ಮನೆಯಿಂದಾಚೆಗೆ ಬನ್ನಿ, ನೀವು ಉಲ್ಲಾಸಭರಿತರಾಗಿರುತ್ತೀರಲ್ಲದೇ, ಕಡಿಮೆ ಇಂಧನ ಬಳಸುತ್ತೀರಿ.
- ಮನೆ/ಕಾರನ್ನು ತಂಪಾಗಿಸುವಾಗ ಅಥವಾ ಬಿಸಿಯಾಗಿಸುವಾಗ, ಬಾಗಿಲು-ಕಿಟಕಿಗಳನ್ನು ಮುಚ್ಚಿರಿ.

**ಸಾರಿಗೆ**

- ಶಾಲೆಗೆ ನಡೆದು ಬನ್ನಿ ಅಥವಾ ಸೈಕಲ್ ತನ್ನಿ.
- ಸಾರ್ವಜನಿಕ ಸಾರಿಗೆಯನ್ನು ಬಳಸಿರಿ.
- ಹೊರಗೆ ಹೋಗುವಾಗ ಅಥವಾ ನಡೆಯುವ ದಾರಿ ದೂರ ಇದ್ದಾಗ ಕಾರ್ ಪೂಲ್ ಬಳಸಿರಿ.

**ಕಡಿಮೆ ಪ್ರಮಾಣದ ತ್ಯಾಜ್ಯ ಸೃಷ್ಟಿಸುವುದು**

- ಆದಷ್ಟು ಕಡಿಮೆ ಪ್ಯಾಕೇಜ್ ಇರುವ ವಸ್ತುಗಳನ್ನು ಖರೀದಿಸುವುದು
- ಅವಶ್ಯಕತೆಯಿಲ್ಲದಿದ್ದಾಗ ಚೀಲವನ್ನು ಕೇಳದಿರುವುದು
- ಆದಷ್ಟು ಪುನರ್ಬಳಕೆ ಮಾಡುವುದು ಮತ್ತು ಪುನರ್ಬಳಕೆ ಮಾಡಿದ ವಸ್ತುಗಳನ್ನು ಖರೀದಿಸುವುದು.
- ಮುರಿದ ಸಾಮಾನುಗಳನ್ನು ಜೋಡಿಸಿ ರಿಪೇರಿ ಮಾಡುವುದು.
- ಪುನಃ ಪುನಃ ಬಳಸಬಹುದಾದಂಥ ವಸ್ತುಗಳನ್ನು ಖರೀದಿಸುವುದು.

©KTBS Not to be republished

**ನೀರು**

- ಹಲ್ಲುಜ್ಜುವಾಗ ನಳವನ್ನು ಬಂದ್ ಮಾಡುವುದು.
- ಚರಂಡಿಗಳಲ್ಲಿ ವಿಷಕಾರಕ ವಸ್ತುಗಳನ್ನು ಸುರಿಯದಿರುವುದು
- ಪಾತ್ರೆ ಮತ್ತು ಬಟ್ಟೆ ತೊಳೆಯುವ ಯಂತ್ರಗಳನ್ನು ತುಂಬಿಸಿ (ಫುಲ್ ಲೋಡ್) ಉಪಯೋಗಿಸುವುದು.
- ಶೌಚಾಲಯ (ಫ್ಲಷ್) ಟ್ಯಾಂಕಿನಲ್ಲಿ ಒಂದು ಇಟ್ಟಿಗೆಯನ್ನು ಇಡುವುದರಿಂದ ಸಾಕಷ್ಟು ನೀರನ್ನು ಉಳಿಸಬಹುದು.
- ಭಾರತೀಯ ವಿಧದ ಶೌಚಾಲಯವನ್ನು ಹೆಚ್ಚು ಬಳಸಿರಿ

**ಸಮುದಾಯ**

- ಸಮುದಾಯದ ಜನರಿಗೆ ಪರಿಸರದ ಹೆಜ್ಜೆಗುರುತಿನ ಕುರಿತು ಮಾಹಿತಿ ನೀಡಿ, ಅದನ್ನು ಕಡಿಮೆ ಮಾಡಲು ಏನು ಮಾಡಬಹುದೆಂಬುದನ್ನೂ ತಿಳಿಸಿ.
- ಸ್ಥಳೀಯ ಜಲಮೂಲಗಳನ್ನು ರಕ್ಷಿಸುವ/ಶುದ್ಧೀಕರಿಸುವ ಯಾವುದಾದರೂ ಸಂಘ ಸಂಸ್ಥೆಯಿದ್ದರೆ ಅದರ ಸದಸ್ಯರಾಗಿರಿ,
- ಪುನರ್ಬಳಕೆ ಕಾರ್ಯಕ್ರಮಗಳಲ್ಲಿ ತೊಡಗಿಕೊಳ್ಳಿರಿ.
- ನಿಮ್ಮ ಶಾಲೆಯ ಇಂಧನದ ಆಡಿಟ್ ಮಾಡಿ, ಯಾವ ಕ್ರಮಗಳ ಮೂಲಕ ವಿದ್ಯುತ್ ಹಾಗೂ ಹಣ ಉಳಿಸಬಹುದೆಂಬುದನ್ನು ಗಮನಿಸಿರಿ.
- ಶಾಲೆಯ ಹೆಜ್ಜೆಗುರುತನ್ನು ಲೆಕ್ಕ ಹಾಕಲು ಯತ್ನಿಸಿರಿ

(www.myfootprint.org ತಾಣದಲ್ಲಿ ಹೆಚ್ಚಿನ ಮಾಹಿತಿಗಾಗಿ ಶೋಧಿಸಿರಿ).

ಹೀಗೆ ಸರಳ ಕ್ರಮಗಳಿಂದ ಸಂಪನ್ಮೂಲ ಸಂರಕ್ಷಣೆಯಲ್ಲಿ ಅತ್ಯಂತ ಮಹತ್ವದ ಪಾತ್ರ ಮಹಿಸಬಹುದಾಗಿದೆ. ಏಕೆಂದರೆ ಮಹಾತ್ಮಾ ಗಾಂಧೀಜಿಯವರು ಸಹ "ಇತರರಲ್ಲಿ ಕಾಣಬಯಸುವ ಬದಲಾವಣೆಯನ್ನು ಮೊದಲು ನೀನೇ ಆಗಿ ತೋರಿಸು" ಎಂದಿದ್ದಾರೆ.

> "ಎಲ್ಲರ ಆಸೆಗಳನ್ನು ಈಡೇರಿಸಲು ಈ ಪೃಥ್ವಿಯಲ್ಲಿ ಎಲ್ಲ ಇದೆ, ಆದರೆ ದುರಾಸೆಗಳನ್ನಲ್ಲ."
> **– *ಮಹಾತ್ಮಾ ಗಾಂಧೀಜಿ***

## ಅಭ್ಯಾಸಗಳು

**I. ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಭರ್ತಿ ಮಾಡಿರಿ.**

1. ನೈಸರ್ಗಿಕ ಸಂಪನ್ಮೂಲಗಳು ನಿಸರ್ಗದ ________ ಆಗಿವೆ.
2. ನಿರ್ದಿಷ್ಟ ಅವಧಿಯಲ್ಲಿ ________ ಸಂಪನ್ಮೂಲಗಳು ಪುನರುತ್ಪಾದನೆ ಹೊಂದುತ್ತವೆ.
3. ಕಬ್ಬಿಣದ ಅದಿರು ________ ಸಂಪನ್ಮೂಲವಾಗಿದೆ.
4. ಸಂಪನ್ಮೂಲದ ಅವಶ್ಯಕತೆಯು ಅದರ ಲಭ್ಯತೆಗಿಂತ ಅಧಿಕವಾದಾಗ ________ ಉಂಟಾಗುತ್ತದೆ.

© KTBS Not to be republished

5. ಮುಂದಿನ ಪೀಳಿಗೆಯವರ ಅವಶ್ಯಕತೆಗಳನ್ನೂ ಪೂರೈಸಲು ಸಾಧ್ಯವಾಗುವಂಥ ಅಭಿವೃದ್ಧಿ ತಂತ್ರವನ್ನು ______________ ಅಭಿವೃದ್ಧಿ ಎಂದು ಕರೆಯುತ್ತೇವೆ.
6. 2010ರಲ್ಲಿ ಮಾನವರು ತಮ್ಮ ತಮ್ಮ ಇಷ್ಟಗಳನ್ನು ಪೂರೈಸಿಕೊಳ್ಳಲು ________ ಪೃಥ್ವಿಗಳಷ್ಟು ಪ್ರದೇಶದ ಬಳಕೆ ಮಾಡುತ್ತಿದ್ದರು.

**II. ಈ ಕೆಳಗಿನ ಪ್ರಶ್ನೆಗಳನ್ನು ಒಂದು ವಾಕ್ಯದಲ್ಲಿ ಉತ್ತರಿಸಿ:**

1. ನೈಸರ್ಗಿಕ ಸಂಪನ್ಮೂಲಗಳೆಂದರೇನು??
2. ನವೀಕರಣ ಹೊಂದುವ ಎರಡು ಸಂಪನ್ಮೂಲಗಳನ್ನು ಉದಾಹರಿಸಿರಿ.
3. ಜೈವಿಕ ಸಂಪನ್ಮೂಲಗಳ ಎರಡು ಉದಾಹರಣೆಗಳನ್ನು ನೀಡಿರಿ.
4. ಸಂರಕ್ಷಣೆ ಎಂದರೇನು?
5. ಜೀವ ಪರಿಸರದ ಹೆಜ್ಜೆ ಗುರುತನ್ನು ವ್ಯಾಖ್ಯಾನಿಸಿ.
6. ಪುನರ್ಬಳಕೆ ಎಂದರೇನು?

**III. ಈ ಕೆಳಗಿನ ಪ್ರಶ್ನೆಗಳನ್ನು ಐದರಿಂದ ಆರು ವಾಕ್ಯಗಳಲ್ಲಿ ಉತ್ತರಿಸಿ:**

1. ನವೀಕರಣ ಹೊಂದುವ ಮತ್ತು ಬರಿದಾಗುವ ಸಂಪನ್ಮೂಲಗಳ ನಡುವಿನ ವ್ಯತ್ಯಾಸ ತಿಳಿಸಿ.
2. ಸಂಪನ್ಮೂಲಗಳ ಕೊರತೆಯು ಅಧಿಕವಾಗುತ್ತಿರುವುದಕ್ಕೆ ಕಾರಣಗಳನ್ನು ನೀಡಿ.
3. 4R ಗಳೆಂದರೇನು? ಸಂಕ್ಷಿಪ್ತವಾಗಿ ಬರೆಯಿರಿ.
4. ನಿಮ್ಮ ಮನೆ ಮತ್ತು ಶಾಲೆಗಳಲ್ಲಿ ಇಂಧನ ಉಳಿತಾಯಕ್ಕೆ ಯಾವ ಕ್ರಮಗಳನ್ನು ಕೈಗೊಳ್ಳುವಿರಿ?
5. ಜೀವಪರಿಸರದ ಹೆಜ್ಜೆ ಗುರುತನ್ನು ಕಡಿಮೆ ಮಾಡಲು ಯಾವ ಕ್ರಮಗಳನ್ನು ಕೈಗೊಳ್ಳುವಿರಿ?

**IV. ಯೋಜಿತ ಕಾರ್ಯ**

1. ನೀವು ದೈನಂದಿಕವಾಗಿ ಬಳಸುವ ವಸ್ತುಗಳನ್ನು ಪಟ್ಟಿ ಮಾಡಿ, ಅವುಗಳನ್ನು 4Rಗಳ ಆಧಾರದ ಮೇಲೆ ವರ್ಗೀಕರಿಸಿರಿ.

**V. ಚಟುವಟಿಕೆ**

1. ನಿಮ್ಮ ಶಾಲೆಯ ಇಂಧನ ಆಡಿಟ್ ಮಾಡಿ, ಇಂಧನದ ಬಳಕೆಯನ್ನು ಹೇಗೆ ಮತ್ತು ಎಲ್ಲಿ ಉಳಿತಾಯ ಮಾಡಬಹುದೆಂಬುದನ್ನು ಗಮನಿಸಿ.

◈ ◈ ◈

Not to be republished ©KTBS

## ಅಧ್ಯಾಯ – 2

# ಭಾರತದ ಮಾನವ ಸಂಪನ್ಮೂಲಗಳು

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳ ತಿಳಿಯುತ್ತೇವೆ.**

- *ಮಾನವ ಸಂಪನ್ಮೂಲದ ಅರ್ಥ, ಪ್ರಾಮುಖ್ಯತೆ.*
- *ಭಾರತದ ಜನಸಂಖ್ಯೆಯ ಲಕ್ಷಣಗಳಾದ ಸಾಕ್ಷರತಾ ದರ, ಲಿಂಗ ಅನುಪಾತ, ನಗರ–ಗ್ರಾಮೀಣ ಮತ್ತು ವಯೋಮಾನ ಆಧಾರಿತ ಹಂಚಿಕೆ ಮತ್ತು ಸಾಂದ್ರತೆ.*
- *ಜನಸಂಖ್ಯಾ ಪರಿವರ್ತನೆಯ ಪರಿಕಲ್ಪನೆ.*
- *ಸಂತಾನೋತ್ಪತ್ತಿ ಆರೋಗ್ಯ ಮತ್ತು ಜನಸಂಖ್ಯೆಯ ಗುಣಮಟ್ಟ ಸುಧಾರಿಸುವುದಕ್ಕೆ ಸಂಬಂಧಿಸಿದ ಅಂಶಗಳು.*

ನೈಸರ್ಗಿಕ ಸಂಪನ್ಮೂಲಗಳ ಹಾಗೆಯೇ, ಜನಸಂಖ್ಯೆಯನ್ನೂ ಸಹ ಒಂದು ದೇಶದ ಆಸ್ತಿ ಎಂದು ಪರಿಗಣಿಸಲಾಗುತ್ತದೆ. ಒಂದು ದೇಶದಲ್ಲಿ ವಾಸಿಸುತ್ತಿರುವ ಜನರು ಆ ದೇಶದ ಜನಸಂಖ್ಯೆ ಆಗಿದ್ದು ಅವರಲ್ಲಿ ಮಕ್ಕಳು, ವಯಸ್ಕರು ಮತ್ತು ಹಿರಿಯ ನಾಗರಿಕರಿದ್ದಾರೆ. 14 ವರ್ಷದ ವಯಸ್ಸಿನ ಒಳಗಿರುವವರನ್ನು ಮಕ್ಕಳೆಂತಲೂ, 15 ವರ್ಷದ ಮೇಲ್ಪಟ್ಟು 60 ವರ್ಷದ ಒಳಗಿನವರನ್ನು ವಯಸ್ಕರೆಂತಲೂ ಮತ್ತು 60 ವರ್ಷದ ಮೇಲ್ಪಟ್ಟವರನ್ನು ಹಿರಿಯ ನಾಗರಿಕರೆಂತಲೂ ಗುರುತಿಸಲಾಗಿದೆ. ವಯಸ್ಕರು ದುಡಿಯಲು ಸಮರ್ಥರು. ಇವರನ್ನು ದುಡಿಯುವ ಜನರು ಎನ್ನುತ್ತೇವೆ. ಈ ದುಡಿಯುವ ಜನರೇ ದೇಶದ ಸಂಪತ್ತು. ಪ್ರಸ್ತುತ ದೇಶದಲ್ಲಿರುವ ಉತ್ಪಾದನಾ ಜ್ಞಾನ, ಕೌಶಲ್ಯ ಮತ್ತು ಸಾಮರ್ಥ್ಯ ಹೊಂದಿರುವ ದುಡಿಯುವ ಜನರನ್ನು ಮಾನವ ಸಂಪನ್ಮೂಲ ಎಂದು ಕರೆಯಲಾಗುತ್ತಿದೆ. ಈಗ ಭಾರತದಲ್ಲಿ ಯುವಕರೇ ಹೆಚ್ಚಾಗಿರುವುದರಿಂದ, ದುಡಿಯುವ ಶಕ್ತಿ ಹೆಚ್ಚಾಗಿದೆ.

ಮಾನವ ಸಂಪನ್ಮೂಲಕ್ಕೆ ಉತ್ತಮ ಶಿಕ್ಷಣ, ತರಬೇತಿ ಮತ್ತು ಆರೋಗ್ಯ ಸುರಕ್ಷತೆಗಳನ್ನು ಒದಗಿಸಿದರೆ, ಅವರು ಮಾನವ ಬಂಡವಾಳವಾಗಿ ಮಾರ್ಪಡುತ್ತಾರೆ. ಇವರು ರಾಷ್ಟ್ರದ ಆದಾಯದ ಹೆಚ್ಚಳಕ್ಕೆ ಕಾರಣರಾಗುವ, ಸಾಮಾಜಿಕ ಪರಿವರ್ತನೆ ತರುವ ಸಾಮರ್ಥ್ಯವನ್ನು ಹೊಂದಿದ್ದಾರೆ. ಮಕ್ಕಳ ಶಿಕ್ಷಣ ಮತ್ತು ಆರೋಗ್ಯದ ಮೇಲೆ ಹೆಚ್ಚಿನ ಹಣ ಹೂಡುವುದರಿಂದ ಭವಿಷ್ಯದಲ್ಲಿ ಅವರು ಹೆಚ್ಚಿನ ಆದಾಯ ತರಬಲ್ಲರು. ಸಮಾಜಕ್ಕೆ ಉತ್ತಮ ಕೊಡುಗೆ ನೀಡಬಲ್ಲರು. ಆದ್ದರಿಂದಲೇ ಸರ್ಕಾರಗಳು ನಾಗರಿಕರಿಗೆ ಉತ್ತಮ ಶಿಕ್ಷಣ ಹಾಗೂ ಆರೋಗ್ಯ ಒದಗಿಸಲು ಶ್ರಮಿಸುತ್ತವೆ.

### ಸಂಪನ್ಮೂಲವಾಗಿ ಜನರು

ಶಿಕ್ಷಣ ಮತ್ತು ತರಬೇತಿ ಪಡೆದ ಆರೋಗ್ಯವಂತ ಜನರ ದುಡಿಯುವ ಸಾಮರ್ಥ್ಯ ಹೆಚ್ಚಾಗಿರುವುದನ್ನು ನಮ್ಮ ಪರಿಸರದಲ್ಲಿ ನಾವು ಗಮನಿಸಬಹುದು, ಇದರಿಂದ ರಾಷ್ಟ್ರದ ಆದಾಯ ಹೆಚ್ಚುತ್ತದೆ. ಹಾಗಾಗಿ ವಿದ್ಯಾವಂತ ಹಾಗೂ ಆರೋಗ್ಯವಂತ ದುಡಿಯುವ ಜನರೇ ದೇಶದ ಮಾನವ ಸಂಪತ್ತು. ಸರಕು–ಸೇವೆಗಳ ಉತ್ಪಾದನೆಯಲ್ಲಿ ನಿಸರ್ಗ ಸಂಪತ್ತು ಮತ್ತು ಭೌತಿಕ ಬಂಡವಾಳಕ್ಕಿಂತ ಮಾನವ ಸಂಪತ್ತು ಹೆಚ್ಚಿನ ಮಹತ್ವವನ್ನು ಪಡೆದಿದೆ. ಮಾನವ ಸಂಪತ್ತು ಉತ್ಪಾದನೆಗೆ ಬೇಕಾದ ಜ್ಞಾನ ಮತ್ತು ಶ್ರಮಶಕ್ತಿಯನ್ನು ಒದಗಿಸುತ್ತದೆ. ಕೃಷಿ, ಕೈಗಾರಿಕೆ ಮತ್ತು ಸೇವಾ ವಲಯದ ವಿವಿಧ ಉದ್ಯೋಗಗಳಲ್ಲಿ ದುಡಿಯುತ್ತಿರುವ ಜನರನ್ನು ಶ್ರಮ ಶಕ್ತಿ ಎನ್ನುತ್ತೇವೆ. ಮಾನವ ಸಂಪತ್ತು ದುಡಿಮೆಗೆ ಅಗತ್ಯವಾದ ಶ್ರಮಶಕ್ತಿಯನ್ನು ಪೂರೈಸುತ್ತದೆ. ಮಾನವ ಬಂಡವಾಳವು ಹೆಚ್ಚಿನ

©KTBS Not to be republished

ಸಂಶೋಧನೆಗಳನ್ನು ಕೈಗೊಂಡು, ಜನಸಮುದಾಯಕ್ಕೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಿಕೊಡುತ್ತದೆ. ನಾವು ಪಡೆಯುವ ವಿದ್ಯುತ್, ಟಿ.ವಿ., ಕಂಪ್ಯೂಟರ್, ಮೊಬೈಲ್, ವಾಹನಗಳು ಮುಂತಾದುವು ಮಾನವ ಬಂಡವಾಳದ ಕೊಡುಗೆಯಾಗಿವೆ.

ಬಹಳ ಕಾಲದವರೆಗೂ ಭಾರತದಲ್ಲಿನ ಅತಿಯಾದ ಜನಸಂಖ್ಯೆಯು ದೇಶಕ್ಕೆ ಹೊರೆ ಎಂದೇ ಭಾವಿಸಲಾಗಿತ್ತು. ಆದರೆ ಚೀನಾದ ಆರ್ಥಿಕ ಯಶಸ್ಸಿನ ನಂತರ ಜನಸಂಖ್ಯೆಯನ್ನು ಸಂಪನ್ಮೂಲವಾಗಿ ನೋಡಲಾಗುತ್ತಿದೆ. ಶಿಕ್ಷಣ, ತರಬೇತಿ ಮತ್ತು ಆರೋಗ್ಯ ಸೌಲಭ್ಯಗಳನ್ನು ಒದಗಿಸುವ ಮೂಲಕ ಜನರನ್ನು ದೇಶದ ಉತ್ಪಾದಕ ಆಸ್ತಿಯನ್ನಾಗಿ ಪರಿವರ್ತಿಸಲು ಸಾಧ್ಯವಿದೆ. ಆದರೂ ದೇಶದಲ್ಲಿ ಜನಸಂಖ್ಯೆ ಮಿತಿಯಲ್ಲಿರುವುದು ಒಳಿತು.

**ನಿಮಗಿದು ತಿಳಿದಿರಲಿ:**

- ಸಾಕ್ಷರರ ಸಂಖ್ಯೆ ಹೆಚ್ಚಾದಂತೆ ಬಡವರ ಸಂಖ್ಯೆ ಕಡಿಮೆಯಾಗುತ್ತದೆ.
- ಮಹಿಳೆಯರ ಶಿಕ್ಷಣ ಹೆಚ್ಚಾದಂತೆ ಜನನ ಪ್ರಮಾಣ ಕಡಿಮೆಯಾಗುತ್ತದೆ.
- ಕೃಷಿಕನ ಶಿಕ್ಷಣ ಹೆಚ್ಚಾದಂತೆ ಕೃಷಿ ಉತ್ಪಾದನೆ ಹೆಚ್ಚಾಗುತ್ತದೆ.
- ವ್ಯಕ್ತಿಯ ಶಿಕ್ಷಣಮಟ್ಟ ಹೆಚ್ಚಾದಂತೆ ಅವನು ಗಳಿಸುವ ಆದಾಯವು ಹೆಚ್ಚುತ್ತದೆ.

**ಭಾರತದ ಜನಸಂಖ್ಯೆಯ ಲಕ್ಷಣಗಳು**

ಜನಸಂಖ್ಯೆಯ ಲಕ್ಷಣಗಳೆಂದರೆ, ಅದರ ಗಾತ್ರ, ರಚನೆ, ಸಾಂದ್ರತೆ, ಗುಣಮಟ್ಟ, ಇತ್ಯಾದಿಗಳಿಗೆ ಸಂಬಂಧಪಟ್ಟಂಥ ಅಂಶಗಳಾಗಿವೆ. ಯಾವುದೇ ರಾಷ್ಟ್ರದ ಜನಸಂಖ್ಯಾ ಸಂಬಂಧಿ ಸಮಸ್ಯೆಗಳನ್ನು ಅರಿಯಲು ಅದರ ಲಕ್ಷಣಗಳ ಸಂಪೂರ್ಣ ಮಾಹಿತಿ ಹೊಂದಿರುವುದು ಅವಶ್ಯಕ. ಭಾರತದಲ್ಲಿ ಜನಗಣತಿ (ಅಂದರೆ ಪ್ರತಿ ನಾಗರಿಕನ ಕುರಿತು ವಿಷಯ ಸಂಗ್ರಹಣೆ) ಪ್ರತಿ ಹತ್ತು ವರ್ಷಗಳಿಗೊಮ್ಮೆ ಜರುಗುತ್ತದೆ. ತೀರ ಇತ್ತೀಚಿನ ಜನಗಣತಿಯನ್ನು 2011ರಲ್ಲಿ ಕೈಗೊಳ್ಳಲಾಗಿದೆ. 2011ರ ಜನಗಣತಿಯು ತೋರ್ಪಡಿಸಿದ ಭಾರತದ ಜನಸಂಖ್ಯೆಯ ಲಕ್ಷಣಗಳು ಈ ಕೆಳಗಿನಂತಿವೆ.

1. **ಅಗಾಧ ಗಾತ್ರ ಹಾಗೂ ತೀವ್ರ ಬೆಳವಣಿಗೆ :** 2011ರಲ್ಲಿ 121.1 ಕೋಟಿ ಜನರನ್ನು ಹೊಂದಿದ್ದ ಭಾರತವು, ಚೀನಾ ದೇಶದ ನಂತರದಲ್ಲಿ, ವಿಶ್ವದಲ್ಲಿ ಎರಡನೇ ಅತಿ ಹೆಚ್ಚು ಜನರನ್ನುಳ್ಳ ದೇಶವಾಗಿದೆ. ವಿಶ್ವದ ಪ್ರತಿ ಆರನೆಯ ವ್ಯಕ್ತಿಯು ಭಾರತೀಯನಾಗಿರುವನು. ವಾರ್ಷಿಕ ಪ್ರತಿಶತ 1.8ರ ದರದಲ್ಲಿ ಬೆಳೆಯುತ್ತಿರುವ ಜನಸಂಖ್ಯೆಯಿಂದಾಗಿ ಭಾರತದಲ್ಲಿ ಪ್ರತಿವರ್ಷ ಆಸ್ಟ್ರೇಲಿಯ ದೇಶದಲ್ಲಿರುವಷ್ಟು ಜನರು ಸೇರಿಕೊಳ್ಳುತ್ತಿದ್ದಾರೆಂದರೆ ಅದರ ಅಗಾಧತೆಯನ್ನು ನೀವು ಗಮನಿಸಬಹುದು. ಇಂಥ ಪರಿಸ್ಥಿತಿಯನ್ನು 'ಜನಸಂಖ್ಯಾ ಸ್ಫೋಟ' ಎಂದು ಕರೆಯಲಾಗುತ್ತದೆ. 2022ನೆಯ ಇಸವಿಯ ಹೊತ್ತಿಗೆ, ನಾವು ವಿಶ್ವದ ಅತಿ ಹೆಚ್ಚು ಜನರುಳ್ಳ ರಾಷ್ಟ್ರವಾಗುತ್ತೇವೆ.

2. **ಜನಸಂಖ್ಯಾ ಪರಿವರ್ತನೆಯ ಎರಡನೆಯ ಹಂತ:** ಭಾರತವು ಸದ್ಯ ಜನಸಂಖ್ಯಾ ಪರಿವರ್ತನೆಯ ಎರಡನೆಯ ಹಂತದಲ್ಲಿದ್ದು, ಮರಣ ದರವು (ಪ್ರತಿ ಸಾವಿರ ಜನಸಂಖ್ಯೆಗೆ ಮರಣಿಸಿದ ಜನರ ಪ್ರಮಾಣ) ಕಡಿಮೆ ಇದ್ದು ಜನನ ದರವು (ಪ್ರತಿ ಸಾವಿರ ಜನಸಂಖ್ಯೆಗೆ ಜನಿಸಿದ ಮಕ್ಕಳ ಪ್ರಮಾಣ) ಇನ್ನೂ ಅಧಿಕವಾಗಿಯೇ ಇದೆ. 2010ನೇ ವರ್ಷದಲ್ಲಿ ಜನನ ದರವು 22.1 ಇದ್ದರೆ, ಮರಣ ದರವು 7.2 ಇದ್ದಿತು, ಅಂದರೆ ಆ ವರ್ಷ, ಪ್ರತಿ ಸಾವಿರ ಜನಸಂಖ್ಯೆಗೆ 15ಕ್ಕೂ ಹೆಚ್ಚಿನ ಸಂಖ್ಯೆಯ ಜನರ ಸೇರ್ಪಡೆ ಆಗುತ್ತಿತ್ತು. ಇದನ್ನು ತುಂಬಾ ಅಧಿಕವೆಂದೇ ಭಾವಿಸಲಾಗುತ್ತದೆ.

3. **ತೀವ್ರವಾಗಿ ಏರುತ್ತಿರುವ ಸಾಂದ್ರತೆ :** ಒಂದು ಚದರ ಕಿಲೋ ಮೀಟರ್ ಪ್ರದೇಶದಲ್ಲಿ ವಾಸಿಸುತ್ತಿರುವ ಜನರ ಸರಾಸರಿ ಸಂಖ್ಯೆಗೆ ಜನಸಾಂದ್ರತೆ ಎನ್ನುತ್ತೇವೆ. ಒಂದು ದೇಶದಲ್ಲಿರುವ ಒಟ್ಟು ಜನಸಂಖ್ಯೆಯನ್ನು ಅಲ್ಲಿನ ಒಟ್ಟು ಭೂವಿಸ್ತೀರ್ಣದಿಂದ ಭಾಗಿಸುವ ಮೂಲಕ ಜನಸಾಂದ್ರತೆಯನ್ನು

©KTBS Not to be republished

ಲೆಕ್ಕಾಚಾರ ಮಾಡಲಾಗುತ್ತದೆ. 2011 ರಲ್ಲಿ ಭಾರತದ ಜನಸಾಂದ್ರತೆ 382 ಇತ್ತು. ಇತರೆ ರಾಷ್ಟ್ರಗಳಿಗೆ ಹೋಲಿಸಿದರೆ ಇದು ಅತಿ ಹೆಚ್ಚಾಗಿರುವುದು ಕಂಡುಬರುತ್ತದೆ. ಭಾರತವು ವಿಶ್ವದ ಶೇ.2.4 ಭೂಪ್ರದೇಶವನ್ನು ಹೊಂದಿದ್ದು, ವಿಶ್ವದ ಶೇ.16.7 ಜನರನ್ನು ಹೊಂದಿದೆ.

4. **ಅನಾನುಕೂಲಕರ ಲಿಂಗ ಅನುಪಾತ:** ಪ್ರತಿ ಸಾವಿರ ಪುರುಷರಿಗೆ ಇರುವ ಮಹಿಳೆಯರ ಸಂಖ್ಯೆಯನ್ನು ಲಿಂಗ ಅನುಪಾತವೆಂದು ವ್ಯಾಖ್ಯಾನಿಸಲಾಗಿದೆ. 2011ರ ಜನಗಣತಿಯ ಪ್ರಕಾರ ಭಾರತದಲ್ಲಿ ಲಿಂಗ ಅನುಪಾತವು ಕೇವಲ 943 ಇದ್ದು ಇದು ಮಹಿಳಾ ಸಬಲೀಕರಣ ಮತ್ತು ಆರೋಗ್ಯಕರ ಸಾಮಾಜಿಕ ಅಭಿವೃದ್ಧಿ ಹಿನ್ನೆಲೆಯಲ್ಲಿ ಅನಾನುಕೂಲಕರವಾಗಿದೆ.

5. **ಕೆಳವಯಸ್ಸಿನವರು ಅಧಿಕವಿರುವ ವಯೋಮಾನ ರಚನೆ:** ಭಾರತದ ಜನಸಂಖ್ಯಾ ರಚನೆಯಲ್ಲಿ ಕೆಳ ವಯಸ್ಸಿನ ಅಂದರೆ 0–14 ವಯೋಮಾನದ ಮಕ್ಕಳ ಪ್ರಮಾಣವು ಅಧಿಕವಿದೆ. 2011ರ ಜನಗಣತಿಯ ಪ್ರಕಾರ ಈ ವಯೋಮಾನದವರು ಜನಸಂಖ್ಯೆಯ ಶೇ. 30.7ರಷ್ಟಿದ್ದರು. ಇದು ಅಧಿಕ ಅವಲಂಬಿತ ಜನಸಂಖ್ಯೆಯ ಪ್ರಮಾಣವನ್ನು ತೋರಿಸುತ್ತದೆ ಮತ್ತು ಇದನ್ನು ಜನನ ದರವನ್ನು ನಿಯಂತ್ರಿಸುವುದರ ಮೂಲಕ ಕಡಿಮೆ ಮಾಡಬಹುದಾಗಿದೆ.

6. **ಅಧಿಕ ಗ್ರಾಮೀಣ ಜನಸಂಖ್ಯೆಯ ಪ್ರಮಾಣ:** ಒಂದು ದೇಶದಲ್ಲಿರುವ ನಗರ–ಗ್ರಾಮೀಣ ಜನಸಂಖ್ಯೆಯ ಅನುಪಾತವು ಆ ದೇಶದ ಔದ್ಯಮೀಕರಣದ ಸೂಚಿಯಾಗಿ ಪರಿಗಣಿತವಾಗಿದೆ. ಭಾರತದ ಜನಸಂಖ್ಯೆಯು ಪ್ರಮುಖವಾಗಿ ಗ್ರಾಮೀಣ ಭಾಗಗಳಲ್ಲಿ ವಾಸಿಸುತ್ತಿದ್ದು, 2011ರಲ್ಲಿ ಶೇ. 68.8 ಜನರು ಗ್ರಾಮವಾಸಿಗರಾಗಿದ್ದರು. ಇದು ಭಾರತದ ನಗರೀಕರಣ ಪ್ರಕ್ರಿಯೆ ಕಡಿಮೆ ಹಾಗೂ ನಿಧಾನಗತಿಯಾಗಿರುವುದನ್ನು ಬಿಂಬಿಸುತ್ತದೆ.

7. **ಜನಸಂಖ್ಯೆಯ ಕಳಪೆ ಗುಣಮಟ್ಟ:** ಜನಸಂಖ್ಯೆಯ ಗುಣಮಟ್ಟವನ್ನು ಅವರ ಶಿಕ್ಷಣ, ಕೌಶಲಗಳು ಮತ್ತು ಆರೋಗ್ಯ ಸ್ಥಿತಿಗಳಿಂದ, ಅಂದರೆ ನಿರ್ದಿಷ್ಟವಾಗಿ, ಸಾಕ್ಷರತಾ ದರ, ಕೌಶಲಗಳ ಗಳಿಕೆ ಮತ್ತು ನಿರೀಕ್ಷಿತ ಜೀವಿತಾವಧಿಗಳ ಮೂಲಕ ಅಳೆಯಬಹುದಾಗಿದೆ.

(a) **ಕಡಿಮೆ ಸಾಕ್ಷರತಾ ದರ :** ಭಾರತವು ಇನ್ನೂ ನೂರಕ್ಕೆ ನೂರರಷ್ಟು ಸಾಕ್ಷರತೆಯನ್ನು ಸಾಧಿಸಿಲ್ಲ. ಸಾಕ್ಷರತೆಯೆಂದರೆ ಓದಲು ಮತ್ತು ಬರೆಯಲು ಗೊತ್ತಿರುವ ಜನರ ಪ್ರತಿಶತ ಪ್ರಮಾಣ. 2011ರಲ್ಲಿ ಭಾರತದ ಶೇ. 74ರಷ್ಟು ಜನರು ಮಾತ್ರ ಓದು–ಬರಹ ಬಲ್ಲವರಾಗಿದ್ದರು. ಸುಮಾರು 31 ಕೋಟಿಗಿಂತಲೂ ಅಧಿಕ ಜನರು ನಿರಕ್ಷರಿಗಳಾಗಿದ್ದರು ಎಂಬುದನ್ನು ಇದು ಹೇಳುತ್ತದೆ. ಮಹಿಳೆಯರ ಸಾಕ್ಷರತೆ ಇನ್ನೂ ಕಡಿಮೆ ಇದ್ದು ಕೇವಲ ಶೇ. 65ರಷ್ಟು ಮಹಿಳೆಯರು ಸಾಕ್ಷರರಾಗಿದ್ದರು.

(b) **ಅಲ್ಪ ಪ್ರಮಾಣದ ಶಿಕ್ಷಣ ಮತ್ತು ತರಬೇತಿ :** ಭಾರತದಲ್ಲಿ 20–25 ವರ್ಷ ವಯೋಮಾನದವರಲ್ಲಿ ಉನ್ನತ ಶಿಕ್ಷಣದಲ್ಲಿ ದಾಖಲಾದ ವ್ಯಕ್ತಿಗಳ ಪ್ರಮಾಣ ಕೇವಲ ಶೇ. 20.4 ಇದ್ದು, ಇದು ತುಂಬಾ ಕಡಿಮೆ ಪ್ರಮಾಣದ್ದು. ಇದು ಮುಂದುವರೆದ ರಾಷ್ಟ್ರಗಳಲ್ಲಿ ಇರುವ ಪ್ರಮಾಣದ ಕೇವಲ ಕಾಲುಭಾಗ ಮಾತ್ರ. ಅಲ್ಲದೇ ಭಾರತದಲ್ಲಿ ಪ್ರತಿ ಸಾವಿರ ಜನರಿಗೆ ಲಭ್ಯವಿರುವ ವೈದ್ಯರ ಪ್ರಮಾಣವು ಕೇವಲ 0.7 ಇದ್ದರೆ, ಇಂಜಿನಿಯರರ ಪ್ರಮಾಣವು 210 ಇದೆ. ಇದು ಕೌಶಲಗಳಲ್ಲಿನ ಅಸಮತೋಲನ ಹಾಗೂ ಕಡಿಮೆ ಪ್ರಮಾಣವನ್ನು ಸೂಚಿಸುತ್ತದೆ.

(c) **ಕಡಿಮೆ ಜೀವಿತಾವಧಿ :** ಒಬ್ಬ ವ್ಯಕ್ತಿ ಜೀವಿಸಬಹುದಾದ ಸರಾಸರಿ ಆಯುಷ್ಯವನ್ನು ಜೀವಿತಾವಧಿ ಎಂದು ಕರೆಯುತ್ತೇವೆ. ಭಾರತದಲ್ಲಿ 2013ರಲ್ಲಿ ಸರಾಸರಿ ಜೀವಿತಾವಧಿಯು ಕೇವಲ 65.8 ವರ್ಷಗಳಿದ್ದು ಅದು ಬೇರೆ ರಾಷ್ಟ್ರಗಳಿಗೆ ಹೋಲಿಸಿದರೆ ತುಂಬಾ ಕಡಿಮೆ.

© KTBS Not to be republished

8. **ಕೆಲಸದಲ್ಲಿ ಭಾಗವಹಿಸುವಿಕೆಯ ಕಡಿಮೆ ದರ:** ಕೆಲಸ ಮಾಡಬಲ್ಲ ಜನರ ಸಂಖ್ಯೆಯನ್ನು ಒಟ್ಟು ಜನಸಂಖ್ಯೆಯ ಪ್ರತಿಶತವಾಗಿ ಲೆಕ್ಕ ಹಾಕಿದಾಗ, ಆ ಜನಸಂಖ್ಯೆಯ ಕೆಲಸದಲ್ಲಿ ಭಾಗವಹಿಸುವಿಕೆಯ ದರ ದೊರೆಯುತ್ತದೆ. ಭಾರತದಲ್ಲಿ ಈ ಪ್ರಮಾಣವೂ ಕಡಿಮೆ ಇದ್ದು, 2011ರಲ್ಲಿ ಕೇವಲ ಶೇ. 39.8ರಷ್ಟು ಜನರು ಕೆಲಸಗಾರರಾಗಿದ್ದರು. ಅಂದರೆ, ಕೆಲಸ ಮಾಡದೇ ಇದ್ದು, ಕೆಲಸಗಾರರ ಮೇಲೆ ಹೆಚ್ಚಿನ ಅವಲಂಬಿತ ಜನರ ಪ್ರಮಾಣವನ್ನು ಇದು ತೋರಿಸುತ್ತದೆ.

9. **ಅತಿ–ಜನಸಂಖ್ಯೆ :** ಆಹಾರ ಧಾನ್ಯದ ಉತ್ಪಾದನೆ ಸಾಕಷ್ಟು ಪ್ರಮಾಣದಲ್ಲಿ ಹೆಚ್ಚಳವಾಗಿದ್ದರೂ ಸಹ ದೇಶದಲ್ಲಿ ತಾಂಡವವಾಡುತ್ತಿರುವ ಬಡತನ, ಹಸಿವು, ಅಪೌಷ್ಠಿಕತೆಗಳನ್ನಲ್ಲದೇ, ನಿರುದ್ಯೋಗ, ಕಡಿಮೆ ವರಮಾನ, ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿರುವ ಜನರ ಪ್ರಮಾಣ, ಮುಂತಾದವುಗಳನ್ನು ಗಮನಿಸಿದಾಗ, ಭಾರತದ ಜನಸಂಖ್ಯೆಯು ಅದರ ಧಾರಣಾ ಶಕ್ತಿಯನ್ನು ಮೀರಿ ಬೆಳೆದಿದೆ ಎಂದು ಹೇಳಲಾಗುತ್ತಿದೆ. ಇವೆಲ್ಲ ಅತಿಯಾದ ಜನಸಂಖ್ಯೆಯ ಪರಿಣಾಮಗಳಾಗಿವೆ.

### ಜನಸಂಖ್ಯಾ ಪರಿವರ್ತನೆ

ಆರ್ಥಿಕ ಅಭಿವೃದ್ಧಿ ಮತ್ತು ಜನಸಂಖ್ಯಾ ಬೆಳವಣಿಗೆ ನಡುವೆ ನಿಕಟ ಸಂಬಂಧವಿದೆ. ದೇಶವು ಆರ್ಥಿಕ ಅಭಿವೃದ್ಧಿ ಹೊಂದಿದಂತೆ, ಆ ದೇಶದ ಜನಸಂಖ್ಯೆಯು ಕಡಿಮೆಯಾಗುತ್ತಾ ಸಾಗುತ್ತದೆ. ಇದನ್ನು 'ಜನಸಂಖ್ಯಾ ಪರಿವರ್ತನದ ಸಿದ್ಧಾಂತ'ದ ಮೂಲಕ ವಿವರಿಸಲಾಗುತ್ತದೆ. ದೇಶದ ಆರ್ಥಿಕ ಅಭಿವೃದ್ಧಿಯು ಮೂರು ಹಂತಗಳನ್ನು ಹಾದು ಸಾಗುತ್ತದೆ. ಅವುಗಳೆಂದರೆ; ಹಿಂದುಳಿದ ಹಂತ, ಮುಂದುವರಿಯುತ್ತಿರುವ ಹಂತ ಹಾಗೂ ಮುಂದುವರಿದ ಹಂತ.

1. **ಹಿಂದುಳಿದ ಹಂತ :** ಒಂದು ದೇಶವು ಆರ್ಥಿಕವಾಗಿ ಹಿಂದುಳಿದಿದ್ದಾಗ ಅಲ್ಲಿ ಬಡತನ, ನಿರುದ್ಯೋಗ ಹೆಚ್ಚಾಗಿರುತ್ತದೆ. ಜನರಿಗೆ ಶಿಕ್ಷಣ ಮತ್ತು ಆರೋಗ್ಯ ಸೌಲಭ್ಯಗಳು ಇರುವುದಿಲ್ಲ. ಜನರು ಮೂಢನಂಬಿಕೆ ಉಳ್ಳವರೂ, ಸಂಪ್ರದಾಯಶರಣರೂ ಆಗಿರುತ್ತಾರೆ. ಇದರಿಂದ ಜನನ ದರ ಮತ್ತು ಮರಣ ದರಗಳೆರಡೂ ಹೆಚ್ಚಾಗಿದ್ದು, ಜನಸಂಖ್ಯಾ ಬೆಳವಣಿಗೆ ದರ ಅತ್ಯಂತ ಕಡಿಮೆಯಿರುತ್ತದೆ.

2. **ಮುಂದುವರಿಯುತ್ತಿರುವ ಹಂತ :** ಹಿಂದುಳಿದ ದೇಶವು ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲು ತೀವ್ರ ಪ್ರಯತ್ನಗಳನ್ನು ಕೈಗೊಳ್ಳುತ್ತದೆ. ಸರ್ಕಾರವು ಮೊದಲು ಜನರಿಗೆ ಶಿಕ್ಷಣ ನೀಡಲು, ಆರೋಗ್ಯ ಸೌಲಭ್ಯಗಳನ್ನು ಒದಗಿಸಿಕೊಡಲು ಮುಂದಾಗುತ್ತದೆ. ಸಾಂಕ್ರಾಮಿಕ ರೋಗಗಳನ್ನು ನಿಯಂತ್ರಿಸಲಾಗುತ್ತದೆ. ಇದರಿಂದ ಮರಣದರ ಶೀಘ್ರವಾಗಿ ಕಡಿಮೆಯಾಗುತ್ತದೆ. ಆದರೆ ಜನನ ದರವು ಹೆಚ್ಚಾಗಿಯೇ ಇದ್ದು, ಅದು ನಿಧಾನವಾಗಿ ಕಡಿಮೆಯಾಗುತ್ತಿರುತ್ತದೆ. ಹೀಗೆ ಈ ಹಂತದಲ್ಲಿ ಜನನ ದರ ಹೆಚ್ಚಿದ್ದು, ಮರಣ ದರ ಕಡಿಮೆಯಾಗುವುದರಿಂದ ಜನಸಂಖ್ಯಾ ಬೆಳವಣಿಗೆ ದರ ಹೆಚ್ಚಾಗಿರುತ್ತದೆ. ಸದ್ಯದಲ್ಲಿ ಭಾರತವು ಈ ಹಂತದಲ್ಲಿದೆ. ಹಾಗಾಗಿ ಇಲ್ಲಿ ಜನಸಂಖ್ಯಾ ಬೆಳವಣಿಗೆ ಹೆಚ್ಚಾಗಿದೆ.

3. **ಮುಂದುವರಿದ ಹಂತ:** ಮುಂದುವರಿಯುತ್ತಿರುವ ದೇಶವು ಅಭಿವೃದ್ಧಿ ಚಟುವಟಿಕೆಗಳನ್ನು ತೀವ್ರಗೊಳಿಸುವ ಮೂಲಕ ಕ್ರಮೇಣ ಮುಂದುವರಿದ ದೇಶವಾಗಿ ಮಾರ್ಪಡುತ್ತದೆ. ಆಗ ದೇಶದಲ್ಲಿರುವ ಎಲ್ಲ ಜನರು ವಿದ್ಯಾವಂತರು ಮತ್ತು ತಿಳುವಳಿಕೆಯುಳ್ಳವರೂ ಆಗಿರುತ್ತಾರೆ. ಎಲ್ಲರಿಗೂ ಆರೋಗ್ಯ ಮತ್ತು ಸ್ವಚ್ಛತೆಯ ಸೌಲಭ್ಯಗಳು ದೊರೆಯುತ್ತವೆ. ಇದರಿಂದಾಗಿ ಈ ಹಂತದಲ್ಲಿ ಜನನ ದರ ಮತ್ತು ಮರಣ ದರಗಳೆರಡೂ ಅತ್ಯಂತ ಕಡಿಮೆಯಿದ್ದು, ಜನಸಂಖ್ಯಾ ಬೆಳವಣಿಗೆ ದರವು ಅತ್ಯಂತ ಕಡಿಮೆಯಾಗುತ್ತದೆ. ಒಟ್ಟಿನಲ್ಲಿ ಹಿಂದುಳಿದ ದೇಶವು ಆರ್ಥಿಕ ಅಭಿವೃದ್ಧಿ ಸಾಧಿಸಿ ಕ್ರಮೇಣ ಮುಂದುವರೆದ ದೇಶವಾಗಿ ಮಾರ್ಪಡುತ್ತಾ ಸಾಗಿದಂತೆ, ಅಲ್ಲಿನ ಜನಸಂಖ್ಯಾ ಬೆಳವಣಿಗೆಯಲ್ಲಿ ಪರಿವರ್ತನೆಯಾಗುತ್ತದೆ. ಯಾವುದೇ ದೇಶವು ಆರ್ಥಿಕವಾಗಿ ಅಭಿವೃದ್ಧಿ ಹೊಂದುವ ಮೂಲಕ ಜನಸಂಖ್ಯಾ ಬೆಳವಣಿಗೆಯನ್ನು ನಿಯಂತ್ರಿಸಬಹುದು.

© KTBS Not to be republished

**ನೆನಪಿರಲಿ:**

**ಹಿಂದುಳಿದ ದೇಶ** – ಜನನ ದರ ಮತ್ತು ಮರಣ ದರ ಹೆಚ್ಚು, ಜನಸಂಖ್ಯಾ ಬೆಳವಣಿಗೆ ದರ ಕಡಿಮೆ

**ಮುಂದುವರಿಯುತ್ತಿರುವ ದೇಶ** – ಜನನ ದರ ಹೆಚ್ಚು ಮತ್ತು ಮರಣ ದರ ಕಡಿಮೆ, ಜನಸಂಖ್ಯಾ ಬೆಳವಣಿಗೆ ದರ ಹೆಚ್ಚು

**ಮುಂದುವರಿದ ದೇಶ** – ಜನನದರ ಮತ್ತು ಮರಣ ದರ ಕಡಿಮೆ, ಜನಸಂಖ್ಯಾ ಬೆಳವಣಿಗೆ ದರ ಕಡಿಮೆ.

## ಸಂತಾನೋತ್ಪತ್ತಿ ಆರೋಗ್ಯ ಮತ್ತು ಜನಸಂಖ್ಯೆಯ ಗುಣಮಟ್ಟ

ಆರೋಗ್ಯವು ಮಾನವನ ಬಹುಮುಖ್ಯ ಸಾಮಾಜಿಕ ಮೂಲಸೌಲಭ್ಯವಾಗಿದೆ. ಉತ್ತಮ ಆರೋಗ್ಯವು ಜನರ ಜೀವನದ ಗುಣಮಟ್ಟ ಮತ್ತು ಅವರ ಕೆಲಸದ ಗುಣಮಟ್ಟವನ್ನು ಹೆಚ್ಚಿಸುತ್ತದೆ. ಆದ್ದರಿಂದ ಆರ್ಥಿಕ ಅಭಿವೃದ್ಧಿಯನ್ನು ತೀವ್ರಗೊಳಿಸಬೇಕಾದರೆ ದೇಶದ ಜನರ ಆರೋಗ್ಯ ಮಟ್ಟವನ್ನು ಸುಧಾರಿಸಬೇಕಾದ ಅವಶ್ಯಕತೆಯಿದೆ.

ಸಂತಾನೋತ್ಪತ್ತಿಯು ಜೀವಿಗಳ ಪ್ರಧಾನ ಲಕ್ಷಣಗಳಲ್ಲಿ ಒಂದು. ಜನಸಂಖ್ಯೆಯ ಗುಣಮಟ್ಟವು ಜನಿಸಿದ ಮಕ್ಕಳ ಸಂಖ್ಯೆ ಹಾಗೂ ಅವುಗಳ ಆರೋಗ್ಯದ ಮೇಲೆ ಬಹುವಾಗಿ ಅವಲಂಬಿಸಿದೆ. ಆರೋಗ್ಯಪೂರ್ಣ ಮಕ್ಕಳು ಆರೋಗ್ಯಪೂರ್ಣ ವಯಸ್ಕರಾಗಿ ಬೆಳೆದು ದೇಶದ ಬೆಳವಣಿಗೆಗೆ ಹೆಚ್ಚಿನ ಕೊಡುಗೆ ನೀಡಬಲ್ಲರು. ತಾಯಿಯು ಗರ್ಭ ಧರಿಸಿದಂದಿನಿಂದ ಮಗುವಿಗೆ ಜನ್ಮ ನೀಡುವವರೆಗೆ ಆಕೆಯ ಆರೋಗ್ಯ ಮತ್ತು ಪೌಷ್ಠಿಕತೆಗೆ ಹೆಚ್ಚಿನ ಗಮನ ನೀಡಬೇಕಾಗುತ್ತದೆ. ಹೆರಿಗೆಯ ನಂತರ ತಾಯಿ ಮತ್ತು ಶಿಶುವಿಗೆ ಸೂಕ್ತ ಆರೈಕೆಯನ್ನು ಒದಗಿಸಬೇಕಾಗುತ್ತದೆ. ಮಹಿಳೆಯರು ಆರೋಗ್ಯವಂತರಾಗಿ ರೋಗರಹಿತರಾಗಿ ಇದ್ದರೆ, ಮಕ್ಕಳು ಕೂಡ ಆರೋಗ್ಯವಂತರಾಗಿ ಜನಿಸಿ ಬೆಳೆಯುವುದು ನಿರೀಕ್ಷಿತ. ಆದ್ದರಿಂದ ಆರೋಗ್ಯ ಸೌಲಭ್ಯಗಳಲ್ಲದೇ, ರೋಗಗಳ ನಿಯಂತ್ರಣಕ್ಕಾಗಿ ಲಸಿಕೀಕರಣ, ಪೌಷ್ಠಿಕಾಂಶಗಳ ನೀಡಿಕೆ ಮತ್ತು ನುರಿತ ಸಿಬ್ಬಂದಿಯ ಮೇಲ್ವಿಚಾರಣೆಯಲ್ಲಿ ಹೆರಿಗೆ ಮಾಡಿಸುವುದು ತಾಯಿ ಮತ್ತು ಮಗುವಿನ ಆರೋಗ್ಯದ ದೃಷ್ಟಿಯಿಂದ ತುಂಬಾ ಮಹತ್ವದ್ದಾಗಿವೆ.

ಹೀಗಾಗಿ ಎಲ್ಲ ದೇಶಗಳಲ್ಲಿ ಸರ್ಕಾರಗಳು ಈ ಸೌಲಭ್ಯಗಳನ್ನು ಎಲ್ಲರಿಗೆ ಒದಗಿಸುವ ಪ್ರಯತ್ನ ಮಾಡುತ್ತಿವೆ. ಸಂತಾನೋತ್ಪತ್ತಿ ಆರೋಗ್ಯ ಸೌಲಭ್ಯಗಳಿಂದಾಗಿ ಮಕ್ಕಳ ಹಾಗೂ ತಾಯಂದಿರ ಬದುಕುಳಿಯುವಿಕೆಯ ಸಾಧ್ಯತೆ ಹೆಚ್ಚಾಗುವುದರಿಂದ ಮಕ್ಕಳ ಜನನ ಪ್ರಮಾಣ ಕಡಿಮೆಯಾಗುತ್ತದೆ ಹಾಗೂ ಇದು ಜನಸಂಖ್ಯಾ ನಿಯಂತ್ರಣಕ್ಕೆ ಪೂರಕ. ಇವಲ್ಲದೇ ಮಕ್ಕಳ, ಗರ್ಭಿಣಿಯರ ಹಾಗೂ ಬಾಣಂತಿಯರ ಪೌಷ್ಠಿಕತೆ ವರ್ಧನೆಗೂ ಹಲವಾರು ಕ್ರಮಗಳನ್ನು ಕೈಗೊಳ್ಳಲಾಗಿದ್ದು ಇವುಗಳಿಂದಾಗಿ ಮಕ್ಕಳ ಮತ್ತು ತಾಯಂದಿರ ಮರಣ ಪ್ರಮಾಣಗಳು ಕಡಿಮೆಯಾಗಿವೆ.

ಭಾರತದಲ್ಲಿ 1997–98ರಲ್ಲಿ 398ರಷ್ಟಿದ್ದ ತಾಯಂದಿರ ಮರಣ ಪ್ರಮಾಣವು (ಪ್ರತಿ 1000 ಸಜೀವ ಜನನಗಳಿಗೆ ಮರಣಿಸಿದ ಗರ್ಭಿಣಿಯರ ಸಂಖ್ಯೆ) ಮೇಲೆ ತಿಳಿಸಿದ ಎಲ್ಲ ಕಾರಣಗಳಿಂದಾಗಿ 2012ರಲ್ಲಿ 167ಕ್ಕೆ ಇಳಿದಿದ್ದು ಸಮಾಧಾನಕರ. ಅದೇ ರೀತಿಯಲ್ಲಿ ಶಿಶು ಮರಣ ದರವು (ಪ್ರತಿ 1000 ಸಜೀವ ಜನನಗಳಿಗೆ ಮರಣಿಸಿದ ಒಂದು ವರ್ಷದೊಳಗಿನ ಮಕ್ಕಳ ಸಂಖ್ಯೆ) 1990ರಲ್ಲಿ 80ರಷ್ಟಿದ್ದು, 2012ರಲ್ಲಿ 47ಕ್ಕೆ ಇಳಿಕೆಯಾಯಿತು. ಹಾಗೆಯೇ ಮಕ್ಕಳ ಮರಣ ಪ್ರಮಾಣವು (ಪ್ರತಿ 1000 ಮಕ್ಕಳಿಗೆ ಮರಣಿಸಿದ ಐದು ವರ್ಷದೊಳಗಿನ ಮಕ್ಕಳ ಸಂಖ್ಯೆ) 1991ರಲ್ಲಿ 115ರಷ್ಟಿದ್ದು, 2010ರಲ್ಲಿ 59ಕ್ಕೆ ಇಳಿಕೆಯಾಯಿತು.

ಆದರೆ ಪೌಷ್ಠಿಕತೆಯಲ್ಲಿ ಭಾರತದ ಪರಿಸ್ಥಿತಿ ಕಳವಳಕಾರಿಯಾಗಿದ್ದು ಅತಿ ಹೆಚ್ಚು ಪ್ರಮಾಣದ ಮಕ್ಕಳು ಅಪೌಷ್ಠಿಕತೆಯಿಂದ ಮರಣ ಹೊಂದುತ್ತಿವೆ. ಜನಸಂಖ್ಯಾ ಅಧ್ಯಯನದ ಅಂತರಾಷ್ಟ್ರೀಯ ಸಂಸ್ಥೆಯ ಸಮೀಕ್ಷೆಗಳ ಪ್ರಕಾರ 2008–09ರಲ್ಲಿ ಶೇ. 40ರಷ್ಟು ಮಕ್ಕಳು ಕಡಿಮೆ ತೂಕ ಹೊಂದಿದವರಾಗಿದ್ದರು. ಅದೇ ರೀತಿ ಅರ್ಧದಷ್ಟು ಗರ್ಭಿಣಿಯರು ರಕ್ತಹೀನತೆಯಿಂದ ಬಳಲುತ್ತಿರುವುದೂ ಸಹ ಕಂಡು ಬಂದಿದೆ.

©KTBS Not to be republished

**ನಿಮಗಿದು ತಿಳಿದಿರಲಿ:**

ಯುನಿಸೆಫ್‌ನ ವರದಿಯೊಂದರ ಪ್ರಕಾರ ಭಾರತವು ಐದು ವರ್ಷಗಳೊಳಗಿನ ಮಕ್ಕಳ ಸಾವಿನಲ್ಲಿ ಗರಿಷ್ಠ ಪಾಲು ಹೊಂದಿದ್ದು, ಅವರಲ್ಲಿ ಅರ್ಧದಷ್ಟು ಮಕ್ಕಳು ಅಪೌಷ್ಠಿಕತೆಯ ದೆಸೆಯಿಂದ ಮರಣವನ್ನಪ್ಪುತ್ತವೆ. ವಿಶ್ವದ ಸುಮಾರು ಐದು ವರ್ಷಗಳೊಳಗಿನ ಮಕ್ಕಳ ಅರ್ಧದಷ್ಟು ಸಾವುಗಳು ಕೇವಲ ಐದು ದೇಶಗಳಲ್ಲಿ ಸಂಭವಿಸುತ್ತಿವೆ: ಭಾರತ, ನೈಜೀರಿಯಾ, ಕಾಂಗೋ, ಪಾಕಿಸ್ತಾನ ಹಾಗೂ ಚೀನ. ಭಾರತ ವಿಶ್ವದ ಈ ಸಾವುಗಳಲ್ಲಿ ಶೇ. 22ರಷ್ಟು ಪಾಲು ಹೊಂದಿದ್ದರೆ, ನೈಜೀರಿಯಾ ಶೇ. 13ರಷ್ಟನ್ನು ಹೊಂದಿದೆ.

ಭಾರತದ ರಾಷ್ಟ್ರೀಯ ಆರೋಗ್ಯ ನೀತಿಯು ಜನರ ಆರೋಗ್ಯ ಸುರಕ್ಷತೆ, ಕುಟುಂಬ ಕಲ್ಯಾಣ ಮತ್ತು ಪೌಷ್ಠಿಕತೆ ಒದಗಿಸುವ ಸೇವೆಗಳನ್ನು ಉತ್ತಮಪಡಿಸುವ ಗುರಿ ಹೊಂದಿದೆ. ಅದರಲ್ಲೂ ಸೌಲಭ್ಯ ವಂಚಿತ ಬಡವರ ಮತ್ತು ಗುಡ್ಡಗಾಡು ಜನರ ಆರೋಗ್ಯ ರಕ್ಷಣೆಗೆ ಅಧಿಕ ಗಮನ ಹರಿಸಿದೆ. ಕಳೆದ ಸುಮಾರು ಆರು ದಶಕಗಳ ಅವಧಿಯಲ್ಲಿ ವ್ಯಾಪಕವಾದ ಆರೋಗ್ಯ ಮೂಲಸೌಲಭ್ಯಗಳನ್ನು ಸೃಷ್ಟಿಸುವ ಮೂಲಕ ಜನರ ಗುಣಮಟ್ಟವನ್ನು ಅಭಿವೃದ್ಧಿಪಡಿಸಲು ಪ್ರಯತ್ನಿಸಲಾಗುತ್ತಿದೆ.

ಸರ್ಕಾರದ ಈ ಕ್ರಮಗಳಿಂದಾಗಿ ಜನರ ಗುಣಮಟ್ಟದಲ್ಲಿ ಸುಧಾರಣೆಯಾಗಿದೆ. ನಿರೀಕ್ಷಿತ ಜೀವಿತಾವಧಿ ಹೆಚ್ಚುತ್ತಿದೆ. ಶಿಶು ಮರಣ ದರ ಕಡಿಮೆಯಾಗುತ್ತಿದೆ. ನಿರೀಕ್ಷಿತ ಜೀವಿತಾವಧಿ ದರದ ಹೆಚ್ಚಳವು ಜನರ ಜೀವನದ ಗುಣಮಟ್ಟದಲ್ಲಾಗಿರುವ ಸುಧಾರಣೆಯ ಸ್ಪಷ್ಟ ಸೂಚಿಯಾಗಿದೆ. ತಾಯಿ ಮಕ್ಕಳ ಸುರಕ್ಷತೆ, ಪೌಷ್ಠಿಕಾಂಶದ ಪೂರೈಕೆ, ರೋಗಗಳಿಂದ ಮಕ್ಕಳ ರಕ್ಷಣೆ ಮುಂತಾದ ಕ್ರಮಗಳ ಪರಿಣಾಮವಾಗಿ ಶಿಶು ಮರಣ ದರ ಕಡಿಮೆಯಾಗುತ್ತಿದೆ.

ಇತ್ತೀಚೆಗೆ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ ಭಾರತ ಸರ್ಕಾರವು ಶಿಶು ಹಾಗೂ ತಾಯಂದಿರ ಮರಣದರಗಳನ್ನು ಕಡಿಮೆಗೊಳಿಸಲು ಹಲವು ಕ್ರಮಗಳನ್ನು ಕೈಗೊಂಡಿದ್ದು ಅವುಗಳಲ್ಲಿ ಪ್ರಮುಖವಾದವೆಂದರೆ:

1. ಜನನಿ ಸುರಕ್ಷಾ ಯೋಜನೆಯಡಿ ಸಾಂಸ್ಥಿಕ ಹೆರಿಗೆಗಳನ್ನು ಉತ್ತೇಜಿಸುವುದು. ಕರ್ನಾಟಕ ಸರ್ಕಾರ ಕೂಡ ತನ್ನ 24x7 ಉಚಿತ ಆಂಬುಲೆನ್ಸ್ ಸೇವೆಯ ಮೂಲಕ ಸಾಂಸ್ಥಿಕ ಹೆರಿಗೆಗಳನ್ನು ಹೆಚ್ಚಿಸಲು ಪ್ರಯತ್ನಿಸುತ್ತಿದೆ.
2. ಆರೋಗ್ಯ ಉಪ–ಕೇಂದ್ರಗಳ, ಪ್ರಾಥಮಿಕ ಆರೋಗ್ಯ ಕೇಂದ್ರಗಳ, ಸಮುದಾಯ ಆರೋಗ್ಯ ಕೇಂದ್ರಗಳ ಹಾಗೂ ಜಿಲ್ಲಾ ಆಸ್ಪತ್ರೆಗಳ ಬಲವರ್ಧನೆ ಮಾಡಿ ಅವುಗಳಲ್ಲಿ ಸಹ ಸಂಪೂರ್ಣ ಹೆರಿಗೆ ಹಾಗೂ ಶಿಶು ಆರೈಕೆ ಸೌಲಭ್ಯಗಳನ್ನು ಒದಗಿಸಲಾಗಿದೆ.
3. ಜನರು ಆರೋಗ್ಯ ಸೇವೆಗಳನ್ನು ಬಳಸಲು ಉತ್ತೇಜಿಸಲಿಕ್ಕೆ ಆಶಾ ಕಾರ್ಯಕರ್ತೆಯರ ನೇಮಕ.
4. ಆರೋಗ್ಯ ಹಾಗೂ ಪೋಷಣೆ ಕುರಿತಾದ ಶಿಕ್ಷಣ ಹಾಗೂ ಜಾಗೃತಿ ನೀಡಿ ಆಹಾರದಲ್ಲಿ ಕಬ್ಬಿಣಾಂಶ ಅಧಿಕವಿರುವ ಹಾಗೆ ಮಾಡುವ ಕಾರ್ಯಕ್ರಮಗಳು.
5. ಸಾರ್ವತ್ರಿಕ ಲಸಿಕೀಕರಣ ಸಾಧಿಸಿ ಮಕ್ಕಳನ್ನು ಬಾಧಿಸುತ್ತಿರುವ ಮಾರಣಾಂತಿಕ ರೋಗಗಳ ಹತೋಟಿ.
6. ಗರ್ಭಿಣಿಯರಿಗೆ ಹಾಗೂ ಮಕ್ಕಳಿಗೆ ಪೂರಕ ಪೌಷ್ಠಿಕಾಂಶಗಳನ್ನು ಒದಗಿಸಿ ಅಪೌಷ್ಠಿಕತೆಯನ್ನು ಕಡಿಮೆ ಮಾಡುವುದು. ಸಮಗ್ರ ಮಕ್ಕಳ ಅಭಿವೃದ್ಧಿ ಯೋಜನೆಯು ಸಹ ಇದಕ್ಕೆ ಕೊಡುಗೆ ನೀಡಿದೆ.

ಈ ಎಲ್ಲ ಕ್ರಮಗಳು ಮಹಿಳೆಯರ ಹಾಗೂ ಮಕ್ಕಳ ಆರೋಗ್ಯ ವೃದ್ಧಿಸುವುದಲ್ಲದೇ ಮರಣ ದರಗಳನ್ನು ಇನ್ನೂ ಕಡಿಮೆ ಮಾಡುವಲ್ಲಿ ಸಹಾಯಕವಾಗುತ್ತವೆ.

Not to be republished ©KTBS

**ಆರೋಗ್ಯದ ಸೂಚಿಗಳು :**
**ಒಂದು ದೇಶದ ಜನರ ಆರೋಗ್ಯದ ಸ್ಥಿತಿಗತಿಗಳನ್ನು ತಿಳಿಯಲು ಕೆಲವು ಸೂಚಕಗಳನ್ನು ಬಳಸುತ್ತಾರೆ. ಅವುಗಳೆಂದರೆ:** ನಿರೀಕ್ಷಿತ ಜೀವಿತಾವಧಿ ದರ, ಶಿಶು ಮರಣ ದರ, ಮಕ್ಕಳ ಮರಣ ದರ ಮತ್ತು ಮಾತೃ ಮರಣ ದರ.
**ನಿರೀಕ್ಷಿತ ಜೀವಿತಾವಧಿ ದರ :** ಹುಟ್ಟಿದ ಪ್ರತಿಯೊಂದು ಮಗು ಬದುಕುಳಿಯಬಹುದಾದ ಅಂದಾಜು ವರ್ಷ.
**ಶಿಶು ಮರಣ ದರ :** ಪ್ರತಿ ಸಾವಿರ ಜನನದಲ್ಲಿ ಒಂದು ವರ್ಷದ ಒಳಗೆ ಮರಣಹೊಂದುವ ಶಿಶುಗಳ ಸರಾಸರಿ ಸಂಖ್ಯೆ.
**ಮಕ್ಕಳ ಮರಣ ದರ :** ಪ್ರತಿ ಸಾವಿರ ಜನನದಲ್ಲಿ ಒಂದು ವರ್ಷದ ಒಳಗೆ ಮರಣಹೊಂದುವ ಮಕ್ಕಳ ಸರಾಸರಿ ಸಂಖ್ಯೆ.
**ಮಾತೃ ಮರಣ ದರ :** ಪ್ರತಿ ಒಂದು ಲಕ್ಷ ಜನನದಲ್ಲಿ ಮರಣ ಹೊಂದುವ ತಾಯಂದಿರ ಸರಾಸರಿ ಸಂಖ್ಯೆ.

## ಅಭ್ಯಾಸಗಳು

**I. ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಭರ್ತಿ ಮಾಡಿರಿ.**

1. ಪ್ರಸ್ತುತ ದೇಶದಲ್ಲಿರುವ ಉತ್ಪಾದನಾ ಜ್ಞಾನ, ಕೌಶಲ್ಯ ಮತ್ತು ಸಾಮರ್ಥ್ಯ ಹೊಂದಿರುವ ದುಡಿಯುವ ಜನರನ್ನು ____________ ಎಂದು ಕರೆಯಲಾಗುತ್ತಿದೆ.
2. 2011 ರಲ್ಲಿ ಭಾರತದ ಲಿಂಗ ಅನುಪಾತವು __________ .
3. ಭಾರತದಲ್ಲಿ ಜನಗಣತಿಯು ಪ್ರತಿ __________ ವರ್ಷಗಳಿಗೊಮ್ಮೆ ನಡೆಯುತ್ತದೆ.
4. ಒಂದು ದೇಶದ ಜನಸಂಖ್ಯೆಯ ಗುಣಮಟ್ಟವು __________ ಮತ್ತು __________ ನ್ನು ಅವಲಂಬಿಸಿದೆ
5. ಒಂದು ವರ್ಷದಲ್ಲಿ ಜನಿಸಿದ ಪ್ರತಿ ಸಾವಿರ ಮಕ್ಕಳಲ್ಲಿ ಮರಣ ಹೊಂದುವ ಶಿಶುಗಳ ಸರಾಸರಿ ಸಂಖ್ಯೆಗೆ __________ ಎನ್ನುವರು.
6. ಭಾರತದಲ್ಲಿ ಜನನ ದರ ಹೆಚ್ಚಾಗಿದ್ದು, ಮರಣ ದರ __________ಆಗುತ್ತಿರುವುದರಿಂದ ಜನಸಂಖ್ಯಾ ಬೆಳವಣಿಗೆ ದರ ಹೆಚ್ಚಾಗಿದೆ.

**II. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

1. ದುಡಿಯುವ ಜನರು ಎಂದು ಯಾರನ್ನು ಗುರುತಿಸಲಾಗುತ್ತಿದೆ?
2. ಮಾನವ ಸಂಪನ್ಮೂಲ ಎಂದರೇನು?
3. 2011ರ ಜನಗಣತಿ ಪ್ರಕಾರ ಭಾರತದ ಜನಸಂಖ್ಯೆ ಎಷ್ಟು?
4. ಜನನ ದರ ಎಂದರೇನು?
5. 2011ರಲ್ಲಿ ಭಾರತದ ಜನನ ದರ 22 ಮತ್ತು ಮರಣ ದರ 6 ಇದೆ. ಹಾಗಾದರೆ ಜನಸಂಖ್ಯೆ ಬೆಳವಣಿಗೆ ದರ ಕಂಡು ಹಿಡಿಯಿರಿ?
6. 2011ರ ಜನಗಣತಿ ಪ್ರಕಾರ ಭಾರತದ ಜನಸಾಂದ್ರತೆ ಎಷ್ಟು?
7. ಮುಂದುವರೆದ ರಾಷ್ಟ್ರಗಳಲ್ಲಿ ಜನಸಂಖ್ಯಾ ಬೆಳವಣಿಗೆ ದರ ಕಡಿಮೆಯಿದೆ. ಏಕೆ?

©KTBS Not to be republished

**III. ಕೆಳಗಿನ ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.**

1. ಜನ ಸಾಂದ್ರತೆ ಎಂದರೇನು? ಒಂದು ದೇಶದ ಜನಸಾಂದ್ರತೆಯನ್ನು ಹೇಗೆ ಲೆಕ್ಕ ಹಾಕಲಾಗುತ್ತದೆ?
2. ಉತ್ಪಾದನಾಂಗಗಳಲ್ಲಿ ಮಾನವ ಬಂಡವಾಳ ಅತ್ಯುತ್ತಮವಾದುದು ಎಂದು ಏಕೆ ಪರಿಗಣಿಸಲಾಗುತ್ತದೆ?
3. ಮಾನವ ಬಂಡವಾಳವನ್ನು ರೂಪಿಸುವಲ್ಲಿ ಆರೋಗ್ಯ ಮತ್ತು ಶಿಕ್ಷಣಗಳ ಪಾತ್ರವೇನು?
4. ಮುಂದುವರಿಯುತ್ತಿರುವ ರಾಷ್ಟ್ರಗಳಲ್ಲಿ ಮಾತ್ರ ಜನಸಂಖ್ಯಾ ಬೆಳವಣಿಗೆ ಹೆಚ್ಚಾಗಿರುತ್ತದೆ. ಕಾರಣವೇನು?
5. ಜನಸಂಖ್ಯೆಯ ಗುಣಮಟ್ಟವನ್ನು ಹೆಚ್ಚಿಸಲು ಯಾವ ಕ್ರಮಗಳನ್ನು ಸೂಚಿಸುವಿರಿ?

**IV. ಯೋಜಿತ ಕಾರ್ಯ (Project Work)**

1. ಯಾವುದಾದರೊಂದು ಗ್ರಾಮಕ್ಕೆ ಭೇಟಿ ನೀಡಿ ಅಲ್ಲಿನ ಜನಸಂಖ್ಯೆಯನ್ನು ಗಣತಿ ಮಾಡಿರಿ. ಅವರಲ್ಲಿ ಸ್ತ್ರೀಯರು ಮತ್ತು ಪುರುಷರ ಸಂಖ್ಯೆಯನ್ನು ವಿಂಗಡಿಸಿ ಲಿಂಗ ಅನುಪಾತ ಕಂಡು ಹಿಡಿಯಿರಿ.

©KTBS Not to be republished

# ವ್ಯವಹಾರ ಅಧ್ಯಯನ

## ಅಧ್ಯಾಯ – 1

# ವ್ಯವಹಾರ ನಿರ್ವಹಣೆ
# (Management of Business)

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ವ್ಯವಹಾರ ನಿರ್ವಹಣೆಯ ಅರ್ಥ.
- ವ್ಯವಹಾರ ನಿರ್ವಹಣೆಯ ತತ್ವಗಳು.
- ನಿರ್ವಹಣೆಯ ಕಾರ್ಯಕ್ಷೇತ್ರಗಳು ಮತ್ತು ವ್ಯಾಪ್ತಿ.
- ನಿರ್ಧಾರ ಕೌಶಲ್ಯ ಮತ್ತು ಅದರ ಪ್ರಕ್ರಿಯೆ.

ವ್ಯವಹಾರ ನಿರ್ವಹಣೆಯು ಎಲ್ಲ ಸಂಸ್ಥೆಗಳಿಗೂ ಅವಶ್ಯವಾಗಿದೆ. ಅವು ದೊಡ್ಡವಾಗಿರಲಿ ಅಥವಾ ಚಿಕ್ಕವಾಗಿರಲಿ, ಲಾಭ ಸಹಿತವಾಗಿರಲಿ ಅಥವಾ ಲಾಭ ರಹಿತವಾಗಿರಲಿ, ಉತ್ಪಾದನಾ ಸಂಸ್ಥೆಗಳಿಗಾಗಲಿ ಅಥವಾ ಅನುತ್ಪಾದನಾ ಸಂಸ್ಥೆಗಳಿಗಾಗಲಿ ವ್ಯವಹಾರ ನಿರ್ವಹಣೆ ಅನ್ವಯವಾಗುತ್ತದೆ.

**ನಿರ್ವಹಣೆಯ ಅರ್ಥ ಮತ್ತು ವ್ಯಾಖ್ಯೆಗಳು :**

'ನಿರ್ವಹಣೆ' ಎಂಬ ಪದದ ಅರ್ಥವನ್ನು ಬೇರೆ ಬೇರೆ ರೀತಿಗಳಲ್ಲಿ ಬಳಸಲಾಗುತ್ತಿದೆ. ಸಾಮಾನ್ಯವಾಗಿ ನಿರ್ವಹಣೆಯೆಂಬ ಪದವನ್ನು ಒಂದು ಸಂಸ್ಥೆಯ ಚಟುವಟಿಕೆಗಳನ್ನು ನಿರ್ವಹಿಸುವ ಒಂದು ಪ್ರಕ್ರಿಯೆ ಎಂಬ ಅರ್ಥದಲ್ಲಿ ಬಳಸಲಾಗುತ್ತದೆ. ನಿರ್ವಹಣೆ ಎಂಬ ಶಬ್ಧವನ್ನು ಒಂದು ಅಧ್ಯಯನ ಕ್ಷೇತ್ರ ಅಥವ ಜ್ಞಾನದ ಶಾಖೆ ಎಂಬ ಅರ್ಥದಲ್ಲಿಯೂ ಬಳಸಲಾಗುತ್ತಿದೆ.

**ಜೆ .ಎಲ್ ಹೇನ್ಸ**ರವರ ಪ್ರಕಾರ **"**ನಿರ್ವಹಣೆ ಎಂಬುದು ಬೇರೆಯವರಿಂದ ಕೆಲಸವನ್ನು ಮಾಡಿಸುವ ಒಂದು ಕಲೆಯಾಗಿದೆ**"**. **ಜಾರ್ಜ್ ಆರ್. ಟೆರ್ರಿ**ಯವರ ಮಾತಿನಂತೆ **"**ನಿರ್ವಹಣೆಯೆಂಬುದು ಜನರ ಮತ್ತು ಸಂಪನ್ಮೂಲಗಳ ಬಳಕೆಯಿಂದ ಸಂಸ್ಥೆಯ ಉದ್ದೇಶಗಳ ನಿರ್ಧಾರ ಮತ್ತು ಈಡೇರಿಕೆಗಾಗಿ ಯೋಜನೆ, ಸಂಘಟನೆ, ಕ್ರಿಯಾಶೀಲಗೊಳಿಸುವಿಕೆ ಮತ್ತು ನಿಯಂತ್ರಗಳನ್ನೊಳಗೊಂಡಿರುವ ಒಂದು ಪ್ರತ್ಯೇಕವಾದ ಪ್ರಕ್ರಿಯೆಯಾಗಿದೆ**"**.

ಮೇಲಿನ ವ್ಯಾಖ್ಯೆಗಳಿಂದ ಸ್ಪಷ್ಟವಾಗುವುದೇನೆಂದರೆ ನಿರ್ವಹಣೆಯೆಂಬುದು ಸಂಸ್ಥೆಯ ಪೂರ್ವ ನಿರ್ಧಾರಿತ ಗುರಿಗಳ ಈಡೇರಿಕೆಗಾಗಿ ಜನರ ಪ್ರಯತ್ನಗಳನ್ನು ಸಮನ್ವಯಗೊಳಿಸುವ ಮತ್ತು ಸಂಯೋಜಿಸುವ ರೀತಿಯಲ್ಲಿ ನಿರ್ದೇಶಿಸುವುದರ ಮೂಲಕ ಬೇರೆಯವರಿಂದ ಕೆಲಸಮಾಡಿಸುವ ಪ್ರಕ್ರಿಯೆಯಾಗಿರುತ್ತದೆ. ನಿರ್ವಹಣೆಯೆಂದರೆ ಯೋಜನೆ, ಸಂಘಟನೆ, ಸಿಬ್ಬಂದಿಪೂರೈಕೆ, ನಿರ್ದೇಶನ, ಸಂಯೋಜನೆ ಮತ್ತು ನಿಯಂತ್ರಣದಂತಹ ಪ್ರಮುಖ ಕಾರ್ಯಗಳ ಒಟ್ಟು ಮೊತ್ತವಾಗಿರುತ್ತದೆ.

**ನಿರ್ವಹಣೆಯ ತತ್ವಗಳು (Principles of Management) :**

ಒಂದು ವ್ಯವಹಾರ ಸಂಸ್ಥೆಯು ಸುಗಮವಾಗಿ ಹಾಗೂ ದಕ್ಷ ರೀತಿಯಲ್ಲಿ ನಿರ್ವಹಿಸಬೇಕಾದರೆ ಕೆಲವು ತತ್ವಗಳನ್ನು ಅಳವಡಿಸಿಕೊಳ್ಳುವುದು ಅತಿಮುಖ್ಯ. **ಹೆನ್ರಿ ಫಯೋಲ್**ರವರು ಈ ಕೆಳಗಿನ ತತ್ವಗಳನ್ನು ಸೂಚಿಸಿದ್ದಾರೆ.

1. **ಕಾರ್ಯವಿಭಜನೆ:** ನೌಕರರ ಅಥವಾ ಕೆಲಸಗಾರರ ನಡುವೆ ಅವರು ಮಾಡಬೇಕಾದ ಕಾರ್ಯಗಳನ್ನು ಕ್ರಮ ಬದ್ಧವಾಗಿ ವಿಭಜಿಸಬೇಕು. ಇದರಿಂದಾಗಿ ಉತ್ಪಾದನೆ ಹೆಚ್ಚುತ್ತದೆ ಹಾಗೂ ಹೆಚ್ಚು ಲಾಭ ಗಳಿಸಲು ಸಾಧ್ಯವಾಗುತ್ತದೆ. ಉತ್ಪಾದನೆಯಲ್ಲಿ ಉಂಟಾಗುವ ನಷ್ಟವೂ ಕಡಿಮೆಯಾಗುತ್ತದೆ. ಈ ತತ್ವವನ್ನು ಸಂಸ್ಥೆಯ ಎಲ್ಲಾ ವಿಭಾಗಗಳಲ್ಲೂ ಅಳವಡಿಸಿಕೊಳ್ಳಬಹುದು.

©KTBS Not to be republished

2. **ಅಧಿಕಾರ ಮತ್ತು ಜವಾಬ್ದಾರಿ:** ಈ ತತ್ವವು ಅಧಿಕಾರ ಮತ್ತು ಜವಾಬ್ದಾರಿಗೆ ಸಂಬಂಧಪಟ್ಟಿದ್ದಾಗಿದೆ.ಈ ಎರಡೂ ಅಂಶಗಳು ಆಡಳಿತಗಾರನ ಅಧಿಕಾರ ಮತ್ತು ನೌಕರರೊಂದಿಗಿನ ಜವಾಬ್ದಾರಿಯನ್ನು ತೋರಿಸುತ್ತವೆ. ಈ ಅಂಶಗಳು ಆಡಳಿತಗಾರರ ಬುದ್ಧಿವಂತಿಕೆ, ಈಗಿನ ಅನುಭವ, ಹಿಂದಿನ ಅನುಭವ, ನೈತಿಕ ಗುಣ ಮುಂತಾದುವುಗಳ ಸಮ್ಮಿಲನವಾಗಿರುತ್ತದೆ.

3. **ಶಿಸ್ತು :** ಈ ತತ್ವವು ಅಧಿಕಾರಿಗಳ ಮತ್ತು ನೌಕರರ ಮಧ್ಯೆ ಕಾರ್ಯಪ್ರವರ್ತಕ ಗುಣಗಳನ್ನು ಎಲ್ಲಾ ಹಂತಗಳಲ್ಲೂ ಇರುವುದನ್ನು ಬಿಂಬಿಸುತ್ತದೆ. ಈ ಗುಣಗಳು ಸಂಘಟನೆಯ ಸಾಧನೆಗಳನ್ನು ಪೂರೈಸುತ್ತದೆ. ಹಿರಿಯ ಅಧಿಕಾರಿಗಳಲ್ಲಿ ಶಿಸ್ತು, ಮತ್ತು ಸ್ಪಷ್ಟತೆ ನಿಷ್ಪಕ್ಷಪಾತವಾಗಿರಬೇಕು. ಇದು ನ್ಯಾಯಬದ್ಧವಾದ ದಂಡ ವಿದಿಸುವುದರಲ್ಲೂ ಇರಬೇಕು.

4. **ಏಕರೂಪದ ಆಜ್ಞೆ:** ಈ ತತ್ವದ ಪ್ರಕಾರ ಕೆಲಸಗಾರರು ಯಾರಾದರೂ ಒಬ್ಬ ಹಿರಿಯ ಅಧಿಕಾರಿಯ ಆಜ್ಞೆಯನ್ನು ಪಾಲಿಸಲು ಸೂಚಿಸುತ್ತದೆ.

5. **ಏಕರೂಪದ ಆದೇಶ :** ಈ ತತ್ವವು ಒಂದೇ ಉದ್ದೇಶದಿಂದ ಕೂಡಿರುವ ಗುಂಪು ಚಟುವಟಿಕೆಗಳಿಗೆ ಒಂದೇ ಆದೇಶ ಕೊಡಲು ತಿಳಿಸುತ್ತದೆ.

6. **ಏಕವ್ಯಕ್ತಿಹಿತಾಸಕ್ತಿ ಮತ್ತು ಸಾಮಾನ್ಯಹಿತಾಸಕ್ತಿಯ ಅಧೀನತೆ:** ಈ ತತ್ವವು ನಿರ್ವಹಣೆಯು ಏಕವ್ಯಕ್ತಿಯ ಹಿತಾಸಕ್ತಿಯ ಭಿನ್ನಾಭಿಪ್ರಾಯವು ಸಾಮಾನ್ಯ ಗುರಿಗಳನ್ನು ತಲುಪುವಲ್ಲಿ ಪ್ರತಿಬಂಧಕವಾಗಿರಬಾರದೆಂದು ತಿಳಿಸುತ್ತದೆ.

7. **ಉದ್ಯೋಗಿಗಳ ವೇತನ :** ಉದ್ಯೋಗಿಗಳಿಗೆ ನೀಡುವ ವೇತನವು ಪ್ರಾಮಾಣಿಕತೆಯಿಂದ ಕೂಡಿದ್ದು ಎಲ್ಲಾ ನೌಕರರಿಗೂ ಸಮಾಧಾನ ತರುವಂತಿರಬೇಕೆಂದು ಈ ತತ್ವವು ತಿಳಿಸುತ್ತದೆ.

8. **ಕೇಂದ್ರೀಕೃತ ನಿರ್ವಹಣೆ :** ಈ ತತ್ವದ ಪ್ರಕಾರ ಅಧಿಕಾರವು ಕೇಂದ್ರೀಕೃತವಾಗಿದ್ದು ವ್ಯಾಪಾರ ಸಂಘಟನೆಗೆ ಉತ್ತಮ ಫಲ ದೊರಕುವಂತಿರಬೇಕು.

9. **ಹಂತಸರಪಳಿ:** ಈ ತತ್ವದ ಪ್ರಕಾರ ಪ್ರತಿ ಸಂಘಟನೆಯಲ್ಲು ಅಧಿಕಾರ ವರ್ಗದ ಹಂತಗಳಿರಬೇಕು. ಅಧಿಕಾರದ ಶ್ರೇಣಿ, ಅಧಿಕಾರ ವರ್ಗದವರ ಮತ್ತು ಕೆಳಉದ್ಯೋಗಿಗಳ ಮಧ್ಯೆ ಸ್ಪಷ್ಟವಾಗಿ ನಿರ್ಧಾರವಾಗಿರಬೇಕು.

10. **ಸಮಾನತೆ** : ಈ ತತ್ವದ ಪ್ರಕಾರ ಅಧಿಕಾರವರ್ಗದವರ ಮತ್ತು ಸಾಮಾನ್ಯ ಉದ್ಯೋಗಿಗಳ ನಡುವೆ ಸಮಭಾವ ಮತ್ತು ಹೊಂದಾಣಿಕೆ ಗುಣಗಳನ್ನು ಹೊಂದಿರಬೇಕು.

11. **ಉದ್ಯೋಗಿಗಳ ಅಧಿಕಾರಾವಧಿಯ ಸ್ಥಿರತೆ :** ವ್ಯವಹಾರ ಸಂಘಟನೆಗಳು ಉದ್ಯೋಗಿಗಳ ಕೆಲಸದಲ್ಲಿ ಒಂದು ಸ್ಥಿರತೆ ಇರುವ ತತ್ವಪಾಲಿಸಬೇಕು. ಉದ್ಯೋಗಿಗಳಿಗೆ ಕೆಲಸದ ಅಸ್ಥಿರತೆ ಕೆಟ್ಟ ಸಂಘಟನೆಯನ್ನು ರೂಪಿಸುತ್ತದೆ. ಕೆಲಸಗಾರರ ಶೀಘ್ರ ಹೊರದೂಡುವಿಕೆಯು ಕೆಟ್ಟ ಸಂಘಟನೆಗೆ ನಾಂದಿ ಹಾಡುತ್ತದೆ.

12. **ನೇತೃತ್ವ:** ಸಂಘಟನೆಯ ನೇತೃತ್ವವು ಸಮಾಧಾನಕರವಾಗಿರಬೇಕು. ನಿರ್ವಹಣೆಯ ಮೂಲ ಏರ್ಪಾಟುಗಳನ್ನು ಪೂರ್ಣಪ್ರಮಾಣದಲ್ಲಿ ಉತ್ತಮ ದಿಕ್ಕಿನಲ್ಲಿ ತೆಗೆದುಕೊಂಡು ಹೋಗಬೇಕು.

13. **ಒಗ್ಗಟ್ಟಿನಲ್ಲಿ ಬಲ (Espriate De-corps) :** ಈ ತತ್ವದ ಪ್ರಕಾರ ಒಂದು ವ್ಯವಹಾರ ಸಂಘಟನೆಯ ಎಲ್ಲಾ ಉದ್ಯೋಗಿಗಳು ಒಂದಾಗಿ ತಮ್ಮದೇ ಕೆಲಸವೆಂದು ಸಂಘಟನೆಯ ಕೆಲಸ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು.

## ನಿರ್ವಹಣೆಯ ಕ್ಷೇತ್ರವ್ಯಾಪ್ತಿ (Functional areas of Management) :

ನಿರ್ವಹಣೆಯು ಇತರರ ಶ್ರಮದ ಮೂಲಕ ಕೆಲಸ ಮಾಡಿಸಿಕೊಳ್ಳುವ ಒಂದು ಪ್ರಕ್ರಿಯೆಯಾಗಿದೆ. ಬೇರೆಯವರ ಮೂಲಕ ಕೆಲಸ ಮಾಡಿಸಿಕೊಳ್ಳುವುದಕ್ಕಾಗಿ ನಿರ್ವಹಣೆಯ ಚಟುವಟಿಕೆಗಳನ್ನು ಒಂದು ಕ್ರಮಬದ್ಧ ರೀತಿಯಲ್ಲಿ ಅನುಸರಿಸಬೇಕಾಗುತ್ತದೆ. ಈ ಕ್ರಮಬದ್ಧ ಚಟುವಟಿಕೆಗಳನ್ನು ನಿರ್ವಹಿಸುವುದನ್ನು ಕಾರ್ಯಗಳ

Not to be republished ©KTBS

ಕ್ಷೇತ್ರ ವ್ಯಾಪ್ತಿ ಎನ್ನುತ್ತೇವೆ.

ನಿರ್ವಹಣೆಯ ಕೆಲಸ ಕಾರ್ಯಗಳನ್ನು ವಿವಿಧ ಕ್ಷೇತ್ರಗಳ ಮೂಲಕ ನಿರ್ವಹಿಸಬೇಕಾಗುತ್ತದೆ. ಇವುಗಳಲ್ಲಿ ಮುಖ್ಯವಾದುವು.

1) ಯೋಜನೆ (Planning) 2) ಸಂಘಟನೆ (Organising)

3) ಸಿಬ್ಬಂದಿ ಪೂರೈಕೆ (Staffing) 4) ನಿರ್ದೇಶನ (Directing)

5) ಸಂಯೋಜನೆ (Co- ordinating) 6) ನಿಯಂತ್ರಣ (Controlling)

1. **ಯೋಜನೆ:** ಇದು ನಿರ್ವಹಣೆಯ ಕಾರ್ಯಕ್ಷೇತ್ರದಲ್ಲಿ ಒಂದು ಮುಖ್ಯವಾದ ಕ್ಷೇತ್ರವಾಗಿದೆ ಯೋಜನೆಯೆಂದರೆ ಒಂದು ನಿರ್ದಿಷ್ಟ ಅವಧಿಗೆ ಭವಿಷ್ಯದ ಕಾರ್ಯಾಚರಣೆಗಳನ್ನು ಮುಂದಾಗಿ ನಿರ್ಧರಿಸುವುದೇ ಆಗಿದೆ .ಯೋಜನೆಯ ಪ್ರಕ್ರಿಯೆಯು ಸಂಸ್ಥೆಯ ಗುರಿಗಳ ಸಾಧನೆಗಾಗಿ ಉದ್ದೇಶಗಳ ನಿರ್ಣಯ, ನೀತಿ, ಕಾರ್ಯತಂತ್ರಗಳು, ಕಾರ್ಯಕ್ರಮಗಳು, ಕಾರ್ಯಾನುಗತಿಗಳ ಮತ್ತು ಪರಿಶಿಷ್ಟಗಳ ನಿರೂಪಣೆಯನ್ನು ಒಳಗೊಂಡಿರುತ್ತದೆ.

2. **ಸಂಘಟನೆ:** ಸಂಘಟನೆಯೆಂದರೆ ಮಾನವ ಶಕ್ತಿ ಮತ್ತು ಭೌತಿಕ ಸಂಪನ್ಮೂಲಗಳನ್ನು ಒಂದೆಡೆ ಸೇರಿಸುವುದೇ ಆಗಿದೆ. ಕೆಲವು ಯಂತ್ರಗಳು ಮತ್ತು ಯಂತ್ರೋಪಕರಣ ಸಂಪನ್ಮೂಲಗಳನ್ನು ಮಾನವ ಸಂಪನ್ಮೂಲದ ಜೊತೆ ಸೇರಿಸಿ, ಕಾರ್ಯಕ್ಕೆ ತೊಡಗಿಸಿ ಸಂಸ್ಥೆಯ ಉದ್ದೇಶಗಳನ್ನು ಈಡೇರಿಸಿಕೊಳ್ಳುವುದೇ ಸಂಘಟನೆಯ ಮುಖ್ಯ ಧ್ಯೇಯವಾಗಿರುತ್ತದೆ. ಈ ಅಂಶವು ಪ್ರತಿನಿಧಿಯನ್ನು ನೇಮಿಸಿ ಇಲಾಖಾ ಪ್ರತಿನಿಧಿಗಳಿಗೆ ಅಗತ್ಯವಾದ ಭೌತಿಕ ಸೌಲಭ್ಯಗಳನ್ನು ಒದಗಿಸಿ ಬೇರೆ ಬೇರೆ ಹಂತಗಳ ಕೆಲಸಗಾರರಿಗೆ ಸಮನ್ವಯ ರೀತಿಯಲ್ಲಿ ಕೆಲಸ ಮಾಡಲು ಅನುವು ಮಾಡಿಕೊಡುವ ಉದ್ದೇಶವನ್ನು ಹೊಂದಿರುತ್ತದೆ.

3. **ಸಿಬ್ಬಂದಿ ಪೂರೈಕೆ:** ಈ ಅಂಶವು ಸಂಘಟನೆಯು ಸರಿಯಾದ ರೀತಿಯಲ್ಲಿ ನಡೆದು ಹೋಗಲು ಬೇಕಾದ ನೌಕರ ವರ್ಗದ ನೇಮಕಾತಿ, ಆಯ್ಕೆ, ಸ್ಥಾನೀಕರಣ, ತರಬೇತಿ ಮತ್ತು ಅವರ ಪ್ರಗತಿಗಳನ್ನು ಹೊಂದಿರುತ್ತದೆ.

4. **ನಿರ್ದೇಶನ:** ಈ ಅಂಶವು ಸಂಸ್ಥೆಯ ಗುರಿಗಳ ಸಾಧನೆಗಾಗಿ ಸಂಸ್ಥೆಯಲ್ಲಿ ಕೆಲಸಮಾಡುವ ಜನರಿಗೆ ಸೂಚನೆಗಳನ್ನು ಕೊಡುವ, ಮಾರ್ಗದರ್ಶನ ನೀಡುವ, ವಿಚಾರಣೆ ನಡೆಸುವ ಮತ್ತು ಮುಂದಾಳತ್ವವನ್ನು ಒದಗಿಸುವ ಕಾರ್ಯವಾಗಿರುತ್ತದೆ. ಕೆಳಗಿನ ಹಂತದಲ್ಲಿ ಕೆಲಸ ಮಾಡುವವರಿಗೆ ಸೂಚನೆ ಮತ್ತು ಆದೇಶಗಳನ್ನು ನೀಡುವ ಮತ್ತು ಆ ಆದೇಶಗಳು ಕಾರ್ಯಾಚರಣೆಗೊಂಡಿವೆಯೇ ಎಂಬ ಕೆಲಸಗಳನ್ನು ಪ್ರಕ್ರಿಯೆಗೊಳಿಸುತ್ತದೆ.

5. **ಸಂಯೋಜನೆ:** ಈ ಅಂಶವು ಅಪೇಕ್ಷಿತ ಗುರಿಗಳ ಸಾಧನೆಗಾಗಿ ವಿವಿಧ ಇಲಾಖೆಗಳ ತಜ್ಞರ ಸುಲಲಿತವಾದ ಮಿಶ್ರಣ ಅಥವಾ ಒಟ್ಟುಗೂಡಿಸುವಿಕೆಯಾಗಿರುತ್ತದೆ. ಕಾರ್ಯಾಚರಣೆಗಳ ಐಕ್ಯತೆಯನ್ನು ಕ್ರಮಬದ್ಧವಾಗಿ ವ್ಯವಸ್ಥೆಗೊಳಿಸುವ ಕಾರ್ಯವನ್ನು ಹೊಂದಿರುತ್ತದೆ..

6) **ನಿಯಂತ್ರಣ:** ಈ ಅಂಶವು ಸಂಘಟನೆಯ ಮುಖ್ಯವಾದ ಕಾರ್ಯಗಳಿಗೆ ಸಂಬಂದಪಟ್ಟ ಅಂಶವಾಗಿದೆ. ಇದು ವ್ಯವಹಾರ ನಿರ್ವಹಣೆಯ ಎಲ್ಲ ಚಟುವಟಿಕೆಗಳಲ್ಲೂ ವ್ಯಾಪಿಸಿರುತ್ತದೆ. ಸಂಸ್ಥೆಯ ಪ್ರತಿಯೊಬ್ಬ ಪ್ರಬಂಧಕರು ಅಥವಾ ಪ್ರತಿನಿಧಿಗಳು ಇಲ್ಲಿ ಕಾರ್ಯಮಗ್ನರಾಗಬೇಕಾಗುತ್ತದೆ. ಈ ಅಂಶದ ಮುಖ್ಯ ಉದ್ದೇಶಗಳಾವುವೆಂದರೆ:

ಎ) ಸಂಸ್ಥೆಯಲ್ಲಿ ಶಿಸ್ತಿನ ಒಂದು ವಾತಾವರಣವನ್ನು ಕಲ್ಪಿಸಿ, ಚಟುವಟಿಕೆಗಳು ಸಮರ್ಪಕವಾಗಿ ಹೊಂದಾಣಿಕೆಯಿಂದ ನಡೆಯುವಂತೆ ನೋಡಿಕೊಳ್ಳುವುದು.

ಬಿ) ಪೂರ್ವಭಾವಿ ಯೋಜನೆಗಳಿಗನುಸಾರವಾಗಿ ಮತ್ತು ನಿರಂತರವಾಗಿ ಚಟುವಟಿಕೆಗಳು ಮುಂದುವರೆಯುವಂತೆ ಮಾಡುವುದು.

ಸಿ) ಸಂಸ್ಥೆಯ ದಕ್ಷತೆಯನ್ನು ಹೆಚ್ಚಿಸುವುದು.

### ಸಂಘಟನೆಯ ಕಾರ್ಯಕ್ಷೇತ್ರದಲ್ಲಿ ನಿರ್ಧಾರ

ಕಾರ್ಯಕೌಶಲ ಮತ್ತು ಪ್ರಕ್ರಿಯೆ ನಿರ್ಣಯಗಳನ್ನು ತೆಗೆದುಕೊಳ್ಳುವುದು ವ್ಯವಹಾರ ನಿರ್ವಹಣೆಯ

©KTBS Not to be republished

ಒಂದು ಮಾನಸಿಕ ಪ್ರಕ್ರಿಯೆಯಾಗಿದೆ. ಈ ಪ್ರಕ್ರಿಯೆಯು ಅನೇಕ ಚಟುವಟಿಕೆಗಳಲ್ಲಿ ಒಂದು ಅತ್ಯುತ್ತಮ ಚಟುವಟಿಕೆಯನ್ನು ಆರಿಸಿಕೊಳ್ಳುವುದೇ ಆಗಿದೆ.

**ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾದ ಅವಶ್ಯಕತೆ (Dicision making):** ನಿರ್ಧಾರಗಳನ್ನು ನಿರ್ಣಯಗಳೂ ಎನ್ನುತ್ತಾರೆ. ಪ್ರತಿಯೊಂದು ವ್ಯವಹಾರ ಸಂಘಟನೆಯು ತನ್ನದೇ ಆದ ಗುರಿ ಮತ್ತು ಉದ್ದೇಶಗಳನ್ನು ಹೊಂದಿರುತ್ತದೆ. ಈ ಗುರಿ ಮತ್ತು ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಒಂದು ನಿರ್ಣಯವನ್ನು ತೆಗೆದುಕೊಳ್ಳಬೇಕಾಗಿರುತ್ತದೆ. ಸಣ್ಣ ವಿಷಯಗಳಲ್ಲೂ ಕೂಡ ಅನೇಕ ರೀತಿಯ ಆಯ್ಕೆಗಳಿರುತ್ತವೆ. ಉದಾಹರಣೆಗಾಗಿ ಒಬ್ಬ ವ್ಯಾಪಾರಿಯು ವಸ್ತುಗಳನ್ನು ಒಂದೆಡೆಯಿಂದ ಇನ್ನೊಂದೆಡೆಗೆ ಸಾಗಿಸಬೇಕಾಗುತ್ತದೆ. ಅವನಿಗೆ ವಸ್ತುಗಳನ್ನು ಸಾಗಾಟ ಮಾಡಲು ಲಾರಿ, ಟೆಂಪೊ, ರೈಲು, ಅಥವಾ ವಿಮಾನಗಳ ಮೂಲಕ ಅವಕಾಶಗಳಿವೆ. ಅವನು ಇವುಗಳಲ್ಲಿ ಯಾವುದು ಅತ್ಯಂತ ಸೂಕ್ತ ಹಾಗೂ ಕಡಿಮೆ ವೆಚ್ಚದಿಂದ ಕೂಡಿ ಸುರಕ್ಷಿತವಾಗಿ ಸಾಗಿಸಲು ಸಾಧ್ಯವೋ ಅದನ್ನು ಆರಿಸಿಕೊಳ್ಳಬೇಕಾಗುತ್ತದೆ. ಈ ಆಯ್ಕೆಯನ್ನು ನಿರ್ಧಾರ ಅಥವಾ ನಿರ್ಣಯ ಎನ್ನುತ್ತೇವೆ. ಈ ನಿರ್ಧಾರಗಳು ವ್ಯವಹಾರದಲ್ಲಿ ಅತ್ಯಂತ ಪ್ರಮುಖ ಪಾತ್ರವಹಿಸುತ್ತವೆ ಉತ್ತಮ ನಿರ್ಧಾರಗಳನ್ನು ತೆಗೆದುಕೊಳ್ಳುವುದು ವ್ಯಾಪಾರ ದೃಷ್ಟಿಯಿಂದ ಅತ್ಯಂತ ಸಮಂಜಸವಾದ ಪ್ರಕ್ರಿಯೆ ಆಗಿದೆ.

ಇತ್ತೀಚಿಗೆ ಭಾರತದಲ್ಲಿ ಪ್ರಗತಿ ಹೊಂದಿರುವ ವಿವಿಧ ರೀತಿಯ ವ್ಯವಹಾರ ಸಂಸ್ಥೆಗಳು ರೂಢಿಗೆ ಬಂದಿವೆ. ಬರುವ ವರ್ಷಗಳಲ್ಲಿ ಇನ್ನೂ ಹೆಚ್ಚು ಸಾಂಸ್ಥಿಕ ಮೌಲ್ಯದ ಸಂಸ್ಥೆಗಳು ರೂಢಿಗೆ ಬರುವ ಯೋಜನೆಗಳು, ವಿಶ್ಲೇಷಣೆಯಿಂದ ಕೂಡಿದ ಸಂಘಟಿತ ಸಾಧ್ಯತೆ ಹೆಚ್ಚಾಗಿದೆ. ಆದುದರಿಂದ ಉತ್ತಮ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾದ ಅವಶ್ಯಕತೆ ಬಹಳವಾಗಿದೆ. ನಿರ್ಧಾರಗಳನ್ನು ಕೈಗೊಳ್ಳುವ ಬಗೆಗಳನ್ನು ವಿಶಾಲದೃಷ್ಟಿಯಿಂದ ಎರಡು ಭಾಗಗಳಾಗಿ ವಿಂಗಡಿಸಬಹುದು.

1) ವೈಯಕ್ತಿಕ ನಿರ್ಧಾರಗಳು 2) ಗುಂಪು ನಿರ್ಧಾರಗಳು

ಏಕ ಒಡೆತನರೂಪವಾದ ಸಣ್ಣಪ್ರಮಾಣದ ವ್ಯವಹಾರ ಸಂಘಟನೆಗಳಲ್ಲಿ, ಒಬ್ಬ ವ್ಯಕ್ತಿ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾನೆ. ಇವುಗಳನ್ನು ವೈಯಕ್ತಿಕ ನಿರ್ಧಾರಗಳೆನ್ನುತ್ತೇವೆ. ಈ ನಿರ್ಣಯಗಳು ವ್ಯಕ್ತಿಯ ಸಾಮರ್ಥ್ಯಕ್ಕನುಗುಣವಾಗಿರುತ್ತವೆ.

ಒಂದು ತಂಡ ತೆಗೆದುಕೊಳ್ಳುವ ನಿರ್ಧಾರಗಳನ್ನು ಗುಂಪು ನಿರ್ಧಾರಗಳೆನ್ನುತ್ತೇವೆ. ಇವು ಪಾಲುದಾರಿಕೆ ಸಂಸ್ಥೆಗಳು, ಕೂಡು ಬಂಡವಾಳ ಸಂಸ್ಥೆಗಳು, ಸಹಕಾರ ಸಂಘಗಳು ತೆಗೆದುಕೊಳ್ಳುವ ನಿರ್ಧಾರಗಳಾಗಿರುತ್ತವೆ.

**ನಿರ್ಧಾರ ತೆಗೆದುಕೊಳ್ಳಲು ಪಾಲಿಸಬೇಕಾದ ಮೂಲ ತತ್ವಗಳು :**

- ಗುರಿಗಳನ್ನು ಸ್ಥಿರಪಡಿಸುವುದು
- ಗುರಿಗಳ ನಿರ್ದಿಷ್ಟತೆ.
- ಪರ್ಯಾಯ ನಿರ್ಧಾರಗಳನ್ನು ಹುಡುಕುವುದು.
- ಯೋಜನೆಗಳನ್ನು ಪಕ್ವಗೊಳಿಸುವುದು.
- ವಿವೇಚನಾಯುಕ್ತ ತರ್ಕಬದ್ದ ಯೊಜನೆಗಳು.
- ವಸ್ತುಸ್ಥಿತಿ ಅರಿಯುವುದು.
- ಮೌಲ್ಯೀಕರಿಸುವುದು.

**ನಿರ್ಧಾರಗಳನ್ನು ತೆಗೆದುಕೊಳ್ಳುವುದರ ಪ್ರಾಮುಖ್ಯತೆ:** ವ್ಯವಹಾರ ಸಂಘಟನೆಗಳಲ್ಲಿ ಉಂಟಾಗುವ ಅನೇಕ ಸಮಸ್ಯೆಗಳಿಗೆ ಒಳ್ಳೆಯ ನಿರ್ಧಾರಗಳು ಪರಿಹಾರ ಕೊಡುತ್ತವೆ. ಉತ್ತಮ ನಿರ್ಧಾರದಿಂದ ಸಂಘಟನೆಯು ಉತ್ತಮ ಲಾಭ ಪಡೆದು ಸುಗಮ ರೀತಿಯಲ್ಲಿ ನಡೆದುಕೊಂಡು ಹೋಗುತ್ತದೆ. ಹಾಗೆಯೇ ತಪ್ಪು ನಿರ್ಧಾರಗಳು ಸಂಘಟನೆಯ ನಷ್ಟಗಳಿಗೆ ಕಾರಣವಾಗುತ್ತವೆ. ನಿರ್ಧಾರಗಳನ್ನು ತೆಗೆದುಕೊಳ್ಳುವ ಮುನ್ನ ಈ ಅಂಶಗಳನ್ನು ಗಮನದಲ್ಲಿಟ್ಟುಕೊಂಡಿರಬೇಕು. ಅವುಗಳೆಂದರೆ ಸಂದರ್ಭ, ಅನುಭವ, ವಿವೇಚನೆ, ದೃಢತೆ, ಧೈರ್ಯ ಮತ್ತು ಸ್ಪಷ್ಟತೆ.

ಯಾವುದಾದರೂ ಒಂದು ಸಮಸ್ಯೆಯನ್ನು ಪರಿಹರಿಸಬೇಕಾದರೆ ಉತ್ತಮ ನಿರ್ಧಾರ ತೆಗೆದುಕೊಳ್ಳವುದರ ಮೂಲಕ ಮಾತ್ರ ಸಾಧ್ಯವಾಗುತ್ತದೆ. ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾದರೆ ಈ ಕೆಳಗಿನ ಅಂಶಗಳನ್ನು ಪಾಲಿಸಬೇಕು.

©KTBS Not to be republished

- ಸಮಸ್ಯೆಯನ್ನು ವಿಶ್ಲೇಷಿಸುವುದು
- ಕಾರ್ಯಗತ ಮಾಡಲು ಯೋಜನೆ ರೂಪಿಸುವುದು.
- ಧೈರ್ಯ ಮತ್ತು ತಾಳ್ಮೆಗಳನ್ನು ಪಾಲಿಸುವುದು.
- ಮುಂದಾಲೋಚನೆಯನ್ನು ಗಮನದಲ್ಲಿಡುವುದು.
- ವಿವೇಕಯುಕ್ತ ನಿರ್ಧಾರವನ್ನು ಶೀಘ್ರದಲ್ಲಿ ತೆಗೆದುಕೊಳ್ಳುವ ಸಾಮರ್ಥ್ಯವನ್ನು ಹೊಂದಿರುವುದು.

## ಅಭ್ಯಾಸಗಳು

**I. ಕೆಳಗಿನ ಪ್ರತಿಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

1. ನಿರ್ವಹಣೆ ಎಂದರೇನು?
2. ನಿರ್ಧಾರ ಕೈಗೊಳ್ಳುವುದು ಎಂದರೇನು?
3. ವೈಯಕ್ತಿಕ ನಿರ್ಧಾರ ಹಾಗೂ ಗುಂಪು ನಿರ್ಧಾರಗಳೆಂದರೇನು?
4. ನಿರ್ವಹಣೆಯ ತತ್ವಗಳಲ್ಲಿ ಅಧಿಕಾರ ಮತ್ತು ಜವಾಬ್ದಾರಿಯ ತತ್ವವೇನು?

**II. ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಅಥವಾ ಐದು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

1. ಹೆನ್ರಿ ಫಯೋಲರ ಪ್ರಕಾರ ನಿರ್ವಹಣೆಯ ತತ್ವಗಳಾವುವು ?
2. ನಿರ್ವಹಣೆಯ ಕಾರ್ಯಗಳಾವುವು? ಹೆಸರಿಸಿ.
3. ಅಧಿಕಾರ ಮತ್ತು ಜವಾಬ್ದಾರಿ, ಹಂತ ಸರಪಳಿ ಮತ್ತು ಕೇಂದ್ರೀಕೃತ ತತ್ವಗಳನ್ನು ವ್ಯವಹಾರ ಸಂಸ್ಥೆಯ ನಿರೂಪಣೆಗೆ ಹೊಂದುವಂತೆ ಬರೆಯಿರಿ.
4. ವ್ಯವಹಾರ ನಿರ್ವಹಣೆಯಲ್ಲಿ ನಿರ್ಧಾರ ತೆಗೆದುಕೊಳ್ಳುವುದರ ಪ್ರಾಮುಖ್ಯತೆ ಏನು?
5. ನಿರ್ಧಾರ ಪ್ರಕ್ರಿಯೆಯಲ್ಲಿ ಅಡಕವಾಗಿರುವ ಮುಖ್ಯ ಮೂಲಭೂತ ತತ್ವಗಳಾವುವು?
6. ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾದ ಸಂದರ್ಭಗಳಲ್ಲಿ ಗಮನದಲ್ಲಿಟ್ಟುಕೊಳ್ಳಬೇಕಾದ ಅಂಶಗಳಾವುವು?
7. ಯೋಜನೆ ಮತ್ತು ಸಂಘಟನೆಗಳು, ನಿರ್ವಹಣೆಯ ಮುಖ್ಯ ಕಾರ್ಯಕ್ಷೇತ್ರದಲ್ಲಿ ವಹಿಸುವ ಪಾತ್ರವೇನು?
8. "ನಿಯಂತ್ರಣವು ನಿರ್ವಹಣಾ ಕಾರ್ಯದಲ್ಲಿ ಬಹುಮುಖ್ಯವಾದುದು" ಹೇಗೆ?
9. ನಿಯಂತ್ರಣದ ಪ್ರಮುಖ ಧ್ಯೇಯಗಳೇನು?
10. ನಿರ್ದೇಶನ ಮತ್ತು ಹೊಂದಾಣಿಕೆ, ವ್ಯವಹಾರ ನಿರ್ವಹಣೆಯಲ್ಲಿ ಹೇಗೆ ಪ್ರಮುಖ ಪಾತ್ರಗಳನ್ನು ವಹಿಸುತ್ತವೆ?

**III. ಚಟುವಟಿಕೆ :**

1. ನಿಮ್ಮ ನೆರೆಹೊರೆಯಲ್ಲಿರುವ ಯಾರಾದರೂ ಏಕ ಒಡೆತನ ವ್ಯಾಪಾರಿಯನ್ನು ಭೇಟಿ ಮಾಡಿ ಅವರಿಂದ ಅವರು ಹೇಗೆ ದಿನನಿತ್ಯದ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾರೆಂದು ತಿಳಿದು ಒಂದು ಪ್ರಬಂಧವನ್ನು ಬರೆಯಿರಿ.

◈ ◈ ◈

© KTBS Not to be republished